ಸಂಪುಟ ೪
ಸಂಚಿಕೆ ೧

ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೧

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು **'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋದಯ ಸಂಚಿಕೆ

೩. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೪ ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೪, ಸಂಚಿಕೆ : ೨
ನವೆಂಬರ್ ೧೯೭೧

ರಾಜ್ಯೋದಯ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪರಿವಿಡಿ

ಯಾಕಾದರು ಬದುಕಬೇಕೊ?

ಯಾಕಾದರು ಬದುಕಬೇಕೊ ?
ಯಾಕಾದರೂ...

ರೆಪ್ಪೆ ಬಿಚ್ಚಲಿ
ಕ್ಕಾಗುತ್ತದೆಯೆ ಹೇಳೀಕೇಳಿ
ಎದ್ದಿರುವ ಈ ಸುಂಟರುಗಾಳಿಯಲ್ಲಿ ?

ಮಣಗಟ್ಟಲೆ ಮೂಟೆ ಹೇರಿದ್ದೀರಿ
ಹೇಗೆ ತಾನೇ ಹೋಗುತ್ತದೆ ಹೋರಿ ?
ತುಂಬ ದೂರ ಇರುವಾಗ ದಾರಿ.

ಸುತ್ತಲೂ ಹಗೆಗಳ ಪಡೆ
ಹೊಗೆ ಕವಿದಿದೆ
ಧಗೆ, ಬಾಯಾರಿಕೆ ತೀರದಿದೆ.

ಸತ್ಯ, ಚಿಂತೆಯ ಕಂತೆ, ಹಿಂಸೆ, ನೋವು ;
ಎಡಬಲಕ್ಕೆ ನಿಂತ ಬೋಳುಮರಗಳು.
ಕಾಲಿಗೆ ಸುತ್ತುವ ಹುಲ್ಲು,
ಒತ್ತುವ ಕಲ್ಲು,
ಹತ್ತುವ ಮುಳ್ಳು,
ಮೈಚುಚ್ಚುವ ಹೆಣ್ಣಿನ ಕಣ್ಣು,
ಯಾತನೆ, ಹುಣ್ಣು.
ಉದ್ವೇಗದ ಕಾವು ; ಬುಸುಗುಟ್ಟುವ ಹಾವು.
–ಅನ್ನುವುದಕ್ಕಿಲ್ಲ ; ಅನುಭವಿಸುವುದಕ್ಕಿಲ್ಲ
ಅಂತೂ ಇರಬೇಕು
ಹುಟ್ಟಿದ್ದಕ್ಕೆ, ಸಾಯದ್ದಕ್ಕೆ, ಬದುಕಬೇಕು.
ಏಕಾದರು ಹೇಗಾದರು
ಬೇಕಾದರು ಸಾಕಾದರು
ಬದುಕಬೇಕು.
ಬ...ದು...ಕ...ಲೇ...ಬೇ...ಕು.

★ ಕೆ. ಎಸ್. ಮಧುಸೂದನ ಅಯ್ಯರ್

ರೂಪಾಂತರ ಹೊಂದಿದ ಕೆಲವು ಗಾದೆಗಳು

ಗಾದೆಗಳಿಲ್ಲದ ಭಾಷೆಯಿಲ್ಲ; ದೇಶವಿಲ್ಲ. ಜನಾಂಗದ ಸಂಸ್ಕೃತಿ, ಹಳಮೆ, ಅನುಭವಗಳನ್ನೆಲ್ಲ ಭಟ್ಟಿಯಿಳಿಸಿ ಗಟ್ಟಿಗೊಳಿಸಿದ ಈ ಮೊನಚಾದ ಮಾತು, ಸಾಹಿತ್ಯ ಸಲ್ಲಕ್ಷಣದಿಂದಲೂ ಕೂಡಿದೆ. 'ಗಾದೆ ವೇದಕ್ಕೆ ಸಮಾನ'ವೆಂದು ಭಾರತೀಯರು ಹೇಳಿದರೆ, 'ಗಾದೆಗಳು ಹಾಳು ಬಿದ್ದ ಪುರಾತನ ತತ್ವಶಾಸ್ತ್ರದ ಕಳೆದುಳಿದ ತುಣುಕುಗಳು' ಎಂದು ಅರಿಸ್ಟಾಟಲ್ ಹೇಳಿದ್ದಾನೆ.

ಗಾದೆಗಳು ಚಲಾವಣೆಯ ನಾಣ್ಯಗಳಿದ್ದಂತೆ, ನ್ಯಾಯ ಸೂತ್ರಗಳಿದ್ದಂತೆ. ಅವು ಕಡಿಮೆ ಬಳಕೆಯಿಂದ ಪುರಾತನ ನಾಣ್ಯಗಳಂತೆ ಕಿಲುಬು ಹತ್ತಿ, ಹೆಚ್ಚು ಬಳಕೆಯಿಂದ ಸವಕಳಿಗೊಂಡ ನಾಣ್ಯದಂತೆ ಬೆಲೆಗೇಡಿಯಾಗಿ ಮೂಲೆಗುಂಪಾಗುವ ಸಾಧ್ಯತೆಯಿದೆ ಕೆಲವು ಸಲ ನಾಗರಿಕತೆಯ ಸೆಳವಿಗೆ ಸಿಕ್ಕು ತನ್ನ ನಿಜ ಸ್ಥಿತಿಯನ್ನು ಬದಲಿಸಿಕೊಂಡು, ಕೃತ್ರಿಮ ರೂಪ ಧರಿಸಲೂ ಸಾಧ್ಯವಿದೆ.

ಮಾತಿಗೆ ಮೊದಲು ಗಾದೆಯೆನ್ನುವಂತೆ, ಹಳ್ಳಿಗರಲ್ಲಿ ಪ್ರತಿ ಮಾತಿಗೂ ಗಾದೆಗಳನ್ನು ಬಳಸುವ ರೂಢಿಯಿತ್ತು. ಇಂದು ಸುಸಂಸ್ಕೃತರೂ ನಾಗರಿಕರೂ ಆದ ನಾವು, ನಮ್ಮ ಸಂಸ್ಕಾರಕ್ಕನುಗುಣವಾಗಿ ಮಾತಿನಲ್ಲಿ ಗಾದೆ ಉದಾಹರಿಸಲು ಹೋಗಿ, ಅಸಹಾಯಕರಾಗಿ 'ಅದೇನ ಅಂತಾರಲ್ಲಾ' ಎಂದು ಹೇಳುವುದೂ ಒಂದು ರೂಢಿ ಮಾಡಿಕೊಂಡಿದ್ದೇವೆ ಇದಕ್ಕೆ ಕಾರಣ ಗಾದೆಗಳ ಬಗ್ಗೆ ನಾವು ತೋರಿದ ಅನಾಸಕ್ತಿ.

ಪ್ರಪಂಚದ ಯಾವ ದೇಶದಲ್ಲಿಯೂ ಗಾದೆಗಳಿಗೆ ಈ ಗತಿ ಒದಗಿದ್ದನ್ನು ಕಾಣಬಹುದು. ಬಹಳಷ್ಟು ಗಾದೆಗಳು ತಮ್ಮ ಮೂಲ ಸ್ವರೂಪವನ್ನು ಮರೆಮಾಚಿಕೊಂಡು, ಶಬ್ದಾಂತರ, ಅರ್ಥಾಂತರ ಮತ್ತು ರೂಪಾಂತರ ರೋಗದಿಂದ ಬಳಲುತ್ತಿವೆ. ಅವುಗಳ ಮೂಲ ಸ್ಥಿತಿಯೇ ಬೇರೆ. ಇಂದಿನ ಬಳಕೆಯ ರೀತಿಯೇ ಬೇರೆ. ಕನ್ನಡದ ಅಂಥ ಕೆಲವು ಗಾದೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಗಾದೆಗಳಲ್ಲಿ ಸ್ವಭಾಷಾ ಶಬ್ದ ಸಂಪತ್ತು ತೀರ ಸಹಜ, ಅನ್ಯಭಾಷಾ ಶಬ್ದ ಸಂಪತ್ತು ತೀರ ಕಡಿಮೆ. ಕನ್ನಡದ ಮಟ್ಟಿಗೆ ಹೇಳುವದಾದರೆ ಈ ಭಾಷೆಯ ಗಾದೆಗಳ ಮೇಲೆ ತೀರ ಪ್ರಾಚೀನ ಕಾಲದಿಂದಲೂ ಕ್ರಮವಾಗಿ ಸಂಸ್ಕೃತ, ಪ್ರಾಕೃತ, ಮರಾಠಿ, ಉರ್ದು, ಮತ್ತು ಇಂಗ್ಲಿಷ ಭಾಷೆಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. 'ಬತ್ತೀಸ ರಾಗವ ಹಾಡಯ್ಯ' 'ಛಪ್ಪನ್ನೈವತ್ತಾರು ದೇಶ' 'ಅವುಟು ಕೋಟಿ ರೋಮ' ಎನ್ನುವಲ್ಲಿಯ ಸಂಖ್ಯಾವಾಚಕ ರೂಢಿ ನುಡಿಗಳ ನಿದರ್ಶನವನ್ನು ಬಹಳ ಹಿಂದಿನಿಂದಲೇ ಕಾಣುತ್ತೇವೆ. ಆದರೆ ಗಾದೆಗಳಲ್ಲಿ ಇಂಥ ಪದಗಳನ್ನು ಕಂಡಾಗ ಆ ಗಾದೆಯ ಸರ್ವ ಗ್ರಾಹಿತ್ವ ಶಕ್ತಿಗೆ, ಮತ್ತು ಹಳಮೆಗೆ

ಚ್ಯುತಿ ಬರುತ್ತದೆ. ಆದರೂ ಇಂಥ ಗಾದೆಗಳು ಇಲ್ಲೆಂದಲ್ಲ. ಉದಾ. 'ಸತ್ತ ಎಮ್ಮೆಗೆ ಸೇರು ತುಪ್ಪ' 'ಸೇರಿಗೆ ಸವ್ವಾ ಸೇರು' 'ಸೆಟ್ಟಿ ಸವ್ವಾಸೇರು, ಲಿಂಗ ಆಡಿಚ ಸೇರು.' ಇಲ್ಲಿ ಕುತೂಹಲ ಕೆರಳಿಸುವ ಪದಗಳೆಂದರೆ 'ಸವ್ವಾ' 'ಅಡಿಚು' ಮತ್ತು 'ಸೇರು' ಎಂಬ ಮರಾಠಿ ಮತ್ತು ಇಂಗ್ಲಿಷ ಶಬ್ದಗಳು. ಇವುಗಳಿಂದಾಗಿ ಈ ಗಾದೆ ತೀರ ಈಚಿನವೂ ಪ್ರಾದೇಶಿಕವೂ ಆಗಿರಬೇಕೆನಿಸುತ್ತದೆ. ಆದರೆ ಇವುಗಳಲ್ಲಿ ಒಂದರ ರೂಪ 'ಶೆಟ್ಟಿ (ಶ್ರೇಷ್ಠಿ) ಯು ಸಹವಾಸ ಸೇರು; ಲಿಂಗದ ಅಡಿ ಸೇರು' ಎಂದಾಗಿರಬೇಕು. ಈ ಉಪದೇಶಪರ ಗಾದೆ ಭಾಷಾ ಸೌಲಭ್ಯಾಕಾಂಕ್ಷೆಯ ಪರಿಣಾಮದಿಂದಾಗಿ ರೂಪಾಂತರಗೊಂಡಿದೆ.

ಸಹವಾಸ ಸೇರು > ಸವ್ವಾಸೇರು, ಅಡಿಸೇರು > ಅಡಿಚೇರು > ಅಡಿಚ್ಸೇರು ಎಂದು ಜನವಾಣಿಯಲ್ಲಿ ಪರಿವರ್ತನೆಗೊಂಡಿರುವದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಹೊಂದಿಕೊಂಡಿದ್ದ ಎರಡು ಶಬ್ದಗಳ ಉಚ್ಚಾರದ ಆಕಸ್ಮಿಕ ಹೊಂದಾಣಿಕೆಯಿಂದಲೂ, ಅವು ತಮ್ಮ ಮೂಲದ ಎರಡೂ ಅರ್ಥವನ್ನು ಕಳೆದುಕೊಂಡು, ಬೇರೊಂದು ಸಂಯುಕ್ತಾರ್ಥವನ್ನು ನಿರ್ಮಿಸಿಕೊಂಡು ಅಪಾರ್ಥಕ್ಕೆ ಗುರಿಯಾದ ಗಾದೆಗಳೂ ಇವೆ.

'ಬರಕ ಬಾರೀಕಾಯಿ ಸುಕಾಲಕ ಹುಣಚೀಕಾಯಿ'

ಬರಗಾಲದಲ್ಲಿ ಬಾರೀಕಾಯಿ, ಸುಕಾಲದಲ್ಲಿ ಹುಣಚೀಕಾಯಿ ಸಮೃದ್ಧವಾಗಿ ಬೆಳೆದುದನ್ನು ಯಾರೂ ಕಂಡಿರಲಿಕ್ಕಿಲ್ಲ. ಹಾಗೆ ಬೆಳೆಯಲು ನೈಸರ್ಗಿಕ ಕಾರಣಗಳೂ ಇಲ್ಲ. ಇಲ್ಲಿ ಬಾರಿ+ಕಾಯಿ; ಹುಣಚಿ+ಕಾಯಿ ಕೂಡಿ 'ಬಾರೀಕಾಯಿ', 'ಹುಣಚೀಕಾಯಿ' ಆಗಿವೆ. ಪದಗಳನ್ನೂ ಕೂಡಿ ಉಚ್ಚರಿಸುವುದರಿಂದಲೇ ಈ ಅರ್ಥ ವ್ಯತ್ಯಾಸ. 'ಕಾಯಿ' ಅಂದರೆ 'ಕಾಪಾಡು'. 'ಬರಕ್ಕ (ಬರಗಾಲಕ್ಕ) ಬಾರಿ ಕಾಯಿ; ಸುಕಾಲಕ್ಕ ಹು (ಉ) ಣಚಿ ಕಾಯಿ * ಎಂಬ ಅರ್ಥದಲ್ಲಿ, ಒಕ್ಕಲಿಗನ ಉಪದೇಶ ಇಲ್ಲಿದೆ.

ಬರಗಾಲದಲ್ಲಿ ಮಟ್ಟೀ ಬಾರಿ ದುರಸ್ತಿ ಇಟ್ಟುಕೊಂಡು, ಏನಾದರೂ ಬೆಳೆ ಬೆಳೆದುಕೊಂಡು ಬದುಕಬೇಕಾಗುತ್ತದೆ. ಸುಕಾಲದಲ್ಲಿ ಕಾಳು ಅಧಿಕವಾಗಿ ಕಣಿಕೆ ಕಡಮೆಯಾಗಿರುತ್ತದೆ. ಅದಕ್ಕಾಗಿ ಆಗ ದನಗಳಿಗೆ ದಂಟಿನ ಉಣಚಿ"†ಯೂ" ಉಪಯೋಗವಾಗುತ್ತದೆ.

ರಾಯಚೂರು ಜಿಲ್ಹೆಯ ಮಾತಿನಲ್ಲಿ ಶಬ್ದಾದಿ 'ಹ' ಕಾರವು ಅಕಾರವಾಗುವುದೇ ಹೆಚ್ಚು. ಹಾಲು > ಆಲು; ಹದ್ದು > ಅದ್ದು; ಹೋಳಿಗೆ > ಓಳಿಗೆ;

---

* ಈ ಗಾದೆಯ ವಿಶ್ಲೇಷಣೆಯಲ್ಲಿ ನನ್ನ ತಂದೆ ಗುರುಗೌಡರ ನೆರವನ್ನು ಪಡೆದಿರುವೆ.

† 'ಉಣಚಿ' ಅಂದರೆ ಜೋಳದ ತೆನೆಯ ಕೆಳಗಿನ ಭಾಗ.

ಹುಣಚಿಕಾಯಿ > ಉಣಿಚಿಕಾಯಿ : ಇತ್ಯಾದಿ, ಈ ' ಉಣಚಿ ಕಾಯಿ ' ಉಳಿದವರ ಬಾಯುಲ್ಲಿ ಹುಣಚಿಕಾಯಿ ಆಗಿರಲು ಸಾಕು.

ಪ್ರಚಲಿತವೂ ಪ್ರಖ್ಯಾತವೂ ಆದ ಈ ಮಾದರಿಯು ಇನ್ನೊಂದು ಗಾದೆಯುನ್ನು ನೋಡಿ.

' ಸುಖದ ಜೀವಕ ಎಮ್ಮೀ ಹೈನ '

ದಿನ ದಿನವೂ ಮನೆಯುಲ್ಲಿ ಬಳಸಲ್ಪಡುವ ಗಾದೆ ಇದು. ಎಮ್ಮೆಯು ಹೈನ ಮಾಡುವುದು ಕಷ್ಟದಾಯುಕವಂತೆ. ಎಮ್ಮೆ ಕಟ್ಟಿ ಹೈನಮಾಡುವವರು ಹಾಲು ಮೊಸರು ಬೆಣ್ಣೆ ತಿಂದುಂಡು ಸುಖವಾಗಿರಬಹುದು. ಆದರೆ ಅವರಿಗೆ ಬಿಡುವೆಂಬುದೇ ಇಲ್ಲ. ಕರೆಯುುವುದು, ಕಾಸುವುದು, ಕಡೆಯುುವುದು ಎಲ್ಲವೂ ಸರಿಯಾದ ವೇಳೆಗೆ ಆಗಬೇಕು. ನಿಶ್ಚಿಂತರಾಗಿ ಒಂದು ಗಳಿಗೆ ಕೂಡ ಇರಲು ಸಾಧ್ಯವಿಲ್ಲ. ಸುಖವಿದೆ; ಆದರ ಜೊತೆಗೆ ಬಹಳಷ್ಟು ಕಷ್ಟವನ್ನೂ ಪಡ ಬೇಕಾಗುತ್ತದೆ. ಇದು ಎಮ್ಮೆ ಕಟ್ಟಿ ಹೈನಮಾಡಿದವರಿಗೆ ಬಂದ ಅನುಭವ.

ಇದ್ದುದರಲ್ಲೇ ತೃಪ್ತಿ ಪಡುವವರು ಇಲ್ಲದ ಕಷ್ಟ ಕೊರಳಿಗೆ ಹಾಕಿ ಕೊಂಡು ಸುಖ ಹೆಚ್ಚಿಸಿಕೊಳ್ಳಲು ಬಯುಸುವುದಿಲ್ಲ. ಅಂಥವರು ಈ ಗಾದೆ ಬಳಸುತ್ತಾರೆ. ಈ ಗಾದೆಯೂ ಸತ್ಯವೆನ್ನೋಣ. ಆದರೆ ಇದರ ಮೂಲ ಮಾತ್ರ ಹೀಗಿರಲಿಕ್ಕಿಲ್ಲ. ಇದು ಇನ್ನೊಂದು ಗಾದೆಯಿಂದ ನಿಷ್ಪನ್ನವಾದ ಗಾದೆಯಾಗಿರ ಬೇಕು.

' ಎಮ್ಮೆ ' ಮತ್ತು ' ಹೈನ ' ಎಂಬ ಪದಗಳು ಮಾತಿನ ರೂಢಿಯು ಪ್ರಾಬಲ್ಯಕ್ಕೊಳಗಾಗಿ ರೂಪಗೊಂಡಂತಿವೆ. ' ಹೆಮ್ಮೆ ' ಹೋಗಿ ಎಮ್ಮೆ > ಎಮ್ಮಿ ಆಗಿರಬೇಕು; ಹುಣಚಿ > ಉಣಚಿ ಆದಂತೆ. ' ಹೈನ ' ಮಾತ್ರ ' ಹೀನ ' ಶಬ್ದದ ರೂಪಾಂತರ. ಮೂಲದ ಗಾದೆ : 'ಸುಖದ ಜೀವಕ್ಕೆ ಹೆಮ್ಮೆ ಹೀನ' ಎಂದಿರಬೇಕು. ಈ ಗಾದೆ ಬಹಳ ಕಡಮೆಯಾಗಿ ಬಳಕೆಯುಲ್ಲಿ ಸಿಕ್ಕುತ್ತದೆ.

'ಹೆಮ್ಮೆ' ಎಮ್ಮೆ ಆದುದು ಸ್ವಾಭಾವಿಕವಾದರೂ 'ಹೀನ' 'ಈನ'ವಾಗದೆ 'ಹೈನ'ವಾದುದಕ್ಕೆ 'ಎಮ್ಮೆ' ಶಬ್ದದ ಹೊಂದಾಣಿಕೆಯೆಂದೇ ಹೇಳಬಹುದಾಗಿದೆ.

ಸುಖದ ಜೀವಕ್ಕೆ ಹೆಮ್ಮೆ (ಗರ್ವ, ಅಭಿಮಾನ)ತೀರ ಕೆಟ್ಟುದು. (ಹೀನ) ಇಲ್ಲದ ಕಷ್ಟ ತರುವಂಥದು. ನಿರಭಿಮಾನಿ, ನಿಗರ್ವಿಯಾಗಿ ಇದ್ದರೆ ಸುಖಕ್ಕೆ ಚ್ಯುತಿ ಎಂಬುದೇ ಇಲ್ಲ. ಇದು ಜಾಗತಿಕ ಸತ್ಯ. ಅದಕ್ಕಾಗಿ 'ಸುಖದ ಜೀವಕ್ಕೆ ಹೆಮ್ಮೆ ಹೀನ' ಎನ್ನುವ ಗಾದೆ 'ಸುಖದ ಜೀವಕ ಎಮ್ಮೀ ಹೈನ' ಎಂದಾಗಿರ ಬೇಕು.

ಎಮ್ಮೆ ಹೈನದ ಅನುಭವದ ಜೊತೆ, 'ಹೆಮ್ಮೆ' 'ಹೀನ' ಶಬ್ದಗಳ ಉಚ್ಚಾರ ಪರಿವರ್ತನವೂ ಸೇರಿ ಹೊಸಗಾದೆಯೊಂದು ಹುಟ್ಟಿತಾದರೂ ಮೂಲದ ಗಾದೆಯು ಮೂಲೋತ್ಪಾಟನೆ ಮಾಡಿ ತಾನೇ ಮರವಾಗಿ ಬೆಳೆಯಿತು.

ಶಬ್ದಗಳ ಅಲ್ಪ ಉಚ್ಚಾರ ವ್ಯತ್ಯಾಸದಿಂದ, ಉಚ್ಚಾರ ಸಾಮ್ಯವಿರುವ ಮತ್ತೊಂದು ಪದವನ್ನು ಹೊಂದಿಕೊಂಡು ಕೆಲವು ಗಾದೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ರೂಪಾಂತರ ಹೊಂದಿದ್ದೂ ಉಂಟು.

'ನೆಚ್ಚಿದ ಎಮ್ಮಿ ಕೋಣಾ ಈಯ್ತು.'

ಇದರ ಸರಿಯಾದ ರೂಪ 'ನೆಚ್ಚಿದ ಎಮ್ಮಿ ಕೋಣಾ ಇತ್ತು' ಎಂದಿರಬೇಕು. ಈ ಗಾದೆಯಲ್ಲಿ ಹೇಳಿಕೊಳ್ಳುವಷ್ಟು ಸ್ಪಷ್ಟವಾದ ಅರ್ಥ ವ್ಯತ್ಯಾಸ ಕಾಣದಿದ್ದರೂ ವ್ಯತ್ಯಾಸ ಇದ್ದೇ ಇದೆ.

ವಾಚ್ಯಾರ್ಥದ ಪ್ರಕಾರ: ಕೋಣವನ್ನಾಗಲೀ ಹೆಣ್ಣುಕರುವನ್ನಾಗಲೀ ಈಯುವುದು ಎಮ್ಮೆಯ ಅಳವಿನಲ್ಲಿ ಇಲ್ಲವೇ ಇಲ್ಲ. ಇಲ್ಲಿ ಇದನ್ನು ನಚ್ಚುವ ಪ್ರಶ್ನೆಯೇ ಇಲ್ಲ. ಆದರೆ ಕೋಣವನ್ನೇ ಎಮ್ಮೆಯಾಗಿ ನಚ್ಚಿದ ದೋಷ ನಮ್ಮದು.

ಲಕ್ಷ್ಯಾರ್ಥದ ಪ್ರಕಾರ: ನಾನು ನಚ್ಚಿದ್ದರ ವಿರುದ್ಧ ನೀನು ಮಾಡಿದೆ ಅನ್ನುವುದು ಒಂದಾದರೆ; 'ನಾನು ನಚ್ಚಿದ್ದೆ ತಪ್ಪಾಗಿದೆ' ಅನ್ನುವುದು ಇನ್ನೊಂದು. ಯಾರು ಯಾವುದನ್ನೇ ಒಪ್ಪಿಕೊಳ್ಳಲಿ, 'ಈಯ್ತು' ಅನ್ನುವಲ್ಲಿ 'ಇತ್ತು' ಎಂಬ ಪಾಠಾಂತರವನ್ನು ಹೇಳಬಹುದು.

'ಶಿವಪೂಜಾಗ ಕರಡಿ ಬಿಟ್ಟಂಗ' ಅನ್ನುವ ಒಂದು ಗಾದೆಯೂ ಹೆಚ್ಚು ಬಳಕೆಯಲ್ಲಿದೆ. ಪೂಜಾ ಉಪಕರಣಗಳನ್ನು ಹಾಕುವ ಕರಡಿಗೆ (ಕರಂಡಕ) ಎಂಬ ಶಬ್ದಕ್ಕೆ ಪ್ರತಿಯಾಗಿ ಅಧಿಕ ಬಳಕೆಯಲ್ಲಿದ್ದ 'ಕರಡಿ' (ಕಡ್ಡಿ) ಎಂಬ ಶಬ್ದ ಇಲ್ಲಿ ಸೇರಿಕೊಂಡಿದೆ.

ಶಿವಪೂಜೆಯಲ್ಲಿ ಕರಡಿಯನ್ನೇ ಏಕೆ, ಬೆಕ್ಕು ಬಿಟ್ಟರೂ ಪೂಜಾ ಭಂಗವಾಗುತ್ತದೆ. ಬೇಕಾದ ಉಪಕರಣವನ್ನೇ ಬಿಟ್ಟು ಪೂಜೆಗೆ ಕುಳಿತರೆ ಮನಸ್ಸಿನ ಕೇಂದ್ರೀಕರಣ ಹೇಗೆ ಸಾಧ್ಯ ? ಬೇಕು ಎನ್ನುವ ಭಾವ ಕರಡಿಗಿಂತಲೂ ಭೀಕರ ! ಕರಡಿ (ಕರಡಿಗೆ) ಅನ್ನುವ ಪದದ ಅರ್ಥವನ್ನು ತಪ್ಪಾಗಿ ಗ್ರಹಿಸಿದ್ದೇ ಇದಕ್ಕೆ ಕಾರಣ. 'ಮದಿಮಗಳನ್ನ ಬಿಟ್ಟು ಮದಿವಿಗಿ ಹೋದಂಗಾತು' ಎಂಬ ಸಮಾನಾರ್ಥದ ಗಾದೆಯನ್ನು ಇಲ್ಲಿ ಸ್ಮರಿಸಬಹುದು.

ಉಚ್ಚಾರ ಸಾಮ್ಯದಿಂದ ವ್ಯತ್ಯಾಸಗೊಂಡ ಇನ್ನೊಂದು ಗಾದೆ ಇಲ್ಲಿದೆ.

ದಿ. ಕಿಟೆಲ್ಲರು ತಮ್ಮ ನಿಘಂಟುವಿನ ೧೧೦೫ ನೆಯ ಪುಟದಲ್ಲಿ 'ಸೀನು' ಶಬ್ದದ ಅರ್ಥ ಹೇಳುವಾಗ:

"ಸೀತವರು ಸಾಯುವದಿಲ್ಲ; ಬಾತವರು ಬದುಕುವದಿಲ್ಲ" ಎಂಬ ಗಾದೆಯನ್ನು ಉದಾಹರಿಸುತ್ತಾರೆ. 'ಸೀನು' 'ಕೆಮ್ಮು', 'ಬಾಯು' 'ಬಡವಾಗು' ಕ್ರಿಯೆಗಳಿಗೆ ಸಂಬಂಧವಿದ್ದಂತೆ ಸೀನುವದಕ್ಕೂ ಬಾಯುವದಕ್ಕೂ ಯಾವ ರೀತಿಯ ಸಂಬಂಧವೂ ಇಲ್ಲ. 'ಸೀತವರು ಸಾಯುವದಿಲ್ಲ' ಎಂದು ಹೇಳ

ಬೇಕಾದ ಆವಶ್ಯಕತೆಯಾದರೂ ಏನಿದೆ ? ರೂಢಿಯಲ್ಲಿ ಈ ಗಾದೆ " ಸೋತವರು ಸಾಯುವದಿಲ್ಲ ಬಾತವರು ಬದುಕುವದಿಲ್ಲ " ಎಂದಿದೆ.

ಇದೇ ಸರಿಯಾದ ರೂಪವಿರಬೇಕು. ಸೊರಗಿರಲಿ ಸೊಕ್ಕಿರಲಿ ಸಾವು ಶಾಶ್ವತ. ಆ ಮಾತು ಬೇರೆ. ಆದರೆ ಸೋತವರು (ಸೊರಗಿದವರು) ಬೇಗ ಸಾಯುವ ಸಂಭವ ಕಡಿಮೆ, ಬಾತವರು (ದಪ್ಪಾದವರು) ಬೇಗ ಸಾಯುವ ಸಂಭವ ಅಧಿಕಯೆನ್ನುವದನ್ನು ಅನುಭವದಿಂದ ಯಾರೂ ಬಲ್ಲರು. ಆದರೆ ದಿ|| ಕಿಟೆಲ್‌ರಿಗೆ ' ಸೋತವರು ', ' ಸೀತವರು ' ಅನ್ನುವ ಆಡುನುಡಿಯಲ್ಲಿಯ ಉಚ್ಚಾರ ವ್ಯತ್ಯಾಸ ಗುರುತಿಸಲಾಗಿರಲಿಕ್ಕಿಲ್ಲ. ಅದಕ್ಕಾಗಿಯೇ ಸೋತವರು ಎನ್ನುವಲ್ಲಿ ಸೀತವರು ಎಂದು ಬರೆದಂತಿದೆ. ಇನ್ನು ಕೆಲವು ಪದಗಳು ನಿತ್ಯ ಬಳಕೆಯಲ್ಲಿರದ್ದಕ್ಕೆ, ಆದರ ಸ್ಥಳದಲ್ಲಿ ನಿತ್ಯವೂ ಬಳಕೆಯಲ್ಲಿರುವ ಸದೃಶೋಚ್ಚಾರದ ಮತ್ತೊಂದು ಪದ ನುಸುಳಿ ಬಂದು, ಇಡೀ ಗಾದೆಯ ಅರ್ಥವನ್ನೇ ಬದಲಾಯಿಸುವದನ್ನು ಕೆಳಗಿನ ಗಾದೆಯಲ್ಲಿ ಕಾಣಬಹುದು.

' ಆರು ಹಡದಕ್ಕಿ ಮುಂದ ಮೂರು ಹಡದಕ್ಕಿ ಮುರುಕ ಮಾಡತಿದ್ದಳಂತ (ಹೇಳತಿದ್ದಳಂತ)' ದಟ್ಟವಾಗಿ ಬಳಕೆಯಲ್ಲಿದ್ದ ಗಾದೆಗಳಲ್ಲಿ ಇದೂ ಒಂದು. ಇದರ ವಾಚರ್ಥವೇ ಬೇರೆ ; ಇದನ್ನು ಜನ ಬಳಸುವ ಸಂದರ್ಭವೇ ಬೇರೆ.

ಆರು ಹಡೆದು ತನಗಿಂತ ಮುದುಕಿಯಾದವಳೆದುರು ಮೂರು ಹಡೆದವಳು ' ಮುರುಕು ' (ವೈಯಾರ, ಬಡಿವಾರ) ಮಾಡುವದು ಸ್ವಾಭಾವಿಕ. ಆದರೆ ಈ ಗಾದೆ ಬಳಸುವ ಸಂದರ್ಭ ಹಾಗಿಲ್ಲ. ಆರು ಹಡೆದ ಅನುಭವಸ್ಥಳೆದುರು ಮೂರು ಹಡೆದ ಅಲ್ಪಾನುಭವಿ, ಹಡೆಯುವ ರೀತಿಯನ್ನೂ ನೋವನ್ನು ಕುರಿತು ಉಪದೇಶ ಹೇಳುತ್ತಿದ್ದಳಂತೆ ; ಎನ್ನುವ ಅರ್ಥ ಇಲ್ಲಿ.

ಹಾಗಾದರೆ ಇಲ್ಲಿ 'ಮುರಕ' ಶಬ್ದ ಸರಿಯಾದ್ದಲ್ಲವೇ ಅಲ್ಲ. ಅದು ಉಚ್ಚಾರ ಸಾದೃಶ್ಯವಿರುವ ಇನ್ನೊಂದು ಶಬ್ದದ ಬದಲಾಗಿ ಬಂದಿರಲೇಬೇಕು. ಅದೇ 'ಮುಲುಕು'. ಮುಲುಕು ಅಂದರೆ ಹಡೆಯುವ ಬೇನೆ ಎಂದರ್ಥ. ದಿ|| ಕಿಟೆಲ್‌ರು ತಮ್ಮ ನಿಘಂಟುವಿನ ೧೨೭೭ ಪುಟದಲ್ಲಿ 'ಮುಲುಕು' ಶಬ್ದದ ಅರ್ಥವನ್ನು ಹೇಳುತ್ತ ' ಆರು ಹೆತ್ತವಳಿಗೆ ಮೂರು ಹೆತ್ತವಳು ಮುಲುಕು ಹೇಳಿದಳಂತೆ ' ಎಂಬ ಗಾದೆಯನ್ನು ಬಳಸಿದ್ದಾರೆ. ಅಲ್ಪಾನುಭವಿಗಳು ಅಪಾರಾನುಭವಿಗಳಿಗೆ ಉಪದೇಶಿಸುವಾಗ ಈ ಗಾದೆ ಬಳಸುತ್ತಾರೆ.

ಜಾತಿಗಳ ವೈಶಿಷ್ಟ್ಯವನ್ನು ಸೂಚಿಸುವ ಹಲವು ಗಾದೆಗಳು ಕನ್ನಡದಲ್ಲಿವೆ. ಉದಾ :— ಹಸದ ಹಾರೂನ ತಡೀಬ್ಯಾಡ. ಉಂಡ ಮುಸಲನ ತಡಿಬ್ಯಾಡ. ಅಕ್ಕಸಾಲಿಗ ಅಕ್ಕನ ಬಂಗಾರ ಬಿಡಲಾರ. ಹೊಲ್ಯಾರ ಸುಗ್ಗಿ ಒಲಿಮ್ಯಾಲ. ಇತ್ಯಾದಿ ಗಾದೆಗಳ ಸತ್ಯಾಸತ್ಯತೆಯು ವ್ಯಾಪ್ತಿ ಪರಿಶೀಲನಾರ್ಹ. ಈ ಗುಂಪಿನ ಗಾದೆಯೊಂದನ್ನು ಇಲ್ಲಿ ನೋಡಬಹುದು.

'ಕಬ್ಬಲಿಗ್ಯಾ ಕಾರ್ಯ ಅರಿಯ, ಹೊಲ್ಯಾ ಹೊತ್ತರಿಯ'. ಅರ್ಥವೇನೊ ಸ್ಪಷ್ಟವಾಗಿಯೇ ಇದೆ; ಆದರೆ ಕೇವಲ ಜಾತಿ ವರ್ತುಲಕ್ಕೆ ಸೀಮಿತವಾದ ಗಾದೆ ಇದಲ್ಲ. ಅಪಾರ ಪ್ರಕೃತಿಯ ಸತ್ಯವನ್ನು ಬಿಂಬಿಸುವ ಇದರ ಮೂಲ ಬೇರೆಯಾಗಿದೆ. ಇಲ್ಲಿ ಜನವಾಣಿ, ಶಬ್ದದ ಅನೇಕಾರ್ಥದ ಶಕ್ತಿಯನ್ನು ದುರುಪಯೋಗ ಪಡಿಸಿಕೊಂಡಂತಿದೆ. ಅದು ಹೀಗಿರಬೇಕು.

'ಕಬ್ಬು ಕಾರ್ಯ ಅರಿಯದು; ಹೊಲೆ ಹೊತ್ತು ಅರಿಯದು.'

ಒಬ್ಬ ಒಕ್ಕಲಿಗನ ಮತ್ತು ಒಬ್ಬ ಗೃಹಿಣಿಯ ಅನುಭವ ಇದರಲ್ಲಿದೆ, ಮನೆಯಲ್ಲಿ ಮದುವೆ ಮುಂಜಿವೆ ಇವೆ ಎಂದು ಕಬ್ಬು ನಿಯತಕಾಲಕ್ಕಿಂತ ಮೊದಲು ಬೆಲ್ಲಕ್ಕೆ ಬರಲಾರದು. ತಾನು ಬರುವ ಕಾಲಕ್ಕೆ ಬರುವುದು. ಇನ್ನು 'ಹೊಲೆ' (ಮುಟ್ಟು) ಹೊತ್ತು ಗೊತ್ತು ಅನ್ನದೆ ಬೇಕಾದಾಗ ಆಗುವಂಥದು. ಈ ರೂಪ, ಈ ಅರ್ಥ ಹೆಚ್ಚು ಸಾಧುವೂ ಸಮಂಜಸವೂ ಎನ್ನಲೇಬೇಕು.

ಇದೇ ರೀತಿಯ ಜನ ಜನಿತವಾದ ಇನ್ನೊಂದು ಗಾದೆ:

'ಗಾಣಿಗನ ಕೂಡ ಸೆಟಗೊಂಡು (ಗುದ್ದಾಡಿ) (ಜಗಳಾಡಿ) ಒಣಾರೊಟ್ಟೀ ತಿಂದ್ರತ್ತ'

ರೊಟ್ಟಿಗೂ ಗಾಣಿಗನಿಗೂ (ಎಣ್ಣಿಗೂ) ಅನ್ಯೋನ್ಯ ಸಂಬಂಧವೇನೂ ಇಲ್ಲ. ಗಾಣಿಗನಿಂದ ನಾವು ಬಯಸುವದು ಎಣ್ಣೆಯನ್ನು ಮಾತ್ರ; ಬಿಸಿ ರೊಟ್ಟಿಯನ್ನಲ್ಲ. ಎಣ್ಣೆ ಇಲ್ಲದೆ ಊಟವೇ ಆಗುವದಿಲ್ಲ ಎನ್ನುವ ಪ್ರಮೇಯವೇ ಇಲ್ಲ. ಊಟ ಮಾಡುವ ಪ್ರತಿಯೊಬ್ಬನೂ ಗಾಣಿಗನನ್ನೂ ಆಶ್ರಯಿಸಬೇಕೆಂಬ ಅವಶ್ಯಕತೆಯೂ ಇಲ್ಲ. (ಬಿಸಿ) ರೊಟ್ಟಿಗೂ ಹೆಂಡತಿಗೂ ಸಂಬಂಧ ಸರ್ವವಿದಿತ. ಅವಳೊಡನೆ ಸೆಟಗೊಂಡು (ಜಗಳಾಡಿ) ಉಪವಾಸ ಇರಬೇಕು; ಇಲ್ಲವೇ ಅವಳು ಸೆಟಗೊಂಡು ನೆಲಹಿಡಿದು ಮಲಗಿದಳೆಂದರೆ ಇದ್ದ ಒಣ (ತಂಗಳ) ರೊಟ್ಟಿಯನ್ನೇ ತಿನ್ನಬೇಕು. ಇವೆರಡೇ ದಾರಿ. ಅದಕ್ಕಾಗಿ ರೊಟ್ಟಿಗೂ ಗೃಹಿಣಿಗೂ ಇರುವ ಈ ಸಂಬಂಧವನ್ನು ನೋಡಿದರೆ, ಈ ಗಾದೆ 'ಗೃಹಿಣಿಯ ಕೂಡ ಜಗಳಾಡಿ ಒಣಾ ರೊಟ್ಟಿ ತಿಂದ್ರತ್ತ' ಎಂದಿರಬೇಕೆನಿಸುತ್ತದೆ. ಗೃಹಿಣಿ ಎಂಬ ಸಂಸ್ಕೃತ ಪದ ಜನಸಾಮಾನ್ಯರ ಬಾಯಲ್ಲಿ ಗಾಣಿಗ ಆಗಿರಬಾರದೇಕೆ? ಉಚ್ಚಾರ ಕ್ಲಿಷ್ಟತೆಯಿಂದ ಅಪಾರ್ಥಗಳು ಹುಟ್ಟುವುದು ಸ್ವಾಭಾವಿಕ. 'ಬಿಶಪ್'ನಿಗೆ 'ಬಸಪ್ಪ' ಎನ್ನುವುದಾಗಲೀ; ಕಾಂಟ್ರಾಕ್ಟರನಿಗೆ 'ಕಂತ್ರಾಟಗಾರ' ಅನ್ನುವುದಾಗಲೀ ಇಲ್ಲಿ ನೆನೆಯಬೇಕು.

ಗಾದೆಗಳು ಶುದ್ಧ ದೇಶಿಯ ಆಡುಮಾತಿನಲ್ಲಿರುವುದೇ ಹೆಚ್ಚು, ಬರಹದ ಭಾಷಾ ಕೃತ್ರಿಮತೆ ಇಲ್ಲಿ ಕಡಮೆ. ಅಲ್ಲದೆ ಗಾದೆಗಳು ಆದಿ ಪ್ರಾಸವನ್ನು, ಹೆಚ್ಚಾಗಿ ಅಂತ್ಯಪ್ರಾಸವನ್ನು ಹೊಂದಿರುವುದು ಅವುಗಳ ಸಾಮಾನ್ಯ ಲಕ್ಷಣ.

'ಕೊಡಲಿಯ ಕಾವು ಕುಲಕ್ಕೆ ಮೃತ್ಯು'

—ಎಂಬ ಪ್ರಖ್ಯಾತ ಗಾದೆಯನ್ನು ಪರಿಶೀಲಿಸೋಣ. ಇಲ್ಲಿ 'ಮೃತ್ಯು' ವೆಂಬ ಸಂಸ್ಕೃತ ಪದವೊಂದನ್ನುಳಿದರೆ ಉಳಿದುವೆಲ್ಲಾ ಅಚ್ಚಗನ್ನಡ, ಅಲ್ಲದೆ 'ಕಾವು' 'ಮೃತ್ಯು' ಎಂಬ ಪದಗಳಲ್ಲಿ ಪ್ರಾಸವಾಗಲೀ ಸ್ವರಸಾಮ್ಯವಾಗಲೀ ಇಲ್ಲವೇ ಇಲ್ಲ. ಅಲ್ಲದೆ ಈ ಗಾದೆಯನ್ನು 'ಕೊಡಲಿಯ ಕಾವು ಕುಲಕ್ಕೆ ಮೂಲ' ಎಂದೂ ಬಳಸುತ್ತಾರೆ. ಇದು ಎಷ್ಟೋ ಸಾಧು. ಆದರೆ ಇದಕ್ಕಿಂತಲೂ ಸಾಧು ಪ್ರಯೋಗವೆಂದರೆ 'ಕೊಡಲಿಯ ಕಾವು ಕುಲಕ್ಕೆ ಸಾವು' ಎಂದಿರಬೇಕು. ಬಾಯಿಂದ ಬರಹಕ್ಕೆ ಬಂದಾಗ ಪಂಡಿತನೊಬ್ಬ 'ಸಾವು' ಪದವನ್ನು ಮೃತ್ಯು ಶಬ್ದದಿಂದ ಸ್ಥಳಾಂತರಿಸಬೇಕು.

ಕೆಲವು ಗಾದೆಗಳು ಹೀಗೆ ರೂಪಾಂತರ ಹೊಂದುವಲ್ಲಿ ತಮ್ಮ ಸಾರ್ವತ್ರಿಕತೆಯನ್ನು ಕಳೆದುಕೊಂಡು ಅರ್ಥವಿಲ್ಲದ ಪ್ರಾದೇಶಿಕ ಗಾದೆಗಳಾಗಿ ಉಳಿದಿವೆ.

'ಸೆಟ್ಟಿ ಸಿಂಗಾರಾಗೋದ್ಕ ಪಟ್ಣ ಹಾಳಾತು' ಎಂಬ ಗಾದೆಗೆ ಸರಿಸಮಾನ ಗಾದೆ 'ಸೌರಸೋಟ್ಗ ಔರಸಂಗ ಹಾಳಾತು.' ಈ ಗಾದೆ ವಿಜಾಪುರ ಜಿಲ್ಲೆಯಲ್ಲಿ ನಿತ್ಯ ಮನೆಯ ಮಾತಾಗಿದೆ. 'ತಿಕೋಟ್' ಊರಿಗೆ ಇನ್ನೊಂದು ಹೆಸರು 'ಔರಸಂಗ'. ಜನರ ಮಾತಿನಲ್ಲಿ 'ಔರಸಂಗ'ವೇ ಹೆಚ್ಚು ಪ್ರಚಾರದಲ್ಲಿದೆ. ಆದರೆ ಈ ಔರಸಂಗ ಹಾಳಾದ ವಿಷಯ ಯಾವ ಇತಿಹಾಸದಿಂದಲೂ ತಿಳಿಯದು. ದಂತಕತೆಯಲ್ಲಿಯೂ ಕೇಳಸಿಗದು. ಇದರ ನಿಜಸ್ಥಿತಿ ಕೆಳಗಿನ ಒಂದು ಘಟನೆಯಿಂದಾಗಿ ನನ್ನ ಗಮನಕ್ಕೆ ಬಂದಿತು.

ಒಮ್ಮೆ ನನ್ನ ತಂಗಿಯ ಗೆಳತಿಯರು ಗುಡಿಗೆ ಹೋಗಲು ಅವಳನ್ನು ಕರೆಯಬಂದರು. ನನ್ನ ತಂಗಿ ಹೊಸ ಸೀರೆ ಉಟ್ಟುಕೊಂಡು ಹೊರಬರಲು ತಡವಾಯಿತು. ಆಗ ನನ್ನ ಅಕ್ಕ ; 'ಲಗು ಹೋಗ, ಅವರೆಟ್ಟೊತ್ತ ನಿಂದ್ರಬೇಕ; 'ಸೌರಸೋಟ್ಗ ಔರಸಂಗ ಹಾಳಾತಂತ'—ಎಂದು ಗಾದೆ ಬಿಚ್ಚಿದಳು. ಆಗ ನಾನು ಕುತೂಹಲದಿಂದ ಹೊರಗೆ ಹಣಿಕಿಕ್ಕಿದೆ. ತಂಗಿಯ ಗೆಳತಿಯರು ಆಗಲೆ ದೂರ ಹೊರಟಿದ್ದರು. ಆಗ ನನಗೆ ತಟ್ಟನೆ ಗಾದೆಯ ಅರ್ಥ ಹೀಗೆ ಹೊಳೆಯಿತು.

(ಇವರು)* 'ಸೌರಸೋಟ್ಗ ಅವರ ಸಂಗ (ಇವರಿಗೆ) ಹಾಳಾತು.

'ಅವರ ಸಂಗ' ಹೋಗಿ ಔರಸಂಗವಾಗುವುದಕ್ಕೆ ಭಾಷಾಶಾಸ್ತ್ರದ ಸಂಪೂರ್ಣ ಬೆಂಬಲವಿದೆ. ಸಾರ್ವದೇಶಿಕವಾದ ಈ ಗಾದೆ ಈಗ ಔರಸಂಗ (ತಿಕೋಟಾ)ವಿದ್ದ ವಿಜಾಪುರ ಜಿಲ್ಲೆಯ ಗಾದೆಯಾಗಿ ಉಳಿದಿದೆ.

ಕೆಲವು ಗಾದೆಗಳಲ್ಲಾದ ಮಾರ್ಪಾಟು ಇಷ್ಟು ಸೂಕ್ಷ್ಮವಿದೆ ; ಆದರ ನಿಜಸ್ಥಿತಿಯನ್ನು ಗುರುತಿಸುವುದೂ ಕಷ್ಟ. ಬಾಯಿಂದ ಬಾಯಿಗೆ, ಬಾಯಿಂದ ಬರಹಕ್ಕೆ ಬಂದಾಗ ಅರ್ಥಕ್ಕೆ ಊನು ಬರದೇ ಈ ವ್ಯತ್ಯಾಸ ಸಂಭವಿಸಿತು.

---

* ಸೌರಸು = ಸಜ್ಜಾಗು ; ತಯಾರಾಗು ; ಸಿದ್ಧವಾಗು.

'ಹಂಗಿನರಮನೆಗಿಂತ ಹಾಳು ಗುಡಿಯೇ ಲೇಸು'

'ಹಂಗಿನವರ ಮನೆಗಿಂತ ಹಾಳು ಗುಡಿಯೇ ಲೇಸು.'

ಈ ಸೂಕ್ಷ್ಮ ವ್ಯತ್ಯಾಸವನ್ನು ತಟ್ಟನೆ ಗುರುತಿಸಲಾಗದು. ಇದರಲ್ಲಿಯು 'ವಕಾರ' ಆಗಮವೋ ಲೋಪವೋ ತಿಳಿಯಲಾರದು. ಯಾವುದು ಮೂಲ; ಯಾವುದು ಆಮೇಲಿನದು ಎಂದು ಹೇಳುವುದೇ ಕಷ್ಟ. ಆದರೂ 'ಅವರ ಮನೆ'ಗಿಂತ 'ಅರಮನೆ' ಹೆಚ್ಚು ಸಾಧುವಾದ ಪ್ರಯೋಗ ಎನ್ನಿಸುತ್ತದೆ. 'ಅರಮನೆ' 'ಹಾಳುಗುಡಿ' ಎನ್ನುವಲ್ಲಿಯ ವಿರೋಧದ ಕಸುವು ಗಾದೆಯನ್ನು ಹೆಚ್ಚು ಸತ್ವಯುತ, ಶಕ್ತಿಯುತವಾಗಿ ಮಾಡುತ್ತದೆ. ಹಂಗಿನವರ ಮನೆ ಒಮ್ಮೊಮ್ಮೆ ಹಾಳುಗುಡಿಯಷ್ಟೇ ಕೆಟ್ಟದೂ ಆಗಿರುವ ಸಂಭವ ಉಂಟು. ಹಾಗಿದ್ದಲ್ಲಿ ಗಾದೆಯು ಅರ್ಥವೇ ಹಾಳಾದೀತು!

ಸಾಮಾನ್ಯ ಜನರ ನಿಶ್ಚಿತ ಅನುಭವದಲ್ಲಿ ಹುಟ್ಟಿ ಸಾಮಾನ್ಯ ಜನರ ಅನಿಶ್ಚಿತ ಉಚ್ಚಾರದಲ್ಲಿ ಗಾದೆ ಬದುಕಬೇಕಾಗುತ್ತದೆ. ಉಚ್ಚಾರ ವ್ಯಕ್ತಿಯಿಂದ ವ್ಯಕ್ತಿಗೆ ಊರಿಂದ ಊರಿಗೆ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಕೇಳುಗರ ಕಿವಿ, ಹೇಳುವವರ ನಾಲಗೆಯು ದೋಷ ಇದಕ್ಕೆ ಕಾರಣ. ಈ ಉಚ್ಚಾರ ವ್ಯತ್ಯಾಸದಿಂದಲೇ ಹಲವಾರು ಗಾದೆಗಳು ಅನರ್ಥಕ್ಕೆ ಗುರಿಯಾಗಿವೆ.

ಬರಹ ದೋಷವೂ, ಮುದ್ರಣ ದೋಷವೂ ಗಾದೆಗಳನ್ನು ರೂಪಗೆಡಿಸಬಹುದು. ಒಮ್ಮೊಮ್ಮೆ ಈ ದೋಷ ಗುಣವಾಗಿ ಗಾದೆಗೆ ಹೊಸತನ ತಂದು ಕೊಟ್ಟುದುಂಟು. ಅರ್ಥಕ್ಕೆ ಊನು ಬರದಂತೆ ಹಾಸ್ಯದ ಮೊನಚನ್ನು ಪಡೆದು ಬಂದ ಪ್ರಖ್ಯಾತ ಗಾದೆಯೊಂದನ್ನು ನೋಡಿ.

'ದೂರದ ಗುಡ್ಡ ಕಣ್ಣಿಗೆ ನುಣ್ಣಗೆ'

ಒಬ್ಬ ವಿದ್ಯಾರ್ಥಿ ಅವಸರದಲ್ಲಿ ಇದನ್ನು 'ದೂರದ ಗಡ್ಡ ಕಣ್ಣಿಗೆ ನುಣ್ಣಗೆ' ಎಂದು ಬರೆದಿದ್ದ. ಈಗಲೂ ಅಭ್ಯಾಸ ಬಲದಿಂದ ಮೇಲಿನಂತೆಯೇ ಓದುತ್ತೇವೆ. 'ಗುಡ್ಡ' ಎಂಬುದು 'ಗಡ್ಡ' ಎಂದಾಗಿ ಗಾದೆಗೆ ನವ್ಯತೆಯನ್ನೂ ಹಾಸ್ಯವನ್ನೂ ನಿರ್ಮಿಸಿದೆ. ಇಷ್ಟಾಗಿ ಅರ್ಥದಲ್ಲಿ ಯಾವ ವ್ಯತ್ಯಾಸವನ್ನೂ ಹೊಂದಿಲ್ಲ. ಅದು ಮುಖ್ಯ ಆದರೂ ಗಾದೆ ಭವ್ಯತೆಯನ್ನು ಮಾತ್ರ ಕಳೆದುಕೊಂಡಿತು.

ಒಂದು ಗಾದೆಯು ಬಳಕೆ ಕಡಿಮೆಯಾದಾಗ ಅದರ ಅರ್ಥದಲ್ಲಿಯೂ ಕೆಲವು ಸಲ ಅಸ್ಪಷ್ಟತೆ ಹುಟ್ಟಿಕೊಂಡು, ಅದೇ ಅರ್ಥ ಕೊಡುವ, ಕಾಲದ ಪರಿಸರಕ್ಕೆ ಒಗ್ಗುವ, ಹೊಸ ಗಾದೆ ಹುಟ್ಟಿಕೊಂಡು ಬರುವದೇನೂ ಅಸಂಭವವಲ್ಲ.

'ಆಕಳು ಕಪ್ಪಾದರೆ ಹಾಲು ಕಪ್ಪೆ?' ಆಕಳು ಹಾಲು ಕೊಡುತ್ತದೆಂಬುದನ್ನೂ ತಿಳಿಯಲು ಅವಕಾಶವಿಲ್ಲದ ಇಂದಿನ ಪಟ್ಟಣಿಗರಿಗೆ 'ಕಪ್ಪು' ಅಂದಾಗ ತಟ್ಟನೆ ಚಹದ ಕಪ್ಪಿನ ಕಲ್ಪನೆಯೇ ಬರುವದುಂಟು; 'ಬಿಲ್ಲು' ಎಂದಾಗ ಹೊಟೇಲಿನ ಬಿಲ್ಲಿನ ನೆನಪು ಬಂದಂತೆ.

ಪ್ರಸ್ತುತ ಗಾದೆ ಜನರ ನಾಲಿಗೆಯಲ್ಲಿ ಈಗ ಕಾಣುವದೇ ದುಸ್ತರ. ಆಕಳು ಸಾಕುವುದು ಕಡಿಮೆಯಾಗಿ ಕೋಳಿ ಸಾಕುವುದು ಹೆಚ್ಚಾದಾಗ, ಈ ಗಾದೆಗೆ ಬದಲಾಗಿ :

'ಕೋಳಿ ಕಪ್ಪಾದರೆ ತತ್ತಿ ಕಪ್ಪೆ ?' ಎಂಬ ಗಾದೆಯೂ ಕೆಲದಿನ ಬಳಸಲ್ಪಡುತ್ತಿತ್ತು. ಅದೂ ಹೋಗಿ, ಮೊನ್ನೆ ಒಬ್ಬ ತರುಣ

'ಮುಖ ಕಪ್ಪಾದರೆ ಪೌಡರ ಕಪ್ಪೆ ?' ಎಂಬ ಮಾತನ್ನು ಬಳಸಿದಾಗ ನನಗೆ ನಗೆ ಬರದಿರಲಿಲ್ಲ. ಹೊಸ ಗಾದೆಗಳು ಹುಟ್ಟುವುದು ಹೀಗೆಯೇ; ಬಗಲಗಸಿಯ ಅಂಗಿ ಹೋಗಿ ಬುಶ್‌ಶರ್ಟ್ ಆದಂತೆ ಅನ್ನಿಸಿತು.

ಒಂದೇ ಗಾದೆ ಪ್ರಾದೇಶಿಕ ಭಾಷಾಪ್ರಭಾವಕ್ಕೊಳಪಟ್ಟು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಶಬ್ದ ಸಮೂಹದಲ್ಲಿರಬಹುದು.

'ಗಾದೆಗಳು' ಎಂಬ ಕ.ವಿ.ವಿ. ಉಪನ್ಯಾಸ ಗ್ರಂಥ ಮಾಲೆಯ ಕಿರುಹೊತ್ತಿಗೆಯಲ್ಲಿ ಡಾ. ಎ. ಕೆ. ರಾಮಾನುಜನ್ ಅವರು ಹಳೆಯ ಮೈಸೂರ ಪ್ರದೇಶದ್ದಾಗಿರಬಹುದಾದ,

'ಪಗಡೆಯಾಡಿ ಕೌರವ (ಪಾಂಡವ) ಕೆಟ್ಟ ; ಕವಡೆಯಾಡಿ ಹೆಣ್ಣು ಕೆಟ್ಟಳು'

ಎಂಬ ಗಾದೆ ಬಳಸುತ್ತಾರೆ. ಇದೇ ಗಾದೆಯನ್ನು ವಿಜಾಪೂರ ಜಿಲ್ಹೆಯಲ್ಲಿ (ಮುಂಬಯಿ ಕರ್ನಾಟಕ) 'ಪಗಡೆಯಾಡಿ ಗಂಡಸು ಕೆಟ್ಟ, ಪುಗಡಿಯಾಡಿ ಹೆಂಗಸು ಕೆಟ್ಟಳು' ಎಂದು, ಹೈದರಾಬಾದ ಕರ್ನಾಟಕದಲ್ಲಿ 'ಪಗಡೆಯಾಡಿ ಪಾರ ಕೆಟ್ಟ ; ಪುಗಡಿಯಾಡಿ ಪೋರಿ ಕೆಟ್ಲು' ಎಂದು ಬಳಸುತ್ತಾರೆ. ಗಾದೆಯಲ್ಲಿರುವ ಅನುಭವ ಎಲ್ಲರಿಗೂ ಅನ್ವಯಿಸುವುದಾದರೂ ಅದನ್ನು ಬಳಸುವ ಪದಗಳು ಮಾತ್ರ ಆಯಾ ಪ್ರದೇಶಕ್ಕೆ ಅನ್ವಯಿಸುವಂಥವು.

ಒಂದೇ ಗಾದೆ ಅದೇ ಪ್ರದೇಶದಲ್ಲಿ ಎರಡು ರೀತಿಯಿಂದ ಬಳಸಲ್ಪಡುವುದನ್ನೂ ಕಾಣುತ್ತೇವೆ.

'ಮುಖಾ ನೋಡಿ ಮಣಿ ಹಾಕಬಾರದು'

'ಮುಕಳಿ ನೋಡಿ ಮಣಿ ಹಾಕಬಾರದು'

ಇಲ್ಲಿ, ಇದು ಸಾಧು ಇದು ಅಸಾಧು ಎಂದು ವಾದಿಸುವ ಪ್ರಮೇಯವೇ ಇಲ್ಲ. ಅದು ಅವರವರ ಶಬ್ದ ಸಂಸ್ಕೃತಿಗೇ ಬಿಟ್ಟುದು.

ಹೀಗೆ ಗಾದೆಗಳು ಮುಖ್ಯವಾಗಿ ಉಚ್ಚಾರದ ಪ್ರವಾಹಕ್ಕೆ ಸಿಕ್ಕು ರೂಪಾಂತರ ಹೊಂದಿ, ದೇಶಿಯ ಚೆಲುವಿಗೂ ಅರ್ಥದ ಬಲಕ್ಕೂ ಎರವಾಗಿವೆ. ಅವುಗಳ ಮೂಲಸ್ವರೂಪ ಮಸಕಾಗಿ ಮರೆಯಾಗಿ ಹೋಗುವ ಮುನ್ನ, ಅವುಗಳನ್ನು ಆಡುಮಾತಿನ ಗ್ರಾಮ್ಯಸ್ವರೂಪದಲ್ಲೇ ಹಿಡಿದಿಡುವುದು ನಮ್ಮ ಕರ್ತವ್ಯವಾಗಿದೆ.

★ ಮ. ಗು. ಬಿರಾದಾರ

ಕಳಸ-ಕಾರ್ಕಳ ಅರಸರು ಮತ್ತು ಶೃಂಗೇರಿ ಮಠ

ತುಳು ನಾಡಿನ ಇತಿಹಾಸದಲ್ಲಿ ಕಳಸ–ಕಾರ್ಕಳ ಅರಸು ಮನೆತನದವರು ಭೈರವ ರಾಯರೆಂದು ಪ್ರಸಿದ್ಧಿ ಪಡೆದಿದ್ದಾರೆ. ಈ ಅರಸರ ರಾಜ್ಯವು ಘಟ್ಟದ ಮೇಲಣ ಕಳಸ ಬೆಳ್ಳರೆಗಳನ್ನೊಳಗೊಂಡು ಘಟ್ಟದ ಕೆಳಗಣ ಕಾರ್ಕಳದ ವರೆಗೆ ಹಬ್ಬಿತ್ತು, ಕಾರ್ಕಳದ ಸಮೀಪವಿರುವ ಕೆರವರಸೆಯು ಈ ರಾಜ್ಯದ ರಾಜಧಾನಿಯಾಗಿತ್ತು. ಈ ಮನೆತನ ದವರು ಹದಿನಾಲ್ಕನೆಯ ಶತಮಾನದಿಂದ ಹದಿನೇಳನೆಯ ಶತಮಾನದ ಉತ್ತರಾರ್ಧದ ವರೆಗೆ ಆಳಿದರು.[೧] ಇವರು ತಮ್ಮ ಆಡಳಿತದ ಕೊನೆಯವರೆಗೆ ಜೈನ ಮತಾವಲಂಬಿ ಯಾಗಿದ್ದರೂ ಸಕಲ ಮತಗಳನ್ನು ಗೌರವಿಸುತ್ತಿದ್ದರು. ಈ ಅಂಶವನ್ನು ಕುರಿತು ಆ ಕಾಲದ ಚಂದ್ರಮ ಕವಿಯು "ಮತಮತಗಳ ಪರೀಕ್ಷೆಯನು ಮಾಡುತ್ತ ಜಿನಮತ ವಾದಿಗಳ ಮನ್ನಿಸುತ ಹಿತಮಿತ ಗಂಭೀರ ವಚನನು"[೨] ಎಂದು ಹೇಳಿದುದನ್ನು ಇಲ್ಲಿ ಗಮನಿಸಬೇಕು. ಹೀಗೆ ಜೈನ ಮತಾವಲಂಬಿಗಳಾಗಿದ್ದರೂ ಸಕಲ ಮತಗಳನ್ನು ಮನ್ನಿಸುತ್ತಿದ್ದ ಈ ಕಾರ್ಕಳ ಭೈರರಸ ಒಡೆಯರಿಗೂ ಮತ್ತು ಅದ್ವೈತ ಪೀಠದ ಪ್ರಮುಖ ಕೇಂದ್ರವಾದ ಶೃಂಗೇರಿ ಮಠದವರಿಗೂ ಇದ್ದ ಪರಸ್ಪರ ಸೌಹಾರ್ದತೆ ಯನ್ನು ತಿಳಿಸುವ ಸಾಧನಗಳೆಂದರೆ ಶಾಸನಗಳು, ಬಾಹುಬಲಿಯ "ನಾಗಕುಮಾರ ಚರಿತ್ರೆ" ಲಿಂಗಣ್ಣ ಕವಿಯ "ಕೆಳದಿನೃಪವಿಜಯ" ಮತ್ತು ಲಕ್ಷ್ಮಣ ಶಾಸ್ತ್ರಿ ರಚಿಸಿದ "ಗುರು ವಂಶ ಕಾವ್ಯ". ಇವುಗಳ ಆಧಾರದಿಂದ ಈ ಅರಸರಿಗೂ ಮತ್ತು ಶೃಂಗೇರಿ ಮಠಕ್ಕೂ ಇದ್ದ ಆತ್ಮೀಯ ಭಾವನೆಯನ್ನು ಇಲ್ಲಿ ವಿವರಿಸಬಹುದು.

ಇಮ್ಮಡಿ ಭೈರವರಾಯ – ಶೃಂಗೇರಿ ಮಠ

ಭೈರವ ವಂಶದಲ್ಲಿ ಆಳಿದ ಅರಸರಲ್ಲಿ ಇಮ್ಮಡಿ ಭೈರವರಾಯನು ಶ್ರೇಷ್ಠನು. ಇವನ ಕಾಲ ೧೫೭೦—೧೫೯೦. ಈ ಅರಸನ ವಿಚಾರ ಪ್ರಥಮವಾಗಿ ಉಲ್ಲೇಖವಿರು ವುದು ಬಾಹುಬಲಿಯ "ನಾಗಕುಮಾರ ಚರಿತ್ರೆ" ಯಲ್ಲಿ. ಈ ಕಾವ್ಯವು ಕಳಸ–ಕಾರ್ಕಳ ಮತ್ತು ಶೃಂಗೇರಿ ಮಠದ ಸೌಹಾರ್ದತೆಯ ಕುರಿತಾಗಿ ಈ ರೀತಿ ತಿಳಿಸು ತ್ತದೆ. "ಶೃಂಗೇರಿ ಅಧಿಪತಿ ಶಾರದಾಮೂರ್ತಿ ಆರಾಧಕನಾದ ಶ್ರೀ ನರಸಿಂಹ

---

೧. **ಚಂದ್ರಮ ಕವಿಯ ಕಾರ್ಕಳ ಗೋಮಟೇಶ್ವರ ಚರಿತ್ರೆ** : ಒಂದನೆಯ ಸಂಧಿ. ಪದ್ಯ ೧೩. ಎರಡನೆಯ ಸಂಧಿ ಪದ್ಯ ೪೬. ಚಂದ್ರಮ ಕವಿಯು ಕಾರ್ಕಳ ಮುಮ್ಮಡಿ ಭೈರವರಾಯನ ಆಸ್ಥಾನದ ಕವಿಯಾಗಿದ್ದನು. ಇವನು ಕ್ರಿ.ಶ. ೧೬೪೬ ರಲ್ಲಿ 'ಕಾರ್ಕಳ ಗೋಮಟೇಶ್ವರ ಚರಿತ್ರೆ' ಎಂಬ ಸಾಂಗತ್ಯ ಕಾವ್ಯವನ್ನು ರಚಿಸಿದನು. ಈ ಕಾವ್ಯದಿಂದ ಕಾರ್ಕಳ ಅರಸರ ಪರಾಕ್ರಮ ಮತ್ತು ಅಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳು ತಿಳಿದುಬರುತ್ತವೆ. ಕಾರ್ಕಳ ಅರಸರ ವಿಷಯ ತಿಳಿಸುವ ಸಮಕಾಲೀನ ಕಾವ್ಯವು ಇದಾಗಿದೆ.

೨. **ಚಂದ್ರಮಕವಿ** : ಗೋಮಟೇಶ್ವರ ಚರಿತ್ರೆ. ಸಂಧಿ ೨ ಪದ್ಯ ೪೬.

ಭಾರತಿಯೆಂಬ ಯತಿಯು ಸರ್ವತೋಭದ್ರವೆಂಬ ದೇಗುಲವನ್ನು ರಚಿಸಿ ಇಲ್ಲಿ ವಾಸವಾಗಿದ್ದನು. ಆ ನರಸಿಂಹ ಭಾರತಿಯ ಧ್ಯಾನಕ್ಕೆ ರಕ್ಷಕನೆನಿಸಿ ಕೆಲವೆನೆ(?)ಯ ಸಿಂಹಾಸನದೊಳು ಅರಿರಾಯರ ಗಂಡ ಧಾವಣಿ ತೆಂಗಣರಾಯ ಜಿನಭಕ್ತ ಭೈರವೇಂದ್ರನು ಆಳುತ್ತಿದ್ದನು.[೩] ಈ ಭೈರವರಾಯನೇ ಇಮ್ಮಡಿ ಭೈರವರಾಯ ಇವನ ರಾಜಧಾನಿ ಕೆರವರಸೆಯೆಂದು ಡಾ. ಸಾಲೆತ್ತೂರರವರು ತಮ್ಮ ಸಂಶೋಧನ ಗ್ರಂಥವಾದ "ಮಧ್ಯಕಾಲೀನ ಜೈನ ಧರ್ಮ"ದಲ್ಲಿ ತಿಳಿಸಿದ್ದಾರೆ.[೪] "ಇಮ್ಮಡಿ ಭೈರವರಾಯನು ಶೃಂಗೇರಿ ಸ್ವಾಮಿಯ ಧ್ಯಾನರಕ್ಷಕನೆಂಬ ನಾಗಕುಮಾರ ಚರಿತ್ರೆಯಲ್ಲಿ ತಿಳಿಸಿದ ವಿಷಯವನ್ನು ವಿಮರ್ಶಿಸಿದಾಗ, ಕಾರ್ಕಳ ಅರಸರು ಅದ್ವೈತ ಪೀಠವಾದ ಶೃಂಗೇರಿ ಮಠವನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುತಿದ್ದರೆಂದು ಇಲ್ಲಿ ಅಭಿಪ್ರಾಯಪಡಬಹುದು. ಶೃಂಗೇರಿ ಮಠದ ಸ್ವಾಮಿಗಳೊಂದಿಗೆ ಭೈರವರಾಯರ ಹೆಸರನ್ನು ಹರಿಹರಪುರ ಮಠದ ಶಾಸನವು ಉಲ್ಲೇಖಿಸುತ್ತದೆ. ಈ ಶಾಸನದ "ಸ್ವಸ್ತಿ ಶಾಲಿವಾಹನ ಶಕ ೧೪೯೫ ರಲ್ಲಿ ಪೆನುಗೊಂಡೆ ಸಿಂಹಾಸನವನ್ನು ಶ್ರೀರಂಗ ಸುಖ ಕಥಾ ವಿನೋದದಲ್ಲಿ ರಾಜ್ಯವನ್ನು ಪರಿಪಾಲಿಸುವ ವೇಳೆ ಕಾರಕಳದಲ್ಲಿ ಭಯಿರಸವೊಡೆಯರು ಈ ರಾಜ್ಯವಾಳುತ್ತಿಹ ವೇಳೆಯಲ್ಲಿ, ಶೃಂಗೇರಿಯಲ್ಲಿ ನರಸಿಂಹ ಭಾರತೀಯರು.... ಹರಿಹರ ಪುರದಲ್ಲಿ ಮಾಧವಸರಸ್ವತಿ ಧರ್ಮ ಪಾಲಿಸುತ್ತಿದ್ದ ವೇಳೆಯಲ್ಲಿ"[೫] ಎಂಬ ಮಾತು ಶೃಂಗೇರಿ ನರಸಿಂಹ ಭಾರತೀಯರೂ, ಮಾಧವ ಸರಸ್ವತಿ, ಕಾರ್ಕಳದ ಭೈರರಸ ಒಡೆಯರೂ ಸಮಕಾಲೀನರೆಂದು ತಿಳಿಸುತ್ತದೆ. ಈ ಶಾಸನವು ಮುಂದುವರಿಯುತ್ತಾ ಹರಿಹರಪುರವನ್ನು ದಾನ ಬಿಟ್ಟದ್ದಕ್ಕೆ ಕಾರ್ಕಳ ಭೈರರಸ ಒಡೆಯರ ಪ್ರತಿನಿಧಿ 'ಬುದ್ಧಿವಂತ'ರು ಸಾಕ್ಷಿಗಳಾಗಿದ್ದರೆಂದೂ ತಿಳಿಸುತ್ತದೆ.

ಇಮ್ಮಡಿ ಭೈರವರಾಯನಿಗೆ ಶೃಂಗೇರಿ ಮಠದ ಮೇಲೆ ಎಷ್ಟು ಭಕ್ತಿ ಇತ್ತು ಎಂಬುದನ್ನು ರೂಢಿಯಲ್ಲಿರುವ ಕಾರ್ಕಳದಲ್ಲಿನ ಕಥೆ ಈ ರೀತಿ ತಿಳಿಸುತ್ತದೆ.

ಕ್ರಿ. ಶ. ೧೫೮೪ ರಲ್ಲಿ ಶೃಂಗೇರಿಯ ನರಸಿಂಹ ಭಾರತಿ ಸ್ವಾಮಿಯವರನ್ನು ಕಾರ್ಕಳಕ್ಕೆ ಸ್ವಾಗತಿಸಲು ಇಮ್ಮಡಿ ಭೈರವರಾಯನು ಹೋಗಲು ಸ್ವಾಮಿಗಳು ದೇವಸ್ಥಾನ

---

೩. ಆರ್. ನರಸಿಂಹಾಚಾರ್ ಕವಿಚರಿತ್ರೆ ಭಾಗ ೩ ಪುಟ ೨೮೭-೮೮. ಈ ಕವಿಯು ಕರ್ನಾಟಕ ದೇಶದಲ್ಲಿನ ಕುಂದಾದ್ರಿಯ ದಕ್ಷಿಣಕ್ಕಿರುವ ವಾರಣಾಸಿ ಎಂಬ ಶೃಂಗೇರಿಯವನು ಇವನು ಕ್ರಿ. ಶ. ೧೫೬೦ ರಲ್ಲಿ ಬಾಹುಬಲಿ ಚರಿತ್ರೆಯನ್ನು ಬರೆದಿರುವನೆಂದು ಆರ್. ನರಸಿಂಹಆಚಾರ್ಯರು ತಮ್ಮ ಕವಿಚರಿತ್ರೆಯಲ್ಲಿ ಅಭಿಪ್ರಾಯಪಡುತ್ತಾರೆ. ಬಾಹುಬಲಿಯು ರಾಜಸಭೆಯಲ್ಲಿ ಲಲಿತಕೀರ್ತಿಪುರಾಣಕಥೆಯನ್ನು ಹೇಳುತ್ತಿರುವಾಗ, ಪಂಚಮಿಯಕಥೆ ಪ್ರಸ್ತಾಪವಿರಲು ಕವಿಮಾರ್ಗವನ್ನು ನೋಡಿ ಇದನ್ನು ಚರಿತ್ರೆ ಮಾಡಲು, ಅರಸುಕವಿ ಲಲಿತಕೀರ್ತಿ ಆಜ್ಞಾನುಸಾರವಾಗಿ ಪಂಚಮಿಯ ಕಥೆಯನ್ನು ಬರೆದನು.

೪. Dr. Salettore-Mediaeval Jainism Page. 381.

೫.. Mysore Archaelogical report 1932. Inscription No. 40.

ವಿಲ್ಲದ ಊರಿನಲ್ಲಿ ತಾನು ನಿಲ್ಲುವುದಿಲ್ಲ ಎಂದು ಹೇಳಿದರು. ಅರಸನು ಬೇಸರಪಟ್ಟು ನೆಲ್ಲಿಕಾರು ಗ್ರಾಮದಿಂದ ತರಿಸಿದ ಅನಂತೇಶ್ವರ ಶಿಲಾ ಪ್ರತಿಮೆಯನ್ನು ಬಸದಿಗಾಗಿ ಕಟ್ಟಿಸಿದ ಮಂದಿರದಲ್ಲಿ ಸ್ಥಾಪಿಸಿದನು. ಅನಂತರ ಶೃಂಗೇರಿ ಸ್ವಾಮಿಗಳಿಗೆ ಭಿಕ್ಷೆಯನ್ನಿತ್ತು ಆದರಿಸಿದನು. ಇಮ್ಮಡಿ ಭೈರವರಾಯನು ನೆಲ್ಲಿಕಾರು ಗ್ರಾಮವನ್ನು ಅದೇ ದೇವಸ್ಥಾನಕ್ಕೆ ಉಂಬಳಿಯಾಗಿ ಬಿಟ್ಟನು. ಇದರಿಂದಾಗಿ ಇಮ್ಮಡಿ ಭೈರವರಾಯನು ತನ್ನ ಗುರುಗಳ ರೋಷಾವೇಶಕ್ಕೆ ತುತ್ತಾಗಬೇಕಾಯಿತು".[೬] ಈ ದೇವಸ್ಥಾನದ ವಾಸ್ತುಶಿಲ್ಪವನ್ನು ಅಭ್ಯಸಿಸಿದ ಡಾ. ಗುರುರಾಜಭಟ್ಟರು ಈ ದೇವಸ್ಥಾನ ರಚನೆ ೧೬ನೆಯ ಶತಮಾನದಲ್ಲಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.[೭] ಇಲ್ಲಿಯ ವಿಷಯ ದಂತ ಕಥೆಯಾದರೂ, ಭೈರವ ಅರಸರಿಗೆ ಶೃಂಗೇರಿ ಮಠದ ಯತಿಗಳಲ್ಲಿ ಆದರ ಭಕ್ತಿಯಿದ್ದುದನ್ನು ಈ ಕಥೆಯು ತಿಳಿಸುತ್ತದೆ.

ಮುಮ್ಮಡಿ ಭೈರವರಾಯ–ಶೃಂಗೇರಿಮಠ

ಇಮ್ಮಡಿ ಭೈರವರಾಯನ ಅನಂತರ, ಇವನ ಮಗ ಪಾಂಡ್ಯಪ್ಪ ಒಡೆಯರು ಅನಂತರ, ಇವನ ಅನುಜ ಭೈರವರಾಯನು ಪಟ್ಟಕ್ಕೆ ಬಂದರು.[೮] ಇವನೇ ಮುಮ್ಮಡಿ ಭೈರವರಸನೆಂದು ಡಾ. ಗುರುರಾಜ ಭಟ್ಟರು ತಮ್ಮ "ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ"ದಲ್ಲಿ ತಿಳಿಸಿದ್ದಾರೆ.[೯] ಈ ಅರಸನು ಕ್ರಿ.ಶ ೧೫೫೯ರಲ್ಲಿ ಆಳಿದ್ದನೆಂದು ಕೊಪ್ಪ ತಾಲೂಕಿನ ಪಾರ್ಶ್ವನಾಥ ಬಸದಿಯಲ್ಲಿ ಸಿಕ್ಕ ಶಾಸನದಿಂದ ತಿಳಿಯಬಹುದು.[೧೦] ಮುಮ್ಮಡಿ ಭೈರವರಾಯನ ಕಾಲದಲ್ಲಿ ಶೃಂಗೇರಿ ಮಠದ ಗುರುಗಳಿಗೂ, ಇವನಿಗೂ ವೈಮನಸ್ಸು ಉಂಟಾಗಿ ಭೈರವರಾಯನು ಶೃಂಗೇರಿ ಮಠದ

---

೬. Ganapati Rao Igal· ದಕ್ಷಿಣಕನ್ನಡ ಜಿಲ್ಲೆಯ ಇತಿಹಾಸ, Page 371.

೭. Dr. P. Gururaj Bhat : A Cultural and PoliticalHistory of Tulunad. (unpublished Thesis, Page 187).

೮. Chandrama : Karkal Gommateshwar Charitre. ಚಂದ್ರಮ : ಕಾರ್ಕಳ ಗೊಮ್ಮಟೇಶ್ವರ ಚರಿತೆ ಸಂಧಿ ೧೬. ಪದ್ಯ ೯ ಮತ್ತು ೧೪. b. South Indian Inscriptions. Volume 7. No. 244. ಈ ಶಾಸನವು ಪಾಂಡ್ಯಪ್ಪ ಒಡೆಯನನ್ನು ವೀರಭೈರಸಒಡೆಯರ ಕುಮಾರನೆಂದು ಉಲ್ಲೇಖಿಸಿದೆ. C. Epigraphia Carnatica 6. No. 63. ಮೂಡಿಗೆರೆ. ಈ ಶಾಸನವು ಈ ಭೈರಸಒಡೆಯನನ್ನು ಶ್ರೀ ವೀರಭೈರಸ ಒಡೆಯರ ಕುಮಾರನೆಂದು ಉಲ್ಲೇಖಿಸಿದೆ. ಆದುದರಿಂದ ಪಾಂಡ್ಯಪ್ಪ ಒಡೆಯರು ಮತ್ತು ಭೈರಸ ಒಡೆಯರು ಅಣ್ಣ ತಮ್ಮಂದಿರು.

೯. P. GuruRaj Bhat Cultural and Political History of Tulunad Page 189. ಈ ಭೈರಸ ಒಡೆಯನನ್ನು ಭೈರವ 5th ಎಂದು ಡಾ. ಸೂರ್ಯನಾಥ ಕಾಮತರು ತಮ್ಮ ಪ್ರಬಂಧವಾದ ವಿಜಯನಗರ ಕಾಲದ ತುಳುನಾಡಿನಲ್ಲಿ ತಿಳಿಸಿದ್ದಾರೆ. ಆದರೆ ಗಣಪತರಾವ್ ಐಗಳು ಈ ಭೈರಸ ಒಡೆಯನನ್ನು ದಾವಣಿ ಇಮ್ಮಡಿ ಭೈರಸ ಒಡೆಯನೆಂದು ತಮ್ಮ ಇತಿಹಾಸದಲ್ಲಿ ತಿಳಿಸಿದ್ದಾರೆ. ಇಮ್ಮಡಿ ಭೈರಸ ಒಡೆಯನ ವಿಚಾರ ತಿಳಿಸಿದ ನಂತರ ಪ್ರಸಕ್ತ ಲೇಖನದಲ್ಲಿ ಈ ಅರಸನನ್ನು ಮುಮ್ಮಡಿ ಭೈರವರಾಯನೆಂದು ಉಲ್ಲೇಖಿಸಿದೆ.

೧೦. E. C. VI No. 50-Koppa,

ಮೇಲೆ ಮುತ್ತಿಗೆಯನ್ನಿತ್ತ ವಿಷಯವನ್ನು ಲಿಂಗಣ್ಣ ಕವಿಯು ಬರೆದ "ಕೆಳದಿನೃಪ ವಿಜಯ" ಮತ್ತು ಲಕ್ಷ್ಮಣ ಶಾಸ್ತ್ರಿಗಳು ರಚಿಸಿದ "ಗುರುವಂಶ ಕಾವ್ಯದಿಂದಲೂ" ತಿಳಿದುಬರುತ್ತದೆ.[೧೧] "ಕೆಳದಿನೃಪವಿಜಯ"ವು ಶೃಂಗೇರಿ ಮಠ ಮತ್ತು ಮುಮ್ಮಡಿ ಭೈರವರಾಯನ ಘರ್ಷಣೆಯ ಕುರಿತಾಗಿ ಈ ರೀತಿ ತಿಳಿಸುತ್ತದೆ. "ಕೆಳದಿ ವೆಂಕಟಪ್ಪ ನಾಯಕನ ಕಾಲದಲ್ಲಿ.

ಕಾರಕಳದೊಡೆಯರೆನಿಸಿದ
ಭೈರರಸವೊಡೆಯರ್ವಿರೋಧದಿಂದ ವಿಲಸಚ್ಛೃಂ
ಗೇರಿಯ ಧರೆಯಂ ಕೊಂಡುರೆ
ಘೇರಿಸಿ ಮಾತ್ಸರದಿಂದೆ ತತ್ಪುರವರಮಂ
ಭೈರವನ ಬೆಟ್ಟದೆಡೆಯೊಳ್
ಭೂರಿ ಶತಘ್ನಿಗಳ ಪೂಡಿ ಬಲ್ಗುಂಡುಗಳಂ
ಹಾರಿಸಿ ಪುರ ಮುರಗಳೊಳಡಿ
ಯೂರದೊಲಂಡಲೆದುಪದ್ರಯಂಗಳ ನೆಸಗಲ್

ಇಂತೆಸಗಿದ ಭೈರರಸ ಒಡೆಯರ ಮದೋದ್ರೇಕಮಂ ಮುಗ್ಗಿಸಿ ಮುತ್ತಿಗೆ ತೆಗೆಸಿ ಬಳಿಕ್ಕ ವನತಿರೇಕದಿಂದಾಕ್ರಮಿಸಿದ ಭೂಮಿಯ ತೆಗೆದುಕೊಂಡು ಶೃಂಗಸ್ವಾಮಿಗಳ್ಗಿತ್ತು ತನ್ಮಠವ ಧರ್ಮಕ್ಕೆ ತಾನುಂ ಬೇರೆ ಶಿವಾರ್ಪಿತವಾಗಿ ಭೂಸ್ವಾಸ್ಥ್ಯಯಂ ಧಾರೆಯನೆರೆದು ತನ್ಮಠಮಂ ಜೀರ್ಣೋದ್ಧಾರಮಂ ರಚಿಸಿ ಪರಮ ಪ್ರಖ್ಯಾತಿ ಪಡೆದನ್"[೧೧]

ಲಕ್ಷ್ಮಣ ಶಾಸ್ತ್ರಿಯು ರಚಿಸಿದ "ಗುರುವಂಶ" ಕಾವ್ಯವು ಮುಮ್ಮಡಿ ಭೈರವ ರಾಯನು ಶೃಂಗೇರಿ ಮಠದಮೇಲೆ ದಾಳಿ ಮಾಡಿದ ವಿಷಯವನ್ನು ತಿಳಿಸುವುದಾದರೂ "ಕೆಳದಿನೃಪವಿಜಯ"ದಲ್ಲಿ ತಿಳಿಸುವುದಕ್ಕಿಂತ ಭಿನ್ನವಾಗಿ ತಿಳಿಸಿದೆ. ಇದರಂತೆ ಕಳಸ ಕಾರಕಳ ಅರಸ ಭೈರವರಾಯನು ಕೆಳದಿ ವೆಂಕಟಪ್ಪನಾಯಕನ ಕಾಲದಲ್ಲಿ ತನ್ನ ರಾಜ್ಯ ವನ್ನು ಕಳೆದುಕೊಳ್ಳುವನು. ವೆಂಕಟಪ್ಪನಾಯಕನ ನಂತರ ವೀರಭದ್ರನಾಯಕನು ಪಟ್ಟಕ್ಕೆ ಬಂದನು. ತನ್ನ ರಾಜ್ಯವನ್ನು ತಿರುಗಿ ತೆಗೆದುಕೊಳ್ಳುವ ಅವಕಾಶ ಒದಗಿತ್ತೆಂದು ತಿಳಿದು ಭೈರವರಾಯನು ಕೆಳದಿ ರಾಜ್ಯದ ಆರು ಯೋಜನ ವಿಸ್ತಾರವಾಗಿದ್ದ ಪ್ರದೇಶದ ಮೇಲೆ ದಾಳಿ ನಡೆಸುವನು. ಇವನು ಆಕ್ರಮಿಸಿದ ಆರು ಯೋಜನ ಪ್ರದೇಶದಲ್ಲಿ ಶೃಂಗೇರಿಯು ಸೇರಿತ್ತು. ಶೃಂಗೇರಿಯನ್ನು ಆಕ್ರಮಿಸಿದ ಭೈರವರಾಯನು ಶೃಂಗೇರಿಮಠದ ಅಧಿಪತಿ ಗಳಾದ ಸಚ್ಚಿದಾನಂದ ಭಾರತಿಗಳನ್ನು ತನ್ನ ಸಮ್ಮುಖಕ್ಕೆ ತರಲು ಸೇವಕರನ್ನು ಕಳುಹಿಸಿದನು. ಶ್ರೀ ಸಚ್ಚಿದಾನಂದ ಭಾರತಿಯವರು ಯಾವ ಭೀತಿಯನ್ನು ವ್ಯಕ್ತಪಡಿ ಸದೆ ಭೈರರಸ ಒಡೆಯನ ಸೈನ್ಯ ಠಾಣ್ಯ ಹೂಡಿದ ಕಳಸಕ್ಕೆ ಬಂದರು. ಅವರನ್ನು ತುಂಗಾ ನದಿಯ ದಡದ ಆಶ್ರಮದಲ್ಲಿ ಇರಿಸುವಂತೆ ಭೈರವರಾಯನು ಅಪ್ಪಣೆಯನ್ನಿತ್ತನು.

---

೧೧. ಲಿಂಗಣ್ಣ ಕವಿ—ಕೆಳದಿನೃಪವಿಜಯ ಸಂಧಿ ೫ ಪದ್ಯ ೭೭, ೭೩, ೭೪.

ನಿತ್ಯ ಆಹ್ನಿಕ ವಿಧಿಯನ್ನು ತೀರಿಸಿದ ಸಚ್ಚಿದಾನಂದಯತಿಗಳು ಭೈರವರಾಯನ ದರ್ಶನಕ್ಕೆ ಅರಮನೆಗೆ ಆಗಮಿಸುವರು. ಯತಿಗಳು ವೀರಭದ್ರನಾಯಕನ ಗುಣ–ನಡತೆಯನ್ನು ಭೈರವರಾಯನ ಎದುರು ಪ್ರಶಂಸಿಸಿ ಭೈರವ ರಾಯನಿಗೆ ಆಶೀರ್ವಾದವನ್ನಿತ್ತು ಅವನ ಸಮ್ಮುಖದಲ್ಲಿ ಕುಳಿತರು. ಶೃಂಗೇರಿಮಠದ ಸಂಪತ್ತನ್ನು ಕೊಳ್ಳೆ ಹೊಡೆಯುವ ಉದ್ದೇಶವುಳ್ಳ ಭೈರವರಾಯನು ತನ್ನ ಸೈನಿಕರಿಗೆ ತಮ್ಮ ಖಡ್ಗವನ್ನು ತೆಗೆಯಲು ಆಜ್ಞಾಪಿಸಿದನು. ಆದರೆ ಸಚ್ಚಿದಾನಂದ ಭಾರತಿಯವರು ಯಾವ ರೀತಿಯಲ್ಲೂ ಧೈರ್ಯಗುಂದದೆ ಧಾರ್ಮಿಕ ಪ್ರವಚನವನ್ನು ಗಾಂಭೀರ್ಯದಿಂದ ಆರಂಭಿಸುವರು. ಸ್ವಾಮಿಯವರು ತನ್ನ ಪರಾಕ್ರಮಕ್ಕೆ ಬಗ್ಗುವರಲ್ಲವೆಂದು ತಿಳಿದು ಭೈರವರಾಯನು ಸಚ್ಚಿದಾನಂದ ಸ್ವಾಮಿಯವರಿಗೆ ರೇಶಿಮೆ ಶಾಲನ್ನು ಕಾಣಿಕೆಯಾಗಿ ಕೊಟ್ಟು ಶೃಂಗೇರಿಗೆ ಕಳುಹಿಸುವನು. ಶ್ರೀ ಸ್ವಾಮಿಗಳು ಶೃಂಗೇರಿ ತಲುಪುವದರೊಳಗೆ ಭೈರವರಾಯನು ಬಲವಾದ ಸೈನ್ಯದೊಂದಿಗ ಮಠಕ್ಕೆ ಮುತ್ತಿಗೆಯನ್ನಿತ್ತನು. ಅಕಸ್ಮಾತ ದಾಳಿ ನಡೆಸಿದ ಭೈರವರಾಯನ ಸೈನ್ಯವನ್ನು ನೋಡಿ ಅಲ್ಲಿನ ಜನರು ಹೆದರಿಕೆಯಿಂದ ರಕ್ಷಣೆಗೋಸ್ಕರ ಶೃಂಗೇರಿಯನ್ನು ಬಿಟ್ಟರು. ಭೈರವರಾಯನು ಶೃಂಗೇರಿ ಮಠದ ಕಾಣಿಕೆ, ಭಂಡಾರ (Treasury)ಗಳನ್ನು ತನ್ನ ರಾಜಧಾನಿಗೆ ಕೊಂಡು ಹೋಗುವನು. ತನ್ನ ವೈರಿಗಳಿಂದ ರಕ್ಷಿಸಲು ಭೈರವರಾಯನು ಶೃಂಗೇರಿಯಲ್ಲಿ ಕಂದಕಗಳನ್ನು ರಚಿಸಿ ಫಿರಂಗಿ ಹೂಡಿದನು. ಶೃಂಗೇರಿಸ್ವಾಮಿಗಳ ಧಾರ್ಮಿಕ ಶಕ್ತಿಯು ತನ್ನ ಉದ್ದೇಶವನ್ನು ವಿಫಲಗೊಳಿಸುವುದೆಂದು ತಿಳಿದ ಭೈರವರಾಯನು, ಶೃಂಗೇರಿ ಸ್ವಾಮಿಗಳ ದರ್ಶನ ಮಾಡಲೇ ಇಲ್ಲ. ಶೃಂಗೇರಿ ಮಠಕ್ಕೆ ಬಂದ ವಿಪತ್ತನ್ನು ತಿಳಿದು ಕೆಳದಿ ವೀರಭದ್ರನಾಯಕನು ಬಲವಾದ ದಂಡಿನೊಂದಿಗೆ ಶೃಂಗೇರಿಗೆ ಆಗಮಿಸಿ, ಭೈರವರಾಯನ ಸೈನ್ಯವನ್ನು ಸೋಲಿಸಿ, ಶೃಂಗೇರಿ ಮಠದ ಮುತ್ತಿಗೆ ತೆಗೆಯಿಸಿ. ದೋಚಿಕೊಂಡು ಹೋದ ಮಠದ ಐಶ್ವರ್ಯವನ್ನು ತಿರುಗಿ ಮಠಕ್ಕೆ ಸಲ್ಲುವಂತೆ ಮಾಡಿದನು. ಈ ರೀತಿ ಶೃಂಗೇರಿ ಮಠದ ಮೇಲೆ ಭೈರವರಾಯನು ಮೂರಾವರ್ತಿ ಆಕ್ರಮಣ ನಡೆಸುವನು. ಆದರೆ ವೀರಭದ್ರನಾಯಕನು ಇವನ ಆಕ್ರಮಣವನ್ನು ವಿಫಲಗೊಳಿಸಿದನು."[೧೨]

ಈ ಎರಡು ಕಾವ್ಯಗಳು ಶೃಂಗೇರಿ ಮಠದ ಆಕ್ರಮಣವನ್ನು ತಿಳಿಸುವುವಾದರೂ, ಮುಮ್ಮಡಿ ಭೈರವರಾಯನಿಗೂ ಮತ್ತು ಶೃಂಗೇರಿಮಠಾಧಿಪತಿಗಳಾದ ಸಚ್ಚಿದಾನಂದ ಸ್ವಾಮಿಗಳಿಗೂ ಯಾವ ಕಾರಣಗಳಿಗಾಗಿ ಮನಸ್ತಾಪ ಉಂಟಾಯಿತೆಂದು ತಿಳಿಸಲು ಅಸಮರ್ಥವಾಗಿವೆ. ಇಮ್ಮಡಿ ಭೈರವರಾಯನ ಕಾಲದಲ್ಲಿ ಶೃಂಗೇರಿ ಮಠಾಧಿಪತಿಗಳಿಗೂ ಮತ್ತು ಕಾರ್ಕಳ ಭೈರವರಾಯರಿಗೂ ಉತ್ತಮ ಸಂಬಂಧವಿದೆಯೆಂದು ಶಾಸನ ಮತ್ತು ಕಾವ್ಯಗಳಿಂದ ತಿಳಿದಿದ್ದೇವೆ. ಈ ಉತ್ತಮ ಸಂಬಂಧ ಮುಮ್ಮಡಿ ಭೈರವರಾಯನ ಕಾಲದಲ್ಲಿ ಕೆಡಲು ಕಾರಣವೇನು ಎಂಬ ವಿಚಾರ ತಿಳಿಯಬೇಕಾಗಿದೆ. ಈ ಎರಡು ಕಾವ್ಯ

೧೨. M. A. R. 1928. Page 1818.

ಗಳು ಮುಮ್ಮಡಿ ಭೈರವರಾಯನ ದುರಾಸೆಯೇ ಶೃಂಗೇರಿ ಮಠದ ಮೇಲಿನ ಮುತ್ತಿಗೆಗೆ ಕಾರಣವೆಂದು ಸಾಮಾನ್ಯವಾಗಿ ತಿಳಿಸಿದರೂ, ಇದೇ ಮುಖ್ಯ ಕಾರಣವೆಂದು ಸಮಕಾಲೀನ ದಾಖಲೆಗಳು ಪುಷ್ಟೀಕರಿಸುವುದಿಲ್ಲ. ಮುಮ್ಮಡಿ ಭೈರವರಾಯನ ಆಸ್ಥಾನದಲ್ಲಿದ್ದ ಚಂದ್ರಾಮ ಕವಿಯು ಭೈರವರಾಯನ ಗುಣ, ನಡತೆ, ವಿಚಾರ ಈ ರೀತಿ ತಿಳಿಸುತ್ತಾನೆ.

> ಸಂಗೀತ ಸಾಹಿತ್ಯ ಭರತನಾಟಕ ಕಾವ್ಯ
> ಶೃಂಗಾರ ನೀತಿ ಶಾಸ್ತ್ರಗಳ ಸಂಗ್ರಹ
> ಧರ್ಮಾರ್ಥ ಕಾಮಶಾಸ್ತ್ರಗಳ
> ತುರಂಗವನೇರ ಬಲ್ಲ ಜಾಣ[೧೩] ||

ಈ ಗುಣ ನಿಧಿಯಾದ ಮುಮ್ಮಡಿಭೈರವರಾಯನು ಶೃಂಗೇರಿ ಮಠದ ಮೇಲೆ ದಾಳಿ ಮಾಡಿದನೆಂಬ ಮಾತನ್ನು ನಂಬುವುದು ಸಾಮಾನ್ಯಜನರಿಗೆ ಕಷ್ಟವಾಗಿದೆ. ಸಮಕಾಲೀನ ಐತಿಹಾಸಿಕ ದಾಖಲೆಗಳು ಈ ವಿಚಾರವನ್ನು ಉಲ್ಲೇಖಿಸುವುದಿಲ್ಲ.

ಕೆಳದಿನೃಪವಿಜಯವು ಮುಮ್ಮಡಿಭೈರವರಾಯನ ಶೃಂಗೇರಿಮಠದ ಮುತ್ತಿಗೆ ವೆಂಕಟಪ್ಪನಾಯಕನ ಕಾಲದಲ್ಲಾಯಿತು ಎಂದು ತಿಳಿಸಿದರೆ, ಗುರುವಂಶ ಕಾವ್ಯವು ವೀರಭದ್ರನಾಯಕನ ಕಾಲದಲ್ಲಾಯಿತೆಂದು ತಿಳಿಸಿದೆ. ಈ ರೀತಿ ಹೊಂದಾಣಿಕೆಯಿಲ್ಲದ ಅಭಿಪ್ರಾಯವನ್ನು ಸೂಚಿಸುವ ವಿಷಯವನ್ನು ಒಪ್ಪಿಕೊಳ್ಳುವುದು ಈ ಸಂದರ್ಭದಲ್ಲಿ ಕಷ್ಟಕರವಾಗಿದೆ.

ಕೊನೆಯದಾಗಿ ಗುರುವಂಶ ಕಾವ್ಯವೂ ಮತ್ತು ಕೆಳದಿನೃಪವಿಜಯವೂ ಸಮಕಾಲೀನ ಐತಿಹಾಸಿಕ ಕಾವ್ಯಗಳಲ್ಲ. ಗುರುವಂಶ ಕಾವ್ಯವನ್ನು ಲಕ್ಷ್ಮಣ ಶಾಸ್ತ್ರಿಗಳು ಈ ಘಟನೆ ನಡೆದ ಒಂದು ಶತಮಾನದ ನಂತರ, ಅಂದರೆ ಕೆಳದಿ ಇಮ್ಮಡಿಸೋಮಶೇಖರನ ಕಾಲದಲ್ಲಿ ರಚಿಸಿದರು.[೧೪] ಇದೇ ರೀತಿಯಲ್ಲಿ ಕೆಳದಿನೃಪವಿಜಯವು ೧೯ನೆಯ ಶತಮಾನದ ಕೊನೆಯಲ್ಲಿ ಲಿಂಗಣ್ಣ ಕವಿಯಿಂದ ಬರೆಯಲ್ಪಟ್ಟಿದೆ. ಮುಮ್ಮಡಿ ಭೈರವರಾಯನ ಶೃಂಗೇರಿ ಮಠದ ಮುತ್ತಿಗೆ ಈ ಕಾವ್ಯಗಳ ರಚನೆಯ ಸಮಕ್ಕೆ ಜನಿಸಿ, ಅವುಗಳಲ್ಲಿ ಸೇರಿರಬಹುದೆಂಬ ಅಭಿಪ್ರಾಯವನ್ನು ಇಲ್ಲಿ ನಾವು ಒಪ್ಪಿಕೊಳ್ಳಬೇಕಾಗಿದೆ.

ಒಟ್ಟಿನಲ್ಲಿ ಮುಮ್ಮಡಿ ಭೈರವರಾಯನ ಶೃಂಗೇರಿ ಮಠದ ಮುತ್ತಿಗೆಯನ್ನು ಸಮಕಾಲೀನ ಸಂಬಂಧಪಟ್ಟ ದಾಖಲೆಗಳು ಉಲ್ಲೇಖ ಮಾಡದೆ ಇರುವುದರಿಂದ, 'ಗುರುವಂಶ ಕಾವ್ಯ' ಮತ್ತು 'ಕೆಳದಿ ನೃಪವಿಜಯ'ಗಳಲ್ಲಿ ತಿಳಿಸಿದ ಭೈರವರಾಯನ ಶೃಂಗೇರಿ ಮಠದ ಮುತ್ತಿಗೆಯ ವಿಷಯವನ್ನು ನಾವು ಇಲ್ಲಿ ಒಪ್ಪಿಕೊಳ್ಳುವುದು ಕಷ್ಟವಾಗಿದೆ.

★ **ಕೆ. ಜಿ. ವಸಂತಮಾಧವ**

---

೧೩. ಚಂದ್ರಾಮ-ಕಾರ್ಕಳ ಗೋಮಟೇಶ್ವರ ಚರಿತೆ. ಸಂಧಿ ೧೬. ಪದ್ಯ ೧೮.

೧೪. M. A. R. 1928. Page 18.

ಲಾಂಜಿನಸ್‌ನ ಮಹೋನ್ನತಿ ತತ್ವ

(ಒಂದು ವಿವೇಚನೆ)

ಆನಂದವರ್ಧನನ ಧ್ವನಿ ಹಾಗೂ ಅಭಿನವಗುಪ್ತನ ರಸತತ್ವಗಳು ಭಾರತೀಯ ಕಾವ್ಯಮೀಮಾಂಸೆಗೆ ಒಂದು ನಿಲುಗಡೆಯನ್ನು ತಂದೊದಗಿಸಿದುವು. ಅಂತೆಯೇ ಲಾಂಜಿನಸ್‌ನ ಮಹೋನ್ನತಿ (The theory of Sublimity) ತತ್ವವು ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿತೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಒಂದು ಕಲಾಕೃತಿಯ ಹಿರಿಮೆ ವ್ಯಕ್ತವಾಗುವುದು ಅದು ಸಹೃದಯನ ಮನಸ್ಸಿನ ಮೇಲೆ ಬೀರುವ ಪ್ರಭಾವದ ತೀವ್ರತೆ ಹಾಗೂ ಸಾಂದ್ರತೆಗಳನ್ನು ಅವಲಂಬಿಸಿದೆ. ಕಲಾಕೃತಿಗಳು ನೀಡುವ ಇಂತಹ ಪರಿಣಾಮದ ರೂಪುರೇಷೆಗಳನ್ನು ಕಂಡುಕೊಳ್ಳುವ ಪ್ರಯತ್ನವು ಅವ್ಯಾಹತವಾಗಿ ಸಾಗಿಬಂದು, ಸಾಹಿತ್ಯ ವಿಮರ್ಶೆಗೆ ಸುದೀರ್ಘವಾದ ಇತಿಹಾಸವನ್ನೇ ನಿರ್ಮಿಸಿದೆ. ಬ್ರಹ್ಮನಿರ್ಮಿತ ವಿಶ್ವಪ್ರಕೃತಿ ಹಾಗೂ ಕವಿನಿರ್ಮಿತ ಕಲಾಕೃತಿ ಇಲ್ಲವೆ ಸಾಹಿತ್ಯಕೃತಿ, ಇವೆರಡರಲ್ಲಿಯೂ ಮನವನ್ನು ದೈನಂದಿನ ಪ್ರಾಪಂಚಿಕ ಪ್ರಜ್ಞೆಯಿಂದ ಮುಕ್ತಗೊಳಿಸಿ, ಅದನ್ನು ಅತೀತದ ಪ್ರಜ್ಞಾವಲಯಕ್ಕೆ ಎತ್ತುವ ಗುಣವಿಶೇಷವಿದೆ. ಇದನ್ನು ಭಾರತೀಯ ಅಲಂಕಾರಿಕರು ವ್ಯಾಪಕವಾದ ಅರ್ಥದಲ್ಲಿ ಸೌಂದರ್ಯಾನುಭೂತಿಯೆಂದೂ, ಕಾವ್ಯಮೀಮಾಂಸೆಯ ಮಿತಪರಿಭಾಷೆಯಲ್ಲಿ ರಸಾನುಭವವೆಂದೂ ನಿರ್ದೇಶಿಸಿದ್ದಾರೆ. ಪೌರ್ವಾತ್ಯರು ಕಂಡುಹಿಡಿದ ರಸತತ್ವ ಹಾಗೂ ಲಾಂಜಿನಸ್‌ನ ಮಹೋನ್ನತಿ ತತ್ವಗಳು ಕಾಲ, ದೇಶ, ಪರಿಸರಗಳಿಂದ ಭಿನ್ನವಾದುವುಗಳಾದರೂ ಕಲಾರಹಸ್ಯವನ್ನು ಭೇದಿಸುವಲ್ಲಿ ಆಶ್ಚರ್ಯಕಾರಕವಾದ ಹೋಲಿಕೆಯನ್ನು ವ್ಯಕ್ತಪಡಿಸುತ್ತವೆ.

ಪಾಶ್ಚಾತ್ಯವಿಮರ್ಶಕರಲ್ಲಿ, ಕಲಾಹೃದಯವನ್ನು ಆವಿಷ್ಕಾರಗೊಳಿಸುವ ರಸಸೂತ್ರವನ್ನು ಕಂಡುಹಿಡಿದವರಲ್ಲಿ ಲಾಂಜಿನಸ್‌ನೇ ಪ್ರಪ್ರಥಮನಲ್ಲ. ಅವನಿಗಿಂತ ಹಿಂದೆಯೇ ಇದರ ಅನ್ವೇಷಣೆ ನಡೆದಿದೆ. ಗ್ರೀಕಸಾಹಿತ್ಯವು ಉನ್ನತಿಯ ಶಿಖರಕ್ಕೇರಿದ ಅವಧಿಯಲ್ಲಿ ಬದುಕಿಬಾಳಿ, ಗ್ರೀಕ ವಿಮರ್ಶಕ ಪ್ರಜ್ಞೆಯನ್ನು ಪ್ರಭೂತವಾಗಿ ಪ್ರಕಟಪಡಿಸಿದ ಪ್ಲೇಟೊ ಹಾಗೂ ಆರಿಸ್ಟಾಟಲರಂತಹ ಮೇಧಾವಿಗಳು ಕಂಡುಹಿಡಿದ ವಿಮರ್ಶೆಯ ಸೂತ್ರಗಳಲ್ಲಿ ಇದರ ಮೂಲರೇಖೆಗಳನ್ನು ಕಾಣುತ್ತೇವೆ.

ತಾತ್ವಿಕ ಹಾಗೂ ನೈತಿಕ ಮೌಲ್ಯಗಳಿಂದ ಪ್ರಭಾವಿತನಾದ ಪ್ಲೇಟೊ ಜೀವನದಲ್ಲಿ ಆ ಮೌಲ್ಯಗಳ ಅನ್ವೇಷಣೆ ಹಾಗೂ ಅನುಸಂಧಾನಗಳಿಗೆ ಆದ್ಯತೆ ನೀಡಿದುದು ಸ್ವಾಭಾವಿಕ. ಲಲಿತ ಕಲೆಗಳು ಹಾಗೂ ಅದೇ ವಲಯಕ್ಕೆ

ಸೇರುವ ಸಾಹಿತ್ಯ—ಇವು ಏನೆಂದರೂ ಭಾವಪ್ರಚೋದಕವಾದವುಗಳು. ಆದರ್ಶ ರಾಜ್ಯದ ಪ್ರಜೆಗಳ ಚಿತ್ತವನ್ನು ಇವು ಕಲಕಿ ಉನ್ಮಾದಗೊಳಿಸುವುದರಿಂದ ಕಲಾವಿದರು ಹಾಗೂ ಕಲಾಕೃತಿಗಳನ್ನು ಉಚ್ಚಾಟನೆಗೊಳಿಸಬೇಕೆಂದು ಸಾರಿದನು ತತ್ವಜ್ಞಾನಿಯಾದ ಪ್ಲೇಟೊ ದಾರ್ಶನಿಕ ದೃಷ್ಟಿಯಿಂದ ಸಾಹಿತ್ಯವನ್ನು ನೋಡಿದ್ದರಿಂದ ಈ ರೀತಿಯ ವಿಚಿತ್ರ ನಿರ್ಣಯಕ್ಕೆ ಬರಬೇಕಾಯಿತು. ಆದರೆ ಸಾಹಿತ್ಯವು ಭಾವನೆಗಳನ್ನು ಪ್ರಚೋದಿಸಿ, ಚಿತ್ತವನ್ನು ಕಲಕುತ್ತದೆ ಎನ್ನುವ ಅವನ ಅಭಿಪ್ರಾಯವು ಸಹೃದಯನ ಮೇಲೆ ಕಲಾಕೃತಿಗಳು ಬೀರುವ ಪ್ರಭಾವವನ್ನು ಸಂಕೇತಿಸುತ್ತದೆ. ಕಾವ್ಯ ನಿರ್ಮಿತಿಯಲ್ಲಿ ತೊಡಗಿದಾಗ ಕವಿಯಲ್ಲಿ ಒಂದು ಬಗೆಯ ದೈವೀಸ್ಫೂರ್ತಿ ಕಾಣಿಸಿಕೊಳ್ಳುವುದೆಂದೂ, ಸ್ಫೂರ್ತಕ್ಷಣದಲ್ಲಿ ಮನಸ್ಸು ಅವನ ವಶದಲ್ಲಿ ಇರದೆ ಯಾವುದೋ ಬೇರೆ ಶಕ್ತಿಯೊಂದಕ್ಕೆ ಅಧೀನವಾಗಿ ವರ್ತಿಸುತ್ತದೆ ಎನ್ನುವ ಗ್ರೀಕ ದೃಷ್ಟಿಕೋನವನ್ನು ಪ್ಲೇಟೊ ಒಪ್ಪಿಕೊಂಡಿದ್ದಾನೆ.

"....For the poet is a light and winged and holy thing and there is no invention in him until he has been inspired and out of his senses, and the mind is no longer in him; when he has not attained to this state, he is powerless and unable to utter his oracles."[೧]

ಕವಿ ಹಾಗೂ ಕಲಾಕೃತಿಗಳನ್ನು ಆದರ್ಶರಾಜ್ಯದಿಂದ ಉಚ್ಚಾಟನಗೊಳಿಸಬೇಕೆಂದು ಸಾರಿದ ಪ್ಲೇಟೊ ಆದೇ ಕವಿಗಳನ್ನು ಕುರಿತು ಇಷ್ಟೊಂದು ಗೌರವಪೂರ್ಣವಾಗಿ ಮಾತನಾಡುವದನ್ನು ನೋಡಿದರೆ ಆಶ್ಚರ್ಯವಾಗದಿರದು. ಕಾವ್ಯ ನಿರ್ಮಾಣಕಾಲದಲ್ಲಿ ಕವಿಯಾದವನು ಸ್ಫೂರ್ತಿವಿಶೇಷಕ್ಕೆ ಒಳಗಾಗುತ್ತಾನೆ. ಇದನ್ನೇ ಗ್ರೀಕರು ದೈವೀಪ್ರೇರಣೆ (Devine Inspiration) ಎಂದು ಕರೆದಿದ್ದಾರೆ. ಲೋಕ ಸೌಂದರ್ಯವನ್ನು ಪರಿಭಾವಿಸಿದಾಗ ಕವಿಯ ಮನಸ್ಸು ಹಾಗೂ ಕಾವ್ಯ ಕೃತಿಯ ರಸಾಸ್ವಾದನಲ್ಲಿ ತೊಡಗಿದ ಸಹೃದಯನ ಮನಸ್ಸು– ಒಂದೇ ಬಗೆಯಲ್ಲಿ ವರ್ತಿಸುತ್ತವೆ. ಲೋಕಸೌಂದರ್ಯ ಕವಿಗೆ ಪ್ರೇರಕವಾದರೆ ಕೃತಿಯಲ್ಲಿ ಆವಿಷ್ಕಾರಗೊಂಡ ಕಾವ್ಯಸೌಂದರ್ಯವು ಸಹೃದಯನ ರಸಾಸ್ವಾದನ ಕ್ರಿಯೆಗೆ ಪ್ರೇರಕವಾಗುತ್ತದೆ. ಕಲಾಸೃಷ್ಟಿ ಹಾಗೂ ರಸಾನುಭವ ಕ್ರಿಯೆಗಳಿಗೆ ಪ್ರಚೋದನೆ ನೀಡುವ ಮನೋಭೂಮಿಕೆ ಒಂದೇ ಬಗೆಯದು. ಸಾಹಿತ್ಯವು ವಿಭಾಸಾದಿಗಳಿಂದ ಸಹೃದಯನಲ್ಲಿ ಸ್ಥಾಯೀಭಾವವನ್ನು ಉದ್ದೀಪನಗೊಳಿಸಿ ರಸಸ್ಥಿತಿಗೆ ಏರಿಸುತ್ತದೆ ಎಂಬ ಭಾರತೀಯ ವಿಮರ್ಶಕರ ಹೇಳಿಕೆಯ ಹಿನ್ನೆಲೆಯಲ್ಲಿ ಪ್ಲೇಟೊನ ಅಭಿಪ್ರಾಯವನ್ನು ತೂಗಿನೋಡಿದರೆ, ಸಾಹಿತ್ಯದ

೧. Plato. Ion. Quted from scot James, Making of Literature. P- 85.

ಹೃದಯವಾದ ರಸದ ಸುಳಿವು ಪಾಶ್ಚಾತ್ಯರಿಗೆ ವೇದ್ಯವಾಗಿತ್ತು ಎನ್ನುವದು ಸ್ಪಷ್ಟವಾಗುತ್ತದೆ. ಕಲಾಕೃತಿಗಳ ಪ್ರಭಾವ ವಿಶೇಷವನ್ನು ಅರಿಯಲು ಮನೋವಿಶ್ಲೇಷಣಾತ್ಮಕ ವಿಧಾನದ ಸೂಚನೆಯನ್ನಿತ್ತುದು ಪ್ಲೇಟೊ ಕಾವ್ಯ ಮೀಮಾಂಸೆಗೆ ನೀಡಿದ ಹಿರಿಯ ಕಾಣಿಕೆಯಾಗಿದೆ.

ಅರಿಸ್ಟಾಟಲನು ತನ್ನ ಕಾವ್ಯಮೀಮಾಂಸೆ (Poeties) ಎಂಬ ಕೃತಿಯಲ್ಲಿ ರುದ್ರನಾಟಕದ ಪ್ರಭಾವ ಲಕ್ಷಣವನ್ನು ಕುರಿತು ಹೇಳುವಾಗ ಅದು ಭಯ ಕರುಣೆಗಳ ಮುಖಾಂತರ ಅಂತಹ ಭಾವನೆಗಳ ವಿರೋಚನೆ ಹಾಗೂ ಶೋಧನೆ ಯನ್ನು ಮಾಡಬೇಕು ಎನ್ನುತ್ತಾನೆ:

"......Through pity and fear effecting the proper purgation of these emotions."

ಅರಿಸ್ಟಾಟಲನ ಶೋಧನಾತತ್ವ (Catharsis)ವು ಕಲಾರಹಸ್ಯವನ್ನು ಸಂಪೂರ್ಣವಾಗಿ ಭೇದಿಸುತ್ತಿದೆಯೋ ಎನ್ನುವುದನ್ನು ಅರಿಯಲು ನಾವು ಅವನು ಕಾವ್ಯಮೀಮಾಂಸೆಯನ್ನು ಬರೆದ ಸಂದರ್ಭದ ಪರಿಜ್ಞಾನ ಪಡೆಯುವುದು ಅತ್ಯ ವಶ್ಯವಾಗಿದೆ. ರುದ್ರನಾಟಕದ ಪ್ರಭಾವ ವಿಶೇಷವನ್ನು ವ್ಯಕ್ತಪಡಿಸುವ ಮೇಲಣ ವಾಕ್ಯವು, 'ಕಾವ್ಯ ಮಾನವನ ಬುದ್ಧಿಗಿಂತಲೂ ಭಾವನೆಗೆ ಹೆಚ್ಚಿನ ಪ್ರಚೋದನೆ ಯನ್ನು ನೀಡುವದರ ಮೂಲಕ ಓದುಗನ ಆತ್ಮದ ಅತ್ಯಂತ ನಿಕೃಷ್ಟವಾದ ಭಾಗವನ್ನು ಪರಿಪೋಷಿಸುತ್ತದೆ' ಎನ್ನುವ ಪ್ಲೇಟೊನ ಅಭಿಪ್ರಾಯಕ್ಕೆ ನೇರವಾದ ಪ್ರತಿಭಟನೆಯಾಗಿದೆ ಎಂದು ಪ್ರಖ್ಯಾತ ವಿಮರ್ಶಕನಾದ ಸ್ಕಾಟ್ ಜೇಮ್ಸನು ಹೇಳುತ್ತಾನೆ.[೨] ಈ ವಿಮರ್ಶೆ ಸತ್ಯದೂರವಾದುದೆಂದು ನಮಗೆ ಅನಿಸುವದಿಲ್ಲ. ಭಯ, ಕರುಣೆಗಳಂತಹ ಭಾವನೆಗಳು ಮಾನವನ ಮೂಲಭೂತ ಪ್ರವೃತ್ತಿಗಳ ವರ್ಗಕ್ಕೆ ಸೇರುತ್ತವೆ. ಇಂತಹ ಭಾವನೆಗಳ ಪ್ರಚೋದನೆ ಕಾವ್ಯದ ಉದ್ದೇಶ ವಾದುದರಿಂದ ಚಿತ್ತಸ್ವಾಸ್ಥ್ಯಕ್ಕೆ ಭಂಗ ಬರುತ್ತದೆ ಎಂದು ಪ್ಲೇಟೊ ಅಭಿ ಪ್ರಾಯಪಟ್ಟುದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಆದರೆ ಅರಿಸ್ಟಾಟಲನು ರುದ್ರನಾಟಕವು ಭಯ ಹಾಗೂ ಕರುಣೆಗಳನ್ನು ಪ್ರಚೋದನಗೊಳಿಸಿ, ಅವು ಗಳನ್ನು ಹೊರಹಾಕುವದರಿಂದ ಚಿತ್ತಸ್ವಾಸ್ಥ್ಯವು ಕಲಕುವುದಕ್ಕಿಂತ, ಮನಸ್ಸು ಪ್ರಶಾಂತ ಸ್ಥಿತಿಗೆ ಬರುತ್ತದೆ ಎನ್ನುವ ಸತ್ಯವನ್ನು ಆವಿಷ್ಕರಿಸುತ್ತಾನೆ. ಭಯ, ಕರುಣೆಗಳಂತಹ ದುಃಖದಾಯಕ ಭಾವನೆಗಳನ್ನು ಪ್ರಚೋದಿಸಿ ರುದ್ರ ನಾಟಕವು ಮನಸ್ಸಿಗೆ ಒಂದು ಬಗೆಯ ನೆಮ್ಮದಿ ಇಲ್ಲವೆ ಚಿತ್ತವಿಶ್ರಾಂತಿಯನ್ನು ತರುತ್ತದೆ ಎನ್ನುವುದು, ಅರಿಸ್ಟಾಟಲನಿಗೆ ರಸದರ್ಶನವಾದುದರ ದ್ಯೋತಕ ವೆಂದು ನಾನು ಭಾವಿಸುತ್ತೇನೆ. ರತಿ, ಶೋಕ, ಭಯಗಳಂತಹ ಮೂಲಪ್ರವೃತ್ತಿ

---

೨. Scot James : Making of Litrature, P. 69.

ಗಳನ್ನು ವಿಶ್ಲೇಷಿಸಿ, ಅವು ಅನೇಕವಾಗಿದ್ದರೂ ನಾಟಕ ಇಲ್ಲವೆ ಸಾಹಿತ್ಯಕ್ಷೇತ್ರದಲ್ಲಿ ಪ್ರಮುಖ ಪರಿಪೋಷಣೆಯನ್ನು ಪಡೆದು ರಸಸ್ಥಿತಿಗೆ ಏರತಕ್ಕವು ಎಂಟು ಇಲ್ಲವೆ ಒಂಭತ್ತು ಎಂದು ಭಾರತೀಯರು ನಿಯಮನ ಮಾಡಿದ್ದಾರೆ. ಕಲಾಕ್ಷೇತ್ರದಲ್ಲಿ ಪರಿಪೋಷಿತವಾಗುವ ಸ್ಥಾಯೀಭಾವಗಳು ಸಹೃದಯನಲ್ಲಿ ಹೃದಯಸಂವಾದ ಪಡೆದು ಅವನಿಗೆ ರಸಾನಂದವನ್ನುಂಟು ಮಾಡುತ್ತವೆಯೆಂದೂ, ರಸಾನಂದವು ಒಂದು ಬಗೆಯ ಚಿತ್ತವಿಶ್ರಾಂತಿಯೆಂದೂ ಲಕ್ಷಣಿಸಿ ಹೇಳಿದುದನ್ನು ನಾವಿಲ್ಲಿ ಸ್ಮರಿಸಿ ಕೊಳ್ಳಬಹುದು.

ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ಗ್ರೀಕರ ಕಾಲದಿಂದಲೂ ಕಾವ್ಯ ಪ್ರಯೋಜನಗಳನ್ನು ಹೆಸರಿಸುವ ಕಾಲಕ್ಕೆ 'Easthetic Pleasure' ಎನ್ನುವ ಪದವನ್ನು ಪ್ರಯೋಗಿಸುತ್ತ ಬಂದಿದ್ದಾರೆ. ಕಾವ್ಯದಲ್ಲಿ ಆವಿರ್ಭವಿಸುವ ಸೌಂದರ್ಯದಿಂದ ಒದಗುವ ಆನಂದ ವಿಶೇಷಕ್ಕೆ ಭಾರತೀಯರು ರಸವೆನ್ನುವ ಪರಿಭಾಷೆಯನ್ನಿತ್ತಿದ್ದಾರೆ. ಆದ್ದರಿಂದ ಪಾಶ್ಚಾತ್ಯರ ಸೌಂದರ್ಯಾನುಭವ (Easthetic pleasure) ಹಾಗೂ ಭಾರತೀಯರ 'ರಸ' ಎನ್ನುವ ಪದಗಳು ಒಂದೇ ಬಗೆಯ ಅನುಭವವನ್ನು ನಿರ್ದೇಶಿಸುತ್ತವೆಯೆಂದು ಭಾವಿಸಿದರೆ ತಪ್ಪೇನಿಲ್ಲ.

ಕಾವ್ಯದಲ್ಲಿ ಸಹೃದಯನ ಮನವನ್ನು ಆಹ್ಲಾದಗೊಳಿಸುವ ಶಕ್ತಿಯಿರುವು ದೇನೋ ನಿಜ; ಆದರೆ ಸಾಮಾನ್ಯ ಕವಿಯಿಂದ ಮಹಾ ಕವಿಗಳವರಿಗೆ ಅವರ ಕೃತಿಗಳಲ್ಲಿ ದೊರೆಯುವ ಆಹ್ಲಾದವು ಸತ್ವ ಹಾಗೂ ಮೊತ್ತದಲ್ಲಿ ಒಂದೇ ಬಗೆಯದಾಗಿರಲು ಸಾಧ್ಯವಿಲ್ಲ; ಹಾಗೆ ಬಗೆಯುವುದು ಸಾಧುವೂ ಅಲ್ಲ. ಮಹಾ ಕೃತಿ ಹಠಾತ್ತಾಗಿ ಅತ್ಯಧಿಕ ಸಾಂದ್ರತೆಯುಳ್ಳ ಪರಿಣಾಮವನ್ನು ಬೀರುವ ವಿಶೇಷ ಶಕ್ತಿಯನ್ನು ಪಡೆದಿರುತ್ತದೆ. ಮಹಾ ಕೃತಿಗಳಲ್ಲಿ ಆವಿಷ್ಕಾರಗೊಳ್ಳುವ ಇಂತಹ ವಿಚಿತ್ರ ಶಕ್ತಿಯನ್ನೇ ಲಾಂಜಿನಸ್‌ನು ಮಹೋನ್ನತಿ (Sublimity) ಎಂದು ಕರೆಯುತ್ತಾನೆ. ಲಾಂಜಿನಸ್‌ನ ಮಹೋನ್ನತಿ ತತ್ವದಮೇಲೆ ಪ್ಲೇಟೋನ ವಿಚಾರಗಳ ಪ್ರಭಾವವಿದ್ದುದನ್ನು ಕಾಣುತ್ತೇವೆ. ಕಾವ್ಯನಿರ್ಮಾಣ ಕಾಲದಲ್ಲಿ ಕವಿಯಾದವನು ಒಂದು ಬಗೆಯ ದೈವೀಸ್ಫೂರ್ತಿಗೆ ಅಧೀನನಾಗಿ ವರ್ತಿಸುತ್ತಾನೆ. ಸ್ಫೂರ್ತಿ ಅವನನ್ನು ಆವರಿಸಿದ ಕ್ಷಣದಲ್ಲಿ ಮನಸ್ಸು ಅವನ ಹಿಡಿತದಲ್ಲಿರುವುದಿಲ್ಲ. ಇದೊಂದು ಬಗೆಯ ಮನೋಲಯದ ಸ್ಥಿತಿ. ಈ ಸ್ಥಿತಿಗೆ ಏರದಿದ್ದರೆ ಅವನು ಕಾವ್ಯಸೃಷ್ಟಿಯನ್ನು ಮಾಡಲಾರ ಎನ್ನುವ ಪ್ಲೇಟೋನ ಮಾತುಗಳು ಲಾಂಜಿನಸ್‌ನ ಮಹೋನ್ನತಿ ತತ್ವಕ್ಕೆ ಪ್ರೇರಕವಾಗಿವೆ. ಪ್ಲೇಟೋನ ಪ್ರಶಂಸೆಗೆ ಪಾತ್ರವಾದ ಆ ಮಹೋನ್ನತ ಶಕ್ತಿಯಾವುದು? ಅವು ಕಾವ್ಯದಲ್ಲಿ ಆವಿಷ್ಕಾರ ಗೊಳ್ಳುವದು ಹೇಗೆ? ಇವೇ ಮೊದಲಾದ ಪ್ರಶ್ನೆಗಳ ವಿವೇಚನೆಯನ್ನು ಲಾಂಜಿನಸ್‌ನು ತನ್ನ 'De Sublmitate' ಎಂಬ ಪ್ರಬಂಧದಲ್ಲಿ ಮಾಡಿದ್ದಾನೆ.

ವಿಶ್ವಪ್ರಕೃತಿಯಲ್ಲಿ ಎಲ್ಲೆಡೆಯಲ್ಲಿ ಸೌಂದರ್ಯವು ಚಲ್ಲವರೆದಿದೆಯಾದರೂ ವಸ್ತುಗಳು ನೀಡುವ ಸೌಂದರ್ಯಾನುಭೂತಿಯಲ್ಲಿ ತರತಮ ಭಾವವನ್ನು ದರ್ಶಿಸುತ್ತೇವೆ. Sublime, Grand, Beautiful, Graceful, Prelty ಈ ಪದಗಳು ಸೌಂದರ್ಯದ ಭಿನ್ನಸ್ತರಗಳ (grades) ಪರಿಜ್ಞಾನವನ್ನು ನೀಡುವವೆಂದು ಪ್ರಖ್ಯಾತವಿಮರ್ಶಕನಾದ ಎ. ಸಿ. ಬ್ರ್ಯಾಡ್ಲೆ ಹೇಳುತ್ತಾನೆ.[೩] "ಎಲ್ಲಿ ಸೌಂದರ್ಯವು ಪರಿಮಿತದಲ್ಲಿ ವಿಹರಿಸುತ್ತದೆಯೋ ಅಲ್ಲಿ ಮೈದೋರುವುದು ಲಾಲಿತ್ಯ. ಎಲ್ಲಿ ಅದು ಅಪರಿಮಿತದಲ್ಲಿ ವಿಜೃಂಭಿಸಿ ವಿರಾಟ್‌ಸ್ಪರ್ಶಿಯಾಗುತ್ತದೆಯೋ ಅಲ್ಲಿ ಹೊರ ಹೊಮ್ಮುವುದು ಭವ್ಯತೆ."[೪] "ಬೇಲೂರಿನ ಶಿಲಾ ಬಾಲಿಕೆಯರಿಂದ ಲಾಲಿತ್ಯ, ಶ್ರವಣಬೆಳ್ಗೊಳದ ಗೊಮ್ಮಟೇಶ್ವರನಿಂದ ಭವ್ಯತೆ,[೫] ಎಂದು ಕುವೆಂಪು ಸೌಂದರ್ಯದ ಸಾಮಾನ್ಯ ಹಾಗೂ ಅತ್ಯುನ್ನತ ಸ್ತರಗಳನ್ನು ವ್ಯಕ್ತಪಡಿಸುವ ವಸ್ತುಗಳನ್ನು ಕುರಿತು ಹೇಳುತ್ತಾರೆ. ಸೌಂದರ್ಯವನ್ನು ವ್ಯಕ್ತಪಡಿಸುವ ವಸ್ತುಗಳು ಅನೇಕ.ಆದರೆಮಹೋನ್ನತಿಯ ಅನುಭವವನ್ನುಂಟು ಮಾಡುವ ವಸ್ತುಗಳಲ್ಲಿ ವಿಭೂತಿಪ್ರಮಾಣದ ಮಹತಿ (Overwhelming greatness) ಇರಬೇಕಾದುದು ಬ್ರ್ಯಾಡ್ಲೆ ಹೇಳುವಂತೆ ಅತ್ಯವಶ್ಯಕ:

"But whatever strikes us as sublime produces an impression of greatness and more - of exceeding or even overwhelming greatness. And this greatness further is apparently no more accompaniment of sublimity but essential to it"[೬]

ಲೋಕ ಪ್ರಕೃತಿಯಲ್ಲಿಯಂತೆ ಮಹಾಕವಿಯ ಪ್ರತಿಭಾಸೃಷ್ಟಿಯಾದ ಕಾವ್ಯದಲ್ಲಿಯೂ ಮಹೋನ್ನತಿಯು ಆವಿರ್ಭವಿಸುತ್ತದೆ. ಸಾಹಿತ್ಯದಲ್ಲಿ ಅದು ವ್ಯಕ್ತವಾಗುವದು ಘನವಾದ ಭಾಷೆಯ ಮಾಧ್ಯಮದಲ್ಲಿ ಎನ್ನುತ್ತಾನೆ ಲಾಂಜಿನಸ್ :

"The sublime wherever it occures. consists in a certain loftiness and excellance of language"[೭]

---

3. A. C. Bradly : Oxford Lectures on Poetry, P. 40.

೪. ಕುವೆಂಪು ತಪೋನಂದನ, ಪು. ೩೭.

೫. ಅದೇ ಪು. ೩೯.

೬. A. C. Bradly: Oxford Lectures on poetry. P. 41

೭. Poetics : Every man's Library. 901. P. 136.

ಮಹೋನ್ನತಿಯ ಅಭಿವ್ಯಕ್ತಿಗೆ ಪಾತ್ರವಾಗುವ ಭಾಷೆ ಘನವಾದುದಾಗಿರಬೇಕೆಂದು ಲಾಂಜಿನಸ್ ಹೇಳುವ ಮಾತಿನ ತಾತ್ಪರ್ಯವನ್ನು ಕುರಿತು ಪರ್ಯಾಲೋಚಿಸಬೇಕು. ಮಹೋನ್ನತವಾದ ವಿಚಾರಗಳನ್ನು ಭಾಷೆಯಲ್ಲಿ ಕಂಡರಿಸಲಾರದೆ ಯಾವ ಕವಿಯೂ ಮಹಾಕವಿಯೆಂಬ ಖ್ಯಾತಿಗೆ ಅರ್ಹನಾಗಲಾರನು. ಕಾವ್ಯಶರೀರವಾದ ಭಾಷೆ ಅದರ ಆತ್ಮವಾದ ರಸಕ್ಕೆ ಪೋಷಕವಾದುದಾಗಿರಬೇಕು. "ಕಾವ್ಯದ ಆತ್ಮರಸ; ಅದನ್ನು ಕಾವ್ಯಶರೀರವು ಅಭಿವ್ಯಕ್ತಪಡಿಸುವ ಮಾರ್ಗ ಧ್ವನಿ."[೮] ತೀ. ನಂ. ಶ್ರೀ. ಅವರ ಈ ಮಾತು ಭಾರತೀಯ ಕಾವ್ಯಮೀಮಾಂಸಕರ ದೃಷ್ಟಿಯನ್ನು ಚೆನ್ನಾಗಿ ಪ್ರತಿನಿಧಿಸುತ್ತದೆ. ಭಾಷೆ ಧ್ವನಿಪೂರ್ಣವಾದಾಗ ಅದು ಸಾಧಿಸುವ ಪರಿಣಾಮವು ಮಿಂಚಿನೋಪಾದಿಯಲ್ಲಿ ಹೊಳೆದು, ಅರ್ಥವನ್ನು ಆವಿಷ್ಕರಿಸುತ್ತದೆ; ರಸಾನುಭೂತಿಯ ಭಿತ್ತಿಯನ್ನು ನಿಶ್ಚಿತಪಡಿಸುತ್ತದೆ.

"..a Sublime thought if happily timed illumines an entire subject with the vividness of a lightening-flash and exibits the whole power of the orator in a moment of time "[೯]

ಲಾಂಜಿನಸ್‌ನ ಮೇಲಣ ವಾಕ್ಯಖಂಡವು ಮಹೋನ್ನತಿಗೆ ಬೇಕಾಗುವ ಎರಡು ಮುಖ್ಯ ಅಂಶಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಒಂದನೆಯದು. ವಿಚಾರಗಳ ಔನ್ನತ್ಯ. ಎರಡನೆಯದು ಉನ್ನತವಾದ ವಿಚಾರಗಳನ್ನು ವ್ಯಕ್ತಪಡಿಸಲು ಭಾಷೆಗೆ ಬೇಕಾಗುವ ಅಭಿವ್ಯಕ್ತಿಯ ಘನತೆ. ಮಹಾಕೃತಿಯಲ್ಲಿ ಇವೆರಡು ಅಂಶಗಳ ಸುಂದರ ಸಮನ್ವಯವಿರಬೇಕು. ಲಾಂಜಿನಸ್‌ನು ಮೊದಲನೆಯದನ್ನು Nature ಎಂದು ಕರೆದು, ಅದು ಮಹೋನ್ನತಿಗೆ ಬೇಕಾಗುವ ಘನವಾದ ವಿಚಾರಗಳನ್ನು ಒದಗಿಸುವ ಸಾಮರ್ಥ್ಯವನ್ನು ಪಡೆದಿರುತ್ತದೆ ಎನ್ನುತ್ತಾನೆ.

ಪ್ರತಿಭೆ ಕವಿಯಲ್ಲಿ ಜನ್ಮಜಾತ(inborn)ವಾದರೂ ಕಾವ್ಯನಿರ್ಮಾಣಕಾಲದಲ್ಲಿ ಅದನ್ನು ಪಳಗಿಸಲು ಕಲೆಯ ನೆರವುಬೇಕು; ಕಲೆಯು ಉಕ್ಕಿಬರುವ ಭಾವನೆಗಳನ್ನು ನಿಗ್ರಹಿಸಿ, ಅಭಿವ್ಯಕ್ತಿಗೆ ಕಲಾಪೂರ್ಣತೆಯನ್ನು ಒದಗಿಸಿ ಅದನ್ನು ಸುಂದರಗೊಳಿಸುತ್ತದೆ ಎನ್ನುತ್ತಾನೆ. ಲಾಂಜನಸ್‌ನು ಅಲಂಕಾರಶಾಸ್ತ್ರ (Rhetorics)ದಲ್ಲಿ ಪರಿಣತನಾದುದರಿಂದ ಶೈಲಿಯಲ್ಲಿ ಸುಳಿದೋರುವ ಮಹೋನ್ನತಿಯ ಸಾಧಕಬಾಧಕ ಅಂಶಗಳನ್ನು ಕುರಿತು ವಿಸ್ತಾರವಾಗಿ ವಿವೇಚಿಸಿದ್ದಾನೆ. ಉಚಿತಪದಗಳ ಆಯ್ಕೆ, ಅಲಂಕಾರಗಳು, ರಚನಾಗಾಂಭೀರ್ಯ—ಇವು ಕೃತಿಯಲ್ಲಿ ಇರಲೇಬೇಕು ಎನ್ನುತ್ತಾನೆ.

---

೮. ತೀ.ನಂ.ಶ್ರೀ. : ಭಾರತೀಯ ಕಾವ್ಯಮೀಮಾಂಸೆ, ಪುಟ ೫೦.

೯. Poetics : Every Man's Library (901), P. 136.

ಮಹೋನ್ನತಿ ತತ್ವದ ನಿಷ್ಕರ್ಷೆಯಲ್ಲಿ ಲಾಂಜಿನಸ್‌ನು ವಿಚಾರ ಹಾಗೂ ಭಾವನೆಗಳ ಔನ್ನತ್ಯಕ್ಕೆ ಆದ್ಯತೆ ನೀಡಿದುದು ಔಚಿತ್ಯಪೂರ್ಣವಾಗಿದೆ. ಮಹೋನ್ನತವಾದ ವಿಚಾರಗಳು ಅಭಿವ್ಯಕ್ತಿಯಲ್ಲಿ ತಮಗೆ ಬೇಕಾಗುವ ರೂಪವನ್ನು ಧರಿಸಿಕೊಂಡೇ ಬರುತ್ತವೆ. ಕಲೆಯಲ್ಲಿ ದರ್ಶನ (Vision) ಹಾಗೂ ಅಭಿವ್ಯಕ್ತಿ (Expression)ಗಳನ್ನು ವಿಂಗಡಿಸಿನೋಡುವುದು ಕೃತಕವಾದುದು. ಸಾಹಿತ್ಯವು ಭಾವಭಾಷೆಗಳ ಅಖಂಡ ಹಾಗೂ ಅವಿಚ್ಛಿನ್ನಕ್ರಿಯೆ. ಅಭಿವ್ಯಕ್ತಿಯ ಅಂಗಗಳಾದ ಭಾಷೆ, ಅಲಂಕಾರಗಳು ಮೂಲ ವಿಚಾರದೊಂದಿಗೆ ಸಜೀವ ಸಂಬಂಧವನ್ನು ಪಡೆದುಕೊಂಡಿರುತ್ತವೆ.

"The thought and language in litarature are interfolded in each other." ಎಂದು ಲಾಂಜಿನಸ್ ಹೇಳುವುದು ಸತ್ಯಸಂಗತಿಯೆನಿಸುತ್ತದೆ. ದರ್ಶನ ಹಿರಿದಾದುದಾಗಿದ್ದರೆ ಅದನ್ನು ಅಭಿವ್ಯಕ್ತಿಗೆ ತರುವ ಭಾಷೆಯೂ ಉನ್ನತವಾದುದೇ ಆಗಿರುತ್ತದೆ. ಸುಂದರವಾದ ಶಬ್ದಗಳು ಆತ್ಮದ ನಿಜವಾದ ಬೆಳಕಿನದ್ಯೋತಗಳೆಂದು ಲಾಂಜಿನಸ್ ಹೇಳುವುದು ಇದಕ್ಕಾಗಿಯೇ !

ಸಾಹಿತ್ಯದಲ್ಲಿ ಮಹೋನ್ನತಿಯನ್ನು ಸಂದರ್ಶಿಸಿದಾಗ ಓದುಗನಲ್ಲಿ ತೋರುವ ಮಾನಸಿಕಸ್ಥಿತಿಯನ್ನು ಲಾಂಜಿನಸ್‌ನು Transport; Ecstacy, Lifting out oneself — ಇತ್ಯಾದಿ ಪದಗಳಿಂದ ನಿರ್ದೇಶಿಸುತ್ತಾನೆ. ಮಹೋನ್ನತವಾದುದರ ಎದುರಿನಲ್ಲಿ ನಮ್ಮ ಮನಸ್ಸು ವಿಚಿತ್ರ ರೀತಿಯ ಅನುಭವದ ವಲಯಕ್ಕೆ ಬೀಸಿ ಎಸೆಯಲ್ಪಡುತ್ತದೆ. ಅಹಂಕಾರ ನಷ್ಟವಾಗಿ; ವಿವೇಚನಾಶಕ್ತಿ ಮಸಳಿಸಿ, ನಮ್ಮ ವ್ಯಕ್ತಿತ್ವವೇ ತತ್ತರಿಸಿ ಹೋಗುವ ಅನುಭವವಾಗುತ್ತದೆ. ಸಂಪೂರ್ಣವಾಗಿ ಆ ಅನುಭವ ವಶವರ್ತಿಗಳಾಗಿ ಅದರಲ್ಲಿಯೇ ಕ್ಷಣಕಾಲ ಮೈಮರೆತು ಬಿಡುತ್ತೇವೆ. ಇಂತಹ ಪರಿಣಾಮವನ್ನು ಬೀರುವುದೇ ಸಾಹಿತ್ಯದಲ್ಲಿ ಮಹೋನ್ನತಿ ಆವಿರ್ಭವಿಸಿದುದರ ದ್ಯೋತಕವೆಂದು ಸ್ಕಾಟ್ ಜೇಮ್ಸ್ ಹೇಳುವ ವಿಚಾರಗಳು ಮನನೀಯವಾಗಿವೆ:

" This then, for Longinus, is the mark o sublimity in literature—literature when it reaches the peak in the domain of creative art, it can transport and lift us out of ourselves by a power which confounds the judgement, eclipses mere reason and illumines a subject with the vividness of lightening."[೧೦]

ಲಾಂಜಿನಸ್ ಹೇಳುವ Transport ಇಲ್ಲವೆ Lifting out oneself ಹಾಗೂ ಭಾರತೀಯರ ' ಸಧ್ಯಃ ಪರ ನಿರ್ವೃತಿ'ಯ ವಿಚಾರದಲ್ಲಿ ಬಹಳಷ್ಟು ಸಾಮ್ಯವಿದೆ.

---

೧೦. Scot James : Making of Literature. P. 91.

ಸಧ್ಯಃ ಪರ ನಿರ್ವೃತಿ ಎಂದರೆ ತತ್ಕಾಲದಲ್ಲಿಯೇ ಸೌಂದರ್ಯದ ಅನುಭೂತಿಯನ್ನುಂಟುಮಾಡುವ ಮಾನಸಿಕ ಅವಸ್ಥೆ. ಇದುವೇ ರಸಾನುಭವದ ಉನ್ನತವಾದ ನೆಲೆ. ಈ ಅವಸ್ಥೆಗೆ ಏರಿದಾಗ ಓದುಗನಲ್ಲಿ ಅನ್ಯ ವಸ್ತುಗಳ ಪರಿಜ್ಞಾನ ಇಲ್ಲದಂತಾಗಿ ಮನಸ್ಸು ರಸಾನಂದದ ಪ್ರವಾಹದಲ್ಲಿ ತೇಲಿ ಹೋಗುತ್ತದೆ. ಈ ಅನುಭವವು ಕ್ಷಣಿಕವಾದುದಾದರೂ, ಅದು ಹೃದಯವನ್ನು ಆವರಿಸಿದಷ್ಟು ಹೊತ್ತು ಮನಸ್ಸು ಲೌಕಿಕ ಭಾವಗಳಿಂದ ದೂರವಾಗಿ ಕಲಾನುಭವದ ನೆಲೆಯನ್ನು ಮುಟ್ಟುತ್ತದೆ. ಈ ಅನುಭವವನ್ನೇ ಅಭಿನವಗುಪ್ತನು 'ಸಾಧಾರಣೀಕರಣ'ದ ವಿಚಾರದಲ್ಲಿ ಅಳವಡಿಸಿ ಕೃತಾರ್ಥನಾಗಿದ್ದಾನೆ. ವ್ಯಕ್ತಿಯು ತನ್ನ ವೈಯಕ್ತಿಕ ರಾಗದ್ವೇಷಗಳನ್ನು ಕ್ಷಣಕಾಲ ಮರೆತು ಕಲೆ ನೀಡುವ ಸೌಂದರ್ಯಾನುಭವದ ಸಮಷ್ಟಿಯಲ್ಲಿ ಪಾಲುಗೊಳ್ಳುವ ಮಾನಸಿಕ ಅವಸ್ಥೆಯೇ ಸಾಧಾರಣೀಕರಣವಾದುದರಿಂದ ಮಹೋನ್ನತಿಯ ಪ್ರಭಾವ ಲಕ್ಷಣವಾದ transport ಹಾಗೂ ಸಾಧಾರಣೀಕರಣಗಳು ಒಂದೇ ಬಗೆಯ ಅನುಭವವನ್ನು ವಿವರಿಸುವುದು ಸುಲಭವೇದ್ಯವಾಗುತ್ತದೆ.

★ ಎಂ. ಬಿ. ಕೊಟ್ರಶೆಟ್ಟ

ಬಂಗಾರವತಿ

(ಉತ್ತರ ಕನ್ನಡ ಜಾನಪದ ಕಥೆ)

ಒಂದು ಊರಿನಲ್ಲಿ ಪಟ್ಟಣಶೆಟ್ಟಿ ಎಂಬುವನು ತನ್ನ ಹೆಂಡತಿಯೊಡನೆ ಸುಖದಲ್ಲಿ ದ್ದನು. ಅವನಿಗೆ ಒಬ್ಬ ಮಗನಿದ್ದನು. ಅವನ ಹೆಸರು ಗೋಪಾಲಕೃಷ್ಣ. ಗೋಪಾಲ ಕೃಷ್ಣನು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮದುವೆಯಾಗಿ ಮನೆಯಲ್ಲೇ ಇದ್ದನು. ಪಟ್ಟಣಶೆಟ್ಟಿಯು ಒಂದು ದಿನ ಮಗನ ಹತ್ತಿರ ಹೀಗೆ ಹೇಳಿದನು. " ಮಗನೇ, ನಾನು ಎಷ್ಟೋ ವರ್ಷಗಳಿಂದ ವ್ಯಾಪಾರ ಮಾಡಿ, ಅದರಿಂದ ಲಾಭ–ನಷ್ಟ ಎರಡನ್ನೂ ನೋಡುತ್ತಾ ಬಂದಿದ್ದೇನೆ. ಇದು ನಮ್ಮ ಆದ್ಯಕರ್ತವ್ಯ. ಅದಕ್ಕಾಗಿ, ನೀನು ಈ ರೀತಿ ಸುಖವಾಗಿ ಮನೆಯಲ್ಲೇ ಇದ್ದರೆ ಸಾಧ್ಯವಿಲ್ಲ. ನನಗಂತೂ ವಯಸ್ಸಾಯಿತು. ನೀನು ನನ್ನಂತೆಯೇ ಮಡಿದು ವ್ಯಾಪಾರ ನಡೆಸಲೇ ಬೇಕು."

ಮಗನು " ನಾನು ವ್ಯಾಪಾರ ಮಾಡಬೇಕೆಂದರೆ, ಹಡಗಿನ ಮೇಲೆ ಹೋಗಿ ಪರ ದೇಶದಲ್ಲಿ ಸಾಮಾನುಗಳನ್ನು ವಿಕ್ರಯಮಾಡಿ ಬರಲಿಕ್ಕೆ ನಾಲ್ಕಾರು ತಿಂಗಳು ತಡವಾಗ ಬಹುದು. ಅಲ್ಲಿಯ ತನಕ ನನ್ನ ಹೆಂಡತಿ ಪತಿವ್ರತೆಯಾಗಿಯೇ ಉಳಿಯಬಹುದೋ ಹೇಗೆ ಎನ್ನುವ ಸಂಶಯ ನನಗೆ ಕಾಡುತ್ತಿದೆ" ಎಂದು ಹೇಳಿದನು.

ಇದನ್ನು ಕೇಳಿದ ಅವನ ಹೆಂಡತಿ ರುಕ್ಮಿಣಿ " ನನ್ನ ಪಾತಿವ್ರತ್ಯದ ಬಗ್ಗಾಗಿ ನಿಮಗೆ ಖಾತ್ರಿಯಾಗುವದಕ್ಕೆ ನಾನು ನಿಮಗೆ ಒಂದು ಮಲ್ಲಿಗೆ ಹೂವಿನ ಕರಡಿಗೆಯನ್ನು ಕೊಡುತ್ತೇನೆ. ಮಲ್ಲಿಗೆ ಹೂವು ನಾನು ಕೊಡುವಾಗ ಇದ್ದಂತೆಯೇ ಇದ್ದು ಬಾಡ ದಿದ್ದರೆ. ನೀವು ನಾನು ಪತಿವ್ರತೆಯೆಂದು ತಿಳಿಯುವದಕ್ಕೆ ಸಂಶಯವೇ ಇಲ್ಲ–ಅಲ್ಲ ದಿದ್ದರೆ, ತಾನಾಗಿಯೇ ಆ ಹೂವು ಬಾಡಿ ಬಸವಳಿದು ಹೋಗುತ್ತದೆ." ಎಂದು ಹೇಳಿದಳು.

ಅದನ್ನು ಕೇಳಿ ಗೋಪಾಲಕೃಷ್ಣನು ತಂದೆಯ ಹತ್ತಿರ " ಅಪ್ಪಾ, ನಾಳೆ ಬೆಳಗಿ ನಲ್ಲಿ ನಿನ್ನ ಉದ್ಯೋಗವನ್ನು ಮುಂದುವರಿಸಲಿಕ್ಕೆ ನಾನು ಹೊರಡಲು ಸಿದ್ಧನಿದ್ದೇನೆ" ಎಂದು ಹೇಳಿದನು. ಆ ಮೇಲೆ ಹಡಗನ್ನು ತಯಾರು ಮಾಡಿಕೊಂಡು, ಹಡಗನ್ನು ನಡೆಸಲಿಕ್ಕೆ ಕೂಲಿಮಂದಿಯನ್ನು ಸಹ ಕೂಡಿಸಿಕೊಂಡು, ಹಡಗಿಗೆ ಬೇಕಷ್ಟು ಸಾಮಾ ನುಗಳನ್ನು ತುಂಬಿಸಿದನು. ತಂದೆ—ತಾಯಿಗಳ ಹತ್ತಿರವೂ ಹೆಂಡತಿ ರುಕ್ಮಿಣಿಯ ಹತ್ತಿರವೂ " ನಾನು ಹೋಗಿ ಬರುತ್ತೇನೆ." ಎಂದು ಹೇಳಿದನು. ಕೂಡಲೇ ರುಕ್ಮಿಣಿ ಮೂರು ಮಲ್ಲಿಗೆ ಹೂಗಳನ್ನು ಬೆಳ್ಳಿಯ ಕರಡಿಗೆಯಲ್ಲಿ ಹಾಕಿ, ತನ್ನ ಗಂಡನ ಹತ್ತಿರ ಕೊಟ್ಟಳು. ಅದನ್ನು ತೆಗೆದುಕೊಂಡು. ಅವನು ಕೂಲಿ ಮಂದಿ ಸಮೇತ ಹಡಗಿಗೆ ಹೋದನು.

ಕೂಲಿಗಳು ಹಡಗನ್ನು ನಡೆಸುತ್ತ ಸಮುದ್ರದಲ್ಲಿ ಸಾಗಿದರು. ಸಮುದ್ರದ ದಂಡೆಯ ಮೇಲೆ ಒಂದು ದೊಡ್ಡ ಊರು ಕಂಡಿತು. ಗೋಪಾಲಕೃಷ್ಣನ ಹೇಳಿಕೆ

ಯಂತೆ ಕೂಲಿಗಳು ಹಡಗನ್ನು ಅಲ್ಲಿಯ ಧಕ್ಕೆಗೆ ತಾಡಿದರು. ಗೋಪಾಲಕೃಷ್ಣನು ಪದ್ಧತಿಯ ಪ್ರಕಾರ ಬಂದೂಕನ್ನು ಬಾರುಮಾಡಿಸಿ, ಸದ್ದಿನ ಕೋವಿಯನ್ನು ಹೊಡೆದನು.

ಆ ಸಪ್ಪಳವನ್ನು ಕೇಳಿದ ಆ ಊರಿನ ಮುಖಂಡಳಾದ ಬಂಗಾರವತಿಯೆಂಬ ವೇಶ್ಯೆಯು ತನ್ನ ಗೆಳೆಯರಾದ ಗಂಪಶೆಟ್ಟಿ, ಪಟೇಲ ಜೋಳಗೌಡ ಮತ್ತು ಪಂಪಾ ಶಾಸ್ತ್ರಿ ಇವರನ್ನು ಕೂಡಿಕೊಂಡು ಹಡಗಿನ ಹತ್ತರ ಬಂದಳು. ಗೋಪಾಲಕೃಷ್ಣ ಶೆಟ್ಟಿಯ ಹತ್ತರ, "ಸಾವುಕಾರರೇ, ನಿಮ್ಮ ಹಡಗಿನಲ್ಲಿ ಬಹಳಷ್ಟು ಸಾಮಾನು ಇದ್ದಹಾಗೆ ಕಾಣುತ್ತದೆ. ನಾವು ಕೇಳುವ ಸಾಮಾನುಗಳೆಲ್ಲ ಇವೆಯೋ ಹೇಗೆ ?" ಎಂದು ಕೇಳಿದಳು. ಗೋಪಾಲಕೃಷ್ಣನು, "ಎಲ್ಲ ಸಾಮಾನುಗಳೂ ಉಂಟು. ನೀವು ಯಾವದೇ ಸಾಮಾನು ಕೇಳಿದರೂ ಅದು ನಮ್ಮ ಹತ್ತರ ಉಂಟು." ಎಂದನು.

ಬಂಗಾರವತಿಯು "ನಾವು ಒಂದು ಶರ್ತನ್ನಿಡುತ್ತೇವೆ. ನಾವು ಕೇಳುವ ಸಾಮಾನುಗಳನ್ನು ನೀವು ಕೊಡದೆ ಹೋದರೆ, ನಿಮ್ಮ ಹಡಗೂ, ನಿಮ್ಮ ಕೂಲಿಗಳೂ, ಹಡಗಿನಲ್ಲಿರುವ ಸಾಮಾನುಗಳೂ ಎಲ್ಲ ನಮ್ಮ ಸೊತ್ತಾಗಬೇಕು. ಒಂದು ವೇಳೆ ಆ ಸಾಮಾನುಗಳನ್ನೆಲ್ಲ ನೀವು ಕೊಟ್ಟಲ್ಲಿ, ನನ್ನ ಮನೆಯೂ ನನ್ನದೇ ಆದ ಎಲ್ಲ ಸೊತ್ತೂ ನಿಮ್ಮದೇ ಆಗುತ್ತವೆ. ಇದಕ್ಕೆ ನಿಮ್ಮ ಒಪ್ಪಿಗೆಯೋ ?" ಎಂದು ಕೇಳಿದಳು. ಗೋಪಾಲಕೃಷ್ಣನು ಇದಕ್ಕೆ ಒಪ್ಪಿದ ಅನಂತರ ಈ ರೀತಿ ಲೇಖೀಪೂರ್ವಕ ಕರಾರನ್ನು ಬರೆದುಕೊಂಡರು.

ಬಂಗಾರವತಿಯು ಕೇಳಿದ ಸಾಮಾನು ಯಾವದೆಂದರೆ, ಒಂದು ಮಣ ಆಪಿ ಅಡಕೆ. ಕೇಳಿದ ಕೂಡಲೇ ಗೋಪಾಲಕೃಷ್ಣನು ಇಡೀ ಹಡಗನ್ನು ಹುಡುಕಹತ್ತಿದನು. ಆದರೆ ಉಳಿದ ಸಕಲ ಸಾಮಾನುಗಳು ಇದ್ದರೂ ಆಪಿ ಅಡಕೆಯಿರಲಿಲ್ಲ. ಬಂಗಾರವತಿಯು ಅವನಿಗೆ ಅದನ್ನು ಹುಡುಕಲಿಕ್ಕೆ ಆರು ಗಂಟೆ ಸಮಯವನ್ನು ಕೊಟ್ಟಳು. ಅಷ್ಟು ಹೊತ್ತಿನ ವರೆಗೆ ಹುಡುಕಿದರೂ ಸಹ ಆಪಿ ಅಡಕೆ ಸಿಗಲಿಲ್ಲ. ಕೊನೆಗೆ ಬರೆದು ಕೊಟ್ಟ ಲೇಖಿಯ ಪ್ರಕಾರ, ತನ್ನ ಹಡಗು, ಹಡಗಿನ ಕೂಲಿಗಳು, ಹಡಗಿನಲ್ಲಿದ್ದ ಎಲ್ಲಾ ಸಾಮಾನು ಸಮೇತ ಅವನು ಬಂಗಾರವತಿಯ ಸ್ವಾಧೀನನಾದನು.

ಅವಳ ಮನೆಯಲ್ಲಿ ಹೇಳಿದ ಕೆಲಸ ಮಾಡುತ್ತ ಗೋಪಾಲಕೃಷ್ಣನು ಉಳಿದನು. ಅವಳ ಕೊಟ್ಟಿಗೆಯ ಸಗಣಿ ತೆಗೆಯುವ ಕೆಲಸವೂ ಅವನ ಪಾಲಿಗೆ ಬಂದಿತು. ಹೀಗೆ ಎಷ್ಟೋ ದಿವಸಗಳು ಕಳೆದುಹೋದವು.

ಒಂದುದಿನ ಅವನು ಅವಳ ಕೊಟ್ಟಿಗೆಯ ಸಗಣಿ ತೆಗೆಯುವಾಗ ಹೆಂಡತಿ ರುಕ್ಮಿಣಿ ತನಗೆ ಕೊಟ್ಟಿದ್ದ ಬೆಳ್ಳಿಯ ಕರಡಿಗೆಯ ನೆನಪು ಅವನಿಗಾಯಿತು. ಆ ಮಲ್ಲಿಗೆ ಹೂವಿನ ಕರಡಿಗೆಯ ಮುಚ್ಚಳವನ್ನು ತೆಗೆದು ನೋಡಿದನು. ಆಗ ಅವನ ಜೊತೆಯಲ್ಲಿದ್ದವನು "ಅದೇನು ?" ಎಂದು ವಿಚಾರಮಾಡಿದನು.

"ನನ್ನ ಹೆಂಡತಿ ಪತಿವ್ರತಾ ಗುಣವನ್ನು ಕಾಯುಕೊಂಡು ಇದ್ದದ್ದೇ ಹೌದಾದರೆ, ಈ ಕರಡಿಗೆಯಲ್ಲಿದ್ದ ಮಲ್ಲಿಗೆ ಹೂಗಳು ಇದೇ ರೀತಿ ಯಾವಾಗಲೂ ತಾಜಾ ಹೂವಿನ

ಹಾಗೆಯೇ ಇರುತ್ತವೆ. ಒಂದಾನು ವೇಳೆ, ಏನಾದರೂ ಅಡ್ಡಹಾದಿ ಹಿಡಿದರೆ, ಈ ಹೂಗಳು ಬಾಡಿ, ಬಸವಳಿದು ಹೋಗುತ್ತವೆ" ಎಂದು ಗೋಪಾಲಕೃಷ್ಣನು ಹೇಳಿದನು.

ಅದನ್ನು ಕೇಳಿದ ಮನುಷ್ಯನು ಆ ಮಾತನ್ನು ಬಂಗಾರವತಿ ವೇಶ್ಯೆಯ ಹತ್ತರ ಹೋಗಿ ಹೇಳಿದನು. "ಅಮ್ಮಾ. ಮೊನ್ನೆ ನೀವು ಆ ಹಡಗನ್ನು ನಿಮ್ಮ ವಶ ಮಾಡಿ ಕೊಂಡಿರಲ್ಲ? ಆ ಹಡಗಿನ ಮ್ಯಾನೇಜರನ ಹತ್ತರ ಒಂದು ಬೆಳ್ಳಿಯ ಕರಡಿಗೆಯಿದೆ. ಅದರಲ್ಲಿ ಏನೋ ಅಪರೂಪದ ವಸ್ತುವಿದೆ. ಅದನ್ನು ತರಿಸಿಕೊಂಡು ನೋಡಿಯೇ ಅದರ ಮಹತ್ವವನ್ನು ತಿಳಿದುಕೊಳ್ಳಿರಿ." ಎಂದು ಹೇಳಿದನು. ಅದನ್ನು ಕೇಳಿದ ಬಂಗಾರವತಿ ಒಂದು ದಿನ "ಬೆಳ್ಳಿ ಕರಡಿಗೆಯಿದೆಯಂತೆ. ಅದನ್ನು ನೀನು ನನಗೆ ಕೊಡಲೇ ಇಲ್ಲ. ನಮ್ಮನಮ್ಮಲ್ಲಿ ಆದ ಲೇಖಿಯ ಪ್ರಕಾರ, ನೀನು ನಿನ್ನ ಪ್ರತಿಯೊಂದು ಸೊತ್ತನ್ನು ನನ್ನ ವಶ ಮಾಡುವೆಯೆಂದು ಬರೆದು ಕೊಟ್ಟಿದ್ದಿಲ್ಲವೋ ? ನೀನು ಆ ಕರಡಿಗೆಯನ್ನು ಯಾಕೆ ಕೊಡಲಿಲ್ಲ ? " ಎಂದು ಕೇಳಿ, ಅವನ ಕಯ್ಯಿಂದ ಆ ಕರಡಿಗೆಯನ್ನು ತೆಗೆದು ಕೊಂಡಳು.

ಕರಡಿಗೆಯ ಮುಚ್ಚಳವನ್ನು ತೆಗೆದು ನೋಡುವ ವರೆಗೆ ಅದರಲ್ಲಿ ಮೂರು ಮಲ್ಲಿಗೆ ಹೂಗಳನ್ನು ಕಂಡಳು. ಸೂರ್ಯೋದಯದಲ್ಲಿ ಅರಳಿದ ಹೂವು ಹೇಗೆ ಇರುತ್ತದೆಯೋ ಹಾಗೆಯೇ ಆ ಹೂವುಗಳು ಅರಳಿಕೊಂಡಿದ್ದವು. ಅದನ್ನು ನೋಡಿ ಅವನ ಹತ್ತರ ಕೇಳಿದಳು. "ನೀನು ಈ ಕರಡಿಗೆಯಲ್ಲಿ ಮೂರು ಮಲ್ಲಿಗೆ ಹೂಗ–ಳನ್ನು ಹಾಕಿ ಇಟ್ಟುಕೊಂಡ ಕಾರಣವೇನು ? ಅವು ಇದೇ ಈಗ ಕೊಯ್ದ ಹೂಗಳಂತೆ ಅರಳಿರುವದರ ವಿಶೇಷವೇನು ? "

ಗೋಪಾಲಕೃಷ್ಣನು "ನಾನು ಊರಲ್ಲಿಲ್ಲದಾಗ ನನ್ನ ಹೆಂಡತಿಯು ಪಾತಿವ್ರತ್ಯ ವನ್ನು ಕಾದುಕೊಂಡು ಬಂದಿದ್ದಕ್ಕೆ ಸಾಕ್ಷಿಯಾಗಿ ಅವಳು ನನಗೆ ಕೊಟ್ಟ ಹೂವುಗಳು ಇವು. ನಾನು ಮನೆಯಿಂದ ಹೊರಟು ಬಂದು ಇಂದಿಗೆ ಒಂದು ವರ್ಷವಾಯಿತು. ಆಕೆಯು ಈ ಹೂಗಳನ್ನು ಆಗ ಕೊಡಬೇಕಾದರೆ ಇವು ಹೇಗೆ ಅರಳಿಕೊಂಡು ಪರಿಮಳ ಬೀರುತ್ತಿದ್ದವೋ ಈಗಲೂ ಹಾಗೆಯೇ ಇವೆ. ಸ್ವಲ್ಪ ಸಹ ಅಕ್ಕುಮುಕ್ಕಾಗಲಿಲ್ಲ. ಇವು ಬಾಡಿ ಬಸವಳಿದು ಹೋದರೆ ಮಾತ್ರ ಅಡ್ಡದಾರಿ ಹಿಡಿದಳು ಎಂದು ಹೇಳಲಿಕ್ಕೆ ಏನೂ ಸಂಶಯವಿಲ್ಲ."

ಇದನ್ನು ಕೇಳಿದ ವೇಶ್ಯೆಯು "ಇನ್ನು ನಿನ್ನ ಕೆಲಸಕ್ಕೆ ನೀನು ಹೋಗು" ಎಂದು ಹೇಳಿ ಹೂಗಳ ಕರಡಿಗೆಯನ್ನು ಕೊಟ್ಟು ಅವನನ್ನು ಕಳಿಸಿದಳು. ಮನಸ್ಸಿನಲ್ಲೇ ಬಹಳ ಆಲೋಚನೆ ಮಾಡಿದಳು. "ಅವಳ ಪಾತಿವ್ರತ್ಯವನ್ನು ಕೆಡಿಸಲೇಬೇಕು. ಅದಲ್ಲದಿದ್ದರೆ, ನಾನು ಎಷ್ಟೋ ರಾಜರ ಹಾಗೂ ಶ್ರೀಮಂತರ ಹಡಗುಗಳನ್ನೆಲ್ಲಾ ಸಂಪಾದಿಸಿಟ್ಟಿದ್ದು ವ್ಯರ್ಥವೇ ಸರಿ. ಇದಕ್ಕೆ ಏನು ಮಾಡಬೇಕಾಯಿತು ?" ಎಂದು ವಿಚಾರಮಾಡಿ. "ನಮ್ಮೂರಿನಲ್ಲಿ ಪ್ರಾಯಕ್ಕೆ ಬಂದ ಹುಡುಗರು ಯಾರು ಯಾರು ? ಪಟೇಲರ ಮಗ ನೊಬ್ಬ. ಗಂಪಶೆಟ್ಟಿಯ ಮಗನೊಬ್ಬ ಮತ್ತು ಶಾಸ್ತ್ರಿಯವರ ಮಗನೊಬ್ಬ ನಮ್ಮ

ಗೆಳೆಯರ ಗುಂಪಿನ ಒಳಗೇ ಇದ್ದಾರೆ. ಇವರು ಮೂರು ಮಂದಿಯನ್ನು ಕಳಿಸಿ, ಅವಳ ಪಾತಿವ್ರತ್ಯವನ್ನು ಕೆಡಿಸದೆ ಹೋದರೆ, ನಾನು ಹುಟ್ಟಿಯೂ ನಿಷ್ಪ್ರಯೋಜನ ಎಂದು ನಿರ್ಧಾರಮಾಡಿ, ಮರುದಿನ ಪಟೇಲರಿಗೂ ಗಂಪಶೆಟ್ಟಿಗೂ ಶಾಸ್ತ್ರಿಯವರಿಗೂ ಬರುವಂತೆ ಹೇಳಿಕಳಿಸಿದಳು.

ಅವರು ಮೂರು ಜನರು ಬಂದರು. "ನೋಡಿ, ಈಗ ಒಂದು ಕೆಲಸವಾಗಬೇಕಾಗಿದೆ. ಮೊನ್ನೆ ನಾನೊಂದು ಹಡಗವನ್ನು ಒತ್ತೆಮಾಡಿಕೊಂಡೆನಲ್ಲಾ? ಆ ಹಡಗಿನ ಮೇನೇಜರ್ ಗೋಪಾಲಕೃಷ್ಣನ ಹೆಂಡತಿಯ ಪಾತಿವ್ರತ್ಯದ ಮಹಿಮೆ ಈ ಲೋಕದಲ್ಲೇ ಇಲ್ಲದಂಥದು. ಅವಳ ಪಾತಿವ್ರತ್ಯವನ್ನು ಕೆಡಿಸಲೇ ಬೇಕು. ಆ ಬಗ್ಗೆ ನಿಮ್ಮ ಮೂರು ಜನರ ಮಕ್ಕಳನ್ನು ಅವನ ಊರಿಗೆ ನೀವು ಕಳಿಸಿಕೊಡಬೇಕು. ನಾನು ಅವರ ಹತ್ತಿರ ಎಲ್ಲ ವಿಷಯವನ್ನು ಹೇಳಿ ಕಳಿಸುತ್ತೇನೆ. ಆ ಮೇಲೆ ಅವಳ ಪಾತಿ–ವ್ರತ್ಯ ಹೇಗೆ ಉಳಿಯುವದೋ ನೋಡೋಣ." ಎಂದು ಹೇಳಿದಳು. ಅದಕ್ಕೆ ಆ ಮೂರು ಜನರು ಒಪ್ಪಿಕೊಂಡು ಹೋದರು.

ಬಂಗಾರವತಿಯು ಅವರನ್ನು ಕಳಿಸಲಿಕ್ಕಾಗಿ ಒಂದು ಹಡಗವನ್ನು ತಯಾರು ಮಾಡಿಸಿದಳು. ನಾಲ್ಕುಮಂದಿ ಕೂಲಿಗಳನ್ನು ಗೊತ್ತುಮಾಡಿ, ಹಡಗಿನಲ್ಲಿ ಅವರೆಲ್ಲರ ಊಟ ಉಪಚಾರದ ಬಗ್ಗೆ ಸಾಮಾನು ಸಂಗ್ರಹವನ್ನೆಲ್ಲಾ ಸಿದ್ಧಮಾಡಿಸಿದಳು.

ಮರು ದಿವಸ ಮೂರು ಜನ ಪ್ರಾಯ ಸಮರ್ಥರು ಬಂದರು. ವೇಶ್ಯೆಯು ಅವರ ಹತ್ತಿರ "ಗೋಪಾಲಕೃಷ್ಣ ಪಟ್ಟಣಶೆಟ್ಟಿಯ ಊರಿಗೆ ಹೋಗಿ ನೀವು ಆ ಪಟ್ಟಣಶೆಟ್ಟಿ ಸಾವಕಾರರ ಮನೆಯಲ್ಲಿದೆಯೆಂದು ಕೇಳಬೇಕು. ಆ ಮೇಲೆ ಆ ಗೋಪಾಲಕೃಷ್ಣನ ಹೆಂಡತಿಯ ಪಾತಿವ್ರತ್ಯವನ್ನು ಕೆಡಿಸಲಿಕ್ಕೆ ಏನೇನು ಉಪಾಯ ಮಾಡಬಹುದೋ ಆ ಎಲ್ಲ ಉಪಾಯಗಳನ್ನು ಮಾಡಬೇಕು. ಹಲವು ಪ್ರಯತ್ನ ಮಾಡಿಯಾದರೂ ಕಾರ್ಯಸಾಧನೆ ಮಾಡಿಕೊಂಡು ಬರಬೇಕು. ಆ ಮೇಲೆ ನಾನು ನಿಮಗೆ ಯೋಗ್ಯಮರ್ಯಾದೆಯನ್ನು ಸಲ್ಲಿಸುತ್ತೇನೆ," ಎಂದು ಹೇಳಿದಳು.

ಅವರು ಅದಕ್ಕೆ ಸಂತೋಷದಿಂದ ಒಪ್ಪಿ, ನಾಲ್ಕುಜನ ಕೂಲಿಯವರ ಸಮೇತ ಹಡಗಿಗೆ ಬಂದರು. ಆ ಮೇಲೆ ಹಡಗಿನ ಮೇಲೆ ಎಷ್ಟೋ ದೂರ ಹೊರಟು, ಪಟ್ಟಣಶೆಟ್ಟಿಯ ಊರಿಗೆ ಬಂದರು. ಅಲ್ಲಿ ಹಡಗದಿಂದ ಇಳಿದುಕೊಂಡು, ಸಿಕ್ಕಿದ ಜನರ ಹತ್ತಿರ "ಇಲ್ಲಿ ಗೋಪಾಲಕೃಷ್ಣ ಶೆಟ್ಟರ ಮನೆಯಾವುದು ?" ಎಂದು ಕೇಳಿಕೊಂಡು, ಅವನ ಮನೆಗೆ ಬಂದು ತಲುಪಿದರು.

ರುಕ್ಮಿಣಿಯು, "ನೀವು ಯಾವೂರಿನವರು? ಈಗ ಎಲ್ಲಿಂದ ಬಂದಿರಿ? ನಿಮಗೆ ತ್ರಿಷೆಗೆ ಬೇಕೋ ?" ಎಂದು ಕೇಳಿದಳು. ಅವರು, "ನಾವು ನಿನ್ನ ಗಂಡನ ಮಿತ್ರರು. ಅವನು ನೀವು ತನ್ನ ಊರಿಗೆ ಹೋದರೆ, ತನ್ನ ಮನೆಗೆ ಹೋಗಿ ನಾಲ್ಕು ದಿನ ಉಳಿದು ಹೋಗಿ ಎಂದು ನಮ್ಮ ಹತ್ತಿರ ಹೇಳಿದ್ದಾನೆ. ಈ ಕಡೆಗೆ ಬರುವ ಕೆಲಸವಿತ್ತು, ಬಂದೆವು" ಎಂದರು.

ಗೋಪಾಲಕೃಷ್ಣನ ತಂದೆ–ತಾಯಿ ಬಹಳ ಮುದುಕರಾಗಿದ್ದರು. ಅವರು ತಮ್ಮ ಮಗನ ಕ್ಷೇಮ–ಸಮಾಚಾರವನ್ನು ಕೇಳಿ. "ಅವನು ಈಗ ಯಾವ ಊರಿನಲ್ಲಿದ್ದಾನೆ ? ಊರಿಗೆ ಯಾವಾಗ ಬರುತ್ತಾನೆ?" ಎಂದು ಕೇಳಿದರು. ಇವರು "ನಮ್ಮ ಬಂಗಾರವತಿ ಬಂದರದಲ್ಲೇ ವ್ಯಾಪಾರಮಾಡಿಕೊಂಡಿದ್ದಾನೆ, ಸದ್ಯ ಅವನಿಗೆ ಈ ಕಡೆಗ ಬರುವ ವಿಚಾರವಿಲ್ಲ" ಮುಂತಾಗಿ ಹೇಳಿದರು.

ಅವರು ಆ ದಿವಸ ಆರಾಮವಾಗಿ ಊಟ–ಉಪಚಾರದಲ್ಲಿ ಕಳೆದರು. ಅವರು ತಮ್ಮ ತಮ್ಮೊಳಗೆ ಮಾತಾಡಿಕೊಂಡರು. "ಇಲ್ಲಿ ಮುದುಕ ಅತ್ತೆ–ಮಾವಂದಿರನ್ನು ಬಿಟ್ಟರೆ, ಇಡೀ ಮನೆಗೆ ಮನೆಯವಳಾಗಿ ಇರುವವಳು ಇವಳೊಬ್ಬಳೇ. ಇವಳ ಪಾತಿವ್ರತ್ಯವನ್ನು ಕೆಡಿಸುವದು ಹೆಚ್ಚು ಕಷ್ಟದ ಕೆಲಸವಲ್ಲ. ನೋಡೋಣ, ಅವಳ ಮನಸ್ಸಿನ ಲಗು–ಬಿಗು ಹೇಗಿದೆಯೆಂದು" ಎಂದು ಎರಡು ದಿನ ಕಳೆದರು. "ನಾವು ಬಂದ ಕೆಲಸ ಏನು ಎಂದು ಇತ್ಯರ್ಥವಾಗಲಿಲ್ಲ. ಅದರ ಬಗ್ಗೆ ಏನು ಮಾಡಬೇಕಾಯಿತು ?" ಎಂದು ಅವರವರೊಳಗೇ ಮಾತಾಡಿಕೊಂಡರು. ಅವರೊಳಗೊಬ್ಬನು. "ಇಂದು ಸ್ನಾನಕ್ಕೆ ಹೋದ ಸಮಯದಲ್ಲಿ ಅವಳನ್ನು ಕರೆಯಬೇಕು. ಆಗ ನಾವು ಮೂರು ಜನರೂ ಇಂಥ ಕೆಲಸದ ಹೊರೆ ಹೊತ್ತುಕೊಂಡು ಬಂದವರು ಎಂದು ಹೇಳಿಬಿಡಬೇಕು. ಆಗ ಅವಳ ಉತ್ತರ ಏನು ಬರುತ್ತದೆಯೆನ್ನುವದು ತಿಳಿದು ಹೋಗಿಬಿಡುತ್ತದೆ" ಎಂದು ಹೇಳಿದರು.

ಹಾಗೆಯೇ ಸ್ವಲ್ಪ ವೇಳೆಯಲ್ಲಿ ಸ್ನಾನಕ್ಕೆ ಹೋದರು. ಆಗ "ನೀರು ಬಿಸಿಯಾಗಿ ಹೋಗಿದೆ. ಕೊಡ ತೆಗೆದುಕೊಂಡು ಬಾ" ಎಂದು ರುಕ್ಮಿಣಿಯನ್ನು ಕರೆದರು. ಆಗ ಅವಳು ಕೊಡ ತೆಗೆದುಕೊಂಡು ಬಂದಳು. "ರುಕ್ಮಿಣೀ ನಾವು ಮೂರು ಮಂದಿಯೂ ಯಾಕೆ ಬಂದವರು ಎನ್ನುವದು ನಿನಗಿನ್ನೂ ಗೊತ್ತಾಗಲಿಲ್ಲ. ನಿನ್ನ ಗಂಡನು ನಮ್ಮೂರಿಗೆ ಹೋಗಿ ಬಂಗಾರವತಿ ವೇಶ್ಯೆಯ ಹತ್ತರ ಜಿದ್ದಿನಲ್ಲಿ ಸೋತು, ಅವಳ ವಶವಾಗಿ ಹೋಗಿದ್ದಾನೆ. ಅವನು ಪುನಃ ನಿನ್ನನ್ನು ನೋಡಲು ಬರುವದಿಲ್ಲ. ಅವನು ಇಲ್ಲಿಂದ ಹೋದಾಗ ನೀನು ಅವನ ಹತ್ತರ ಕೊಟ್ಟಿದ್ದ ಮಲ್ಲಿಗೆ ಹೂವಿನ ಕರಡಿಗೆಯನ್ನೂ ಅವಳು ಪತ್ತೆಮಾಡಿದಳು. ಆ ಮೇಲೆ ನಿನ್ನ ಪಾತಿವ್ರತ್ಯವನ್ನು ಕೆಡಿಸಿ ಬರುವದಕ್ಕೆ ನಮ್ಮನ್ನು ಕಳಿಸಿದ್ದಾಳೆ. ನಿನ್ನ ಗಂಡನಂತೂ ತಿರುಗಿಬರುವ ಹಾಗಿಲ್ಲ. ನಾವು ನಿನ್ನ ಗಂಡನಿಗಿಂತಲೂ ಸುಂದರ ರೂಪ ಉಳ್ಳವರು. ನಿನ್ನ ಪ್ರಾಯವನ್ನು ಸುಮ್ಮನೆ ಕೆಡಿಸಿಕೊಳ್ಳಬೇಡ." ಎಂದರು.

ರುಕ್ಮಿಣಿಯು "ನೀವೇ ಇಷ್ಟು ದೂರ ನನ್ನನ್ನು ಅರಸಿಕೊಂಡು ಬಂದು ಕೇಳಿದ ಬಗ್ಗೆ ಏನೂ ತೊಂದರೆಯಿಲ್ಲ. ನಾಳೆ ದಿವಸ ನನ್ನ ಹತ್ತರ ಬರುವದಕ್ಕೆ ನಿಮಗೆ ಸಮಯವನ್ನು ಗೊತ್ತುಮಾಡಿಕೊಡುತ್ತೇನೆ. ಟ್ಯಾವಿನ ಪ್ರಕಾರ ನೀವು ಒಬ್ಬೊಬ್ಬರಾಗಿ ಮೂರು ಜನರು ಬರಬಹುದು. ಒಬ್ಬನು ರಾತ್ರಿ ಒಂಬತ್ತು ಗಂಟೆಗೆ ಬರಲಿ. ಇನ್ನೊಬ್ಬನು ಮಧ್ಯರಾತ್ರಿಗೆ, ಮೂರನೆಯವನು ನಾಲ್ಕು ಗಂಟೆ ರಾತ್ರೆಗೆ ಬರಬೇಕು." ಎಂದು ಹೇಳಿ ಹೋದಳು.

ಅವಳು ಆ ಮೇಲೆ ತನ್ನಲ್ಲಿಯೇ ವಿಚಾರಮಾಡಿದಳು. ಅವರು ಮೂರು ಜನರೂ ಪೇಟೆಗೆ ಹೋದ ಸಮಯದಲ್ಲಿ ಆಳುಗಳನ್ನು ಕರೆಸಿಕೊಂಡು ನಡುಮನೆಯ ಬಾಗಿಲಿನ ಹತ್ತಿರ ಮೂರು ಆಳು ಕಂದಕ ಹೊಡೆಸಿದಳು. ಅದರ ಮೇಲೆ ಯೋಗ್ಯವಾದ ರೀತಿಯಲ್ಲಿ ಹಲಗೆ ಮುಚ್ಚಿಸಿದಳು. ಆ ಹಲಗೆಗೆ ಸರಿಯಾದ ಗೇಟನ್ನು ಇಡಿಸಿ, ಅದೇ ದಿವಸ ರಾತ್ರಿಯೊಳಗೆ ಪೂರ್ಣವಾಗಿ ಸಿದ್ಧಮಾಡಿಸಿದಳು.

ಮರು ದಿನ ಸಾಯಂಕಾಲ ಊಟ ಉಪಚಾರ ಮುಂಚೆಯೇ ಮುಗಿಯಿತು. ಆ ಮೇಲೆ ಒಂಬತ್ತು ಗಂಟೆ ರಾತ್ರಿಗೆ ಗಂಪಶೆಟ್ಟಿಯ ಮಗನು ಹೊರಟನು. ನಡುಮನೆಯ ಬಾಗಿಲು ದಾಟಿದ ಸಮಯದಲ್ಲಿ ಸೀದಾ ಕಂದಕದಲ್ಲಿ ಬಿದ್ದನು. ಹನ್ನೆರಡು ಗಂಟೆ ರಾತ್ರಿಯ ಸುಮಾರಿಗೆ ಶಾಸ್ತ್ರಿಯ ಮಗನು ಹೊರಟನು. ಹುರುಪಿನಿಂದಲೇ ಹೋದ ಅವನೂ ಮೊದಲನೆಯವ ಹೋದ ಕಂದಕಕ್ಕೇ ಹೋಗಿ ತಲುಪಿದನು. ನಾಲ್ಕು ಗಂಟೆ ರಾತ್ರಿಗೆ ಹೊರಟ ಪಟೇಲನ ಮಗನೂ ನಡುಮನೆಯ ಬಾಗಿಲು ದಾಟುವದೇ ತಡ. ಅದೇ ಕಂದಕದಲ್ಲಿ ಬಿದ್ದುಬಿಟ್ಟನು. ಮೂವರೂ ಒಟ್ಟಾಗಿ ಒಂದೇ ಕಂದಕದಲ್ಲಿ ಜೀವ ಹೋಗದೆ ಉಳಿದುಕೊಂಡರು.

ಬೆಳಗಾದ ಮೇಲೆ ರುಕ್ಮಿಣಿಯು ಹೋಗಿ ಆ ಕಂದಕದಲ್ಲಿ ಬೆಳಕು ಬಿಟ್ಟು ನೋಡಿದಳು. ಯಾರೂ ಸತ್ತಿರಲಿಲ್ಲ ಎಂದು ತಿಳಿದುಕೊಂಡು ಬಂದು, ತನ್ನ ಕೆಲಸವನ್ನು ತಾನು ಮಾಡುತ್ತ ಉಳಿದುಕೊಂಡಳು. ಮಧ್ಯಾಹ್ನದ ಸಮಯಕ್ಕೆ ನಾಲ್ಕುಜನ ಕೂಲಿಮಂದಿಯನ್ನು ಕರೆಸಿ, ಅವರನ್ನು ಮೇಲೆ ತೆಗೆಯಿಸಿ, ಆ ಮೂವರ ಹತ್ತಿರವೂ ಹೇಳಿದಳು. "ಈಗ ನೀವು ನಾನು ಹೇಳಿದ ಹಾಗೆ ಕೇಳುವೆವೆಂದು ಮಾತುಕೊಟ್ಟರೆ. ನಿಮ್ಮ ಜೀವನಕ್ಕೆ ಯೋಗ್ಯ ವ್ಯವಸ್ಥೆ ಮಾಡುತ್ತೇನೆ. ಇಲ್ಲದಿದ್ದರೆ ನಿಮ್ಮ ಜೀವಗಳ ವ್ಯವಸ್ಥೆಯೇ ಅವ್ಯವಸ್ಥೆಯಾಗಬಹುದು" ಎಂದು ಹೇಳಿದಳು. ಅವರು ಮೂವರೂ, "ನಮ್ಮ ಜೀವ ಉಳಿಸಿ ಕೊಟ್ಟರೆ, ನೀನು ಹೇಳಿದ ಹಾಗೆ ಕೇಳುತ್ತೇವೆ" ಎಂದು ಕೈಮುಗಿದು ಹೇಳಿಕೊಂಡರು ಆ ಮೇಲೆ ಒಂದು ಕೋಣೆಯಲ್ಲಿ ಅವರನ್ನಿಟ್ಟು. ಅವರಿಗೆ ಆಹಾರ ಇತ್ಯಾದಿ ಉಪಚಾರಕ್ಕೆ ಸರಿಯಾದ ಜನರನ್ನಿಟ್ಟು ನಡೆಸಿದಳು.

ಆ ಮೇಲೆ ಒಬ್ಬ ಬಡಿಗನನ್ನು ಕರೆಸಿ. ಅವನ ಹತ್ತಿರ ಹೇಳಿದಳು. "ನೋಡು. ನನಗೆ ನೀನು ಮೂರು ಪೆಟ್ಟಿಗೆ ಮಾಡಿಕೊಡಬೇಕು. ಪುರುಷಪ್ರಮಾಣದಷ್ಟು ಎತ್ತರವಿದ್ದು. ಅಡ್ಡಗಲ ಒಂದು ಮಾರು ಉದ್ದವಿದ್ದು ಚಚ್ಚೌಕಾದ ಪೆಟ್ಟಿಗೆಯಾಗಬೇಕು. ಇದೇ ವಾರದಲ್ಲೇ ಅಂಥ ಮೂರು ಪೆಟ್ಟಿಗೆಗಳನ್ನು ತಯಾರುಮಾಡಿ ಕೊಡಬೇಕು" ಎಂದು ತಿಳಿಸಿದಳು.

ಬಡಿಗನು "ಅಡ್ಡಿಯಿಲ್ಲ"ವೆಂದು ಹೇಳಿಹೋದವನು ಅದೇ ವಾರದಲ್ಲೇ ಮೂರೂ ಪೆಟ್ಟಿಗೆಗಳನ್ನು ತಯಾರುಮಾಡಿಸಿ ಬಂದು ರುಕ್ಮಿಣಿಗೆ ತಿಳಿಸಿದನು. "ಪೆಟ್ಟಿಗೆಗಳು ತಯಾರಾಗಿವೆ. ನಾಳೆ ತರಿಸಿಕೊಳ್ಳಿ. ಏನೂ ತೊಂದರೆಯಿಲ್ಲ." ರುಕ್ಮಿಣಿ ಆತನ ಮನೆಗೆ ಕೂಲಿಜನರನ್ನು ಕಳಿಸಿ, ಮೂರೂ ಪೆಟ್ಟಿಗೆಗಳನ್ನು ತರಿಸಿದಳು. ಮರು

ದಿನ ಒಂದು ಹಡಗನ್ನು ತಯಾರುಮಾಡಿಸಿದಳು. ಆ ಹಡಗನ್ನು ನಡೆಸುವದಕ್ಕಾಗಿ ಹದಿನಾರು ಜನ ಕೂಲಿಗಳನ್ನು ಗೊತ್ತುಮಾಡಿದಳು. ಅದರಲ್ಲಿ ನಾಲ್ಕಾರು ವರ್ಷ ಸಾಲುವಷ್ಟು ಸಾಮಾನುಗಳನ್ನು ತುಂಬಿಸಿದಳು.

ಮತ್ತು ಮೂರೂ ಜನರನ್ನು ಕರೆದು ಹೇಳಿದಳು. "ಏನು? ನಿಮಗೆ ಮೂರೂ ಜನರಿಗೂ ಊರಿಗೆ ಹೋಗಬೇಕೆಂದಿದೆಯೋ ? ಇಲ್ಲವಾದರೆ ಇಲ್ಲಿಯೇ ಉಳಿಯು ವಿರೋ?" ಎಂದು ಕೇಳಿದಳು. ಆಗ ಮೂರೂ ಜನರೂ ಹೇಳಿಕೊಂಡರು, "ನಮನ್ನು ನಮ್ಮ ನಮ್ಮ ಮನೆಗೆ ನೀನು ಕಳಿಸಿಕೊಟ್ಟರೆ, ನಿನ್ನಂಥ ಪುಣ್ಯಾತ್ಮ ಈ ಲೋಕದಲ್ಲಿಯೇ ಇಲ್ಲ, ನಮ್ಮನ್ನು ನಮ್ಮ ನಮ್ಮ ಮನೆಗೆ ನೀನು ಕಳಿಸಿದರೆ ನಿನಗೆ ಸಾವಿರ ಸಲ ಕೈಮುಗಿ ಯುತ್ತೇವೆ." ಆಗ ಅವಳು ಹೇಳಿದಳು. "ನಾನು ಹೇಳಿದ ಹಾಗೆ ನೀವು ಕೇಳಬೇಕು. ನಿಮಗೆ ಮೂರು ಜನರಿಗೂ ಒಂದೊಂದು ಮರದ ಪೆಟ್ಟಿಗೆಯನ್ನು ತಯಾರುಮಾಡಿಸಿ ದ್ದೇನೆ. ಒಂದೊಂದು ಪೆಟ್ಟಿಗೆಯಲ್ಲಿ ಒಬ್ಬೊಬ್ಬನಂತೆ ನೀವು ಇರಬೇಕು. ನಿಮಗೆ ಮೂರು ಮೂರು ತಿಂಗಳು ಸಾಲುವಷ್ಟು ಆಹಾರವನ್ನು ಅದರಲ್ಲಿ ಇಡುತ್ತೇನೆ. ಆಹಾರ ತೆಗೆದುಕೊಳ್ಳುತ್ತಾ ಸುಖವಾಗಿ ನೀವು ಪೆಟ್ಟಿಗೆಯಲ್ಲಿ ಇದ್ದರೆ ಸರಿ. ಮತ್ತು ಒಬ್ಬನ ಹತ್ತರ ಒಂದು ಸಾವಿರ ರೂಪಾಯಿ, ಮತ್ತೊಬ್ಬನ ಹತ್ತರ ಎರಡು ಸಾವಿರ ರೂಪಾಯಿ. ಇನ್ನೊಬ್ಬನ ಹತ್ತರ ಮೂರುಸಾವಿರ ರೂಪಾಯಿ, ಹೀಗೆ ನಿಮ್ಮ ನಿಮ್ಮ ಹತ್ತರ ಎಣಿಸಿ ನಾನು ಹಣ ಕೊಡುತ್ತೇನೆ. ಪೆಟ್ಟಿಗೆಯ ಪೂಜೆಮಾಡಿ, ನಾನು ಕೊಟ್ಟಷ್ಟು ರೂಪಾಯಿಗಳನ್ನು ನಾನು ಕೇಳುವ ಪ್ರಸಂಗ ಒಂದು ಸಮಯದಲ್ಲಿ ಬರ ಬಹುದು. "ಬಹಳ ಅಗತ್ಯದ ಪ್ರಸಂಗ ಬಂದಿದೆ, ಕೊಡಿ" ಎಂದು ಬಾಯಿಬಿಟ್ಟು ಕೇಳು ತ್ತೇನೆ. ಆ ಸಮಯದಲ್ಲಿ ಹಣವನ್ನು ಎಣಿಸಿ ಹೊರಗೆ ಒಗೆಯಬೇಕು. ಇದಕ್ಕೆ ಒಪ್ಪುವ ದಾದರೆ, ನಿಮ್ಮನ್ನು ಸುಖವಾಗಿ ನಿಮ್ಮ ನಿಮ್ಮ ಮನೆಗೆ ಕಳಿಸುತ್ತೇನೆ" ಎಂದು ಹೇಳಿ ದಳು. "ಅಡ್ಡಿಯಿಲ್ಲ" ಎಂದು ಅವರು ಮೂರು ಜನರೂ ಒಪ್ಪಿಕೊಂಡರು.

ಆ ನಂತರ ಪಟೇಲನ ಮಗನನ್ನು ಒಂದು ಪೆಟ್ಟಿಗೆಯಲ್ಲಿ ಕೂಡ್ರಿಸಿದಳು. ಅವನ ಹತ್ತರ ಒಂದುಸಾವಿರ ರೂಪಾಯಿಗಳನ್ನು ಕೊಟ್ಟಳು. ಮೂರು ತಿಂಗಳು ಸಾಲುವಷ್ಟು ಆಹಾರವನ್ನು ಇಡಿಸಿದಳು. ಹಾಗೆಯೇ ಗೇಟ್ ಹಾಕಿ ಕೀಲಿಯನ್ನು ಹಾಕಿದಳು. ಆ ಮೇಲೆ ಶಾಸ್ತ್ರಿಯ ಮಗನನ್ನು ಇನ್ನೊಂದು ಪೆಟ್ಟಿಗೆಯಲ್ಲಿ ಹಾಕಿ, ಅವನ ಹತ್ತರ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ಅದರಂತೆ ಚಾವಿ ಹಾಕಿದಳು. ಇನ್ನು ಗಂಪಶೆಟ್ಟಿಯ ಮಗನೊಬ್ಬನುಳಿದನು. ಅವನನ್ನು ಸಹ ಮತ್ತೊಂದು ಪೆಟ್ಟಿಗೆಯಲ್ಲಿ ಕೂಡಿಸಿ, ಅವನ ಹತ್ತರ ಮೂರು ಸಾವಿರ ರೂಪಾಯಿ ಕೊಟ್ಟು ಅದರಂತೆ ಗೇಟ್ ಹಾಕಿ, ಕೀಲಿ ಹಾಕಿದಳು. ಮೂರೂ ಪೆಟ್ಟಿಗೆಗಳನ್ನು ಹೊರಿಸಿ ಹಡಗಿಗೆ ಹಾಕಿಸಿದಳು.

ಆ ಮೇಲೆ ಮನೆ ಕೆಲಸದ ಜವಾಬ್ದಾರಿಯ ಬಗ್ಗೆ ಮತ್ತು ಅತ್ತೆ ಮಾವಂದಿರ ಉಪಚಾರದ ಸಲುವಾಗಿ ಕೂಲಿ ಜನರನ್ನು ಗೊತ್ತುಮಾಡಿ ಮನೆಯ ವ್ಯವಸ್ಥೆಗೆ ನೇಮಿಸಿದಳು. ಮತ್ತು ಅತ್ತೆ-ಮಾವಂದಿರ ಹತ್ತರ, " ನನ್ನ ಗಂಡನ ಪತ್ರ ಬಂದಿದೆ;

ಒಂದು ಸಲ ಬಂದು ಹೋಗಬೇಕಂತೆ. ನಾನು ಎಂಟು ದಿನಗಳ ಮಾತಿಗೆ ಹೋಗಿ ಬರುತ್ತೇನೆ." ಎಂದು ಹೇಳಿ ಹೊರಟು—ಹಡಗಿಗೆ ಬಂದಳು. ಹಡಗಿನ ಹದಿನಾರು ಕೂಲಿಗಳ ಹತ್ತರ ಇವಳು ಏನು ಹೇಳಿದಳೆಂದರೆ, "ಇನ್ನು ಮೇಲೆ ನೀವೆಲ್ಲರೂ ನನ್ನನ್ನು ರುಕ್ಮಿಣಿಯಮ್ಮ ಎಂದು ಹೇಳಿ ಕರೆಯಬಾರದು. "ಸಣ್ಣ ಸಾವುಕಾರರೇ" ಎಂದು ಹೇಳಬೇಕು. ನಾನು ಗಂಡು ಡ್ರೆಸ್ ಮಾಡಿಕೊಳ್ಳುತ್ತೇನೆ. ನಾನು ಹೆಣ್ಣೆಂಬ ಮಾತು ಒಂದೇ ಒಂದು ಬಾರಿಯೂ ಬರಬಾರದು. ನನ್ನ ಗುಟ್ಟೇನಿದೆಯೋ ಇನ್ನು ಒಬ್ಬ ಮನುಷ್ಯವ್ಯಕ್ತಿಗೂ ಹೇಳಬಾರದು. ಮೇಲಾಗಿ, ನಿಮ್ಮ ಪಗಾರು ಈಗ ದಿನಕ್ಕೆ ರೂಪಾಯಿ ಇದ್ದರೆ, ಡಬಲ್ ಪಗಾರ ಕೊಡುತ್ತೇನೆ?" ಎಂದು ಹೇಳಿ ಅಪ್ಪಣೆಮಾಡಿದಳು.

ಆ ಮೇಲೆ ಅಲ್ಲಿಂದ ಹಡಗು ಹೊರಟಿತು. ಎಷ್ಟೋ ದೂರ ಬಂದ ಮೇಲೆ, ಆ ಸಮುದ್ರದ ಅಂಚಿಗೆ ಒಂದು ಮಾರುತಿ ದೇವಸ್ಥಾನವಿತ್ತು—ಅಲ್ಲಿ ಬಂದು ಹಡಗು ತಲುಪಿತು. ಆ ದೇವಸ್ಥಾನಕ್ಕೆ ಹೋಗಿ ನಮ್ಮ ಸಣ್ಣ ಸಾವುಕಾರರು ಪ್ರಾರ್ಥನೆ ಮಾಡಿಕೊಂಡರು. ಆ ಮೇಲೆ ಅಲ್ಲಿಯ ಅರ್ಚಕರ ಹತ್ತರ, "ನಿಮ್ಮ ದೇವಸ್ಥಾನದಲ್ಲಿ ಅಮೂಲ್ಯವಾದ ವಸ್ತು ಯಾವದಾವರೂ ಇದೆಯೋ ಹ್ಯಾಗೆ"? ಎಂದು ಕೇಳಿದಳು. ಆಗ ಆ ಅರ್ಚಕರು ಹೇಳಿದರು. "ಅಮೂಲ್ಯವಾದ ವಸ್ತು ಎಂದರೆ ಒಂದು ಆಟದ (ಯಕ್ಷಗಾನದ) ಮೇಳವಿದೆ. ಮನುಷ್ಯವರ್ಗದ್ದಲ್ಲ ಅದು. ಪೂರ್ಣ ಮಂಗಗಳೇ: ಬಿಳಿ ಮಂಗಗಳು ಆ ಮೇಳದಲ್ಲಿವೆ. ಆ ಮಂಗಗಳೇ ವೇಷ ಹಾಕಿಕೊಂಡು ದಶಾವತಾರ ಆಟಗಳನ್ನು ಕುಣಿಯುತ್ತವೆ. ಇದೊಂದು ಆಟದ ಮೇಳದ ಹೊರತಾಗಿ, ಅಮೂಲ್ಯವಾದದ್ದು ಮತ್ತೆ ಯಾವದೂ ಕಾಣುವದಿಲ್ಲ."

"ಹಾಗಿದ್ದರೆ, ಆ ಮೇಳವನ್ನು ನನ್ನ ಸಂಗಡ ಕಳಿಸುವಿರೋ ಹೇಗೆ? ದಿನಾಲು ಏನು ಪಗಾರು ಕೊಡಬೇಕು? ಅಥವಾ ಒಂದೊಂದು ಆಟಕ್ಕೆ ಏನು ಕೊಡಬೇಕು?" ಎಂದು ಸಣ್ಣ ಸಾವುಕಾರರು ಕೇಳಿದರು. ಅದಕ್ಕೆ ಅರ್ಚಕರು. "ದಿನ ಪಗಾರವೆಂದೇನಿಲ್ಲ. ಒಂದು ಆಟಕ್ಕೆ ಎಷ್ಟು ಎಂತಲೂ ಅಲ್ಲ. ಒಂದು ತಿಂಗಳಿಗೆ ಮೂರು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಇಂದು ನೀವು ಕರೆದುಕೊಂಡು ಹೋಗಿ, ೨—೩ ದಿನಗಳಲ್ಲೇ ಹಿಂತಿರುಗಿ ಕರೆದುಕೊಂಡು ತಂದುಬಿಟ್ಟರೂ ಸಹಾ ಒಂದು ತಿಂಗಳ ಪಗಾರ ಕೊಡಬೇಕಾಗುತ್ತದೆ. ಹೀಗೆ ತಿಂಗಳ ಪಗಾರ ಲೆಕ್ಕ ಕೊಡಬೇಕು. ಎರಡು ಸಾವಿರ ರೂಪಾಯಿ ಮುಂಗಡ ಕೊಡಬೇಕು. ಹಾಗಿದ್ದರೆ ಕಳಿಸಿಕೊಡಲಿಕ್ಕೆ ಅಡ್ಡಿಯಿಲ್ಲ. ಆಟವನ್ನು ಮಾತ್ರ ಅಪೂರ್ವವಾಗಿ ಮಾಡುತ್ತಾರೆ. ಯಾವದೇ ಆಖ್ಯಾನವನ್ನು ಹೇಳಿದರೂ ಅವರು ಮಾಡುತ್ತಾರೆ" ಎಂದು ಹೇಳಿದರು.

ಅದಕ್ಕೆ ಒಪ್ಪಿಕೊಂಡು ಸಣ್ಣ ಸಾಹುಕಾರರು ಅರ್ಚಕರಿಗೆ ಎರಡು ಸಾವಿರ ರೂಪಾಯಿ ಮುಂಗಡ ಕೊಟ್ಟರು. ಆ ಮೇಳದ ಮಂಗಜಾತಿಯ ಜನಗಳನ್ನೆಲ್ಲ ಕರೆಸಿ, ಅವರ ಹತ್ತರ ಎಲ್ಲ ವಿಷಯ ತಿಳಿಸಿದರು. ಆ ಮೇಲೆ ಎಲ್ಲರೂ ಸೇರಿ ಹಡಗಿಗೆ ಬಂದರು. ಆ ಮೇಲೆ ಹೊರಟ ಹಡಗು ನೇರವಾಗಿ ಈ ಬಂಗಾರವತಿ ಸೂಳೆಯ ರಾಜ್ಯಕ್ಕೆ ಬಂದು ತಲ್ಪಿತು. ತಲ್ಪಿದ ಕೂಡಲೇ ಒಸಗೆಯ ಕೋವಿಯನ್ನು ಹೊಡೆಸಿ, ಆ ಊರ ಜನರಿಗೆ ತಿಳಿಯುವ ಹಾಗೆ ಶಂಖನಾದ ಮಾಡಿದರು.

ಇದನ್ನು ಕೇಳಿದ ಬಂಗಾರವತಿ ವೇಶ್ಯೆಯು ಅವಳ ಸ್ನೇಹಿತರೂ ಎಲ್ಲರೂ ಸೇರಿಕೊಂಡು ಹಡಗಿಗೆ ಬಂದರು. ಬಂದವರು, "ಯಾವೂರಾಯಿತು ನಿಮಗೆ ? ಏನು ಸಮಾಚಾರ? ಮತ್ತೆ ಹಡಗಿನಲ್ಲಿ ಏನೇನು ಸಾಮಾನ ಬಂದಿದೆ ?" ಎಂದೆಲ್ಲ ಕೇಳಿದರು.

ಸಣ್ಣ ಸಾಹುಕಾರರು, "ನಾವೇನು ಕಾಳುಕಡಿ ಸಾಮಾನು ಇತ್ಯಾದಿ ವ್ಯಾಪಾರದವರಲ್ಲ. ನಮ್ಮದೊಂದು ದಶಾವತಾರದ ಮೇಳವಿದೆ. ತಿಂಗಳು, ಎರಡು ತಿಂಗಳು ದಶಾವತಾರ ಆಡಿಕೊಂಡು, ಪಾವತಿಯಾದ ಹಣವನ್ನು ತೆಗೆದುಕೊಂಡು, ನಮ್ಮ ದಾರಿಯನ್ನು ನಾವು ನೋಡುವವರು" ಎಂದರು.

"ದಶಾವತಾರ ಮೇಳವೆಂದು ನೀವು ಹೇಳುತ್ತೀರಿ. ಆದರೆ ಸಾವುಕಾರರೇ, ನಿಮ್ಮ ಹಡಗಿನಲ್ಲಿ ಆ ಜನರು ಮಾತ್ರ ಕಾಣುವದಿಲ್ಲ. ದಶಾವತಾರದ ಮೇಳದವರು ಯಾರ್‍ರೀ ಅವರು ?" ಬಂಗಾರವತಿ ಕೇಳಿದಳು.

ಆಗ ಸಣ್ಣ ಸಾವುಕಾರರು, "ದಶಾವತಾರದ ಮೇಳದವರೆಂದರೆ, ನಮ್ಮ ಮನುಷ್ಯ ಜನರಲ್ಲ. ಅವರೆಲ್ಲರೂ ಮಂಗನ ಜಾತಿಯವರು. ಆದಿಯಿಂದ ಅಂತ್ಯದ ವರೆಗೂ ದಶಾವತಾರದಲ್ಲಿ ಕೆಲಸಮಾಡುವವರು ಪೂರಾ ಮಂಗಗಳೇ ಮತ್ತು ನಮ್ಮ ಕಡೆಗೆ ಅವರು ಬಹಳ ಹೆಸರುವಾಸಿಯಾಗಿದ್ದಾರೆ" ಎಂದು ಹೇಳಿದರು.

"ಹಾಗಾದರೆ ಇವತ್ತೇ ಒಂದು ಆಟ ಆಡಿಸಿಬಿಡಿ. ಒಂದು ಆಟಕ್ಕೆ ಏನು ಕೊಡಬೇಕು ಎಂದು ಹೇಳುವದಕ್ಕೇನು ತೊಂದರೆಯಿಲ್ಲ.

"ಒಂದೇ ಆಟ ಆಡಿಸುವದಕ್ಕಾದರೂ. ನಾವು, ಕಮ್ಮಿ ಎಂದರೆ, ಸಾವಿರದ ಒಂದು ರೂಪಾಯಿಗಳಿಗಿಂತ ಕಡಿಮೆಯಾದರೆ ಆಟವನ್ನೇ ಆಡುವದಿಲ್ಲ. ಇನ್ನು ದೊಡ್ಡ ಆಖ್ಯಾನವಾದರೆ, ಎಂಟು ಗಂಟೆ ರಾತ್ರಿಯಿಂದ ಬೆಳಗಿನ ವರೆಗೆ ಆಡುವದಿದ್ದರೆ, ಎರಡುಸಾವಿರದ ಐದು ರೂಪಾಯಿ ಆಗುತ್ತವೆ—ಹೀಗೆ ಎರಡು ರೀತಿ ಉಂಟು."

" ಹಾಗಿದ್ದರೆ, ಇವತ್ತು ನಮ್ಮೂರಿನಲ್ಲಿ ನಾನು ಒಂದು ಆಟ ಆಡಿಸುತ್ತೇನೆ. ನೀವು ಬಾಕಿ ಏರ್ಪಾಟು ಮಾಡಿಕೊಳ್ಳಲಿಕ್ಕೆ ತೊಂದರೆಯಿಲ್ಲ." ಎಂದು ಬಂಗಾರವತಿ ಹೇಳಿದಳು. " ಏನಡ್ಡಿಯಿಲ್ಲ. ನಾವು ಆ ಬಗ್ಗೆಯೇ ಬಂದವರು." ಎಂದು ಒಪ್ಪಿಕೊಂಡು ಥಿಯೇಟರು ತಯಾರ ಮಾಡಿಸಿದರು.

ಬಂಗಾರವತಿಯು ಬಹಳ ಕಡೆಗೆ ಈ ಮಂಗಗಳ ದಶಾವತಾರದ ಆಟದ ವರ್ತಮಾನವನ್ನು ತಿಳಿಸಿದ್ದಳು. ಆದಿನದ ಆಖ್ಯಾನವೆಂದರೆ " ಮಾರುತೀಪ್ರತಾಪ " ಅದು ಎಷ್ಟು ಜಲೋ ರೀತಿಯಿಂದ ನಡೆಯಬೇಕೋ ಅಷ್ಟು ಜಲೋ ರೀತಿಯಿಂದ ನಡೆಯಿತು. ಪ್ರೇಕ್ಷಕರು, ಬಾಲ್ಯದವರಿಂದ ಹಿಡಿದು ವೃದ್ಧಾಪ್ಯದ ವರೆಗಿನ ಜನರೂ "ಇಂಥ ಮಂಗಗಳು ಮಾಡುವ ದಶಾವತಾರ ಆಟವನ್ನು ಈ ಹಿಂದೆ ನೋಡಿದ್ದಿಲ್ಲ. ಇನ್ನು ಮುಂದೆ ನೋಡುವೆವೋ ಇಲ್ಲವೋ. " ಎಂದು ಆಶ್ಚರ್ಯದಿಂದ ಹೊಗಳಿದರು.

ಮಾರನೇ ದಿನ ಬಂಗಾರವತಿ ಆಟಕ್ಕೆ ಬಂದಿದ್ದ ತನ್ನ ಆಪ್ತೇಷ್ಟರನ್ನೆಲ್ಲಾ ಕರೆಸಿಕೊಂಡು, " ನಮ್ಮೂರಿಗೆ ಬಂದ ದಶಾವತಾರ ಮೇಳದವರು ದಶಾವತಾರದ ಕೆಲಸವ

ಪೆಟ್ಟಿಗೆ ಏನು ಕೆಲಸ ಮಾಡುತ್ತಾರೆ ! ನನಗಂತೂ " ಇನ್ನೂ ನೋಡೋಣ : ಮತ್ತೂ ನೋಡೋಣ " ಎಂದು ಕಾಣುತ್ತದೆ. ನೋಡಿದರೆ ಮಂಗನ ಜಾತಿ. ನಮ್ಮ ಮನುಷ್ಯ ಜಾತಿಯು ಹತ್ತಿರ ಸಾಧ್ಯವಿಲ್ಲ. ಆರೀತಿ ಹಾವ-ಭಾವ, ಕುಣಿತ, ಪದ್ಯಗಳ ಹಾಡುಗಾರಿಕೆ, ಅಲ್ಲದೆ ಮಾತಿನ ಚಟುವಟಿಕೆಗಳನ್ನು ತೋರಿಸಲಿಕ್ಕೆ ಅಶಕ್ಯವೇ ಸರಿ. ನೀವು ಮೊದಲು ಇಂಥ ಆಟವನ್ನು ನೋಡಿದ್ದೀರೋ ? ನಾನಂತೂ ಎಲ್ಲಿಯೂ ನೋಡಲಿಲ್ಲ. " ಎಂದಳು. ಅಪ್ಪೋಷ್ಟರು, " ನಾವೂ ನೋಡಿರಲಿಲ್ಲ. ನಾವು ನೋಡಿದ್ದು ಈಗಲೇ. " ಎಂದು ಹೇಳಿದರು.

ಗಂಪಶೆಟ್ಟರು, " ನಾನೊಂದು ಆಖ್ಯಾನ ಆಡಿಸಿ ಬಿಡುತ್ತೇನೆ. ದೂರ ದೂರದವರಿಗೆಲ್ಲಾ ವರ್ತಮಾನ ಕಳಿಸಬೇಕು. ನಾಳೆಗೆ ಆಡಿಸಿದರಾಯಿತು. ಚಲೋ ದೊಡ್ಡ ಕತೆಯನ್ನು ಆಡಿಸಬೇಕು. " ಎಂದರು. ಬಂಗಾರವತಿಯು, " ದೊಡ್ಡ ಕತೆ ಎಂದರೆ, ಎರಡು ಸಾವಿರದ ಐದುರೂಪಾಯಿ ವೀಳ್ಯ. ಅದನ್ನು ಕೇಳಿಕೊಂಡಿದ್ದೀರೋ? " ಎಂದು ಕೇಳಿದಳು. " ಎರಡು ಸಾವಿರದ ಐದಾದರೆ ಐದು- ಇರಲಿ ಬಿಡಿ. " ಎಂದು ಗಂಪ-ಶೆಟ್ಟರು ಹೇಳಿದರು. ಮರುದಿನದ ಆಟ ಆಡುವದಕ್ಕೆ ಮಾತಾಡಿಕೊಂಡು ನಿಶ್ಚಯ ಮಾಡಿದರು. ಸಣ್ಣ ಸಾವುಕಾರರು " ಯಾವ ಆಟ ಆಡಬೇಕು ? " ಎಂದು ಕೇಳಿದರು. " ಭಾರತದ " ಶ್ರೀಕೃಷ್ಣಸಂಧಾನ " ಮತ್ತು " ಭೀಷ್ಮವಿಜಯ " ಇವೆರಡೂ ಆಖ್ಯಾನ ಆಡಬೇಕು. " ಎಂದು ಗಂಪಶೆಟ್ಟರು ಹೇಳಿದರು. " ಏನೂ ಪರವಾಯಿಲ್ಲ " ಎಂದು ಸಣ್ಣ ಸಾವುಕಾರರು ಒಪ್ಪಿದರು. ಅವರೆಲ್ಲಾ ತಂತಮ್ಮ ಮನೆಗೆ ಹೋದರು.

ಆಟದ ವರ್ತಮಾನವನ್ನು ಎಲ್ಲ ಕಡೆಗೆ ಕಳಿಸಿದರು. ಎಂಟು ದಿಕ್ಕುಗಳಿಂದಲೂ ಆ ಹೊತ್ತಿನ ದಶಾವತಾರಕ್ಕೆ ಜನರು ಬಂದು ಸೇರಿದರು. ಆ ಎರಡೂ ಆಖ್ಯಾನಗಳನ್ನು ಸಾಂಗವಾಗಿ ಬೆಳತನಕ ಆಡಿ ತೋರಿಸಿದರು. ಅದನ್ನು ನೋಡಿದ ಸಾವಿರಾರು ಜನರು, " ಬಹಳ ಚಲೋ ಆಯಿತು. ಮನುಷ್ಯ ವರ್ಗದಲ್ಲಿ ಈ ರೀತಿ ಕೆಲಸ ಮಾಡಿ ಎಲ್ಲರಿಗೂ ತೃಪ್ತಿಮಾಡಿಸಲಿಕ್ಕೆ ಸಾಧ್ಯವಿಲ್ಲ. ಅಂಥ ಕೆಲಸವನ್ನು ಈ ಕೋತಿಯ ಜಾತಿಯಾದರೂ ಮಾಡಿ ತೋರಿಸಿತು " ಎಂದು ಹೇಳಿದರು. ಬಹಳ ಜನರು ಮೇಳದ ಮುಖ್ಯ ಮುಖ್ಯ ಪಾತ್ರಗಳನ್ನು ವಹಿಸಿದ ಮಂಗಗಳಿಗೆ ಬಹುಮಾನಗಳನ್ನು ಹಂಚಿದರು.

ಆಂದಿನ ಆಖ್ಯಾನ ಮುಗಿದ ಒಂದೆರಡು ದಿವಸಗಳ ಅನಂತರ, ಸಣ್ಣ ಸಾಹುಕಾರರ ಹಡಗಿಗೆ ಬಂಗಾರವತಿ ಸೂಳೆಯೂ ಆ ಊರ ಪಟೇಲರೂ. ಗಂಪಶೆಟ್ಟರೂ. ಶಾಸ್ತ್ರಿಯವರೂ ಎಲ್ಲ ಸೇರಿ ಬಂದರು. ಸಣ್ಣ ಸಾವುಕಾರರ ಹತ್ತಿರ ಮಾತನಾಡುತ್ತ ಕುಳಿತವರು ಒಮ್ಮೆಲೇ. " ನೋಡಿ ಈ ನಿಮ್ಮ ಹಡಗಿನಲ್ಲಿ ದೊಡ್ಡ ದೊಡ್ಡ ಪೆಟ್ಟಿಗೆಗಳು ಕಾಣುತ್ತವೆ. ಇವುಗಳಲ್ಲಿ ಯಾವ ಮ್ಯಾಲುಗಳಿವೆ ಏನನ್ನು ತುಂಬಿಟ್ಟಿದ್ದೀರಿ "? ಎಂದು ಕೇಳಿದರು.

" ಪೆಟ್ಟಿಗೆಗಳು ದೇವರ ಪೆಟ್ಟಿಗೆಗಳು. ನಮಗೇನಾದರೂ ಹಣದ ಅನಾನುಕೂಲತೆ ಆದ ಹೊತ್ತಿನಲ್ಲಿ ಭಕ್ತಿಭಾವದಿಂದ ಐದು ನಿಮಿಷ ಪೂಜೆಯನ್ನು ನೆರವೇರಿಸಿದ

ಅನಂತರ, ನಾವು ಕೇಳುವುದೊಂದೇ ತಡ, ಕೇಳಿದಷ್ಟು ರೂಪಾಯಿಗಳು ಹೊರಗೆ ಬಂದು ತಾವಾಗಿಯೇ ಬೀಳುತ್ತವೆ. ಆ ಪೆಟ್ಟಿಗೆಗಳು ಮೂರು ರೀತಿಯವು ಉತ್ತಮ, ಮಧ್ಯಮ. ಕನಿಷ್ಠ ಎಂದು ಹೇಳುವ ತೆರದಲ್ಲಿವೆ. ನೋಡಿ. ಈ ಪೆಟ್ಟಿಗೆಯಲ್ಲಿ ಬಹಳ ಶಕ್ತಿಯುಳ್ಳ ದೇವರಿದೆ. ಪೂಜೆಯ ಕೆಲಸವೂ ದೊಡ್ಡ ಪ್ರಮಾಣದ್ದೇ. ಒಂದು ವೇಳೆ ಮೂರು ಸಾವಿರ ರೂಪಾಯಿಗಳನ್ನು ಕೇಳಿದರೂ ಆ ಪೆಟ್ಟಿಗೆಯಿಂದ ಸಿಗುತ್ತದೆ. ಈ ಎರಡನೇ ಪೆಟ್ಟಿಗೆ ಮಧ್ಯಮತರದ್ದು. ಇದರಲ್ಲಿ ಎರಡು ಸಾವಿರ ಸಿಗುತ್ತವೆ. ಇದು ಮೂರನೆಯ ಬಣ್ಣದ್ದು. ಪೂಜೆ–ಪುರಸ್ಕಾರಗಳೂ ಸ್ವಲ್ಪ ಕಡಿಮೆ ಪ್ರಮಾಣದ್ದು. ಒಂದು ಸಾವಿರ ರೂಪಾಯಿಗಳನ್ನು ಈ ಪೆಟ್ಟಿಗೆ ಕೊಡುತ್ತದೆ. ಈ ಪೆಟ್ಟಿಗೆಗಳ ಗುಣವೆಲ್ಲಾ ಹೀಗೆ ಇದ್ದರೂ, ಹಣಕೊಡುತ್ತವೆ ಎಂದು ಪ್ರತಿ ದಿನ ಪೂಜೆ ಮಾಡಿ ಹಣ ಕೇಳಿದರೆ ಸಾಧ್ಯವಿಲ್ಲ. ಆ ಹೊತ್ತು ಸಹ ಅಂಥಾದ್ದೇ ಇರಬೇಕಾಗುತ್ತದೆ. ಬೇಡುವವನಿಗೆ ನಿಜ ವಾಗಿಯೂ ಹಣದ ಅಗತ್ಯ ಇಷ್ಟು ಇರಬೇಕಾಗುತ್ತದೆ. ಅಂದರೆ ಆ ದೇವರಿಗೆ ತಾನೇ ಗೊತ್ತಾಗುತ್ತದೆ." ಎಂದು ಸಣ್ಣ ಸಾವುಕಾರರು ಹೇಳಿದರು. ಅದನ್ನೆಲ್ಲಾ ಕೇಳಿಕೊಂಡು ನಾಲ್ಕು ಜನರೂ ಹಡಗಿನಿಂದ ತಿರುಗಿ ಹೊರಟರು. ದಾರಿಯ ಮೇಲೆ ಬಂಗಾರವತಿಯು ಹೀಗೆ ಆಲೋಚನೆ ಮಾಡಿದಳು. "ನಮ್ಮೂರಿನಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಇಂಥ ಒಳ್ಳೆಯ ವಸ್ತುಗಳು ನಮ್ಮ ಆಪ್ತೇಷ್ಟರ ಮನೆಯಲ್ಲಿದ್ದರೆ ನಮ್ಮ ಮನೆಯಲ್ಲಿ ಇದ್ದ ಹಾಗೆಯೇ. ಇದರಿಂದ ನಮ್ಮ ಆಪ್ತೇಷ್ಟರಿಗೆ ಇವನ್ನು ಕೊಡಿಸಲೇಬೇಕು" ಹೀಗೆ ಮನಸ್ಸಿನಲ್ಲಿ ನಿರ್ಧಾರ ಮಾಡಿದಳು.

ಶಾಸ್ತ್ರಿಯವರು ಆ ಊರಿನ ದೊಡ್ಡ ಶ್ರೀಮಂತರು. ಅವರ ಹತ್ತರ ಅವಳು ಹೇಳಿದಳು. "ನೋಡಿ ಶಾಸ್ತ್ರಿಯವರೇ, ಆ ಉತ್ತಮ ಪೆಟ್ಟಿಗೆ ಎನ್ನುವದನ್ನು ನೀವು ತಕ್ಕೊಳ್ಳಬೇಕು. ಯಾಕಂದರೆ, ಅದನ್ನು ಭಕ್ತಿಯಿಂದ ಪೂಜೆ ಮಾಡಬೇಕಂತೆ. ಅದು ಬಹಳ ಶಕ್ತಿಯುಳ್ಳ ದೇವರಂತೆ. ಹಾಗಾಗಿ. ನೀವೇ ತೆಗೆದುಕೊಂಡರೆ, ಯಾವ ಹೊತ್ತಿಗೂ ಯೋಗ್ಯ ಪೂಜೆ ನಡೆಯುತ್ತದೆ. ಬೇಕಾದ ವೇಳೆಗೆ ಸರಿಯಾಗಿ ಹಣಕಾಸಿಗೂ ತೊಂದರೆ ಯಾಗುವದಿಲ್ಲ. ನಿಮಗೆ ಅದರ ಹಡಂಗಿದೆ. (ಹಡಂಗೆ=ಯೋಗ್ಯತೆ) ಎಂದು ಹೇಳಿ ದೊಡ್ಡ ಶೆಟ್ಟರ ಹತ್ತರ ಹೇಳಿದಳು. "ಶೆಟ್ಟರೇ ಆ ಮಧ್ಯಮ ತರಗತಿಯ ಪೆಟ್ಟಿಗೆ ಯೊಂದರಲ್ಲಾ ಸಣ್ಣ ಸಾವುಕಾರರು ? ಆ ಪೆಟ್ಟಿಗೆಯನ್ನು ನೀವು ಖರೀದಿ ಮಾಡಬೇಕು. ಯಾವ ಸಮಯ ಹೇಗೆ ಬರುತ್ತದೆಯೆಂದು ಹೇಳಲಿಕ್ಕಾಗುವದಿಲ್ಲ. ಒಂದು ಸಮಯದಲ್ಲಿ ಹಣದ ತೊಂದರೆಯೂ ಆಗಬಹುದು. ಆಗ ಪೂಜೆ ಮಾಡಿಕೊಂಡು ಹೇಳಿಕೆ ಮಾಡಿ ಕೊಂಡರೆ ತೊಂದರೆಯನ್ನು ಪೂರೈಸಿಕೊಳ್ಳಬಹುದು. ನೀವು ಅದನ್ನು ತಗೊಳ್ಳಲೇ ಬೇಕು" ಎಂದಳು.

ಮೂರನೆಯದಾಗಿ, ಪಟೇಲರ ಹತ್ತರ, "ಪಟೇಲರೇ. ನೋಡಿ. ಇನ್ನೊಂದು ಪೆಟ್ಟಿಗೆಯಿದೆಯಲ್ಲಾ ? ಅದನ್ನು ನೀವು ತೆಗೆದುಕೊಳ್ಳಬೇಕು. ಒಳ್ಳೇ ವಸ್ತು ಮನೆಯಲ್ಲಿ ಉಳಿಯುತ್ತದೆ. ಹಣದ ತೊಂದರೆಯೂ ಪೂರೈಸುತ್ತದೆ." ಎಂದು ಹೇಳಿ ಅವರನು

ಒಪ್ಪಿಸಿದಳು. ಆ ಊರಲ್ಲಿ ಬಂಗಾರವತಿಯ ಮಾತನ್ನು ಮೀರುವವರು ಯಾರೂ ಇರಲಿಲ್ಲ.

ಮರುದಿನ ಈ ಆಪ್ತೇಷ್ಟರೆಲ್ಲಾ ಸೇರಿ. "ಈ ಹೊತ್ತು ಹಡಗಿಗೆ ಹೋಗ ಬೇಕು; ಸಾವುಕಾರರ ಹತ್ತರ ಆ ಪೆಟ್ಟಿಗೆಯ ವಿಕ್ರಯದ ರಕಂ ಏನು ಎಂದು ಕೇಳಿಕೊಂಡು ಬರಬೇಕು" ಎಂದು ಆಲೋಚನೆ ಮಾಡಿ ಹೊರಟರು. ದಾರಿಯಲ್ಲಿ ಬರುವಾಗ, "ನೋಡಿ, ಸ್ವಲ್ಪ ಹೆಚ್ಚು ಕಡಿಮೆ ದರ ಹೇಳಿದರೂ ವ್ಯಾಪಾರವನ್ನು ಮಾತ್ರ ಬಿಡಬಾರದು. ನೋಡಿ ಮೊದಲೇ ನಾನು ತಿಳಿಸಿಬಿಡುತ್ತೇನೆ. ನಾನಾಡಿದ್ದಕ್ಕೆ ಯಾರೂ ತಪ್ಪುವಹಾಗಿಲ್ಲ. ನಾನೆಲ್ಲಾ ಆಡಿ ಮುಗಿಸಿಬಿಡುತ್ತೇನೆ" ಹೀಗೆ ಬಂಗಾರವತಿ ಹೇಳಿದ್ದಳು.

ಎಲ್ಲರೂ ಸೇರಿ ಹಡಗಿಗೆ ಬಂದರು. ಆ ಮೇಲೆ ಇವರಿವರೊಳಗೆ ಬಹಳಷ್ಟು ಮಾತುಕತೆ ನಡೆಯಿತು. ಕೊನೆಗೆ ಸಣ್ಣ ಸಾವುಕಾರರ ಹತ್ತರ "ಹೌದ್ರೀ, ನಿನ್ನೆ ನೀವು ಆ ಪೆಟ್ಟಿಗೆಗಳ ಗುಣಧರ್ಮವನ್ನು ಎಲ್ಲಾ ಹೇಳಿದ್ದೀರಿ. ಒಂದೊಂದು ಪೆಟ್ಟಿಗೆಯ ವಿಕ್ರಯದ ರಕಮನ್ನು ಮಾತ್ರ ಹೇಳಲಿಲ್ಲ. ಆ ವಿಷಯ ತಿಳಿದುಕೊಂಡು ಹೋಗಬೇಕೆಂದು ನಾವು ಬಂದಿದ್ದೇವೆ" ಎಂದು ಬಂಗಾರವತಿ ಹೇಳಿದಳು.

ಆಗ ಸಣ್ಣ ಸಾವುಕಾರರು. "ಹೌದ್ರಿ, ಆ ಉತ್ತಮ ಪೆಟ್ಟಿಗೆಗೆ ನಾಲ್ಕು ಸಾವಿರದ ಒಂದು ರೂಪಾಯಿ ದರವಾಗುತ್ತದೆ. ಇನ್ನು ಎರಡನೇ ಪೆಟ್ಟಿಗೆಗೆ ಮೂರು ಸಾವಿರದ ಐದು ರೂಪಾಯಿ ಆಗುತ್ತವೆ. ಮೂರನೆಯ ಪೆಟ್ಟಿಗೆಯ ದರ ಎರಡು ಸಾವಿರದ ಒಂದು ರೂಪಾಯಿ" ಎಂದು ಹೇಳಿದರು.

ಆ ಮಾತು ಕೇಳಿದ ಬಂಗಾರವತಿ, "ನಮ್ಮ ಈ ಶಾಸ್ತ್ರಿಯವರಿಗೆ ನಾಲ್ಕು ಸಾವಿರದ ಐದು ರೂಪಾಯಿಗಳ ಈ ಪೆಟ್ಟಿಗೆಯನ್ನು ಕೊಡಿ. ಎರಡನೆಯದಾಗಿ ಮೂರು ಸಾವಿರದ ಐದು ರೂಪಾಯಿಗಳ ಈ ಪೆಟ್ಟಿಗೆಯನ್ನು ನಮ್ಮ ದೊಡ್ಡ ಶೆಟ್ರಿಗೆ ಕೊಡಿ. ಉಳಿದ ಒಂದು ಪೆಟ್ಟಿಗೆಯನ್ನು ನಮ್ಮೂರ ಪಟೇಲರಿಗೆ ಕೊಡಿ. ಅಲ್ಲದೆ, ನಿನ್ನೆ ನೀವು ಹೇಳಿದಂತೆ ನಮ್ಮ ಇದಿರಿನಲ್ಲೇ, ಆ ಪೂಜೆಯನ್ನು ಯಾವ ರೀತಿ ಮಾಡಬೇಕು? ಯಾವರೀತಿಯಿಂದ ದೇವರ ಹತ್ತರ ಕೇಳಿಕೊಳ್ಳಬೇಕು. ಇವನ್ನೆಲ್ಲ ನಮ್ಮ ಪ್ರತ್ಯಕ್ಷದಲ್ಲಿ ತೋರಿಸಿಬಿಡಿ. ಆ ಮೇಲೆ ನಾಳಿನ ದಿವಸ ನಮ್ಮ ಹಣವನ್ನು ನೀವು ಎಣಿಸಿಕೊಂಡು, ಆ ಪೆಟ್ಟಿಗೆಗಳನ್ನು ಬಿಟ್ಟುಕೊಡಬಹುದು" ಎಂದು ಹೇಳಿದಳು.

ಸಣ್ಣ ಸಾವುಕಾರರು, "ನೀವೆಲ್ಲರೂ ಬಂದವರೇ, ಇದ್ದೀರಿ. ನಿಮ್ಮ ಇದುರಿನಲ್ಲೇ ಈ ಪೆಟ್ಟಿಗೆಗಳ ನಿಜವಾದ ಗುಣಧರ್ಮವನ್ನು ತೋರಿಸುತ್ತೇನೆ, ಸ್ವಲ್ಪ ನಿಲ್ಲಿ" ಎಂದು ಹೇಳಿ, ಮೊದಲನೆಯ ಪೆಟ್ಟಿಗೆಯ ಪೂಜೆಮಾಡಿ. "ಮೂರುಸಾವಿರದ ಐದು ರೂಪಾಯಿಗಳನ್ನು ಎಣಿಸಿ ಒಗೆಯುವ ಕೃಪೆಯಾಗಬೇಕು" ಎಂದು ಹೇಳಿದರು. ಮೂರು ಸಾವಿರದ ಐದು ರೂಪಾಯಿಗಳು ಹೊರಗೆ ಬಂದುಬಿದ್ದವು. ಹೀಗೆ ಮತ್ತೆರಡು ಪೆಟ್ಟಿಗೆಗಳನ್ನೂ ಪೂಜೆಮಾಡಿ, ಹಣ ಕೇಳಿದರು. ಬಂದ ಹಣವನ್ನು ಎಣಿಸಿ

ತೋರಿಸಿದರು. ಒಂದರಲ್ಲಿಂದ ಎರಡು ಸಾವಿರ, ಇನ್ನೊಂದರಲ್ಲಿ ಒಂದು ಸಾವಿರ ರೂಪಾಯಿಗಳು ಬಂದುಬಿದ್ದವು. ಅದನ್ನು ನೋಡಿದವರೆಲ್ಲಾ ಬಹಳ ಆಶ್ಚರ್ಯವನ್ನು, ಸಂತೋಷವನ್ನು ಹೊಂದಿದರು. ಆ ಮೇಲೆ ತಮ್ಮ ತಮ್ಮ ಮನೆಗೆ ಅವರು ಹೊರಟು ಹೋದರು.

ಮಾರನೇ ದಿನ ಅವರೆಲ್ಲರೂ ಬಂದು ಪೆಟ್ಟಿಗೆಗಳಿಗೆ ನಿಕ್ಕಿಮಾಡಿದ ರಕಂ ಕೊಟ್ಟು ಆ ಪೆಟ್ಟಿಗೆಗಳನ್ನೆಲ್ಲ ಒಯ್ದರು. ಸಣ್ಣ ಸಾವುಕಾರರು ಪೆಟ್ಟಿಗೆ ಒಯ್ಯುವಾಗ, “ನೋಡಿ, ಇವತ್ತು ಪೆಟ್ಟಿಗೆ ಒಯ್ದಿದ್ದೇವೆ ಎಂತ ದಿನಾ ದಿನಾ ಪೂಜೆ ಮಾಡು ವದು, ಹಣ ಕೇಳುವದು ಈ ರೀತಿ ಮಾಡಬೇಡಿ. ನಾಳೆ ಇಂಥ ಮೋಸಮಾಡಿದ ರೆಂದು ನನಗೊಂದು ಮಾತು ತರಬೇಡಿ. ನಿಮಗೆ ನಿಜವಾದ ಅಂಥ ಹೊತ್ತೇ ಬಂದಿರ ಬೇಕು. ಆ ವೇಳೆಗೆ ಆ ಪೂಜೆ ಮಾಡಿ, ನಿಮ್ಮ ಪ್ರಾರ್ಥನೆಮಾಡಿ ಕೇಳಬೇಕು. ಆ ವೇಳೆಗೆ ಕೊಡದಿದ್ದರೆ, ನಿಜವಾಗಿ ನಾನು ಮೊಸ ಮಾಡಿದೆನೆಂದು ಆಗುತ್ತದೆ. ಒಮ್ಮೆ ಕೊಡದೆ ಹೋದರೆ, ನೀವು ಪೆಟ್ಟಿಗೆ ಒಡೆದು ನೋಡಲಿಕ್ಕೂ ಅಡ್ಡಿಯಿಲ್ಲ. ಅದರೊಳಗೆ ಮಾತ್ರ ನೀವು ಪೆಟ್ಟಿಗೆ ಒಡೆಯಬೇಡಿ ” ಎಂದು ಹೇಳಿದರು.

ಅದಕ್ಕೆಲ್ಲಾ ಒಪ್ಪಿಕೊಂಡು ಪೆಟ್ಟಿಗೆಗಳನ್ನು ಒಯ್ದವರು ನಾಲ್ಕು ದಿನಗಳ ಅನಂತರ ಬಂಗಾರವತಿಯ ಮನೆಯಲ್ಲಿ ಅವಳ ಮಿತ್ರರೆಲ್ಲಾ ಕೂಡಿ ಮಾತುಕತೆ ನಡೆಸಿದರು. ಏನೆಂದರೆ, “ ನಮ್ಮೂರ ವೈಶಿಷ್ಟ್ಯ ಎಂದರೆ, ಇದು ವರೆಗೂ ಒಂದೇ ಒಂದು ಕಾಸು ಹೊರಗೆ ಹೋಗಲು ಕೊಡದೆ ನಾವು ಈ ದಿವಸದ ವರೆಗೂ ನೋಡುತ್ತ ಬಂದಿದ್ದೇವೆ. ಆದರೆ ಈ ಸಲ ಅದರ ವಿರುದ್ಧವಾಗಿ, ಊರಿಗೆ ಊರನ್ನೇ ಈ ಸಾವುಕಾರನಿಗೆ ಕೊಟ್ಟು ಕೈಮುಗಿಯಬೇಕಾಗುವದೋ ಏನೋ. ಏನಿದ್ದಿರಬಹುದು ಇದರ ಮಹತ್ತು ? ಯಾಕಂ– ದರೆ, ಮೊದಲನೆಯದಾಗಿ, ಇವನ ಆಟದ ಮಂಗಗಳ ಕುಣಿತವಾಯಿತು. ಎರಡನೆಯ ದಾಗಿ, ಮರದ ಪೆಟ್ಟಿಗಗಳು ದೇವರ ಪೆಟ್ಟಿಗೆಗಳೆಂದಾಯಿತು. ಇದಿಷ್ಟಕ್ಕೇ ಆದರೂ ಹದಿನೈದಿಪ್ಪತ್ತು ಸಾವಿರ ರೂಪಾಯಿಗಳಾಗಿ ಹೋದವು. ಇನ್ನು ನೇರವಾಗಿ ಅವನು ತನ್ನ ಮನೆಗೆ ಹೋಗುತ್ತಾನೆ. ಈವರೆಗೂ ಇಲ್ಲಿಗೆ ಬಂದವರಲ್ಲಿ ಹಿಂತಿರುಗಿ ಹೋದವ ರಾದರೂ ಯಾರಿದ್ದಾರೆ ?” ಇದೇ ರೀತಿ ಬಹಳ ಮಾತುಕತೆ ನಡೆಯಿತು.

ಆಗ ಗಂಪಶೆಟ್ಟಿ ಹೇಳಿದನು. “ ಇದಕ್ಕೆ ಒಂದು ಉಪಾಯ ಮಾಡಬೇಕು. ಬರೀ ಹೀಗೆ ಇಲ್ಲಿಗೇ ಬಿಟ್ಟರೆ ಸಾಧ್ಯವಿಲ್ಲ. ಜೂಜಾಟವಾಡಬೇಕು. ಸುರಳಿತ ಸೋಲುತ್ತಾರೆ. ಆ ಹತ್ತಿಪ್ಪತ್ತು ಸಾವಿರ ರೂಪಾಯಿಗಳೂ ಸಿಕ್ಕುತ್ತವೆ. ಹಡಗು, ಸಾವುಕಾರರು ಎಲ್ಲಾ ಸಿಕ್ಕುತ್ತಾರೆ ನೋಡಿ.” ಆಗ ಬಂಗಾರವತಿಯು, “ ನೀವು ಹೇಳುವದು ಸರಿಯಾದ ಉಪಾಯ. ಆ ಬಗ್ಗೆ ಇಂದು ಹೋಗಿ ಮಾತುಕತೆ ಆಡಿಕೊಂಡು ಬಂದು ಬಿಡೋಣ” ಎಂದಳು. ಅವರೆಲ್ಲಾ ಅದಕ್ಕೆ ಒಪ್ಪಿದರು.

ಅದೇ ದಿವಸ ಮಧ್ಯಾಹ್ನದ ಮೇಲೆ, ಇವರೆಲ್ಲ ಸೇರಿ ಹಡಗಿಗೆ ಹೋಗಿ, ಸಣ್ಣ ಸಾವುಕಾರನ ಹತ್ತರ ಮಾತುಕತೆ ಪ್ರಾರಂಭಮಾಡಿದರು. “ ನೀವು ಬಂದು ಬಹಳ ದಿನ

ಗಳಾದವು. ದಶಾವತಾರ ಆಟವೂ ಆಯಿತು. ನಿಮ್ಮ ದೇವರ ಪೆಟ್ಟಿಗೆಗಳ ವ್ಯಾಪಾರವೂ ಆಯಿತು. ನಮ್ಮೂರಿನಲ್ಲಿ ಜೂಜಾಟ ಆಡುವ ಸಂಪ್ರದಾಯವಿದೆ. ನಮ್ಮೂರಿಗೆ ಬಂದವರೊಬ್ಬರೂ ಜೂಜಾಟವಾಡದೆ ಹೋಗುವಂತಿಲ್ಲ. ಜೂಜಾಟ ಆಡಿಕೊಂಡು ಆರೆಂಟು ದಿವಸ ಉಳಿದುಕೊಂಡು ಆ ಮೇಲೆ ಹೋಗಬೇಕು."

ಆಗ ಸಣ್ಣ ಸಾವುಕಾರರು, "ಏನಡ್ಡಿಯಿಲ್ಲ. ಆ ಬಗ್ಗೆ ಯಾವಾಗ ಏರ್ಪಾಡು ಮಾಡುತ್ತಿರಿ ? " ಎಂದು ಕೇಳಿದರು. "ನಾಳೆ ಮುಂಜಾನೆಯಿಂದ ಸುರುಮಾಡಿ ಬಿಡೋಣ." ಎಂದು ಬಂಗಾರವತಿ ಹೇಳಿದಳು. ಆಗ ಸಣ್ಣ ಸಾವುಕಾರರು. "ನೋಡಿ. ಜೂಜಾಟ ಎಂದರೆ, ಹೀಗೆಯೇ ಆಟದ ಮಜಾಕ್ಕೆ ಆಡುವದಲ್ಲ. ಪಣ ಇಟ್ಟುಕೊಳ್ಳ-ಬೇಕಾಗುತ್ತದೆ. ಅದಕ್ಕೆ ಲೇಖಿಯನ್ನು ಯಾವಾಗ ಮಾಡಿಕೊಳ್ಳೋಣ?"ಎಂದು ಕೇಳಿದರು.

ಬಂಗಾರವತಿಯು, " ಈಗಲೇ ಬರೆದು ಮುಗಿಸಿ ಬಿಡೋಣ." ಎಂದು ಹೇಳಿದಳು ಆಗ, "ಜೂಜಿನಲ್ಲಿ ಯಾರೆ ಸೋತರೆ ಅವರ ಸರ್ವಸ್ವವೂ ಗೆದ್ದವರಿಗೆ." ಎಂಬ ಕರಾರನ್ನು ಗೊತ್ತು ಮಾಡಿ, ಸಣ್ಣಸಾವುಕಾರರಿಂದ ಬಂಗಾರವತಿ ಸೂಳೆಗೆ ಒಂದು, ಅವ ಳಿಂದ ಸಣ್ಣ ಸಾವುಕಾರರಿಗೊಂದು ಹೀಗೆ ಸಹಿನಿಶಿ ಲೇಖಿಯನ್ನು ಮಾಡಿಸಿಕೊಟ್ಟರು.

ಮೂರನೇ ದಿವಸ ಜೂಜಾಟಕ್ಕೆ ಸುರುವಾಯಿತು. ಜೂಜಾಟ ಸರಿಯಾಗಿ ಒಂದು ವಾರ ನಡೆಯಿತು ಕೊನೆಗೆ ಬಂಗಾರವತಿ ಸೋತಳೆಂದಾಯಿತು. ಆಗ ಬಂಗಾರ ವತಿಯ ಅಪ್ತೇಷ್ಟರೆಲ್ಲ ಸೇರಿದರು. ಅವರು "ಬಂಗಾರವತಿ ಸೋಲಲಿಕ್ಕಂತೂ ಸೋ ತಳು. ಆದರೆ ಅವಳ ಸರ್ವಸ್ವ ಸೊತ್ತನ್ನೆಲ್ಲಾ ಒಯ್ಯಲಿಕ್ಕೆ ಅಡ್ಡಿಯಿಲ್ಲ. ಆದರೆ ಅವಳ ಖಾಲಿಮನೆಯನ್ನು ಅವಳನ್ನು ಮಾತ್ರ ಬಿಡಬೇಕು." ಎಂದು ಹೇಳಿ, ಅವರೆಲ್ಲಾ ಕ್ಷಮೆ ಯನ್ನು ಬೇಡಿಕೊಂಡರು. ಸಣ್ಣ ಸಾವುಕಾರರು, "ನೀವು ಹೇಳಿದ್ದಕ್ಕೆ ಅಡ್ಡಿಯಿಲ್ಲ. ಆದರೆ ನಮ್ಮ ಲೇಖಿಯ ಪ್ರಕಾರ ಬಿಡಲಿಕ್ಕೆ ಬರುವದಿಲ್ಲವಾಗಿತ್ತು. ನಿಮ್ಮಲ್ಲಿಯ ರೀತಿ ನೀತಿ ನೋಡಿದಾಗೆ, ಬಹಳ ಅನ್ಯಾಯವಾದ ಹಾಗೇ ಕಾಣುತ್ತದೆ. ಆದರೆ ಇನ್ನು ಒಂದಾದರೂ ನ್ಯಾಯವಾದ ರೀತಿಯಲ್ಲಿ ನೀವು ನಡೆಸಿಕೊಡಬೇಕು. ಈ ಹಿಂದೆ ಎಷ್ಟೋ ಹಡಗು, ಎಷ್ಟೋ ಸಾವಿರ ಕೂಲಿ ಜನರು, ಎಷ್ಟೋ ವಸ್ತು-ಒಡವೆ ಇವನ್ನೆಲ್ಲಾ ಬಂಗಾರವತಿ ವಶಮಾಡಿಕೊಂಡಿದ್ದಾಳೆ. ಅವನ್ನೆಲ್ಲಾ ಹೊರಗೆ ಹಾಕಿ" ಎಂದು ಹೇಳಿದರು.

ಆಗ ಅವರನ್ನೂ ಸಾಮಾನುಗಳನ್ನೂ ಅವರವರು ತಂದ ಹಡಗುಗಳ ಮೇಲೆ ಏರಿಸಿದರು. "ನೀವು ನಿಮ್ಮ ನಿಮ್ಮ ಹಡಗುಗಳೊಂದಿಗೆ ನಿಮ್ಮ ನಿಮ್ಮ ಊರಿಗೆ ಹೋಗಿ ನಿಮ್ಮ ನಿಮ್ಮ ಸಾಮಾನುಗಳು ನಿಮ್ಮ ಹಡಗುಗಳಲ್ಲಿ ಸರಿಯಾಗಿ ಬಂದಿವೆಯೋ ಏನೆಂದು ನೋಡಿಕೊಳ್ಳಿ" ಎಂದು ಸಣ್ಣ ಸಾವುಕಾರರು ಅವರಿಗೆಲ್ಲ ಹೇಳಿದರು. ಅವರು "ನೀವು ನಮಗೆ ಹೊಸ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿರಿ. ನಮ್ಮ ವಸ್ತು-ಒಡವೆಗಳನ್ನು ನಾವು ಕಳೆದುಕೊಂಡರೂ ಅನಾಯಾಸವಾಗಿ ನಮಗೆ ಪುನಃ ದೊರಕಿಸಿಕೊಟ್ಟಿರಿ. ನಮ್ಮ ತಾಯಿ-ತಂದೆಗಳು ಮಾಡಿದ್ದಕ್ಕಿಂತ ಹೆಚ್ಚಿನ ಉಪಕಾರ ಮಾಡಿದಿರಿ" ಎಂದು ನಮಸ್ಕಾರಮಾಡಿ ಹೊರಟರು.

ತನ್ನ ಗಂಡನು ತಂದ ಹಡಗವನ್ನು ತನ್ನ ಹಡಗಿಗೆ ಜೊಯಿಂಟ್‌ಮಾಡಿಸಿ, ಬಂದ ಕೂಲಿ ಜನರು ಮತ್ತು ತನ್ನ ಪತಿ ಇವರನ್ನೆಲ್ಲಾ ತನ್ನ ಹಡಗಿಗೆ ತೆಗೆದುಕೊಂಡು, ಸಣ್ಣ ಸಾವುಕಾರರ ವೇಷ ಹೊರಟಿತು. ದಾರಿಯ ಮೇಲೆ ತನ್ನ ಡ್ರೆಸ್ಸನ್ನು ಬದಲುಮಾಡಿ ಸಣ್ಣ ಸಾವುಕಾರರು ಸ್ತ್ರೀವೇಷವನ್ನು ಹಾಕಿಕೊಂಡರು. ತನ್ನ ಗಂಡನಿಗೆ ನಮಸ್ಕಾರ ಮಾಡಿ, ಹಿಂದಿನಿಂದ ನಡೆದ ಸಂಗತಿಗಳನ್ನೆಲ್ಲಾ ಹೇಳಿ, ತಾನು ಇಂಥಿಂಥ ರೀತಿಗಳಲ್ಲಿ ಕೆಲಸಮಾಡಿದೆ, "ನಿಮ್ಮನ್ನು ನೋಡುವ ಋಣ ನನಗಿತ್ತು. ಆದ್ದರಿಂದ ನಾನು ನಿಮ್ಮ ಪಾದವನ್ನು ಸೇರಿಕೊಂಡೆನು," ಎಂದು ರುಕ್ಮಿಣಿ ಹೇಳಿದಳು.

ಬಂಗಾರವತಿಯು ಹಣ–ವಸ್ತು ಒಡವೆಗಳನ್ನೆಲ್ಲಾ ಕಳೆದುಕೊಂಡು, ಬಡತನದಲ್ಲಿ ರಲಾರದೆ, ಶಾಸ್ತ್ರಿಯವರ ಮನೆಗೆ ಬಂದು. "ನಿಮ್ಮ ದೇವರ ಪೆಟ್ಟಿಗೆಯನ್ನು ಪೂಜೆ ಮಾಡಿ, ದೇವರ ಹತ್ತಿರ ಹಣವನ್ನು ಕೇಳಿಕೊಂಡು ನನಗೆ ಸಾವಿರ ರೂಪಾಯಿ ಕೊಡಿ." ಎಂದು ಕೇಳಿಕೊಂಡಳು. ಅವರು ದೇವರ ಪೂಜೆ ಮಾಡಿ, ಹಣ ಕೇಳಿ ಕೊಂಡರು. ಹಣ ಬರಲಿಲ್ಲ. ಬಾಯಿ ಬಡಿದುಕೊಂಡರೂ ಹಣ ಸಿಗಲಿಲ್ಲ. ಹಾಗೆಯೇ ಪೆಟ್ಟಿಗೆ ಒಡೆದು ನೋಡಲಾಗಿ, ಒಳಗೆ ಇರುವ ವಸ್ತು ಎಂದರೆ, ಅವರದೇ ಆದ ಮಗ. ಆ ಮಗ ಸೊರಗಿ ಹೋಗಿದ್ದನು.ಅವನಿಗೆ ವೈದ್ಯರಿಂದ ಯೋಗ್ಯ ಉಪಚಾರ ಮಾಡಿಸಿದರು.

ಅನಂತರ ಗಂಪಶೆಟ್ಟರ ಪೆಟ್ಟಿಗೆಯನ್ನೂ ಇದೇ ರೀತಿ ಪೂಜೆಮಾಡಿ ಕೇಳಿ ಕೊಂಡರೂ ಹಣ ಸಿಗದೆ. ಪೆಟ್ಟಿಗೆ ಒಡೆದು ನೋಡಿದರೆ ಅವರದೇ ಮಗ ! ಅವರೂ ಇದೇ ರೀತಿ ಮಗನಿಗೆ ಉಪಚಾರ ನಡೆಸಿದರು.

ಪಟೇಲರು ಒಂದು ದಿನ ಪೂಜೆಮಾಡಿ ಹಣ ಸಿಗದೆ ಹೋದಾಗ ಪೆಟ್ಟಿಗೆ ಯನ್ನು ಒಡೆದು ನೋಡಿದರು. ಅವರದೇ ಮಗ! ಅವನಿಗೂ ಉಪಚಾರ ಮಾಡಿಸಿ, ಅವನ ಹತ್ತಿರ ಆದ ಸಂಗತಿಯನ್ನು ಕೇಳಿದರು. ಮೂವರೂ ತಮಗೆ ಆದ ಅವ–ಮಾನ–ದುರವಸ್ಥೆಗಳನ್ನು, ತಂದೆಗಳಿಗೆ ಹೇಳಿಕೊಂಡರು. "ನಾವು ಬಂಗಾರವತಿಯ ಮಾತು ಕೇಳಿ, ಕಷ್ಟ–ನಷ್ಟ–ಭ್ರಷ್ಟ ಅನುಭವಿಸಿದೆವು" ಎಂದು ನೊಂದುಕೊಂಡರು.

ಇತ್ತ ಹಡಗು ನಡೆಸುತ್ತ ಗೋಪಾಲಕೃಷ್ಣ ಸಾವುಕಾರನೂ ರುಕ್ಮಿಣಿಯೂ ಸುಖವಾಗಿ ಮಾರುತಿದೇವಸ್ಥಾನಕ್ಕೆ ಬಂದು ತಲ್ಪಿದರು. ಹಿಂದೆ ಮಾತಾಡಿದಂತೆ ಆಟದ ಮೇಳದ ತಿಂಗಳ ಪಗಾರನ್ನು ಅರ್ಚಕರ ಕೈಗೆ ಕೊಟ್ಟು, ಮಾರುತಿದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ವಿಶೇಷ ಕಾಣಿಕೆಗಳನ್ನೂ ಸಹ ಮಾಡಿ, ಮೇಳದ ಆ ಮಂಗಗಳೆಲ್ಲವನ್ನೂ ಅಲ್ಲಿ ಒಪ್ಪಿಸಿ. ತಮ್ಮ ಊರಿಗೆ ತಿರುಗಿ ಹೊರಟರು. ಹಿಂದೆ ನಡೆದ ಸಂಗತಿಗಳನ್ನೆಲ್ಲಾ ಮಾತಾಡುತ್ತಾ, ಎಲ್ಲರೂ ಸಂತೋಷದಿಂದ ಊರಿಗೆ ಬಂದು ತಲ್ಪಿದರು.

ಮನೆಗೆ ಬಂದು ತಾಯಿ-ತಂದೆ, ಅತ್ತೆ-ಮಾವ ಇವರಿಗೆ ಎಲ್ಲ ಸಂಗತಿಗಳನ್ನು ಹೇಳಿ, ಅಪ್ಪೇಷ್ಟರನ್ನು ಕಂಡು ಬಂದು ಆನಂದದಿಂದ ಕಾಲ ಕಳೆಯ ಹತ್ತಿದರು.

★ **ಎಲ್. ಆರ್. ಹೆಗಡೆ.**

ಕಥೆ ಹೇಳಿದವರು :- ಶ್ರೀ ತಿಮ್ಮಯ್ಯ ರಾಮಯ್ಯ ಹೆಗಡೆ, ಕೋಳಿಖಂಡ, ಸಿರ್ಸಿ ತಾಲೂಕ.

ದುಂಬಿ - ಹೂ ಬದುಕು

ನಡುಬೇಸಿಗೆಯು ಬಿಸಿಲ ಹೊತ್ತು :
ಉರಿ ತಣ್ಣಗಾಗುವ ಮೊದಲೆ, ಸ್ಪರ್ಶಲಾಭದ ತೃಪ್ತಿ
ಗಳಿಸಿ, ಕರಿಸೂರ್ಯ ಮುಳುಗುವ ಮುಂಚೆ, ವೀತ-
ರಾಗನಾಗುವ ಹವಣಿಕೆ.

ನೆನಪು ಎಳೆ ಎಳೆ ಸೂಕ್ಷ್ಮ ಎಳೆದಷ್ಟೂ
ರಾಗವಾಗುತ್ತಿವೆ ಭಾವದುನ್ಮೀಲನ.

ಸರಾಗ ಹಾಡುಬಾರದೇ, ಗೊಗ್ಗರು ದನಿ ಎಳೆದೆಳೆದು
ಉನ್ಮತ್ತಗೀತ ಗೀಚಿದಷ್ಟೂ ನೆನಪ ಸೆರೆ
ಆ ಈ ಶೀಪೆಗಳಲ್ಲಿ ಬಣ್ಣತೋರಿ,
ಕಣ್ಣು ಚಿವುಟುತ್ತಿರಲು, ಎತ್ತಿ ತುಟಿಗಿಟ್ಟು
ಸವಿಯಲಾರದ ದರಿದ್ರ ಭೀತಿ
ಒಳಗೆ.

ಸಾಕು, ಈ ಭೀತಿ ಬಿಟ್ಟೋಡಿ, ಎದೆಗಟ್ಟಿಸಿ
ತೋಳೆತ್ತಿ, ಭುಜಬಲ ಸಹಜ ಪರಾಕ್ರಮ
ನಟಿಸುವ ಹಟ ಹುಟ್ಟಿದಾಗಲೂ,
ಒಳಗೊಳಗೇ ಸಾಯುತ್ತಿವೆ ಅರೆಮರೆ:
ರಕ್ತಗೋಲಕ ಸಕಲ ಪ್ರಾಣಧಾತು.

ಎದೆಗುಂಡಿಗೆಗೆ ನೆಟ್ಟ ನಿಷ್ಪಾಪ ಮುಖದ,
ಮುಗ್ಧ ಕಣ್ಣಾಲಿಗಳ ತೀಕ್ಷ್ಣಬಾಣನೋಟ
ಕಿತ್ತೊಗೆದು ಹಾಯಾಗಿರಲಾರೆ;
ಕಣ್ಣಹನಿ ರಕ್ತವಾಗಿ ಸೋರಿತು:
ಪಶ್ಚಾತ್ತಾಪ-ದಗ್ಧತೆಯು ಸಹಜ ತೋರಿಕೆಗಾಗಿ.

ಅಂತೂ, ಒಲ್ಲೆನೆನ್ನಲೂ ಆರೆ; ಕರೆದರೂ ಸಂ-
ಭ್ರಮಿಸಿ ಬಳಿಸಾರಿ, ಒಣಮುಖವ ಮುದ್ದಿಸಲಾರೆ
ಕಣ್ಣಿಗಷ್ಟೇ ಈ ಹೂವು ಶೋಭಿಸಲಿ,
ಉನ್ಮತ್ತ ದುಂಬಿ ನಾ ಸ್ವೈರ ಹಾರಲಾರೆ.

ದುಂಬಿಗೂ,
ಹೂವಿಗೂ
ನಡುವೆ ಆತಂಕಗಾಳಿ ಒಂದೇ ಸಮ
ಬೀಸಿದಪ್ಪೂ ಸುರಕ್ಷಿತ:
ಈ ಪ್ರಾಣಿ–ವನಸ್ಪತಿ ಬದುಕು.

★ ಶ್ಯಾಮಸುಂದರ ಬಿದರಕುಂದಿ

ಕಾರ್ಮಿಕ ಸಮಸ್ಯೆಗಳ ಬಗೆಗೆ ಗಾಂಧೀಜಿಯವರ ವಿಚಾರಗಳು

ಮಹಾತ್ಮಾ ಗಾಂಧೀಜಿಯವರು ಭಾರತದ ರಾಜಕೀಯ ರಂಗದಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಅವರು ಮುಂದಿಟ್ಟ ಹೆಜ್ಜೆ ಅವರ ಮಾರ್ಗದರ್ಶನ, ಮತ್ತು ಸ್ಫೂರ್ತಿದಾಯಕ ಧುರೀಣತ್ವಗಳಿಗೆ ಭಾರತದ ಸ್ವಾತಂತ್ರ್ಯವು ಚಿರಋಣಿಯಾಗಿದೆ. ಅತ್ಯಂತ ಪ್ರಭಾವಶಾಲಿ ರಾಜಕೀಯ ಧುರಂಧರತೆಯೊಂದಿಗೆ ಸಮಾಜ ಸುಧಾರಕ, ಶಿಕ್ಷಣತಜ್ಞ, ಅರ್ಥಶಾಸ್ತ್ರಜ್ಞ, ದಾರ್ಶನಿಕ ಹಾಗೂ ಜನಸಾಮಾನ್ಯರ ವ್ಯಕ್ತಿ—ಇವೆಲ್ಲವುಗಳ ಅದ್ಭುತ ಸಂಗಮವೆನಿಸಿದ ಮಹಾ ವ್ಯಕ್ತಿಯಾಗಿದ್ದರು. ಅವರ ಕಾರ್ಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದಾಗ ಅವರು ಸ್ವದೇಶ-ಪರದೇಶಗಳಲ್ಲಿ ಭಾರತೀಯ ಕಾರ್ಮಿಕರಿಗೊಬ್ಬ ಆಪತ್ ರಕ್ಷಕರಾಗಿದ್ದರಲ್ಲದೆ ಭಾರತೀಯ ಪ್ರಪ್ರಥಮ ಕಾರ್ಮಿಕ ಧುರೀಣರೂ ಆಗಿದ್ದರೆಂಬುದನ್ನು ಸುಲಭವಾಗಿ ಅರಿತುಕೊಳ್ಳಬಹುದು.

ಕಾರ್ಮಿಕ ಸಮಸ್ಯೆಗಳ ಬಗೆಗೆ ಗಾಂಧೀಜಿಯವರು ಪ್ರಪ್ರಥಮವಾಗಿ ಆಸ್ಥೆವಹಿಸಿದ್ದನ್ನು ದಕ್ಷಿಣ ಆಫ್ರಿಕೆಯಲ್ಲಿಯ ಅವರ ಜೀವನ ಮತ್ತು ಕಾರ್ಯಗಳಿಂದ ಕಾಣಬಹುದಾಗಿದೆ. ಕೇವಲ ೨೩ ನೆಯ ವಯಸ್ಸಿನ ತರುಣರಿರುವಾಗಲೇ ಅವರಿಗೆ ದಕ್ಷಿಣ ಆಫ್ರಿಕೆಯ ಧಣಿಯೊಬ್ಬರಲ್ಲಿ ಜೀತದಾಳಾಗಿ ದುಡಿಯುತ್ತಿದ್ದ ಬಾಲಸುಂದರಮ್ ಎಂಬ ಕಕ್ಷಿಗಾರನೊಬ್ಬನ ಪರಿಚಯವಾಯಿತು. ಈ ಪರಿಚಯದಿಂದ ಅವರು ಕಾರ್ಮಿಕರ ಕಷ್ಟ-ಕಾರ್ಪಣ್ಯಗಳನ್ನು ವಿಶೇಷವಾಗಿ ಅರಿತುಕೊಂಡರು. ದಿನ ಕಳೆದಂತೆಲ್ಲ ಕಾರ್ಮಿಕರ ಮತ್ತು ಅವರ ಸಂಬಂಧವು ಬೆಳೆದು ಹೆಚ್ಚು ನಿಕಟವಾಗುತ್ತ ನಡೆಯಿತು. ಅವರು ಕಾರ್ಮಿಕರೊಂದಿಗೆ ಅವರಲ್ಲೊಬ್ಬರೆನ್ನುವಂತೆ ಬೆರೆತರು. ಕಾರ್ಮಿಕರನ್ನು ಅವರು " ಸಂಗಾತಿ ಕಾರ್ಮಿಕರೇ " ಎಂದು ಸಂಭೋಧಿಸಿದರು. ದಕ್ಷಿಣ ಆಫ್ರಿಕೆಯಲ್ಲಿನ ಭಾರತೀಯ ಜೀತದ ಕಾರ್ಮಿಕರ ಜೀವನ ಸುಧಾರಣೆಗಾಗಿ ಅವರು ಹೆಚ್ಚು ಕಾಲವನ್ನು ಮೀಸಲಾಗಿರಿಸಿದ್ದರು.

ಗಾಂಧೀಜಿಯವರು ಕ್ರಿ. ಶ. ೧೯೧೫ ರಲ್ಲಿ ಯಶಸ್ವಿ ಕಾರ್ಮಿಕ ಧುರೀಣರೆನ್ನಿಸಿ. ಪಾಶವೀ ಶೋಷಣೆಯ ವಿರುದ್ಧ ಅಹಿಂಸಾತ್ಮಕ ಯಶಸ್ವೀ ಹಾಗೂ ಪರಿಣಾಮಕಾರೀ ಸಂಪಿನ ಸಂಘಟಕರೆನ್ನಿಸಿ ದಕ್ಷಿಣ-ಆಫ್ರಿಕೆಯಿಂದ ಭಾರತಕ್ಕೆ ಮರಳಿದರು. ಸಾಬರಮತಿಯಲ್ಲಿ ಅವರು ಆಶ್ರಮವನ್ನು ಸ್ಥಾಪಿಸಿದರು. ಇಲ್ಲಿ ಅವರಿಗೆ ಅಹಮ್ಮದಾಬಾದಿನ ಕಾರ್ಮಿಕರೊಡನೆ ಸಂಪರ್ಕ ಬೆಳೆದು, ಕ್ರಿ. ಶ. ೧೯೧೮ ರಲ್ಲಿ ಅಹಮ್ಮದಾಬಾದ ಬಟ್ಟೆಯ ಗಿರಣಿಗಳ ಕಾರ್ಮಿಕರ ಸಂಘವನ್ನು ಸ್ಥಾಪಿಸಿದರು. ಈ ಸಂಘವು ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಬೆಳೆದು ಭಾರತದಲ್ಲಿಯೇ ಸೌಲಭ್ಯಪೂರ್ಣ ಸಂಘ

ಗಳಲ್ಲೊಂದೆನಿಸುವ ಸ್ಥಾನಕ್ಕೇರಿತು. ಗಾಂಧೀಜಿಯವರು ಚಾಣಾಕ್ಷತೆ ಹಾಗೂ ತೀಕ್ಷ್ಣ ದೃಷ್ಟಿಯ ಭವ್ಯ ಕರ್ತೃತ್ವ ಶಕ್ತಿಯನ್ನಿಟ್ಟುಕೊಂಡು ಕಾರ್ಮಿಕ ರಂಗವನ್ನು ಪ್ರವೇಶಿಸಿ, ಅಸದೃಶವಾದ ಧುರೀಣತ್ವದಿಂದ ಅನೇಕ ವರ್ಷಗಳವರೆಗೆ ಏಕಮೇವ ಪ್ರಭಾವಿ ವ್ಯಕ್ತಿಯಾಗಿದ್ದರು. ಔದ್ಯಮಿಕ ಸಂಬಂಧಗಳ ವಿಷಯದಲ್ಲಿ ಚಿರಸ್ಥಾಯೀ ಮೌಲ್ಯಗಳನ್ನು ಹೊಂದಿದ ನೂತನ ಮಾರ್ಗ ಹಾಗೂ ಸಾಧನಗಳನ್ನು ಕಲ್ಪಿಸಿದರು.

ಗಾಂಧೀಯುಗದ ತರುವಾಯ ಬದಲಾವಣೆ ಹಾಗೂ ಬೆಳವಣಿಗೆ ಹೆಚ್ಚಿದೆ. ಈ ತಾಂತ್ರಿಕ ಬದಲಾವಣೆಯು ಕಾರ್ಮಿಕ ಸಮಸ್ಯೆಗಳ ಪರಿಹಾರ ದಿಶೆಯನ್ನು ಬದಲಾಯಿಸಿದೆ. ಬದಲಾವಣೆಗಳು ಗಾಂಧೀಯವರ ವಿಚಾರವಾದಗಳಿಗೆ ಪೆಟ್ಟು ಹಾಕಿವೆ. ಗಾಂಧೀಯವರು ಅನುಸರಿಸಿದ ತಂತ್ರಗಳು ಆಧುನಿಕ ಪರಿಸ್ಥಿತಿಗಳಿಗೆ ಸಂಪೂರ್ಣವಾಗಿ ಅನ್ವಯವಾಗುವದಿಲ್ಲವಾದರೂ, ಶಾಶ್ವತ ಪರಿಣಾಮುಗಳನ್ನು ಬೀರುವಂತವುಗಳಾಗಿವೆ. ಬಹುಕಾಲದಿಂದ ಮಾರ್ಗದರ್ಶನ ಮತ್ತು ಸಮರ್ಥ ಧುರೀಣತ್ವಗಳ ಕೊರತೆಯಿಂದಾಗಿ ಕಗ್ಗತ್ತಲೆಯಲ್ಲಿದ್ದ ಕಾರ್ಮಿಕ ರಂಗಕ್ಕೆ ಗಾಂಧೀಜಿಯವರು ತಮ್ಮ ವಿಚಾರ ಮತ್ತು ಧುರೀಣತ್ವದಿಂದ ಪ್ರಕಾಶ ಬೀರಿ ಕಗ್ಗತ್ತಲೆಯನ್ನು ತೊಲಗಿಸಿದರು. ಅವರು ತೋರಿದ ಮಾರ್ಗದಲ್ಲಿ ಪರಸ್ಪರ ವಿರೋಧಾಭಾಸಕರವಾದ ಉಚ್ಚ ಆದರ್ಶ ಮತ್ತು ವಾಸ್ತವತೆಗಳ ಸಂಗಮವಿರುವದು ಅತ್ಯಂತ ಪ್ರಶಂಸಾರ್ಹ ಸಂಗತಿಯಾಗಿದೆ. ಅವರು ಔದ್ಯಮಿಕ ಸಂಬಂಧಗಳ ಕ್ಷೇತ್ರದಲ್ಲಿ ಮಧ್ಯಮಮಾರ್ಗವನ್ನು ಸೃಷ್ಟಿಸಿದರು. ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಶಾಹಿಗಳು ಹಾಗು ಕಾರ್ಮಿಕರು ನಿರ್ವಹಿಸುವ ಪಾತ್ರಗಳು ಪರಸ್ಪರ ಸಹಾಯಕಾರಿಯಾಗಿವೆ ಎಂಬುದನ್ನು ಯಾವೊಂದು ವರ್ಗವು ಇನ್ನೊಂದರ ವಿನಾಶದಿಂದ ಪ್ರಗತಿ ಹೊಂದಲಾರದೆಂಬುದನ್ನು ತೋರಿಸಿರುವದು ಅವರ ತೀಕ್ಷ್ಣ ಬುದ್ಧಿಮತ್ತೆಯ ಪ್ರತೀಕವಾಗಿದೆ.

ಕೂಲಿ ಕುಂಬಳಿಗಳನ್ನು ನಿಗದಿ ಹಾಗೂ ಕ್ರಮ ಪಡಿಸುವಿಕೆ, ಕಾರ್ಮಿಕ ಸಂಘಗಳ ಸಂಘಟನೆ ಹಾಗೂ ಅವುಗಳ ಕಾರ್ಯಗಳು, ಸಾಮೂಹಿಕ ಬೇಡಿಕೆ ಅವಶ್ಯಕತೆ ಹಾಗೂ ಅಪೇಕ್ಷಣೀಯತೆ. ಸಂಪುಗಳ ಉಪಯೋಗ ದುರುಪಯೋಗ, ಉದ್ದಿಮೆಗಳಲ್ಲಿ ಶಿಸ್ತು ಪಾಲನೆ, ಆಡಳಿತದಲ್ಲಿ ಕಾರ್ಮಿಕರ ಪಾತ್ರ, ಕಾರ್ಮಿಕರ ಸ್ಥಿತಿ ಗತಿ. ಅನುಷ್ಠಾನದಲ್ಲಿರುವ ಕಾರ್ಮಿಕ ಸಮಸ್ಯೆಗಳ ಬಗೆಗೆ ಗಾಂಧೀಜಿಯವರು ನಿರ್ದಿಷ್ಟವಾದ ವಿಚಾರಗಳನ್ನು ಹೊಂದಿದ್ದರು. ಅವರಿಗೆ ತಮ್ಮ ಈ ವಿಚಾರಗಳಲ್ಲಿ ತುಂಬಾ ವಿಶ್ವಾಸವಿದ್ದು, ಅವುಗಳನ್ನೆಲ್ಲಾ ಕಾರ್ಯಾಚರಣೆಯಲ್ಲಿಯೂ ತಂದರು. ಅವರು ತಮ್ಮ ವಿಚಾರಗಳನ್ನು ಅಹಮದಾಬಾದ ಟೆಕ್ಸಟೈಲ್ ಲೇಬರ ಅಸೋಸಿಯೇಶನ್‌ಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಅನುಷ್ಠಾನದಲ್ಲಿ ತಂದು, ಒರೆಗೆ ಹಚ್ಚಿ ಪರೀಕ್ಷಿಸುತ್ತಿದ್ದರು.

ಗಾಂಧೀಜಿಯವರ ಆದರ್ಶವಾದದ ಮೂಲತತ್ವಗಳಾದ ವ್ಯಕ್ತಿಗಳಲ್ಲಿ ವಿಶ್ವಾಸ, ಸಾಧನಗಳ ಪಾವಿತ್ರ್ಯತೆ, ದುಡಿಮೆಯ ಮಹತಿ, ಆರ್ಥಿಕ ಸಮತೆ, ಧರ್ಮ–ದರ್ಶಿತ್ವ ಹಾಗೂ ವಿಕೇಂದ್ರೀಕರಣಗಳು ಅನೇಕ ವಿಧದ ಕಾರ್ಮಿಕ ಸಮಸ್ಯೆಗಳ ಬಗೆಗೆ ಗಾಂಧೀ

ಜಿಯವರ ವಿಚಾರಗಳನ್ನು ರೂಪಿಸಿರುವವಲ್ಲದೆ ಅವುಗಳ ಪರಿಹಾರಮಾರ್ಗದ ಒಸ್ನೆಲೆಯನ್ನೂ ಒದಗಿಸುತ್ತವೆ. ಅವರು ಪ್ರತಿಪಾದಿಸುವ ಮಾನವ ಬದುಕಿನ ತತ್ವವು ಸತ್ಯ ಮತ್ತು ಅಹಿಂಸೆಗಳ ಭದ್ರ ಬುನಾದಿಯ ಮೇಲೆಯೇ ನಿಂತಿರುತ್ತದೆ. ಈ ಸತ್ಯ, ಅಹಿಂಸಾ ತತ್ವಗಳನ್ನೇ ಅವರು ಕಾರ್ಮಿಕ ರಂಗಕ್ಕೂ ಕೊಂಡೊಯ್ದು ಅವುಗಳಿಗೆ ವಿಶಿಷ್ಟ ಸ್ಥಾನವನ್ನು ಕೊಟ್ಟರು. ಕಾರ್ಮಿಕರು ಜೂಜುಗಾರಿಕೆ, ಕುಡಿತ ಹಾಗೂ ಹಿಂಸೆಗಳಲ್ಲಿ ಎಂದೂ ತೊಡಗಬಾರದೆಂದು ಆಗ್ರಹಪೂರ್ವಕವಾಗಿ ಬೋಧಿಸಿದರು. ಶ್ರಮದ-ಘನತೆ, ಮತ್ತು ಮಹತ್ವದ ಬಗೆಗೆ ಅವರು ಯಾವಾಗಲೂ ಒತ್ತಿ ಹೇಳುತ್ತಿದ್ದರು. ಈ ಒಸ್ನೆಲೆಯಲ್ಲಿ ಕಾರ್ಮಿಕ ಸಮಸ್ಯೆಗಳ ಬಗೆಗೆ ಅವರು ವ್ಯಕ್ತಪಡಿಸಿದ ವಿಚಾರಗಳ ಮೌಲ್ಯಮಾಪನ ಮಾಡಬೇಕು.

ಕಾರ್ಮಿಕರ ಭರತಿ ಹಾಗೂ ಕಾರ್ಯ ಸ್ಥಿತಿ-ಗತಿ

ಗಾಂಧೀಜಿಯವರು ಕಾರ್ಮಿಕ ಸಂಘಟನಾ ಪದ್ಧತಿಯಲ್ಲಿ ವಿಶ್ವಾಸವಿಟ್ಟಿದ್ದರು. "ಎರಡೂ ಪಕ್ಷಗಳಿಗೆ ಸಮ್ಮತವಾದ ಗಿರಣಿಯು ಕೆಲಸಗಾರರ ಒಂದು ನೊಂದಿನ ಪುಸ್ತಕವನ್ನು ಇಡತಕ್ಕದ್ದು. ಮತ್ತು ಪ್ರಾತಿನಿಧಿಕ ಸಂಘವನ್ನು ಹೊರತುಪಡಿಸಿ ಇನ್ನಾವುದೇ ಮುಖಾಂತರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ರೂಢಿಯನ್ನು ತೆಗೆಯಬೇಕು......"ಎಂದು ಅವರು ಕೆಲಸಗಾರರನ್ನು ಗಿರಣಿಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ನೀತಿಯ ಬಗೆಗೆ ಹೇಳಿದ್ದರು. ಅವರು ಮಧ್ಯವರ್ತಿಗಳ ಮುಖಾಂತರವಾಗಿ ಕಾರ್ಮಿಕರನ್ನು ಕೆಲಸಕ್ಕೆ ಭರ್ತಿ ಮಾಡಿಕೊಳ್ಳುವದನ್ನು ತೀವ್ರವಾಗಿ ವಿರೋಧಿಸಿದರು. ಯಾಕೆಂದರೆ ಕಾರ್ಮಿಕ ಪೇಟೆಗಳಲ್ಲಿ ಮಧ್ಯವರ್ತಿಗಳ ಪ್ರವೇಶದಿಂದ ಕಾರ್ಮಿಕ-ಮಾಲಿಕರ ಪರಸ್ಪರ ಸಂಬಂಧಕ್ಕೆ ಮತ್ತು ಒಪ್ಪಂದದ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವವೆಂದು ಅವರು ನಂಬಿದ್ದರು.

ಗಾಂಧೀಜಿಯವರು ಗಿರಣಿಗಳಲ್ಲಿ ನೌಕರಿಗೆ ಭರ್ತಿಮಾಡಿಕೊಳ್ಳಲಾಗುವ ಚಿಕ್ಕ ಮಕ್ಕಳ ವಯೋಮಿತಿಯನ್ನು ಏರಿಸುವದನ್ನು ಸಮರ್ಥಿಸಿದರು. ಅವರು "ಈ ಬಗೆಗೆ ಚಿಕ್ಕ ಮಕ್ಕಳನ್ನು ಶಾಲೆಗಳಿಂದ ಬಿಡಿಸಿ ಅವರನ್ನು ಕೂಲಿಯ ಸಲುವಾಗಿ ದುಡಿಯಲು ಹಚ್ಚುವದು ರಾಷ್ಟ್ರೀಯ ಅವನತಿಯ ಲಕ್ಷಣವಾಗಿದೆ ; ಯಾವದೇ ಗೌರವಸ್ಥ ರಾಷ್ಟ್ರವು ಮಕ್ಕಳನ್ನು ಹೀಗೆ ದುರುಪಯೋಗಪಡಿಸಿಕೊಳ್ಳುವದನ್ನು ಸಹಿಸಲು ಸಾಧ್ಯವಿಲ್ಲ. ಮಕ್ಕಳನ್ನು ಕನಿಷ್ಟ ೧೬ ವರ್ಷಗಳ ವರೆಗೆ ಶಾಲೆಗೆ ಕಳಿಸಬೇಕು." ಎಂದು ಅಭಿಪ್ರಾಯ ಪಟ್ಟಿದ್ದರು.

"ಹೆಚ್ಚು ಗಂಟೆಗಳವರೆಗೆ ಕೆಲಸ ಮಾಡಬೇಕಾದ ಕಾರ್ಮಿಕರು ಮಾನಸಿಕ ಹಾಗೂ ನೈತಿಕ ಗುಣಗಳನ್ನು ಉರ್ಜಿತಗೊಳಿಸಿಕೊಳ್ಳಲು ಸಮಯ ದೊರೆಯದಿರುವದರಿಂದ ಅವರ ಪರಿಸ್ಥಿತಿ ಪಾಶವೀ ಮಟ್ಟಕ್ಕೆ ಇಳಿದರೆ ಯಾರೂ ಅಚ್ಚರಿಪಡಬೇಕಾಗಿಲ್ಲ." ಎಂದು ಗಾಂಧೀಜಿಯವರು ಕಾರ್ಮಿಕರ ಕೆಲಸದ ವೇಳೆಯನ್ನು ಕಡಿಮೆಗೊಳಿಸುವ ಬಗೆಗೆ ಪ್ರತಿಪಾದಿಸಿದರು.

ಮಿತಿಮೀರಿದ ಕೆಲಸ, ಧೂಳ ಮತ್ತು ಮಲಿನತೆಗಳ ವಿರುದ್ಧ ಕೈಕೊಳ್ಳ ಬೇಕಾದ ಸುರಕ್ಷತಾ-ಕ್ರಮಗಳ ಕೊರತೆಗಳ ವಿರೋಧವಾಗಿಯೂ ಗಾಂಧೀಜಿಯವರು ಸಾಕಷ್ಟು ಹೇಳಿದ್ದಾರೆ.

ಔದ್ಯಮಿಕ ಸಂಬಂಧಗಳು– ಕಾರ್ಮಿಕರ ಹಾಗೂ ಆಡಳಿತ ವರ್ಗದ ಸಂಬಂಧವು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಪ್ರಬಲ ಉತ್ತೇಜನಕಾರಿಯಾಗಿ ಪರಿಣಮಿಸಬಹುದು. ಅಥವಾ ಅದು ಆರ್ಥಿಕ ಹಾಗೂ ಸಾಮಾಜಿಕ ಅವನತಿಗೆ ಮುಖ್ಯ ಕಾರಣವಾಗಿಯೂ ಪರಿಣಮಿಸಬಹುದು. ಔದ್ಯಮಿಕ ಶಾಂತಿಯು ಕೇವಲ ಔದ್ಯಮಿಕ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಅವಶ್ಯವಾಗಿದೆಯಲ್ಲದೆ, ಕಾರ್ಮಿಕರ ಕಾರ್ಯಸ್ಥಿತಿಗತಿಗಳ ಮತ್ತು ಕೂಲಿ ಕುಂಬಳಿಗಳ ಸುಧಾರಣೆಗೂ ಅತ್ಯವಶ್ಯವೆಂದು ಗಾಂಧೀಜಿಯವರು ಮನಗಂಡಿದ್ದರು. ಅವರ ಅಭಿಪ್ರಾಯದಲ್ಲಿ ಉದ್ದಿಮೆಯು ಮುಖ್ಯವಾಗಿ ಸಹಕಾರಿ ಸಹ ಪ್ರವರ್ತನೆ ಹಾಗೂ ಸಮಸ್ಥಾನಮಾನ, ಅನ್ಯೋನ್ಯತೆಗಳಿಂದ ಕೂಡಿದೆ. ಉದ್ದಿಮೆಯಲ್ಲಿ ಎರಡೂ ಪಕ್ಷಗಳು ಪ್ರಾಮಾಣಿಕ ಹಾಗೂ ಬಿಚ್ಚು ಮನಸ್ಸಿನಿಂದ ಬೆರೆತು ಕಾರ್ಯ ಮಾಡಬೇಕಾದುದು ಅಪೇಕ್ಷಣೀಯವಾಗಿರುತ್ತದೆ. ಈ ಎರಡೂ ವರ್ಗಗಳಿಗೂ ಸಾಮಾನ್ಯವಾಗಿರುವ ಈ ಪ್ರಯತ್ನದಲ್ಲಿ ಸರಕಾರವು ಉಪಯುಕ್ತ ರೀತಿಯಲ್ಲಿ ಸಹಕಾರ ನೀಡಬೇಕೆಂದು ಅವರ ಅಭಿಪ್ರಾಯ.

ಬೃಹತ್ ಉದ್ದಿಮೆಗಳಲ್ಲಿ ವಾರ್ಷಿಕೋತ್ಸವ, ಧಾರ್ಮಿಕ ಹಾಗೂ ಸಾಮಾಜಿಕ ಸಮಾರಂಭಗಳು ಈ ಪಕ್ಷಗಳಲ್ಲಿ ಸಮುಕ್ಷಯತೆಯನ್ನು ಬೆರೆಸಿ ಪರಸ್ಪರರಲ್ಲಿರುವ ನಿರಾಳೆ. ಕೋಪ, ಪ್ರತಿರೋಧ ಮತ್ತು ಹಿಂಸಾಭಾವನೆಗಳನ್ನು ಕಡಿಮೆಗೊಳಿಸಿ ಸದ್ಭಾವನೆಯನ್ನುಂಟುಮಾಡುವಲ್ಲಿ ಸಹಕಾರಿಯಾಗಿರುತ್ತವೆ. ವಿವಾದಾಸ್ಪದ ಪ್ರಶ್ನೆಗಳನ್ನು ನಿಷ್ಪಕ್ಷಪಾತದಿಂದ ನೋಡುವಲ್ಲಿ ಈ ಕ್ರಮಗಳು ಸಹಕಾರಿಯಾಗುತ್ತವೆ. ಸ್ವತಂತ್ರ ಪಂಚಾಯತಿ ಅಥವಾ ನಿರ್ಣಯಕಾರನಿಗೆ ವಿವಾದಾಸ್ಪದ ಪ್ರಶ್ನೆಗಳನ್ನು ವಿಚಾರಣೆಗೆ ಒಳಪಡಿಸಿದರೆ ವಿವಾದಕ್ಕೊಳಗಾದ ಕಲುಷಿತ ವಾತಾವರಣವು ತಿಳಿಯಾಗಿ ಸಮಸ್ಯೆಯ ನಿಜವಾದ ಅಂಶವು ಹೊರಬೀಳುವದು. ಎರಡೂ ಪಕ್ಷಗಳು ಬಾಹ್ಯ ಭಾವೋದ್ರೇಕಗಳಿಂದ ವಿಮುಕ್ತರಾಗಿ, ವಿವಾದಾಸ್ಪದ ಸಮಸ್ಯೆಯನ್ನು ಹೆಚ್ಚು ವಾಸ್ತವಿಕ ದೃಷ್ಟಿಯಿಂದ ಹಾಗೂ ಸಂಯಮದಿಂದ ಪರೀಕ್ಷಿಸಲು ಸಾಧ್ಯವಾಗುವದು. ಸಾಮೂಹಿಕ ಚೌಕಸಿ ಮತ್ತು ಒಪ್ಪಂದಗಳು ಔದ್ಯಮಿಕ ತಂಟೆಗಳನ್ನು ಬಗೆಹರಿಸುವಲ್ಲಿ ಅತ್ಯಂತ ಶ್ರೇಷ್ಠ ಹಾಗೂ ಪರಿಣಾಮಕಾರಿ ಪದ್ಧತಿಗಳಾಗಿವೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಔದ್ಯಮಿಕ ಸಂಬಂಧಗಳ ಸಮಸ್ಯೆಗಳನ್ನು ಗಾಂಧೀಜಿಯವರು ಏಕತ್ರ ಕುಟುಂಬದ ಸಮಸ್ಯೆಗಳಿಗೆ ಹೋಲಿಸಿದರು. ಔದ್ಯಮಿಕ ರಂಗದಲ್ಲಿ ಕಾರ್ಮಿಕವರ್ಗ, ಆಡಳಿತ ವರ್ಗ ಹಾಗೂ ಸಮಾಜ, ಏಕತ್ರ ಕುಟುಂಬದ ಸಮಸ್ಯೆಗಳಿಗೆ ನ್ಯಾಯಬದ್ಧ ಹಾಗೂ ತರ್ಕಸಮ್ಮತವಾದ ಪರಿಹಾರಗಳನ್ನು ಯಜಮಾನನು ಬಲಪ್ರಯೋಗವಿಲ್ಲದೆ ಕಂಡುಹಿಡಿ

ಯಲು ಸಾಧ್ಯವಿರುವದೆಂದು ನಾವು ಒಪ್ಪಿದಲ್ಲಿ ಕಾರ್ಮಿಕ-ಮಾಲಿಕರ ಸಂಬಂಧಗಳಲ್ಲಿ ಬಲಪ್ರಯೋಗವು ಅನಾವಶ್ಯಕವಷ್ಟೇ ಅಲ್ಲ ನೈತಿಕವಾಗಿಯೂ ತಪ್ಪು ಎಂಬುದನ್ನು ತಿಳಿಯಬಹುದು.

ಸಂಪುಗಳು: ಸಾಮಾಜಿಕ ಹಾಗು ರಾಜಕೀಯ ಸ್ಥಿತ್ಯಂತರಗಳನ್ನು ಮಾಡುವಲ್ಲಿ ಸತ್ಯಾಗ್ರಹವು ಅಹಿಂಸಾತ್ಮಕ ಸಾಧನವಾಗಿದ್ದಂತೆ ಔದ್ಯಮಿಕ ರಂಗದಲ್ಲಿ ಸಂಪು ಇದರದೇ ಪ್ರತಿರೂಪವಾಗಿದೆ. ಆದ್ದರಿಂದ ಗಾಂಧೀಜಿಯವರು ಸಂಪು ಮಾಡುವ ಹಕ್ಕನ್ನು ಎಂದೂ ಅಲ್ಲಗಳೆಯಲಿಲ್ಲ. ಆದರೆ ಇದು ಕಾರ್ಮಿಕರ ಕಟ್ಟಕಡೆಯ ಅಸ್ತ್ರವನ್ನಾಗಿ ಮಾತ್ರ ಉಪಯೋಗಿಸಬೇಕೆಂದೂ ಸಾಧ್ಯವಾದ ಮಟ್ಟಿಗೆ ಸಂಧಾನ ಹಾಗೂ ಪಂಚಾಯತಿಯಂತಹ ಎಲ್ಲ ಶಾಂತಿಯುತ ಮತ್ತು ಘಟನಾಬದ್ಧವಾದ ಮಾರ್ಗಗಳು ವಿಫಲವೆನಿಸಿದಾಗ ಮಾತ್ರ ಸಂಪಿನ ಮೊರೆ ಹೋಗಬೇಕೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಸಂಪು ನಡೆದ ಕಾಲದಲ್ಲಿಯೂ ಕಾರ್ಮಿಕರು ನ್ಯಾಯವಾದ ಒಪ್ಪಂದಕ್ಕೆ ಅಥವಾ ಪಂಚಾಯತಿಗೊಪ್ಪಿಸುವುದಕ್ಕೆ ಸಿದ್ಧರಿರಬೇಕು. ಗಾಂಧೀಜಿಯವರು ಸಂಪುಗಳ ಯಶಸ್ಸಿಗೆ ಈ ಕೆಳಗಿನ ಕಟ್ಟಳೆಗಳನ್ನು ಹಾಕಿದ್ದಾರೆ; ಸಂಪಿನ ಕಾರಣವು ನ್ಯಾಯಸಮ್ಮತವಾಗಿರತಕ್ಕದ್ದು. ಅವರು ಎಂದೂ ಹಿಂಸಾಕೃತಿಗಿಳಿಯತಕ್ಕದ್ದಲ್ಲ. ಸಂಪುಗಳಲ್ಲಿ ಭಾಗಿಯಾಗದ ಕಾರ್ಮಿಕರನ್ನು ಪೀಡಿಸತಕ್ಕದ್ದಲ್ಲ. ಸಾರ್ವಜನಿಕ ವಂತಿಗೆ ಅಥವಾ ಸಂಘದ ನಿಧಿಯ ಮೇಲೆ ಅವಲಂಬಿಸತಕ್ಕದ್ದಲ್ಲ. ಸಂಪಿನ ಅವಧಿಯಲ್ಲಿ ಜೀವನ ನಿರ್ವಹಣೆಗಾಗಿ ತಾತ್ಪೂರ್ತಿಕ ಉದ್ಯೋಗದಲ್ಲಿ ತೊಡಗಿರತಕ್ಕದ್ದು. ಸಂಪು ನಿಲ್ಲುವ ವರೆಗೂ ಅವರು ಅಚಲರಾಗಿರತಕ್ಕದ್ದು. ಸಂಪುಗಾರರ ಬದಲಾಗಿ ನೇಮಿಸಲು ಸಾಕಷ್ಟು ಕಾರ್ಮಿಕರು ಲಭ್ಯವಿರುವಾಗ ಸಂಪು ಹೂಡುವದು ಫಲಕಾರಿಯಾಗಲಾರದು. ಅಂತಹ ಪರಿಸ್ಥಿತಿಗಳಲ್ಲಿ ರಾಜೀನಾಮೆಯೊಂದೆ ಮಾರ್ಗ. ಸಂಘದ ಸಮ್ಮತಿ ಪಡೆಯದೇ ಸಂಪುಹೂಡತಕ್ಕದ್ದಲ್ಲ. ಸಂಪು ಹೂಡುವ ಮುನ್ನ ತಮ್ಮ ಕನಿಷ್ಟ ಬೇಡಿಕೆಗಳನ್ನು ಘೋಷಿಸತಕ್ಕದ್ದು. ಸಂಪುಗಾರರು ಶ್ರೇಷ್ಠ ಧುರೀಣತ್ವವನ್ನು ಹೊಂದಿರಬೇಕು. ಪೂರ್ಣ ಜ್ಞಾನವಿಲ್ಲದೆ ಯಾವದೆ ಉದಾಹರಣೆಗಳ ಅನುಕರಣೆಮಾಡಕೂಡದು.

ಸಂಪುಗಳಲ್ಲಿ ಗುಂಡಾಗಿರಿಗೆ ಅಥವಾ ಕೊಳ್ಳೆ ಹೊಡೆಯುವದಕ್ಕೆ, ಭಯಾನಕ ಹಾಗೂ ಬೆಂಕಿ ಇಡುವಂತಹ ಕೃತಿಗಳಿಗೆ ಸ್ಥಾನವಿಲ್ಲವೆಂಬುದನ್ನು ಈ ಕಟ್ಟಳೆಗಳಿಂದ ಕಾಣಬಹುದಾಗಿದೆ. ಅಸಹಾನುಭೂತಿಪರ ಸಂಪುಗಳಿಗೆ ಗಾಂಧೀಜಿಯವರು ವಿರೋಧವಾಗಿದ್ದರು. ಅದರಂತೆ ಸಾರ್ವಜನಿಕ ಉಪಯುಕ್ತತೆಗಳ ರಂಗದಲ್ಲಿ ನಡೆಯುವ ಸಂಪುಗಳಿಗೆ ಸಹ ಅವರು ವಿರೋಧ ವ್ಯಕ್ತಪಡಿಸಿದ್ದರು. ಧ್ಯೇಯಸಾಧನೆಗಳಿಗಾಗಿ ಪರಿಶುದ್ಧತೆ, ಪ್ರಾಮಾಣಿಕತೆ, ಸದ್ವರ್ತನೆ. ಕಷ್ಟಸಹಿಷ್ಣುತೆಗಳು ಅವಶ್ಯವೆಂದು ಗಾಂಧೀಜಿಯವರು ಬೋಧಿಸಿದರು. ಪರಿಶ್ರಮಪೂರ್ಣ ದುಡಿಮೆಯನ್ನುಳಿದು ಯಾವದೇ ಮಾರ್ಗದಿಂದ ಕಾರ್ಮಿಕರು ತಮ್ಮ ಆರ್ಥಿಕ ಉತ್ಕರ್ಷ ಸಾಧಿಸಲಾರರು. ಆದ್ದರಿಂದ ಆರ್ಥಿಕ ಸುಧಾರಣೆ

ಹಾಗೂ ರಾಜಕೀಯ ಉದ್ದೇಶಗಳಿಗಾಗಿ ಹೂಡುವ ಸಂಪುಗಳು ಅನ್ಯಾಯಯುತ, ವ್ಯರ್ಥ, ಅಮಾನುಷ, ಕಪಟ ಹಾಗೂ ಸಮಾಜಘಾತುಕ ಕೃತಿಗಳಿಂದ ಕೂಡಿರುವುದರಿಂದ ಅವುಗಳನ್ನು ಗಾಂಧೀಜಿಯವರು ಖಂಡಿಸಿದರು.

ಗಾಂಧೀಜಿಯವರು ಈ ತತ್ವಗಳನ್ನು ಬೋಧಿಸಿದರಷ್ಟೇ ಅಲ್ಲದೆ ಅವುಗಳನ್ನು ಅನೇಕ ಸಮಯಗಳಲ್ಲಿ ಅನುಷ್ಠಾನದಲ್ಲಿಯೂ ತಂದರು. ಔದ್ಯಮಿಕರಂಗಕ್ಕೆ ಅನಿರ್ಬಂಧ ರೋಗವಂತಿರುವ ಸಂಪುಗಳಿಗೆ ಗಾಂಧೀಜಿಯವರು ರೂಪಿಸಿರುವ ಔದ್ಯಮಿಕ ಸ್ವರ್ಗದಲ್ಲಿ ಸ್ಥಾನವಿಲ್ಲೆಂಬುದನ್ನು ಕಾಣಬಹುದಾಗಿದೆ. ಪಂಚಾಯತಿ ತತ್ವವು ಪೂರ್ಣವೃದ್ಧಿಯಾದಾಗ ಸಂಪುಗಳಿಗೆ ಅವಕಾಶವೇ ಇಲ್ಲದಂತಾಗುವದೆಂದು ಅವರ ಅಭಿಪ್ರಾಯ.

ಆದರೆ ಗಾಂಧೀಜಿಯವರು ಸಂಪುಗಳ ಯಶಸ್ಸಿಗೆ ಹಾಕಿದ ಪೂರ್ವಭಾವಿ ಕರಾರುಗಳು ಈಡೇರದೆಯೇ ಅನೇಕ ಸಂಪುಗಳು ಯಶಸ್ವೀಯಾಗಿರುವದನ್ನು ಕಾಣುತ್ತೇವೆ. ಇಂತಹ ಸಂಪುಗಳ ಯಶಸ್ಸಿಗೆ ಒಡೆಯರ ದುರ್ಬಲತೆ ಮತ್ತು ಅಪರಾಧಿ ಮನೋವೃತ್ತಿಯೇ ಕಾರಣವೆಂದು ಕೂಲಂಕಷವಾಗಿ ಅಭ್ಯಾಸಿಸಿದಲ್ಲಿ ಕಾಣಬಹುದಾಗಿದೆ.

ಕಾರ್ಮಿಕ ಶಿಸ್ತು– ಗಾಂಧೀಜಿಯವರು ಶಿಸ್ತಿನ ಸಂಕೇತದಂತಿದ್ದರು. ಅವರು ಇಡೀ ಸಮಾಜವನ್ನೇ ಶಿಸ್ತಿನ ಮಾರ್ಗದಲ್ಲಿ ಪರಿವರ್ತಿಸುವ ಇಚ್ಛೆಯುಳ್ಳವರಾಗಿದ್ದರು. ಸಮಾಜವನ್ನು ಈ ಸುಮಾರ್ಗಕ್ಕೆ ಪರಿವರ್ತಿಸಲು ಸಮಾಜದ ಪ್ರತಿಯೊಬ್ಬನೂ ಸ್ವನಿರ್ಬಂಧನೆ, ಸ್ವಶಿಸ್ತು, ಸ್ವಪ್ರೇರಿತ, ಸರಳತೆಗಳಿಂದ ನಡೆಯಬೇಕು. ಅಂದರೆ ಮಾತ್ರ ಪರಸ್ಪರ ವಿಶ್ವಾಸವನ್ನು ಗಳಿಸಲು ಸಾಧ್ಯವಾಗಿ ಸಮಾಜದ ಸುವ್ಯವಸ್ಥೆಗೆ ಕಾರ್ಯ ಮಾಡಲು ಅನುಕೂಲವಾಗುವದು.

ಕಾರ್ಮಿಕರ ಅಸಂತೃಪ್ತಿಗಳಿಗೆ ಅನೇಕ ಸಂಕೀರ್ಣ ಕಾರಣಗಳಿವೆಯೆಂದು ಗಾಂಧೀಜಿಯವರು ಅರಿತಿದ್ದರು. ಈ ಸಂಕಷ್ಟ, ಅಸಂತೃಪ್ತಿಗಳ ಪರಿಹಾರಕ್ಕೆ ಕಾರ್ಮಿಕರು ಹಿಂಸೆ ಹಾಗೂ ಅಶಿಸ್ತಿನ ಮಾರ್ಗವನ್ನು ಅನುಸರಿಸುವದಕ್ಕೆ ಅವರು ವಿರೋಧವಾಗಿದ್ದರು. ಪ್ರತಿಯೊಂದು ಸಮಸ್ಯೆಯನ್ನು ಅತ್ಯಂತ ಜಾಗರೂಕತೆ ಹಾಗೂ ಸಂಯಮತೆಯಿಂದ ಕಾಣತಕ್ಕದ್ದು. ಯಾಕಂದರೆ ಹಿಂಸಾತ್ಮಕ ಕ್ರಮಗಳಿಂದ ಸಂಪೂರ್ಣ ವಾತಾವರಣವೇ ಕಲುಷಿತವಾಗುವದು. ಉತ್ಪಾದನಾ ಕಾರ್ಯದಲ್ಲಿ ಕಾರ್ಮಿಕ ಹಾಗೂ ಮಾಲಿಕರ ಪಾತ್ರಗಳು ಪರಸ್ಪರ ಸಹಕಾರಿಯಾಗಿವೆ. ಆದ್ದರಿಂದ ಅವರು ಒಂದೇ ಕುಟುಂಬದ ಸದಸ್ಯರಂತೆ ತಮ್ಮ ಸಮಸ್ಯೆಗಳಿಗೆ ಸಹಕಾರಿ ಭಾವನೆಯಿಂದ ಮಾರ್ಗ ಕಂಡುಕೊಳ್ಳಬೇಕು. ಈ ಈರ್ವರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರುವದು ಸ್ವಾಭಾವಿಕ. ಆದರೆ ಅವುಗಳನ್ನು ವಾತ್ಸಲ್ಯಭಾವನೆಯಿಂದ ಬಗೆಹರಿಸಿಕೊಳ್ಳಬೇಕು. ಈ ಭಾವನೆಯು ಅಶಿಸ್ತನ್ನು ಎಷ್ಟೋ ಮಟ್ಟಿಗೆ ಕಡಿಮೆಮಾಡುವದು. ಕಾರ್ಮಿಕರ ಪ್ರತಿಷ್ಠೆಯು ಅವರ ಸಂಖ್ಯಾ ಬಲದಲ್ಲಿದೆ. ಆದರೆ ಅವರು ಶಿಸ್ತಿನಿಂದಿರದಿದ್ದರೆ ಕೇವಲ ಅವರ ಸಂಖ್ಯಾಬಲವಷ್ಟೇ ಗಣನಾರ್ಹವಾಗಲಾರದು.

ಗಾಂಧೀಜಿಯವರು ಕಾರ್ಮಿಕರು ತಮ್ಮ ಕರ್ತವ್ಯಪಾಲನೆ ಮಾಡಬೇಕೆಂದೂ, ನಂತರ ತಮ್ಮ ಹಕ್ಕುಗಳಿಗೆ ಆಗ್ರಹಪಡಬೇಕೆಂದೂ ಉಪದೇಶಿಸಿದರು. ತಮ್ಮ ಹಕ್ಕುಗಳಿಗಾಗಿ ಪ್ರತಿಯೊಬ್ಬನೂ ಆಗ್ರಹವಾಡದೇ ತಮ್ಮತಮ್ಮ ಕರ್ತವ್ಯ ನಿರ್ವಹಿಸಿದಲ್ಲಿ ಮಾನವ ಜನಾಂಗದಲ್ಲಿ ಸುವ್ಯವಸ್ಥೆಯು ಸ್ಥಾಪಿತವಾಗುವದು. ಜವಾಬ್ದಾರಿಯಿಂದ ನಿರ್ವಹಿಸಲ್ಪಟ್ಟ ಕರ್ತವ್ಯಗಳಿಂದ ನೇರವಾಗಿ ಒದಗಬಾರದ ಹಕ್ಕುಗಳು ಪಡೆಯಲನರ್ಹವಾದವುಗಳು. ಶ್ರೀ ದೀಪಕ್ ಘೋಷ್ ಅವರು, "ಕಾರ್ಮಿಕರು ಹಾಗೂ ಒಡೆಯರ ಮಾನಸಿಕ ಮೇರೆಗಳ ಈ ಪರಿವರ್ತನೆಯೂ ಗಾಂಧೀಜಿಯವರ ಉನ್ನತ ನೈತಿಕ ಕಲ್ಪನೆಗಳ ಮಟ್ಟಕ್ಕೆ ಬೇಗನೇ ತಲಪುವದು ಪ್ರಸ್ತುತ ಭಾರತೀಯ ಪರಿಸ್ಥಿತಿಯಲ್ಲಿ ಅಸಾಧ್ಯವಾಗಿದೆ. ಅದಕ್ಕಾಗಿ ಮಾನಸಿಕ ರಚನೆಯಲ್ಲಿ ಕ್ರಮೇಣ ಕ್ರಾಂತಿಕಾರಿ ಪ್ರತಿಕ್ರಿಯೆ ನಡೆಯಬೇಕಾಗಿದೆ. ಆರ್ಥಿಕ ಹಿಂದುಳಿಕೆಯಂತಹ ಎಡರುಗಳನ್ನು ದಾಟಬೇಕಾದುದು ಮೊದಲು ಅವಶ್ಯ. ಕೇವಲ ಕಾರ್ಮಿಕರಿಗಷ್ಟೇ ಏಕೆ ? ಸಮಸ್ಯೆಗಳ ಪರಿಹಾರಕ್ಕಾಗಿ ಗಾಂಧೀಜಿಯವರ ಶಿಸ್ತುಪೂರ್ಣ ಮಾರ್ಗವು ಭಾರತೀಯರೆಲ್ಲರಿಗೂ ಒಂದು ಆದರ್ಶಪಾಠವಾಗಿದೆ. ಇದನ್ನು ಎಲ್ಲರೂ ಶ್ರದ್ಧೆಯಿಂದ ತಕ್ಷಣ ಅನುಸರಿಸದೇ ಹೋದರೆ ರಾಷ್ಟ್ರೀಯ ಐಕ್ಯತೆಗೇನೆ ಗಂಡಾಂತರ" ಎಂದು ಹೇಳಿದ್ದಾರೆ.

ಕಾರ್ಮಿಕ ಸಂಘ– ಕೇವಲ ಕೂಲಿಯ ಮಟ್ಟಗಳನ್ನು ಹೆಚ್ಚಿಸಿಕೊಳ್ಳುವ ಮಟ್ಟಿಗೆ ಮಾತ್ರ ಕಾರ್ಮಿಕ ಸಂಘಗಳ ಚಟುವಟಿಕೆಗಳು ಸೀಮಿತವಾಗಿರಬಾರದು. ಕಾರ್ಮಿಕ ಜೀವನದ ವಿವಿಧಮುಖಗಳಲ್ಲಿಯೂ ಈ ಸಂಘಗಳು ಕಾರ್ಯಪ್ರವೃತ್ತವಾಗಬೇಕೆಂದು ಗಾಂಧೀಜಿಯವರ ಅಭಿಪ್ರಾಯ. ಕಾರ್ಮಿಕ ಸಂಘಗಳು ಉದ್ದಿಮೆಯ ಸಮಾಜದಲ್ಲಿ ವಹಿಸಬೇಕಾದ ಪಾತ್ರ ಅತಿ ಮಹತ್ವದ್ದಾಗಿದೆ. ಗಾಂಧೀಜಿಯವರ ಮೇಲಿ ಕಾರ್ಮಿಕ ಸಂಘಗಳು ನಿರ್ವಹಿಸಬೇಕಾದ ಕಾರ್ಯಗಳು ಇಂತಿವೆ : ಸದಸ್ಯರ ಹಕ್ಕು ಹಾಗೂ ಹಿತಾಸಕ್ತಿಗಳನ್ನು ರಕ್ಷಿಸುವದು ಸದಸ್ಯರನ್ನು ಜವಾಬ್ದಾರಿ ನಾಗರಿಕರನ್ನಾಗಿ ರೂಪಿಸುವದು. ಪರಸ್ಪರ ಆಲೋಚನೆ, ಸಂಧಾನ ಮತ್ತು ಪಂಚಾಯತಿಗಳ ಮುಖಾಂತರ ಔದ್ಯಮಿಕ ತಂಟೆಗಳನ್ನು ಬಗೆಹರಿಸುವದು. ಸಂಧಾನ, ಪಂಚಾಯತಿ ಮುಂತಾದವುಗಳನ್ನು ಮಾಲಿಕರು ನಿರಾಕರಿಸಿದರೆ ಕಾರ್ಮಿಕರನ್ನು ಸಂಪು ಹೂಡಲಿಕ್ಕೆ ಸಿದ್ಧಗೊಳಿಸುವದು. ಕಾರ್ಮಿಕರ ಸರ್ವತೋಮುಖ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಕೊಳ್ಳುವದು. ಉದ್ದಿಮೆಗಳು ಸಮಾಜದ ಆವಶ್ಯಕತೆಗಳನ್ನು ಪೂರೈಸುವಂತೆಯೂ ಮತ್ತು ಕೆಲಸಗಾರರು ಹಾಗೂ ಬಂಡವಾಳಸ್ಥರು ಸಹಭಾಗಿಗಳೆಂದು ಕಾರ್ಯಮಾಡುವಂತೆ ನೋಡಿಕೊಳ್ಳುವದು. ಕಾರ್ಮಿಕರಿಗೆ ಮುಖ್ಯ ಉದ್ಯೋಗದೊಂದಿಗೆ ಉಪ ಉದ್ಯೋಗದಲ್ಲಿ ತರಬೇತಿ ಕೊಡುವುದು. ಇವೇ ಮುಂತಾದ ಕಾರ್ಯಗಳನ್ನು ಪ್ರಸ್ತುತ ಪ್ರಸಂಗದಲ್ಲಿ ಕಾರ್ಮಿಕ ಸಂಘಗಳು ಕೈಕೊಳ್ಳಬೇಕು. ಭವಿಷತ್ತಿನ ದಿನ ನಿತ್ಯ ಕಾರ್ಯಾಚರಣೆಗಳಲ್ಲಿ ಜನತೆಯು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ನೋಡಿ

ಕೊಳ್ಳಲು ಕಾರ್ಮಿಕ ಸಂಘಗಳು ರಾಷ್ಟ್ರೀಯ ಕಾರ್ಯಾಚರಣೆಯಲ್ಲಿಯೂ ಭಾಗವಹಿಸಬೇಕು. ಭಾರತೀಯ ಪ್ರಜಾಸತ್ತೆಯು ಇಂದು ಮುಂದಿನ ಈ ದೃಷ್ಟಿಯೇ ಗಾಂಧೀಜಿಯವರು ೧೯೧೩ ರಲ್ಲಿ ಅಹಮ್ಮದಾಬಾದ ನಗರದಲ್ಲಿ ಕಾರ್ಮಿಕ ಸಂಘವನ್ನು ಪ್ರಾರಂಭಿಸಲು ಕಾರಣವಾಯಿತು. ಅವರ ಭಾವನೆಯಲ್ಲಿ ಈ ಸಂಘಗಳು ಉದ್ದಿಮೆಯ ಸಮಾಜದ ಬುನಾದಿಯಾಗಿವೆ. ಆದರೆ ಈಗಿನ ಕಾರ್ಮಿಕ ಸಂಘಗಳು ನಿಷೇಧಾತ್ಮಕ ಮಾರ್ಗಗಳನ್ನು ಅನುಸರಿಸುತ್ತಿರುವದು ವಿಷಾದಕರ. ಗಾಂಧೀ ಮಾರ್ಗದನ್ವಯ ಈ ಸಂಘಗಳು ಸ್ವಾಭಾವಿಕವಾದ ಕ್ರಮಗಳನ್ನು ಅನುಸರಿಸಿದರೆ ಅವು ತೀವ್ರಗತಿಯಿಂದ ಬಲಯುತವಾಗಿ ಬೆಳೆಯಬಹುದು.

ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ– ಕಾರ್ಮಿಕರು ಆಡಳಿತದಲ್ಲಿ ಹಂತಹಂತವಾಗಿ ಭಾಗವಹಿಸುವಂತೆ ಈಗ ಅಮೇರಿಕೆಯಲ್ಲಿ ಸ್ಕ್ಯಾಲನಲ್ ಯೋಜನೆಯು ಮೇರೆಗೆ ಪ್ರಾಯೋಗಿಕವಾಗಿ ಯತ್ನಿಸಲಾಗುತ್ತಿದೆ. ಆದರೆ ಈ ಯೋಜನೆಗಿಂತಲೂ ಪೂರ್ವದಲ್ಲಿ ಗಾಂಧೀಜಿಯವರ ವಿಚಾರಗಳು ಈ ದಿಶೆಯಲ್ಲಿ ಬಹು ಉನ್ನತವಾಗಿದ್ದವು. ೧೯೨೭ ರಷ್ಟರ ಹಿಂದೆಯೇ ಗಾಂಧೀಜಿಯವರು "ಯಂಗ–ಇಂಡಿಯಾ" ಪತ್ರಿಕೆಯಲ್ಲಿ ಹೀಗೆ ಬರೆದಿದ್ದರು, "ಗಿರಣಿಯ ಶೇರುದಾರರಂತೆ ಕಾರ್ಮಿಕರು ಸಹ ಗಿರಣಿಯ ಒಡೆಯರಾಗಿದ್ದಾರೆ. ಗಿರಣಿಯ ಒಡೆಯರು ಕಾರ್ಮಿಕರನ್ನು ತಮ್ಮಂತೆಯೇ ಎಂದು ಪರಿಗಣಿಸಬೇಕು. ಇದನ್ನು ಗಿರಣಿಯ ಒಡೆಯರು ಎಂದು ಮನಗಾಣುವರೋ ಅಂದು ಈರ್ವರ ನಡುವೆ ತಂಟೆಗಳು ಉದ್ಭವಿಸವು."

ನಿಜವಾಗಿಯೂ ಹೇಳಬೇಕಾದರೆ ಕಾರ್ಮಿಕರು ಆಡಳಿತದಲ್ಲಿ ಭಾಗವಹಿಸುವಿಕೆಯು ಗಾಂಧೀಜಿಯವರ ಉದ್ದಿಮೆಗಳ ವಿಕೇಂದ್ರಿಕರಣದ ಕಲ್ಪನೆಯಿಂದ ಹೊರಬಂದ ವಿಚಾರವಾಗಿದೆ. ಅಧಿಕಾರವು ಕೇವಲ ಆಡಳಿತದಲ್ಲಿಯೇ ಕೇಂದ್ರಿಕೃತವಾಗಿರಕೂಡದು. ಆಡಳಿತ ವರ್ಗದವರಂತೆ ಕಾರ್ಮಿಕರು ಅದರಲ್ಲಿ ಪಾಲುಗೊಳ್ಳಬೇಕು. ಅಂದರೆ ಮಾತ್ರ ಕಾರ್ಮಿಕರು ಉತ್ಪಾದನೆಯಲ್ಲಿ ಪರಾಕಾಷ್ಠತೆಯನ್ನು ಸಲ್ಲಿಸಿ, ಉತ್ಪಾದನೆಯು ಗರಿಷ್ಠ ಮಟ್ಟಕ್ಕೆ ತಲುಪಲು ಸಾಧ್ಯವಾಗುವದು. ಕಾರ್ಮಿಕರನ್ನು ಶೇರುದಾರರಿಗೆ ಸರಿಸಮಾನರೆಂದು ಪರಿಗಣಿಸುವದು ಉದ್ದಿಮೆಯ ಯೋಗಕ್ಷೇಮ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಆದ್ದರಿಂದ ಗಿರಣಿಗಳ ವ್ಯವಹಾರಗಳ ಸರಿಯಾದ ಜ್ಞಾನ ಹೊಂದಬೇಕಾದುದು ಕಾರ್ಮಿಕರ ಹಕ್ಕಾಗಿದೆ.

೧೯೨೧ರಲ್ಲಿ "ಯಂಗ–ಇಂಡಿಯಾ"ದಲ್ಲಿ ಕಾರ್ಮಿಕರು ತಮ್ಮ ಸ್ಥಿತಿ–ಗತಿಗಳನ್ನು ಸುಧಾರಿಸಿಕೊಳ್ಳುವದು, ಹೆಚ್ಚು ಜ್ಞಾನವಂತರಾಗುವದು, ಮತ್ತು ಯಾವ ವಸ್ತುಗಳ ಉತ್ಪಾದನೆಯಲ್ಲಿ ಅವರ ಮಹತ್ವದ ಹಸ್ತ ಇರುವದೋ ಅಂತಹ ವಸ್ತುಗಳನ್ನು ಮಾಲಿಕರು ಸರಿಯಾಗಿ ಉಪಯೋಗಿಸುವಂತೆ ನೋಡಿಕೊಳ್ಳುವದು. ಕಾರ್ಮಿಕರು ರಾಜಕೀಯಕ್ಕೆ ಸಲ್ಲಿಸಬಹುದಾದ ಮಹತಿಗೆಯಾಗಿದೆ. ಆದ್ದರಿಂದ. ಕಾರ್ಮಿಕರು ಒಡೆಯರ

ಮಟ್ಟಕ್ಕೆ ಏರುವದು, ಸೂಕ್ತವಾದ ಉತ್ಕ್ರಾಂತಿ"— ಎಂದು ಗಾಂಧೀಜಿಯವರು ಬರೆದರು. ಮಾಲಿಕರು ಕಾರ್ಮಿಕರ ಸಂಪನ್ನು ಎದುರಿಸಬೇಕಾದ ಪ್ರಸಂಗದಲ್ಲಿ ಗಿರಣಿ ಮತ್ತು ಅದರ ಆಡಳಿತವನ್ನೇ ಸಂಪೂರ್ಣವಾಗಿ ಕಾರ್ಮಿಕರಿಗೆ ವಹಿಸಿಕೊಡಬೇಕೆಂದು ೧೯೪೬ರಲ್ಲಿ ಗಾಂಧೀಜಿಯವರು ಮಾಲಿಕರಿಗೆ ಉಪದೇಶಿಸಿದರು.

ಗಾಂಧೀಜಿಯವರ ಈ ಕಲ್ಪನೆಯನ್ನು ಈಗ ವಿಶೇಷವಾಗಿ ಭಾರತದಲ್ಲಿ ಸ್ಪಷ್ಟವಾಗಿ ಗ್ರಹಿಸಿಲಾಗಿದೆ. ಯೋಜಿತಗುರಿ ತಲುಪುವಲ್ಲಿ ಮತ್ತು ಸಮಾಜವಾದಿ ಸಮಾಜ ಸ್ಥಾಪಿಸುವಲ್ಲಿ ಇರುವ ಸಾಧನಗಳಲ್ಲೊಂದೆಂದು ಗ್ರಹಿಸಲಾಗಿದೆ. ಯೋಜನೆಗಳನ್ನು ಯಶಸ್ವೀಯಾಗಿ ಕಾರ್ಯಗತಗೊಳಿಸುವಲ್ಲಿ ಕಾರ್ಮಿಕ ಮತ್ತು ಒಡೆಯರ ನಡುವೆ ಅಧಿಕವಾದ ಸಹಯೋಗವಿರಬೇಕೆಂದು ಪಂಚವಾರ್ಷಿಕ ಯೋಜನೆಗಳಲ್ಲಿ ಎತ್ತಿ ಹೇಳಲಾಗಿದೆ. ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯು ಔದ್ಯೋಗಿಕೀರಣ ಪ್ರತಿಕ್ರಿಯೆಯಲ್ಲಿ ಅತ್ಯವಶ್ಯವಾದ ಉತ್ಪಾದನೆಯನ್ನು ಹೆಚ್ಚಿಸಲು ಉತ್ತೇಜಿಸುತ್ತದೆ. ಅದು ಕಾರ್ಮಿಕನಿಗೆ ಜವಾಬ್ದಾರಿ ಪ್ರಜ್ಞೆಯನ್ನು ಒದಗಿಸುವದು. ಮತ್ತು ಸ್ವವಾಕ್–ಸರಣಿಯನ್ನು ತೃಪ್ತಿಪಡಿಸುವ ಮೂಲಕ ಔದ್ಯಮಿಕ ತಂಟೆಗಳನ್ನು ಕಡಿಮೆಮಾಡಿ ಉತ್ತಮ ಆಡಳಿತ ಸಂಬಂಧವನ್ನು ಪ್ರವರ್ಧಿಸುವದು.

ಈ ಕಲ್ಪನೆಯ ಮಹತ್ವದ ಅರಿವು ಭಾರತದಲ್ಲಿ ದಿನೇ ದಿನೇ ಹೆಚ್ಚುತ್ತಾ ನಡೆದಿದೆ. ಆದ್ದರಿಂದ, ಈ ಕ್ಷೇತ್ರದಲ್ಲಿ ವಿವಿಧ ಕ್ರಮಗಳನ್ನು ಕೈಕೊಳ್ಳಲಾಗುತ್ತದೆ. ಎಲ್ಲ ಹೊಸ ಪ್ರಯೋಗಗಳು ಸಾಮಾನ್ಯವಾಗಿ ಎದುರಿಸಬೇಕಾಗಿರುವಂತೆಯೇ ಈ ವಿಷಯದಲ್ಲೂ ಪ್ರಾರಂಭಿಕ ಅಡೆ–ತಡೆಗಳನ್ನು ಎದುರಿಸಬೇಕಾದುದು ಸಹಜವಾಗಿದೆ. ಒಂದೆರಡು ದಿನಗಳಲ್ಲಿ ಈ ಕ್ಷೇತ್ರದಲ್ಲಿ ಪರಿಪೂರ್ಣತೆಯನ್ನು ಸಾಧಿಸುವದು ಸಾಧ್ಯವಾಗಲಾರದು. ಆದ್ದರಿಂದ, ಇದನ್ನು ಅವಸರದಿಂದ ಅನುಷ್ಠಾನದಲ್ಲಿ ತರದೆ ಹಂತ ಹಂತವಾಗಿ ತರಬೇಕು.

ಕೂಲಿ ಕುಂಬಳಿ :— ಭಾರತದಲ್ಲಿ ಕನಿಷ್ಠ ಕೂಲಿಯನ್ನು ನಿಗದಿ ಪಡಿಸುವದು ಕಾರ್ಮಿಕರ ಅತ್ಯಾವಶ್ಯಕಗಳಲ್ಲೊಂದಾಗಿದೆಯೆಂದು ಗಾಂಧೀಜಿಯವರು ಅರಿತಿದ್ದರು. ಕಾರ್ಮಿಕರ ಗಳಿಕೆಯು ಅವರಿಗೆ ಎರಡು ಹೊತ್ತು ಹೊಟ್ಟೆತುಂಬುವಷ್ಟು ಊಟವನ್ನೂ ಸಹ ಒದಗಿಸಲು ಶಕ್ಯವಿಲ್ಲ. ಅವರು ಅಮಾನುಷ ಸ್ಥಿತಿಯಲ್ಲಿ ಬದುಕಿದ್ದಾರೆ. ಕಾರ್ಮಿಕರಿಗೆ ಕೊಡುತ್ತಿದ್ದ ಕೂಲಿಯು ಕಾರ್ಮಿಕನಿಗಷ್ಟೇ ಸಾಕಾಗುತ್ತಿರಲಿಲ್ಲ. ಅವನ ನಾಲ್ವ ಸದಸ್ಯರನ್ನೊಳಗೊಂಡ ಕುಟುಂಬದ ಮಾತಂತೂ ದೂರ ಉಳಿಯಿತು. ಕಾರ್ಮಿಕನಿಗೆ ಮತ್ತು ಅವನ ಕುಟುಂಬಕ್ಕೆ ಸಮತೋಲ ಆಹಾರ ದೊರೆಯಬೇಕಾದುದು ಅತ್ಯವಶ್ಯ. ಗಾಂಧೀಜಿಯವರು ಕನಿಷ್ಠ ಕೂಲಿಯ ಸಮಸ್ಯೆಯ ವಿಚಾರ ಮಾಡುತ್ತಿದ್ದ ಕಾಲದಲ್ಲಿ ಕನಿಷ್ಠವೇತನ ಕಾನೂನು ಅಸ್ತಿತ್ವದಲ್ಲಿ ಇರಲಿಲ್ಲ. ಕನಿಷ್ಠವೇತನ ಕಾನೂನು ಇತ್ತೀಚೆಗೆ ಅಂದರೆ ೧೯೪೮ರಲ್ಲಿ ಅಸ್ತಿತ್ವದಲ್ಲಿ ಬಂದಿದೆ.

ಗಾಂಧೀಜಿಯವರು ಕನಿಷ್ಠ ವೇತನಗಳನ್ನು ನಿಗದಿ ಪಡಿಸುವಲ್ಲಿ ಇರುವ ಎರಡು ಮುಖ್ಯವಾದ ಸಮಸ್ಯೆ (ಕಾರ್ಮಿಕರ ಅವಶ್ಯಕತೆಗಳು ಮತ್ತು ಉದ್ದಿಮೆಯ ಧಾತೃಶಕ್ತಿ) ಗಳಿಗೆ ಆದ್ಯ ಗಮನಕೊಟ್ಟರು. ಯಾವ ಉದ್ದಿಮೆಗೆ ಕನಿಷ್ಠವೇತನ ಕೊಡಲು ಸಾಧ್ಯವಿಲ್ಲವೋ ಆ ಉದ್ದಿಮೆಯನ್ನು ಮುಚ್ಚಿಬಿಡಬೇಕೆಂದು ಅವರು ಸ್ಪಷ್ಟಪಡಿಸಿದರು. ಕನಿಷ್ಠ ವೇತನ ನಿಗದಿಪಡಿಸುವಲ್ಲಿ ಮೂಲಭೂತ ಅಡ್ಡಿ ಆತಂಕಗಳಿದ್ದು ಇವುಗಳನ್ನು ಗಾಂಧೀಜಿಯವರು ಸಹ ಎದುರಿಸಬೇಕಾಯಿತು. ಸರ್ವ ಸಮ್ಮತವಾದ ಕನಿಷ್ಠವೇತನ ಸೂತ್ರವನ್ನು ಕಂಡು ಹಿಡಿಯುವದು ಸಾಧ್ಯತೆಗೆ ಮೀರಿದ ಮಾತಾಗಿದೆ. ಕನಿಷ್ಠವೇತನವೆಂದರೇನು ? ಅದನ್ನು ಹೇಗೆ ನಿರ್ಧರಿಸಬೇಕು ? ಅದರ ಕಾರ್ಯಾಚರಣೆ ವ್ಯವಸ್ಥೆ ಹೇಗಿರಬೇಕು ? ಎಂಬ ಮುಂತಾದ ಪ್ರಶ್ನೆಗಳು ಉದ್ಭವಿಸುತ್ತವೆ. ಕಾರ್ಮಿಕರ ಕೂಲಿಗಳು ಉಚಿತ ಹಾಗೂ ನ್ಯಾಯಯುತವಾಗಿರಬೇಕೆಂದು ಹೇಳಲಾಗುತ್ತದೆ. ಆದರೆ ಉಚಿತ ಹಾಗೂ ನ್ಯಾಯಯುತವಾದ ಕೂಲಿಗಳೆಂದರೇನೆಂಬ ಪ್ರಶ್ನೆಗಳು ಏಳುತ್ತವೆ. ಕನಿಷ್ಠ ವೇತನ ನಿಗದಿಪಡಿಸುವ ಆಧಾರವು ಕೇವಲ ಕಾರ್ಮಿಕನಿಗಷ್ಟೆ ಸಂಬಂಧಿಸಿರಕೂಡದೆಂದು ಗಾಂಧೀಜಿಯವರ ಹೇಳಿಕೆಯಾಗಿತ್ತು. ಅವನ ಕುಟುಂಬದ ಸದಸ್ಯರನ್ನು ಹಾಗೂ ಅವರ ಗಳಿಕೆಯ ಶಕ್ತಿಯನ್ನು ಲಕ್ಷಿಸುವದು ಅವಶ್ಯ. ಕಾರ್ಮಿಕನ ಕನಿಷ್ಠ ಅವಶ್ಯಕತೆಗಳ ಸಂಬಂಧವಲ್ಲಿ ಏಕಮತವಿರುವದಿಲ್ಲ. ಬೆಲೆಗಳಿಗೆ ಸಂಬಂಧಿಸಿದ ಜೀವನವೆಚ್ಚದ ಪ್ರಶ್ನೆಯನ್ನು ಕನಿಷ್ಠವೇತನ ನಿಗದಿಪಡಿಸುವಲ್ಲಿ ಗಮನಿಸತಕ್ಕದ್ದು. ಒಟ್ಟಾರೆ ಕನಿಷ್ಠವೇತನವು ಕೇವಲ ಜೀವನಾಧಾರಗಳಷ್ಟೆ ಅಲ್ಲದೆ ಶೈಕ್ಷಣಿಕ, ವೈದ್ಯಕೀಯ ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡಿರಬೇಕು. ಮಾನವನ ಅವಶ್ಯಕತೆಗಳನ್ನು, ಕುಟುಂಬದ ಗಳಿಕೆಯ ಬಲವನ್ನು, ಜೀವನದ ವೆಚ್ಚ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅದನ್ನು ನಿಗದಿಪಡಿಸಬೇಕು. ತುಟ್ಟಿ ಭತ್ತೆಯನ್ನು ಮೂಲ ವೇತನದಲ್ಲಿ ಸೇರಿಸತಕ್ಕದ್ದು. ಕೆಲವೊಂದು ದೋಷಗಳಿದ್ದಾಗ್ಯೂ ೧೯೪೮ ರ ಕನಿಷ್ಠ ವೇತನ ಕಾನೂನು ತದನಂತರದ ತಿದ್ದುಪಡಿಗಳೊಂದಿಗೆ ಈ ದಿಶೆಯಲ್ಲಿ ಕೈಕೊಂಡ ಸೂಕ್ತ ಕ್ರಮವಾಗಿದೆ. ಕನಿಷ್ಠ ವೇತನವನ್ನು ನಿಗದಿ ಪಡಿಸುವಲ್ಲಿ ಯಾವದೇ ಪ್ರಮಾಣವನ್ನು ಅನುಸರಿಸಿರಲಿ ಕಾರ್ಮಿಕನು ಕನಿಷ್ಠ ಕೂಲಿಗಳನ್ನು ಪಡೆಯಬೇಕು ಇಲ್ಲವಾದರೆ ಅವನು ಉತ್ಪಾದನೆಯಲ್ಲಿ ಪರಾಕಾಷ್ಠತೆಯನ್ನು ಸಲ್ಲಿಸುವದು ಸಾಧ್ಯವಿಲ್ಲ.

ಐತಿಹಾಸಿಕ ಕಾರಣಗಳ ಮೂಲಗಳನ್ನು ಹೊಂದಿರುವ ಆದರೆ ಪ್ರಸ್ತುತ ಪರಿಸ್ಥಿತಿಗಳಿಗೆ ವಿಸಂಗತವಾಗಿರುವ ಅಸಂಬದ್ಧ ಕೂಲಿಗಳ ವ್ಯತ್ಯಾಸಗಳನ್ನು ತೊಡೆದು ಹಾಕಬೇಕೆಂದು ಗಾಂಧೀಜಿಯವರು ಕೂಲಿ ವ್ಯತ್ಯಾಸಗಳ ವಿಷಯದಲ್ಲಿ ಅಪೇಕ್ಷಿಸಿದ್ದರು.

ಬೋನಸ್ಸ್:- ಉದ್ದಿಮೆಗಳ ಹಲವಾರು ತಂಟೆಗಳಿಗೆ ಬೋನಸ್ಸು ಕಾರಣವಾಗಿದೆ. ೧೯೬೫ ರಲ್ಲಿ ಬೋನಸ್ಸು ಕೊಡುವ ಕಾನೂನು ಪಾಸಾಗುವ ವರೆಗೆ ಬೋನಸ್ಸು ಕೊಡುವ ಬಗೆಗೆ ಭಾರತದಲ್ಲಿ ಯಾವದೇ ನಿಶ್ಚಿತ ತತ್ವ ಅಥವಾ ಪ್ರಮಾಣಗಳಿರಲಿಲ್ಲ.

ಅಹಮ್ಮದಾಬಾದಿನ ಜವಳಿ ಗಿರಣಿ ಉದ್ದಿಮೆಯಲ್ಲಿ ಬೋನಸ್ಸಿಗೆ ಸಂಬಂಧಿಸಿದ ಕಾರ್ಮಿಕರ ಉದ್ದೇಶಗಳನ್ನಿಡೇರಿಸುವಲ್ಲಿ ಗಾಂಧೀಜಿ ಮಾರ್ಗದರ್ಶನಪಿತ್ತರು. ೧೯೧೮ ರಲ್ಲಿ ಜವಳಿ ಗಿರಣಿ ಕಾರ್ಮಿಕರಿಗೆ ಕೊಡುವ ಬೋನಸ್ಸನ್ನು ಶೇಕಡಾ ೨೫ ರಷ್ಟಕ್ಕೆ ಹೆಚ್ಚಿಸಲು ಹೋರಾಡಿದರು. ೧೯೨೩ ರಲ್ಲಿ ಮುಂಬಯಿಯ ಮಿಲ್ ಮಾಲೀಕರು ತಮ್ಮ ಕಾರ್ಮಿಕರಿಗೆ ವಾಡಿಕೆಯಂತೆ ಕೊಡಬೇಕಾದ ಬೋನಸ್ಸು ನಿಲ್ಲಿಸುವ ಬೆದರಿಕೆ ಹಾಕಿದಾಗ ಗಾಂಧೀಜಿಯವರು ಕೈಕೊಂಡ ನಿರ್ಣಯವನ್ನು ತದನಂತರ ವಿವಿಧ ನ್ಯಾಯಸ್ಥಾನಗಳು ಅಂಗೀಕರಿಸಿದವು.

ಬೋನಸ್ಸೆಂದರೆ ಏನು ? ಉದಾರದೇಣಿಗೆಯೆಂದೂ ಅಥವಾ ಮುಂದೂಡಿದ ಕೂಲಿಯೆಂದೂ ಅಥವಾ ಹಕ್ಕಿನಿಂದ ಪಡೆಯಬಹುದಾದ ಲಾಭಾಂಶವೆಂದೂ ಅನೇಕ ವಿಧದಲ್ಲಿ ಅರ್ಥಮಾಡಲಾಗುತ್ತಿತ್ತು. ಬೋನಸ್ಸು ಉದಾರದೇಣಿಗೆಯೆಂಬ ಕಲ್ಪನೆಯನ್ನಂತೂ ಪೂರ್ಣವಾಗಿ ಈಗ ಬಿಟ್ಟು ಕೊಡಲಾಗಿದೆ. ಹಕ್ಕಿನ ವಿಷಯವೆಂದು ಪ್ರತಿಪಾದಿಸಲಾಗುತ್ತದೆ. ೧೯೫೪ ರಲ್ಲಿ ಅಲಹಾಬಾದ ಶ್ರೇಷ್ಠ ನ್ಯಾಯಾಲಯವು ಈ ವಿಷಯದಲ್ಲಿ ಹೀಗೆ ಅವಲೋಕಿಸಿದೆ. "ಆಧುನಿಕ ಕಾಲದಲ್ಲಿ 'ಬೋನಸ್ಸು' ನೌಕರರಿಗೆ ಕೊಡಬೇಕಾದ ಮುಂದೂಡಿದ ಕೂಲಿಯೆಂದು ಸ್ಪಷ್ಟವಾಗಿ ಪರಿಗಣಿಸುವ ಬಗೆಗೆ ಯಾವ ಸಂದೇಹವೂ ಇರಕೂಡದು. ನೌಕರಿಯ ಕರಾರುಗಳನ್ವಯ ಬೋನಸ್ಸು ಕಾರ್ಮಿಕರು ಹಕ್ಕಿನಂತೆ ಪಡೆಯಬಹುದು." ಕಾರ್ಮಿಕರಿಗೆ ಕೊಡಬೇಕಾದ ಬೋನಸ್ಸು ಮೊತ್ತವನ್ನು ನಿರ್ಧರಿಸುವಾಗ ಲಭ್ಯವಿರುವ ಉಳಿತಾಯವನ್ನು ನಿಗದಿಪಡಿಸಬೇಕು. ವಿವಿಧ ಸಮಿತಿಗಳ ಹಾಗೂ ನ್ಯಾಯ ಸ್ಥಾನಗಳ ನಿರ್ಣಯಗಳು ಯಾವುದೇ ತೃಪ್ತಿಕರ ಸೂತ್ರವನ್ನು ಕಂಡು ಹಿಡಿಯುವಲ್ಲಿ ವಿಫಲವಾಗಿವೆ. ಮತ್ತು ಅವುಗಳ ನಿರ್ಣಯಗಳು ತೀವ್ರ ಟೀಕೆಗಳಿಗೊಳಗಾಗಿವೆ.

ಅಹಮ್ಮದಾಬಾದ ಜವಳಿ ಗಿರಣಿ ಕಾರ್ಮಿಕರ ಸಂಘ ಮತ್ತು ಅಹಮ್ಮದಾಬಾದ ಗಿರಣಿಗಳ ಮಾಲಿಕರ ಸಂಘಗಳ ನಡುವೆ ಆದ ಬೋನಸ್ಸು ಸಂಬಂಧದಲ್ಲಿಯ ಒಪ್ಪಂದವು ಗಾಂಧೀಜಿಯವರ ವಿಚಾರಗಳಿಗೆ ಹೋಲುವ ಮಾದರಿಯನ್ನು ಮಂಡಿಸಿದೆ. ಈ ಒಪ್ಪಂದವು ಕಾರ್ಮಿಕರಿಗೆ ಕೊಡುವ ಬೋನಸ್ ಪ್ರಮಾಣವು ವಾರ್ಷಿಕ ಮೂಲ ವೇತನದ ಶೇಕಡಾ ೨೫ ಗರಿಷ್ಠ ಮಿತಿಯೆಂದೂ (ಮೂರು ತಿಂಗಳ ಮೂಲ ವೇತನ-ಗರಿಷ್ಠ ಬೋನಸ್ಸು) ಮತ್ತು ಶೇಕಡಾ ೪.೮ (೧೫ ದಿನಗಳ ಮೂಲ ವೇತನ ಕನಿಷ್ಠ ಬೋನಸ್ಸು), ಕನಿಷ್ಠ ಮಿತಿಯೆಂದು ಗ್ರಹಿಸುತ್ತದೆ. ೧೯೬೫ ರ ಬೋನಸ್ಸು ಕೊಡುಗೆಯ ಕಾನೂನು ಈ ದಿಶೆಯಲ್ಲಿಟ್ಟ ಹೆಜ್ಜೆಯಾಗಿದೆ. ಆದಾಗ್ಯೂ. ತಜ್ಞರ ಸಮಿತಿಗಳು ಬೋನಸ್ ಸಮಸ್ಯೆಯ ವಿವಿಧ ಮುಖಗಳನ್ನು ಸ್ಥೂಲವಾಗಿ ಅಭ್ಯಸಿಸಿ ತರ್ಕಸಮ್ಮತವಾಗಿ ನಿರ್ಣಯಿಸಿ ಕಾನೂನುಬದ್ಧವಾಗಿ ಜಾರಿಗೊಳಿಸಬೇಕಾದುದು ಅಪೇಕ್ಷಣೀಯವಾಗಿದೆ.

ಔದ್ಯಮಿಕ ಸಂಬಂಧಗಳ ಧೋರಣೆ

ಔದ್ಯಮಿಕ ಸಂಬಂಧಗಳ ಕ್ಷೇತ್ರದಲ್ಲಿ ಭಾರತ ಸರಕಾರದ ನೀತಿಯು ಪರಿಸ್ಥಿತಿಯ ಒತ್ತಡದಿಂದಲೂ ಅಥವಾ ಗಾಂಧೀಜಿಯವರ ತತ್ವಗಳ ಸರಿಯಾದ ಜ್ಞಾನವಿಲ್ಲದಿರುವದರಿಂದಲೂ ಕಡ್ಡಾಯದ ತೀರ್ಪಿನತ್ತ ಒಲಿದಿದೆ. ಇದರಿಂದ ಔದ್ಯಮಿಕ ಶಾಂತಿ ಮತ್ತು ಸಂಬಂಧಗಳು ವಿಪರೀತವಾಗಿ ಹದಗೆಡುತ್ತಾ ನಡೆದಿವೆ. ಔದ್ಯಮಿಕ ಸಂಬಂಧಗಳನ್ನು ಉತ್ತಮಪಡಿಸುವ ಗಾಂಧೀಜಿ ಮಾರ್ಗದ ವಿಸ್ತರಣೆಯಾದ "ಗಿರಿ" ಸೂತ್ರವನ್ನು ಸಂಪೂರ್ಣವಾಗಿ ಅಲಕ್ಷಿಸಲಾಗಿದೆ. ಈಗ ಅನುಸರಿಸುತ್ತಿರುವ ಮಾರ್ಗದಿಂದ ಮುಕ್ತತೆಯನ್ನು ಪಡೆಯುವ ಲಕ್ಷಣಗಳು ಇತ್ತೀಚಿನ ಬೆಳವಣಿಗೆಗಳಿಂದ ಕಾಣಬಹುದು. ಉದ್ದಿಮೆಯ ರಂಗದಲ್ಲಿ ಶಿಸ್ತು, ವರ್ತನೆ, ಮತ್ತು ಕಾರ್ಯ ನಿಪುಣತೆ ಮತ್ತು ಕಲ್ಯಾಣ ಇವುಗಳ ಬಗೆಗೆ ಕಾರ್ಮಿಕರ ಪ್ರತಿನಿಧಿಗಳ ಹಾಗೂ ವ್ಯವಸ್ಥಾಪಕರ ನಡುವೆ ಆದ ಒಪ್ಪಂದಗಳು ಸರಕಾರಿ ಧೋರಣೆಯಲ್ಲಿಯ ಬದಲಾವಣೆ ಸಂಕೇತಗಳಾಗಿವೆ. ದೀರ್ಘಕಾಲ ಉಳಿಯಬಹುದಾದ ಔದ್ಯಮಿಕ ಶಾಂತಿ, ಮಾನವ ಸಂಬಂಧಗಳು ಮತ್ತು ತೀವ್ರಗತಿಯ ಔದ್ಯಮಿಕ ಮತ್ತು ಆರ್ಥಿಕ ಬೆಳವಣಿಗೆಗಳತ್ತ ನಡೆಸುವ ಗಾಂಧೀಜಿಯವರ ವಿಚಾರಗಳಿಗೆ ಸಾಕಾರವನ್ನು ಕೊಡುವಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ನಡೆಯಬೇಕಾಗಿದೆ.

ಗಾಂಧೀಜಿ ಹಾಗೂ ಮಾರ್ಕ್ಸ

ಕಾರ್ಲ ಮಾರ್ಕ್ಸನು ಕಾರ್ಮಿಕ ಸಮಸ್ಯೆಗಳ ಬಗೆಗೆ ಸಾಂಪ್ರದಾಯಿಕ ಪರಿಹಾರ ಮಾರ್ಗವನ್ನು ಒದಗಿಸಿದ್ದಾನೆ. ಅವನ ಶ್ರಮ ಮೌಲ್ಯದ ತತ್ವದ ಮೇರೆಗೆ ಪ್ರತಿಯೊಂದು ವಸ್ತುವಿನ ಮೌಲ್ಯವು ಅದು ಒಳಗೊಂಡಿರುವ ಕೇವಲ ಮಾನವ ಧರ್ಮದ ಸ್ಫಟಿಕೀಕರಣದ ಮೊತ್ತವಾಗಿದೆ. ವಸ್ತುಗಳ ಮೌಲ್ಯದ ವ್ಯತ್ಯಾಸವು ಅವುಗಳ ಉತ್ಪಾದನೆಯಲ್ಲಿ ತೊಡಗಿಸಿದ ಮಾನವಶ್ರಮಗಳ ವ್ಯತ್ಯಾಸಕ್ಕನುಗುಣವಾಗಿರುತ್ತದೆ. ಕಾರ್ಮಿಕರು ಉತ್ಪಾದಿಸುವ ಮೌಲ್ಯವು ಬಂಡವಳದಾರರಿಗೆ ಹಸ್ತಾಂತರವಾಗುತ್ತದೆ. ಯಾಕಂದರೆ ಅವನು ಉತ್ಪಾದನಾ ಸಾಧನಗಳ ಮಾಲೀಕನಾಗಿದ್ದಾನೆ. ವಸ್ತುಗಳನ್ನು ಅವನು ಲಾಭಕ್ಕೆ ಮಾರಾಟ ಮಾಡಿ, ಮರಳಿ ಕಾರ್ಮಿಕನಿಗೆ ಅವನು ಉತ್ಪಾದನಾ ಕಾರ್ಯದಲ್ಲಿ ತೊಡಗಿದ ಅವಧಿಯಲ್ಲಿ ಅವನ ಆಹಾರಕ್ಕೆ ತಗಲುವ ವೆಚ್ಚದಷ್ಟನ್ನು ಮಾತ್ರ ಕೊಡುತ್ತಾನೆ. ಬಂಡವಾಳದಾರನು ಕಾರ್ಮಿಕರಿಗೆ ಬದುಕಲು ಬೇಕಾಗುವ ಅತ್ಯಂತ ಕನಿಷ್ಠ ಜೀವನಾವಶ್ಯಕ ವಸ್ತುಗಳ ಮೌಲ್ಯ ಹಾಗೂ ಅವರು ಉತ್ಪಾದಿಸಿದ ವಸ್ತುಗಳ ಮೌಲ್ಯ ಇವುಗಳ ನಡುವಿನ ಅಂತರವನ್ನು ತಾನು ಎತ್ತಿ ಹಾಕುತ್ತಾನೆ. ಲಾಭವನ್ನು ಹೆಚ್ಚಿಸಿಕೊಳ್ಳಲು ಅವನು ಕೆಲಸದ ಕಾಲಾವಧಿಯನ್ನು ಹೆಚ್ಚಿಸುವದು, ಕಡಿಮೆ ಕೂಲಿಗಳಿಗೆ ಸ್ತ್ರೀ ಹಾಗೂ ಚಿಕ್ಕಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವದು. ಕಾರ್ಮಿಕರನ್ನು ಅವಿಶ್ರಾಂತವಾಗಿ ದುಡಿಸುವದು ಮುಂತಾದ ಅನಿಷ್ಟ ಪದ್ಧತಿಗಳನ್ನು

ಅನುಸರಿಸುತ್ತಾನೆ. ಈ ಅನಿಷ್ಟ ಪದ್ಧತಿಗಳು ಕಾರ್ಮಿಕ ಸಮಸ್ಯೆಗಳ ಉಗಮಸ್ಥಾನವಾಗಿವೆ ಎಂದು ಮಾರ್ಕ್ಸ್‌ನ ವಾದ.

ಕಾರ್ಮಿಕ ಸಮಸ್ಯೆಗಳ ಬಗೆಗೆ ಮಾರ್ಕ್ಸ್‌ನ ಈ ವಿಚಾರಗಳು ಸಮ್ಮತಾರ್ಹವಾಗಿವೆ ಆದಾಗ್ಯೂ ಇದು ಕಾರ್ಮಿಕರ ಶೋಷಣೆ, ಮಿಕ್ಕುಳಿದ ಮೌಲ್ಯ, ಮಿಕ್ಕುಳಿದ ಶ್ರಮ, ಯಾಂತ್ರಿಕ ಹಾಗೂ ಆಧುನಿಕ ಉದ್ದಿಮೆಯ ಅನಿಷ್ಟಗಳು, ಬಂಡವಾಲುಗಳು ಸಂಚಯ ಮತ್ತು ತತ್ಪರಿಣಾಮವಾಗಿ ಕೆಲವೇ ಜನರಲ್ಲಿ ಆರ್ಥಿಕ ಹಾಗೂ ರಾಜಕೀಯ ಅಧಿಕಾರ ಕೇಂದ್ರೀಕೃತವಾಗುವುದು. ಸಮಾಜವನ್ನು ಪರಸ್ಪರ ವಿರೋಧಿ ಬಣಗಳನ್ನಾಗಿ ವಿಂಗಡಿಸುವ ವರ್ಗಕಲಹ ಮುಂತಾದ ಸಿದ್ಧಾಂತಗಳನ್ನು ಆಧರಿಸಿದೆ. ಮಾರ್ಕ್ಸ್‌ನ ವಿಚಾರಗಳು ಪರಸ್ಪರರಲ್ಲಿ ಸಂಶಯ ಅಪನಂಬಿಗೆ, ದ್ವೇಷ, ಹಿಂಸೆ, ವಿನಾಶ ಹಾಗು ತೀವ್ರ ಕಾರ್ಮಿಕ ಅಶಾಂತತೆಗಳಂತಹ ಅನಪೇಕ್ಷಣೀಯ ಸಂಗತಿಗಳಿಗೆ ಎಡೆಕೊಡುತ್ತವೆ.

ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ವರ್ಗ ಕಲಹವನ್ನಾಧರಿಸಿರುವ ಅವರ ವಿಚಾರಗಳು ಉತ್ಪಾದನೆಗೆ ಆತಂಕವಾಗಿ ಆರ್ಥಿಕ ಪ್ರಗತಿಯನ್ನು ಕುಂದಿತಗೊಳಿಸುತ್ತವೆ. ಆದರೆ ಗಾಂಧೀಯವರ ವಿಚಾರಗಳು ಇದಕ್ಕೆ ವ್ಯತಿರಿಕ್ತವಾಗಿವೆ. ಅವರು ಎರಡು ವರ್ಗಗಳ ಅಸ್ತಿತ್ವವನ್ನು ಒಪ್ಪಿದರೂ ಮಾನವನಲ್ಲಿರುವ ಒಳಿತಿನ ಭಾವನೆಯಲ್ಲಿ ಅನಂತ ನಂಬಿಗೆಯಿಂದ ವರ್ಗ ಕಲಹವನ್ನೇ ತೊಡೆದು ಹಾಕುತ್ತಾರೆ. ಔದ್ಯಮಿಕ ಸಂಬಂಧಗಳಲ್ಲಿ ಅವರು ಕೌಟುಂಬಿ ಜೀವನದ ಕಲ್ಪನೆಯನ್ನು ಕಲ್ಪಿಸಿ, ಪರಸ್ಪರ ಸಹಕಾರದಲ್ಲಿ ನಂಬಿಗೆಯಿಟ್ಟಿದ್ದರು. "ಮಿಲ್ ಮಾಲಿಕರೊಂದಿಗೆ ನಾವು ಹೋರಾಡಿದರೂ ಕೂಡಾ ಅಂತಿಮವಾಗಿ ಪರಸ್ಪರ ಸಹಕಾರ ಪಡೆಯುವದಕ್ಕಾಗಿಯೇ ಹಾಗೆ ಮಾಡುತ್ತೇವೆ." ಎಂದು ಅವರು ಅಭಿಪ್ರಾಯ ಪಟ್ಟಿದ್ದರು.

ಗುರಿ ಸಾಧಿಸುವ ವಿಧಾನ ಮತ್ತು ಸಾಧಿಸಬೇಕಾದ ಅಂತಿಮ ಗುರಿಗಳಿಂದಾಗಿ ಮಾರ್ಕ್ಸ್ ಹಾಗು ಗಾಂಧೀಜಿಯವರ ವಿಚಾರಗಳಲ್ಲಿ ವ್ಯತ್ಯಾಸಗಳಿವೆ. ಗಾಂಧೀಜಿ ಮತ್ತು ಮಾರ್ಕ್ಸ್‌ರವರು ಜೀವನ ಹಾಗೂ ವಿಶ್ವವನ್ನು ಕಂಡದೃಷ್ಟಿಯೇ ಬೇರೆ ಬೇರೆಯಾಗಿವೆ. ಈ ವ್ಯತ್ಯಾಸದಿಂದಾಗಿಯೇ ಸಾಧಿಸಬೇಕಾದ ಅಂತಿಮ ಗುರಿ ಹಾಗೂ ಸಾಧನಗಳ ವಿಧಾನಗಳ ವಿಚಾರಗಳಲ್ಲಿ ಹಾಗೂ ಅನುಸರಿಸಬೇಕಾದ ಮಾರ್ಗಗಳಲ್ಲಿ ಅವರೀರ್ವರಲ್ಲಿ ಮೂಲತಃ ವ್ಯತ್ಯಾಸಗಳಿವೆಂದು ಶ್ರೀ ಕೆ. ಜಿ. ಮಶ್ರುವಾಲಾರವರು ಅಭಿಪ್ರಾಯ ಪಟ್ಟಿದ್ದಾರೆ.

ಉಪಸಂಹಾರ

ಔದ್ಯಮಿಕ ಶಾಂತಿಯು ಆಧುನಿಕ ಔದ್ಯಮಿಕ ನಾಗರಿಕತೆಯ ಒಂದು ವೈಶಿಷ್ಟ್ಯವಾಗಿದೆ. ಇದು ಅನೇಕ ಧುರೀಣರ, ತಜ್ಞರ. ಸರಕಾರಗಳ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಗಮನ ಸೆಳೆದಿದೆ. ಗಾಂಧೀಜಿಯವರು ಮೂಲತಃ ಕಾರ್ಯನಿಷ್ಠವ್ಯಕ್ತಿಯಾಗಿದ್ದು, ಅವರು ತಮ್ಮ ಸಮಯವನ್ನು ಕಾರ್ಮಿಕ ಸಮಸ್ಯೆಗಳನ್ನು ಅಭ್ಯ

ಸಿಸಲು ಹಾಗೂ ಪರಿಹಾರ ಕಂಡುಹಿಡಿಯುವದಕ್ಕೆ ಮುಡಿಪಾಗಿರಿಸಿದ್ದರು. ಅವರ ಕಾರ್ಮಿಕ ಸಂಬಂಧಗಳ ಮಾರ್ಗವು ಸತ್ಯ ಹಿಂಸೆಗಳನ್ನೇ ಆಧರಿಸಿದ ಜೀವನದ ಸಾಮಾನ್ಯ ಮಾರ್ಗದ ಅಂಶವೇ ಆಗಿರುತ್ತದೆ. ಕಾರ್ಲ್‌ಮಾರ್ಕ್ಸ್‌ನಂತೆ ಅವರು ವರ್ಗ ಕಲಹ ಹಾಗೂ ಕಾರ್ಮಿಕ ನಿರಂಕುಶ ಪ್ರಭುತ್ವಗಳಲ್ಲಿ ವಿಶ್ವಾಸವಿಟ್ಟಿರಲಿಲ್ಲ. ಅವರು ಧರ್ಮದರ್ಶಿತ್ವ ತತ್ವವನ್ನು ಅಂಗೀಕರಿಸಿ, ಸರ್ವೋದಯ ಸಮಾಜವನ್ನು ರಚಿಸಲು ಬೋಧಿಸಿದರು. ಸಂಪುಗಳನ್ನು ಶಾಂತಿಯುತವಾಗಿ ಹಾಗೂ ಅಂಹಿಸಾತ್ಮಕವಾಗಿ ನಡೆಸಬೇಕೆಂದು ಅವರು ಒತ್ತಿ ಹೇಳುತ್ತಿದ್ದರು. ಸಂಧಾನ ಮತ್ತು ಪಂಚಾಯತಿಗಳ ಬಗೆಗೆ ಅವರು ಒತ್ತಿ ಹೇಳುತ್ತಿದ್ದುದು ಸರ್ವವಿದಿತವಿದ್ದು ಅದು ಔದ್ಯಮಿಕ ಸಂಬಂಧಗಳ ಅವರ ತತ್ವದ ಮೂಲ ಬುನಾದಿಯಾಗಿದೆ.

ಔದ್ಯಮಿಕ ಸಂಬಂಧಗಳಲ್ಲಿ ಗಾಂಧೀಜಿಯವರ ವಿಚಾರಗಳು ತಾತ್ವಿಕದಲ್ಲಿ ಹಾಗೊ ಕಾರ್ಯಾಚರಣೆಯಲ್ಲಿ ಭದ್ರವಾಗಿರುತ್ತವೆ. ಇದು ಔದ್ಯಮಿಕ ಶಾಂತಿ, ಪ್ರಜಾಪ್ರಭುತ್ವ ಮತ್ತು ತೀವ್ರಗತಿಯ ಆರ್ಥಿಕಾಭಿವೃದ್ಧಿಯತ್ತ ನಡೆಸಿಕೊಂಡೊಯ್ಯಬಹುದಾಗಿದೆ. ರಾಷ್ಟ್ರವು ಅವರ ತತ್ವಕ್ಕೆ ಒಂದು ನಿಶ್ಚಿತಾಕಾರವನ್ನು ಎಷ್ಟು ಬೇಗ ಕೊಡಬಲ್ಲದೋ ಅಷ್ಟು ಬೇಗ ಕಾರ್ಮಿಕ, ಆಡಳಿತೆ, ಸಮಾಜ ಹಾಗೂ ರಾಷ್ಟ್ರಕ್ಕೆ ಕಲ್ಯಾಣವಿದೆ.

★ ಎಸ್. ಬಿ. ಯಾದವಾಡ

ಕರ್ನಾಟಕದ ಅಗ್ರಹಾರಗಳು

೧. ಅಗ್ರಹಾರ ಕೋಟಿಉಮಚಿಗೆ

ಒಂದು ರಾಷ್ಟ್ರದ ಮಟ್ಟವನ್ನು ಅಳೆಯುಲು ಅಲ್ಲಿಯ ಸಂಸ್ಕೃತಿ ಮತ್ತು ನಾಗರಿಕತೆಗಳು ಸಾಧನಗಳಾಗಿವೆ. ನಮ್ಮ ನಾಡಿನ ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ರೂಪಿಸಿದ ಹಲವು ಸಾಧನೆಗಳಲ್ಲಿ 'ಪ್ರಾಚೀನ ಶಿಕ್ಷಣ ಪದ್ಧತಿ' ಮಹತ್ವಪೂರ್ಣವೆನಿಸಿದೆ.

ಅನ್ನದಾನ, ವಸ್ತ್ರದಾನ, ವಿದ್ಯಾದಾನವೇ ಮುಂತಾದ ದಾನಗಳನ್ನು ಮಾಡುವುದರಿಂದ ಮೋಕ್ಷಸಾಧನೆಯಾಗುತ್ತದೆ ಎಂಬ ಭಾವನೆ ನಮ್ಮಲ್ಲಿ ಸಾಂಪ್ರದಾಯಿಕವಾಗಿ ಬೆಳೆದುಬಂದಿದೆ. ಈ ಎಲ್ಲ ದಾನಗಳಲ್ಲಿ ವಿದ್ಯಾದಾನ ಶ್ರೇಷ್ಠವೆಂದು ಆ ಕಾಲದಲ್ಲಿ ಪರಿಗಣಿಸಲ್ಪಟ್ಟಿತ್ತು. ಇಂತಹ ಶಿಕ್ಷಣಕ್ಕೆ ವೇದಿಕೆಯೆನಿಸಿದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳಿಗೆ ಹೇರಳವಾಗಿ ದಾನಗಳನ್ನು ನೀಡಲು ಮುಂದೆ ಬರುತ್ತಿದ್ದ ದಾನಿಗಳಿಗೂ, ಈ ಉದಾರ ದಾನಿಗಳಿಂದ ಪೋಷಿತಗೊಂಡು ಅಭಿವೃದ್ಧಿಗೆ ಬಂದ ವಿದ್ಯಾಸಂಸ್ಥೆಗಳಿಗೂ ಕಡಿಮೆ ಇರಲಿಲ್ಲ. ಅಗ್ರಹಾರ, ಘಟಿಕಾ, ಮಠಗಳೆಂದು ಕರೆಯಲ್ಪಡುತ್ತಿದ್ದ ಈ ವಿದ್ಯಾಸಂಸ್ಥೆಗಳು ಕರ್ನಾಟಕದಲ್ಲಿ ಹೇರಳವಾಗಿದ್ದವು. ಇವು ಕೇವಲ ವಿದ್ಯಾ ಕೇಂದ್ರಗಳಾಗಿ ಉಳಿಯದೆ ಜನಜೀವನದ ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಿದ್ದವೆಂದು ಹೇಳಬಹುದು.

ಆಗಿನ ಕಾಲದ ಶಿಕ್ಷಣ ಪದ್ಧತಿಯ ಬಗ್ಗೆ ನಮಗೆ ಸಾಕಷ್ಟು ವಿವರಗಳು ತಿಳಿದುಬರುವುದಿಲ್ಲವಾದರೂ, ದೊರಕುವ ಅಂಶಗಳಿಂದಲೇ ನಾವು ಹಿಂದಿನ ಕಾಲದ ಶಿಕ್ಷಣ ಪದ್ಧತಿಯ ಬಗ್ಗೆ ಅಲ್ಪಸ್ವಲ್ಪ ಹೇಳಲು ಸಾಧ್ಯವಿದೆ. ಈಗಿನಂತೆ ಹಿಂದೆ ಶಿಕ್ಷಣ ಕಡ್ಡಾಯವಾಗಿರಲಿಲ್ಲ. ವಿದ್ಯಾಭ್ಯಾಸದ ಸಂಪೂರ್ಣವಾದ ಹೊಣೆಯನ್ನು ಈಗ ಸರ್ಕಾರವು ವಹಿಸಿಕೊಳ್ಳುವಂತೆ ಆಗ ಸರ್ಕಾರವು ನೇರವಾಗಿ ವಹಿಸಿಕೊಳ್ಳುತ್ತಿರಲಿಲ್ಲ. ರಾಜರು, ಅಧಿಕಾರಿಗಳು, ಧನಿಕರು ಮುಂತಾದ ದಾನಿಗಳು ಕೊಟ್ಟ ಉದಾರವಾದ ದಾನದಿಂದ ಈ ಅಗ್ರಹಾರ ಮುಂತಾದ ವಿದ್ಯಾಸಂಸ್ಥೆಗಳು ನಡೆಯುತ್ತಿದ್ದವು. ಇಷ್ಟೇ ಅಲ್ಲದೆ, ಅಧ್ಯಯನ ಪದ್ಧತಿಯಲ್ಲಿಯೂ ವ್ಯತ್ಯಾಸವಿದ್ದುದು ನಮಗೆ ಕಂಡುಬರುತ್ತದೆ. ಇದಕ್ಕೆ ಕೋಟಿಉಮಚಿಗೆ ಒಂದು ಉದಾಹರಣೆಯಾಗಿದೆ.

ಈಗ ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿರುವ ಕೋಟಿಉಮಚಿಗೆ ಎಂಬ ಗ್ರಾಮವು, ಹನ್ನೊಂದನೆಯ ಶತಮಾನದಲ್ಲಿ ಪ್ರಸಿದ್ಧಿಯನ್ನು ಪಡೆದ ಅಗ್ರಹಾರಗಳಲ್ಲಿ ಒಂದಾಗಿದ್ದಿತು. ಇದನ್ನು ಉಮಚಿಗೆ ಎಂತಲೂ-ಶಾಸನಗಳು

ಹೆಸರಿಸಿವೆ. ಸದಾಶಿವರಾಯ ಸಮುದ್ರವೆಂಬುದು ಇದರ ಪ್ರತಿನಾಮವೆಂದು ವಿಜಯನಗರ ಕಾಲದ ಒಂದು ಶಾಸನ ತಿಳಿಸುತ್ತದೆ. ಉಮಚಿಗೆ ಎನ್ನುವ ಪದಕ್ಕೆ ಅರ್ಥವನ್ನು ಹೇಳುವುದು ಸುಲಭವಲ್ಲ. ಕೋಟಉಮಚಿಗೆ ಎನ್ನುವ ಹೆಸರು ಅಲ್ಲಿದ್ದ ಒಂದು ಕೋಟೆಯ ನಿಮಿತ್ತವಾಗಿ ಬಂದಿದೆ ಎಂದು ಹೇಳ ಬಹುದು. ವಿಜಯನಗರದ ಅರಸನಾದ ಸದಾಶಿವರಾಯನು ಅಲ್ಲಿ ಕಟ್ಟಿಸಿದ ಸದಾಶಿವರಾಯ ಸಮುದ್ರವೆಂಬ ಕೆರೆಯ ನಿಮಿತ್ತವಾಗಿ ಇದಕ್ಕೆ ಸದಾಶಿವ ರಾಯ ಸಮುದ್ರವೆಂಬ ಹೆಸರು ಬಂದಿರಬಹುದು.

ಚಾಲುಕ್ಯ ಐದನೆಯ ವಿಕ್ರಮಾದಿತ್ಯನ ಕಾಲದಲ್ಲಿ ಬೆಳ್ವೊಲ-೩೦೦ ಮತ್ತು ಪುರಿಗೆರೆ-೩೦೦, ಈ ಪ್ರಾಂತಗಳು ದಂಡನಾಯಕ ಕೇಶಿಮಯ್ಯ ಎನ್ನುವ ಅಧಿಕಾರಿಯ ಆಡಳಿತದಲ್ಲಿದ್ದವು. ಕ್ರಿ. ಶ. ೧೦೧೨ ರಲ್ಲಿ ಕೇಶಿಮಯ್ಯನು ಅರಸನ ಅಪ್ಪಣೆಯನ್ನು ಪಡೆದು ಬೆಳ್ವೊಲ ೩೦೦ ಪ್ರಾಂತದೊಳಗಣ ನರೆಯಂಗಲ್-೧೨ ರಲ್ಲಿದ್ದ ಈ ಉಮಚಿಗೆ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತನೆಮಾಡಿ, ಸರ್ವಾಭ್ಯಂತರ ಸಿದ್ಧಿಯಾಗಿ, ಸರ್ವನಮಸ್ಯದಗ್ರಹಾರವಾಗಿ ರೋಣದ ಮೌನರ ಶ್ರೀಧರಭಟ್ಟ ಎನ್ನುವವನಿಗೆ ದಾನಮಾಡಿದನು. ಶ್ರೀಧರಭಟ್ಟನು ಅದರ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಂಡು ಉಮಚಿಗೆ ಅಗ್ರಹಾರವನ್ನು ೧೦೪ ಜನ ಮಹಾಜನರಿಗೆ ಹಂಚಿಕೊಟ್ಟನು. ಅಲ್ಲದೆ ಅಲ್ಲಿಯ ದೇವಸ್ಥಾನ, ವಿದ್ಯಾಸಂಸ್ಥೆ ಗಳಿಗೂ, ವಾದ್ಯಗಾರ, ನಾವಿದ ಮುಂತಾದವರಿಗೂ ದತ್ತಿಗಳನ್ನು ಕೊಟ್ಟ ವಿಚಾರವನ್ನು ಶಾಶನ ತಿಳಿಸುತ್ತದೆ.

ಉಮಚಿಗೆ ಅಗ್ರಹಾರವು ಒಂದು ಹೆಸರಾಂತ ವಿದ್ಯಾಕೇಂದ್ರವಾಗಿದ್ದಿತೆಂದು ಮೇಲೆ ಹೇಳಿದೆ. ಪ್ರಾಚೀನಕಾಲದ ಹಲವು ಅಗ್ರಹಾರಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲವಿದ್ದರೆ ಮತ್ತೆ ಹಲವು ಅಗ್ರಹಾರಗಳಲ್ಲಿ ಪ್ರೌಢ ಶಿಕ್ಷಣಕ್ಕೆ ವ್ಯವಸ್ಥೆ ಇದ್ದಿತು. ಉಮಚಿಗೆಯಲ್ಲಿ ಮಾತ್ರ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳೆರಡಕ್ಕೂ ಅನುಕೂಲತೆ ಇದ್ದುದನ್ನು ನಾವು ನೋಡುತ್ತೇವೆ.

ಈಗಿನಂತೆ ಆಗಲೂ ವಿದ್ಯಾಭ್ಯಾಸಕ್ಕೆ ಬುನಾದಿಯಾದ ಅಕ್ಷರಾಭ್ಯಾಸ ದಿಂದಲೇ ಶಿಕ್ಷಣ ಪ್ರಾರಂಭವಾಗುತ್ತಿತ್ತು. ಅಕ್ಷರಾಭ್ಯಾಸದ ನಂತರ ವಿದ್ಯಾರ್ಥಿ ಗಳಿಗೆ ವೇದ, ವೇದಾಂಗ, ನ್ಯಾಯ, ಪುರಾಣ, ಇತಿಹಾಸ, ವ್ಯಾಕರಣ ಮುಂತಾದ ವಿಷಯಗಳ ಶಿಕ್ಷಣವನ್ನು ಕೊಡುವುದು ರೂಢಿಯಲ್ಲಿತ್ತು. ಉಮಚಿಗೆ ಅಗ್ರ ಹಾರದಲ್ಲಿಯ ವಿದ್ಯಾಸಂಸ್ಥೆಯಲ್ಲಿಯೂ ಅಕ್ಷರಾಭ್ಯಾಸದಿಂದ ವಿದ್ಯಾಭ್ಯಾಸವು ಪ್ರಾರಂಭವಾಗುತ್ತಿದ್ದಿತೆಂದು ಹೇಳಬಹುದು. ಇದಕ್ಕಾಗಿ ಒಬ್ಬ ಉಪಾಧ್ಯಾ ಯನು ನಿಯಮಿಸಲ್ಪಟ್ಟಿದ್ದನು. ಇವನನ್ನು ಅಕ್ಕರಿಗ ನಾಗದೇಸಿಗನೆಂದು ಕ್ರಿ.ಶ. ೧೦೧೫ರ ಒಂದು ಶಾಸನ ಹೆಸರಿಸಿದೆ. ಈ ಅಕ್ಕರಿಗ ನಾಗದೇಸಿಗನು ಬರೆ ಯಲೂ, ಬಾಜಿಸಲೂ ಬಲ್ಲವನಾಗಿದ್ದನು. ಅಷ್ಟೇ ಅಲ್ಲದೆ ಗಣಿತ, ಜ್ಯೋತಿಷ್ಯ,

ಛಂದಸ್ಸು, ಅಲಂಕಾರ ಮುಂತಾದ ವಿಷಯಗಳಲ್ಲಿ ಪರಿಶ್ರಮವನ್ನು ಪಡೆದವನಾಗಿದ್ದನು. ಇದನ್ನು ನೋಡಿದಾಗ, ಇಲ್ಲಿಯ ವಿದ್ಯಾರ್ಥಿಗಳು ಅಕ್ಷರಾಭ್ಯಾಸದ ನಂತರ ಮೇಲೆ ಹೇಳಿರುವ ವಿಷಯಗಳಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದರು ಎಂದು ಹೇಳಬೇಕಾಗುತ್ತದೆ.

ನಾಗದೇಸಿಗನಿಗೆ ೨೫ ಮತ್ತರು ಭೂಮಿ ಮತ್ತು ೧ ನಿವೇಶನವು 'ಅಕ್ಕರಿಗ ವೃತ್ತಿ'ಯಾಗಿ ಕೊಡಲ್ಪಟ್ಟಿದ್ದುವು. ಅಕ್ಷರಾಭ್ಯಾಸವನ್ನು ಮಾಡಿಸುವುದರಿಂದ ಮತ್ತು ಗಣಿತ, ಛಂದಸ್ಸು, ಅಲಂಕಾರ, ಜ್ಯೋತಿಷ್ಯಗಳನ್ನು ಅವರಿಗೆ ಬೋಧಿಸುವುದರಿಂದ ಅವನ ಜವಾಬ್ದಾರಿಯು ಕೊನೆಗೊಳ್ಳದೆ. ವಿದ್ಯಾರ್ಥಿಗಳ ಇತರ ಆವಶ್ಯಕತೆಗಳ ಬಗೆಗೂ ಅವನು ಗಮನಕೊಡಬೇಕಾಗಿತ್ತು. ಅವರಿಗೆ ಒಂದು ಹೊತ್ತಿನ ಊಟ ಮತ್ತು ವರ್ಷಕ್ಕೆ ಒಂದು ವಸ್ತ್ರವನ್ನು ಕೊಡಬೇಕೆಂಬ ನಿಯಮವನ್ನು ಅವನು ಪಾಲಿಸಬೇಕಾಗಿತ್ತು.

ಅಕ್ಷರಾಭ್ಯಾಸವಾದ ನಂತರ, ವಿದ್ಯಾರ್ಥಿಗಳಿಗೆ ವೇದ, ವೇದಾಂಗ, ವ್ಯಾಕರಣ, ಗಣಿತ, ಛಂದಸ್ಸು, ಜ್ಯೋತಿಷ್ಯ, ಮುಂತಾದ ವಿಷಯಗಳಲ್ಲಿ ಆವಶ್ಯಕವಾದ ಶಿಕ್ಷಣವನ್ನು ಕೊಡಲಾಗುತ್ತಿದ್ದ ಬಗೆಗೆ ಮೇಲೆ ಹೇಳಿದೆ. ಆನಂತರ ಅವರು ಯಾವುದಾದರೂ ಒಂದೆರಡು ವಿಷಯಗಳನ್ನು ತೆಗೆದುಕೊಂಡು ಅದರಲ್ಲಿ ಪಾಂಡಿತ್ಯವನ್ನು ಪಡೆಯುವ ಅವಕಾಶಗಳಿಗೂ ಕೊರತೆ ಇರಲಿಲ್ಲ. ಇದಕ್ಕೆ ಅನುಕೂಲವಾಗುವಂತೆ ಹಲವು ಅಗ್ರಹಾರಗಳಲ್ಲಿ, ಹಲವು ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದ ಪ್ರಾಧ್ಯಾಪಕರಿದ್ದು, ;ಅಲ್ಲಿ ಆ ವಿಷಯಗಳನ್ನು ಮಾತ್ರ ಹೇಳಿಕೊಡುವ ವ್ಯವಸ್ಥೆ ಇರುತ್ತಿತ್ತು. ಹಾಗೆ ವ್ಯವಸ್ಥೆಗೊಂಡಿದ್ದ ಒಂದೆರಡು ಅಗ್ರಹಾರಗಳನ್ನು ಇಲ್ಲಿ ಉದಾಹರಿಸಬಹುದು. ಲೊಕ್ಕಿಗುಂಡಿ ಮತ್ತು ಕೊಂಡಗುಳಿ ಅಗ್ರಹಾರಗಳ ಪ್ರಾಭಾಕರ ಮತ್ತು ರೂಪಾವತಾರ ಎಂಬ ಗ್ರಂಥಗಳ ಅಭ್ಯಾಸಕ್ಕೆ ಅನುಕೂಲತೆ ಇದ್ದಿತು. ಇಂತಹ ಅಗ್ರಹಾರಗಳಲ್ಲಿ ಅಗ್ರಹಾರ ಕೋಟ ಉಮಚಿಗೆಯೂ ಒಂದು. ಇಲ್ಲಿ ವಿದ್ಯಾರ್ಥಿಗಳಿಗೆ ನ್ಯಾಸ ಮತ್ತು ಪ್ರಾಭಾಕರಗಳಲ್ಲಿ ಉಚ್ಚಶಿಕ್ಷಣವನ್ನು ಕೊಡಲಾಗುತ್ತಿತ್ತು. ಅಲ್ಲದೆ ಇಲ್ಲಿಯ ವಿದ್ಯಾರ್ಥಿಗಳಿಗೂ ಮತ್ತು ಅಧ್ಯಾಪಕರಿಗೂ ದತ್ತಿಗಳನ್ನು ಕೊಡುವುದರ ಮೂಲಕ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿತ್ತು.

ಉಮಚಿಗೆಯಲ್ಲಿ ಪ್ರಾಭಾಕರ ಮತ್ತು ನ್ಯಾಸದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳು ಛಾತ್ರರೆಂದು ಕರೆಯಲ್ಪಡುತ್ತಿದ್ದರು. ಇವರಿಗಾಗಿ ೨೫ ಮತ್ತರು ಭೂಮಿಯನ್ನು ಬಿಡಲಾಗಿದ್ದಿತು. ಇವರಿಗೆ ಬೋಧಿಸುತ್ತಿದ್ದ ಅಧ್ಯಾಪಕನನ್ನು ಭಟ್ಟನೆಂದು ಒಂದು ಶಾಸನವು ಕರೆದಿದೆ. ಭಟ್ಟನೆಂದಲ್ಲಿ ಪಂಡಿತನೆಂದು ಅರ್ಥವಾಗುತ್ತದೆ. ನ್ಯಾಸ ಮತ್ತು ಪ್ರಾಭಾಕರವನ್ನು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ ಭಟ್ಟನು ಆ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದನೆಂದು ಬೇರೆ

ಹೇಳಬೇಕಾಗಿಲ್ಲ. ಭಟ್ಟನಿಗೆ ೫೦ ಮತ್ತರು ಭೂಮಿ ಮತ್ತು ಒಂದು ನಿವೇಶನವು 'ಭಟ್ಟವೃತ್ತಿ'ಯಾಗಿ ಕೊಡಲ್ಪಟ್ಟಿದ್ದುವು. ಇದರಿಂದ ಅವನ ಆವಶ್ಯಕತೆಗಳು ನೀಗಲು ಸಹಾಯವಾಗುತ್ತಿತ್ತು. ಹೀಗೆ ವಿದ್ಯಾರ್ಥಿಗಳಿಗೂ ಮತ್ತು ಅಧ್ಯಾಪಕರಿಗೂ ದಾನಗಳನ್ನು ಕೊಡುವುದರಿಂದ, ಅವರ ಉದರಪೋಷಣೆಗೆ ಅನುಕೂಲವಾಗುತ್ತಿತ್ತು.

ಇಲ್ಲಿ ನಮ್ಮ ಗಮನಕ್ಕೆ ಬರುವ ಒಂದು ಅಂಶವೆಂದರೆ, ಅಲ್ಲಿಯ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳು ಹಾಗೂ ಉಪಧ್ಯಾಯರು ಇವರ ನಡುವೆ ಇದ್ದ ಸಂಬಂಧ. ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳ ಅಶನಾಚ್ಛಾದನಕ್ಕಾಗಿ ಪ್ರತ್ಯೇಕವಾದ ಭೂದಾನವೇನೂ ಕೊಡಲ್ಪಟ್ಟರಲಿಲ್ಲ. ಇವರ ಒಂದು ಹೊತ್ತಿನ ಊಟದ ಮತ್ತು ವಸ್ತ್ರದ ಜವಾಬ್ದಾರಿಯು ಅವರ ಉಪಾಧ್ಯಾಯನಾದ ಅಕ್ಕರಿಗ ನಾಗದೇಸಿಗನ ಮೇಲೆದ್ದಿತು. ನ್ಯಾಸ ಮತ್ತು ಪ್ರಾಭಾಕರಗಳಲ್ಲಿ ಶಿಕ್ಷಣವನ್ನು ಹೊಂದುತ್ತಿದ್ದ ಛಾತ್ರರು ತಮ್ಮ ಉಪಾಧ್ಯಾಯರನ್ನು ಊಟ ಅಥವಾ ಬಟ್ಟೆಗಳಿಗಾಗಿ ಅವಲಂಬಿಸಬೇಕಾಗಿರಲಿಲ್ಲ. ಅವರ ಜೀವನೋಪಾಯಕ್ಕಾಗಿ ಪ್ರತ್ಯೇಕವಾಗಿ ಅವರಿಗೆ ೨೫ ಮತ್ತರು ಭೂಮಿಯು ಕೊಡಲ್ಪಟ್ಟಿತ್ತು ಎಂದು ಮೇಲೆ ಹೇಳಿದೆ. ಇದರಿಂದ ಛಾತ್ರರು, ಅಕ್ಷರಾಭ್ಯಾಸವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳಂತೆ ಉಪಾಧ್ಯಾಯರನ್ನು ಆಶ್ರಯಿಸದೆ, ಸ್ವಾವಲಂಬನ ಜೀವನ ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ.

ಇನ್ನು ವಿದ್ಯಾರ್ಥಿಗಳಲ್ಲಿದ್ದಂತೆಯೇ ಉಪಾಧ್ಯಾಯರುಗಳಲ್ಲಿದ್ದ ಅಂತರವು ನಮಗೆ ಗೋಚರವಾಗುತ್ತದೆ. ಅಕ್ಷರಾಭ್ಯಾಸವನ್ನು ಮಾಡಿಸುತ್ತಿದ್ದ ಉಪಾಧ್ಯಾಯರನ್ನು ಅಕ್ಕರಿಗನೆಂದು ಕರೆಯಲ್ಪಟ್ಟಿದ್ದಾನೆ. ಇವನು ಅಕ್ಷರಗಳ ಜೊತೆಗೆ ಗಣಿತ, ಛಂದಸ್ಸು, ಅಲಂಕಾರ ಜ್ಯೋತಿಷ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಬೇಕಾಗಿತ್ತು. ಇದಕ್ಕಾಗಿ ಇವನಿಗೆ ೨೫ ಮತ್ತರು ಭೂಮಿ ಮತ್ತು ಒಂದು ನಿವೇಶನವು ಕೊಡಲ್ಪಟ್ಟಿದ್ದವು. ಆದರೆ ಭಟ್ಟನ ವಿಚಾರ ಹಾಗಿರಲಿಲ್ಲ. ಅವನು ಹೇಳಿಕೊಡುತ್ತಿದ್ದ ವಿಷಯಗಳು ಪ್ರಾಭಾಕರ ಮತ್ತು ನ್ಯಾಸ. ಇವುಗಳಿಗಾಗಿ ಅವನಿಗೆ ದೊರೆತ ಸಂಭಾವನೆ ೫೦ ಮತ್ತರು ಭೂಮಿ ಮತ್ತು ಒಂದು ನಿವೇಶನ. ಭಟ್ಟನಿಗೆ ಅಕ್ಕರಿಗನಿಗಿಂತ ಹೆಚ್ಚು ಭೂಮಿಯು ಕೊಡಲ್ಪಟ್ಟಿದ್ದುದು ಇಲ್ಲಿ ಸ್ಪಷ್ಟವಿದೆ. ಅಕ್ಕರಿಗನು ತನ್ನ ಅಲ್ಪಾದಾಯದಲ್ಲಿಯೇ ವಿದ್ಯಾರ್ಥಿಗಳಿಗೆ ಒಂದು ಹೊತ್ತಿನ ಊಟ ಮತ್ತು ವರ್ಷಕ್ಕೆ ಒಂದು ವಸ್ತ್ರದ ಏರ್ಪಾಡನ್ನು ಮಾಡಬೇಕಾಗಿತ್ತು. ಆದರೆ ಭಟ್ಟನು ಈ ಜವಾಬ್ದಾರಿಯಿಂದ ಹೊರತಾಗಿದ್ದನು. ಹೀಗೆ ಅವರಲ್ಲಿದ್ದ ಅಂತರವು ನಮಗೆ ಸ್ಪಷ್ಟವಾಗುತ್ತದೆ.

ಉಮಚಿಗೆ ಅಗ್ರಹಾರದ ಆಡಳಿತದ ವಿಷಯವಾಗಿ ನಮಗೆ ತಿಳಿಯುವುದಾದರೂ, ಬಹಳ ವಿವರಗಳು ಸಿಗುವದಿಲ್ಲ. ಹಳ್ಳಿಗಳ ಮುಖ್ಯಸ್ಥರಾದವರನ್ನು

ಊರೊಡೆಯನೆಂದು ಕರೆಯಲಾಗಿದೆ. ಹಳ್ಳಿಗಳ ಆಡಳಿತದಲ್ಲಿ ಅವರು ಪ್ರಮುಖ ವಾದ ಪಾತ್ರವನ್ನು ವಹಿಸುತ್ತಿದ್ದರು, ಕೋಟ ಉಮಚಿಗೆಯಲ್ಲಿ ಊರೊಡೆ ಯರಿದ್ದ ವಿಚಾರವು ಶಾಸನಗಳಿಂದ ತಿಳಿದುಬರುತ್ತದೆ. ಊರೊಡೆಯನ ಜೀವ ನೋಪಾಯಕ್ಕಾಗಿ ಅವನಿಗೆ ಅನುಕೂಲತೆಗಳನ್ನು ಏರ್ಪಡಿಸಲಾಗಿತ್ತು. ೬೦೦ ಮತ್ತರು ಭೂಮಿ, ೨ ನಿವೇಶನಗಳು ಮುಂತಾದವುಗಳನ್ನು ಅವನಿಗೆ ದತ್ತಿಯಾಗಿ ಬಿಡಲಾಗಿತ್ತು. ಇವನ ಕರ್ತವ್ಯಗಳು ವೈವಿಧ್ಯಪೂರ್ಣವಾಗಿದ್ದವು. ಯಜ್ಞ ಮಾಡಿಸುವದು, ಮದುವೆ, ಉಪನಯನಗಳನ್ನು ಮಾಡಿಸುವುದು ಮುಂತಾ ದವುಗಳು ಅವನ ಕೆಲಸ ಕಾರ್ಯಗಳಲ್ಲಿ ಹಲವಾಗಿದ್ದವು. ಇವುಗಳಿಂದಲೂ ಊರೊಡೆಯನಿಗೆ ದ್ರವ್ಯದ ರೂಪದಲ್ಲಿ ಸಂಭಾವನೆಯು ದೊರಕುತ್ತಿತ್ತು. ಯಜ್ಞ ಮಾಡಿಸುವದಕ್ಕಾಗಿ ಅವನಿಗೆ ಸಿಗುತ್ತಿದ್ದ ಸಂಭಾವನೆ ಗದ್ಯಾಣ ೧. ಮದುವೆ ಮಾಡಿಸಲು ಅವನಿಗೆ ೨ ಗದ್ಯಾಣ ಕೊಡಲ್ಪಟ್ಟರೆ, ಉಪ ನಯನದ ಕಾಲದಲ್ಲಿ ಅವನಿಗೆ ೧ ಪಣ ಕೊಡಲ್ಪಡುತ್ತಿತ್ತು. ಅದರಂತೆಯೇ ಬಾದುಬೆ ಕಾರ ಪುಣ್ಣಿಮೆ ದೀಪಗಳಿಗೆ, ಈ ಮೂರು ಪರ್ವಗಳಲ್ಲಿ ಅವನಿಗೆ ೧ ಗದ್ಯಾಣ ಸಂದಾಯವಾಗುತ್ತಿತ್ತು. ಈ ಕಾರ್ಯಗಳ ಜೊತೆಗೆ ತಪ್ಪುದಂಡ ವನ್ನು ತೆರಬೇಕಾದವರಿಂದ ಅದನ್ನು ಸಂಗ್ರಹಿಸಿ, ಆ ಹಣವನ್ನು ನಿಗದಿಗೊಂಡ ಕಾರ್ಯಗಳಿಗೆ ಅಂದರೆ ಕೆರೆ ಮುಂತಾದವುಗಳ ರಕ್ಷಣೆಗಾಗಿ ಅದನ್ನು ಬಳಸುವ ಜವಾಬ್ದಾರಿ ಇವನದಾಗಿತ್ತು.

ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿಯ ಆಡಳಿತ ಕ್ರಮವು ಬಹು ಕಟ್ಟು ನಿಟ್ಟಿನ ದಾಗಿದ್ದಿತು. ಕೋಟ ಉಮಚಿಗೆಯಲ್ಲಿಯ ಆಡಳಿತ ಕ್ರಮವು ನಿಯಮಬದ್ಧ ವಾಗಿದ್ದಿತೆಂದು ನಾವು ಶಾಸನಗಳ ಆಧಾರದಿಂದ ಹೇಳಬಹುದು. ನ್ಯಾಯವನ್ನು ಮೀರಿ, ಅಕ್ರಮವಾಗಿ ನಡೆದು ಜನಜೀವನದಲ್ಲಿ ಅಶಾಂತಿಯನ್ನೆಬ್ಬಿಸುವ ಯಾವ ಕಾರ್ಯಗಳಿಗೂ ಅಲ್ಲಿ ಎಡೆ ಇರಲಿಲ್ಲ. ಅಸಭ್ಯ ನಡುವಳಿಕೆಯು ಶಿಕ್ಷಾರ್ಹವಾ ಗಿದ್ದಿತು. ಪರಸ್ಪರ ಬೈಯುವದು, ಹೊಡೆಯುವದು ಕೂಡ ದಂಡನಾರ್ಹವಾಗಿ ದ್ದಿತು. ಒಬ್ಬರನ್ನೊಬ್ಬರು ಬೈದಲ್ಲಿ (ಒರ್ಬರೊರ್ಬರಂ ಬೈದಡೆ) ಅವರು ೨ ಪಣ ದಂಡವನ್ನು ಕೊಡಬೇಕಾಗಿತ್ತು. ಹೊಡೆದ (ಬಡಿದಡೆ) ಅಪರಾಧಕ್ಕಾಗಿ ಅವರು ತೆರಬೇಕಾಗಿದ್ದ ದಂಡ ೧೨ ಪಣ. ಇರಿಯುತ್ತೇನೆಂದು ಚೂರಿಯನ್ನು ತೋರಿಸುವದು (ಸುರಗೆ ಗೀಳ್ವಡೆ) ಅಪರಾಧವೆಂದು ಪರಿಗಣಿಸಲ್ಪಟ್ಟಿತ್ತು. ಹಾಗೆ ತೋರಿಸಿದ ಮಾತ್ರಕ್ಕೆ ಅವರು ೩ ಗದ್ಯಾಣವನ್ನು ಕೊಡಬೇಕಾಗುತ್ತಿತ್ತು. ಹೀಗಿರುವಾಗ, ಒಂದು ವೇಳೆ ಇರಿದು ಬಿಟ್ಟಲ್ಲಿ (ಇರಿದಡೆ) ೧೨ ಗದ್ಯಾಣ ದಂಡ ವನ್ನು ತೆರಬೇಕೆಂಬ ನಿಯಮವಿದ್ದುದರಲ್ಲಿ ವಿಶೇಷವೇನೂ ಇಲ್ಲವೆನ್ನಬಹುದು.

ಮಾಣಿಯರು ಅಂದರೆ ಬ್ರಹ್ಮಚಾರಿಗಳು ನೀತಿಯುಕ್ತವಾದ ಜೀವನ ವನ್ನು ನಡೆಸಬೇಕೆಂಬ ಕಟ್ಟಳೆ ಇದ್ದಿತು. ಅನೀತಿಯುಕ್ತ ನಡುವಳಿಕೆ ಶಿಕ್ಷಾರ್ಹ

ವಾಗಿತ್ತು. ಅಂಥವರಿಗೆ ಇಲ್ಲಿ ದಂಡವನ್ನು ಹಾಕುವ ವಾಡಿಕೆ ಇದ್ದಿತು. ಒಂದು ವೇಳೆ ಮಾಣಿಯು ಅನೀತಿಯುಕ್ತಜೀವನವನ್ನು (ಮಾಣಿ ಸೂಳೆ ಗೇಯ್ದಡೆ) ನಡೆಸಿದಲ್ಲಿ ಅವನಿಂದ ೩ ಪಣಗಳನ್ನು ವಸೂಲುಮಾಡುತ್ತಿದ್ದರು. ಮಾಣಿ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಅವಕಾಶವೂ ಇದ್ದಿತು. ಆ ಸಮಯದಲ್ಲಿ ಅವನು ತೆರಬೇಕಾಗಿದ್ದ ದಂಡ ೩ ಗದ್ಯಾಣಗಳು. ಪ್ರಾಯಶ್ಚಿತ್ತದ ಸಮಯದ ಹೊರತು ಉಳಿದ ಸಮಯದಲ್ಲಿ ಅವನು ಕತ್ತಿಯುತನಾಗಿ ಪ್ರಾಯಶ್ಚಿತ್ತ ಮಂಟಪವನ್ನು ಏರುವಂತಿರಲಿಲ್ಲ. ಹಾಗೆ ಏರಿದಲ್ಲಿ ಅವನು ಶಿಕ್ಷೆಗೆ ಒಳಗಾಗಬೇಕಾಗುತ್ತಿತ್ತು. ತಪ್ಪಿತಸ್ಥರಿಗೆ ದಂಡಗಳನ್ನು ವಿಧಿಸುವಾಗ ಜಾತಿಬೇಧಗಳನ್ನರಿತು ವಿಧಿಸುವ ವಾಡಿಕೆ ಇದ್ದಿತು. ಅದೇ ರೀತಿ, ಮಾಡಿದ ಎಲ್ಲ ಅಪರಾಧಗಳಿಗ ತಕ್ಕಂತೆ ದಂಡ ವನ್ನು ಹಾಕುತ್ತಿದ್ದುದು ಇಲ್ಲಿಯ ಒಂದು ವೈಶಿಷ್ಟ್ಯವೆನ್ನಬಹುದು. ಹೀಗೆ ದಂಡ ಗಳನ್ನು ವಿಧಿಸುವಾಗಲೂ ಅವರು ಹಲವು ನಿಯಮಗಳನ್ನು ಪಾಲಿಸುತ್ತಿದ್ದ ರೆಂದು ಹೇಳಬಹುದು. ಇಲ್ಲಿ ಗಮನಾರ್ಹವಾದ ವಿಚಾರವೆಂದರೆ ಅವರು ಒಪ್ಪಿ ಸುತ್ತಿದ್ದ ದಂಡದ ಪ್ರಶ್ನೆ. ದಂಡ ಕೊಡುವುದು ಅವರಿಗೆ ಮುಖ್ಯವಾಗಿಲ್ಲದೆ ಇರ ಬಹುದಾದರೂ ಅದರ ಹಿಂದೆ ಅಡಕವಾಗಿದ್ದ ಮಾನಾಪಮಾನದ ಪ್ರಶ್ನೆಯನ್ನು ಅವರು ಎದುರಿಸುವುದು ಮುಖ್ಯ ಅಂಶವಾಗಿತ್ತು.

ಇಲ್ಲಿದ್ದ ಹಲವು ದೇವಾಲಯಗಳೆಂದರೆ ಸೋಮೇಶ್ವರ, ಬಾಗಿಯಬ್ಬೇಶ್ವರ, ಆಯ್ಪಿಗಾವುಂಡ, ಆದಿತ್ಯದೇವ, ಬೆಟ್ಟದ ಭಗವತಿ, ನಾರಾಯಣ ಮುಂತಾದವು. ಇವುಗಳ ಪೋಷಣೆಗಾಗಿ ದತ್ತಿಗಳನ್ನು ಕೊಡುತ್ತಿದ್ದರು. ಕ್ರಿ. ಶ. ೧೧೧೨ ರ ಶಾಸನವೊಂದು ಈ ದೇವಸ್ಥಾನಗಳಿಗೆ ಭೂಮಿ ಮತ್ತು ನಿವೇಶನಗಳನ್ನು ಕೊಟ್ಟ ವಿಚಾರವನ್ನು ತಿಳಿಸುತ್ತದೆ. ಇವುಗಳಿಂದ ಬಂದ ಆದಾಯದಿಂದ ದೇವಸ್ಥಾನ ಗಳು ನಡೆಸಲ್ಪಡುತ್ತಿದ್ದುದಷ್ಟೆ ಅಲ್ಲದೆ ನೈಷ್ಠಿಕರಾದ ತಪೋಧನರು ಮುಂತಾ ದವರ ಜೀವನೋಪಾಯಕ್ಕೆ ಸಹಾಯವಾಗುತ್ತಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಪಹರೇಕಾರರಿಗೆ, ನಾವಿದರಿಗೆ, ಸತ್ರಕ್ಕೆ ಮುಂತಾದವುಗಳಿಗೆ ದಾನಗಳನ್ನು ಕೊಡಲ್ಪಟ್ಟ ವಿಚಾರವೂ ಈ ಶಾಸನದಿಂದ ತಿಳಿದುಬರುತ್ತದೆ.

★ ಎಸ್. ಎಲ್. ಶಾಂತಕುಮಾರಿ

ಕವಿ ಲಕ್ಷ್ಮೀಶನ ಪಂಚಾಂಗ ಪ್ರಜ್ಞೆ

ಯುಗ ಯುಗಗಳಲ್ಲಿ ಬದುಕ ಬೇಕಾದ ಕಾವ್ಯವನ್ನು ರಚಿಸ ಹೊರಟ ಕವಿಯು ಒಂದು ವಿಶ್ವಕೋಶವಾಗಿ ನಿಂತು ಕಾವ್ಯೋದ್ಯೋಗದಲ್ಲಿ ತೊಡಗಬೇಕಾಗುತ್ತದೆ. ಹೀಗಾಗಿ ಸಮರ್ಥನಾದ ಕವಿಯ ಕಾವ್ಯದಲ್ಲಿ ಬದುಕಿನ ಜ್ಞಾನ ವೈವಿಧ್ಯ ಬಳಕೆಗೊಂಡಿರುತ್ತದೆ. ಉದಾಹರಣೆಗಾಗಿ ಪಂಪನ ರಣರಂಗ ಜ್ಞಾನ, ಹರಿಹರನ ಪುಷ್ಪಜಾತಿ ಜ್ಞಾನಗಳನ್ನು ಇಲ್ಲಿ ಹೆಸರಿಸಬಹುದು. ಇವರಷ್ಟು ಉಜ್ವಲವಾಗಿಯಲ್ಲದಿದ್ದರೂ ಕವಿ ಲಕ್ಷ್ಮೀಶನು ತನ್ನ ಕಾವ್ಯದಲ್ಲಿ ಆಗಾಗ ಗ್ರಹಬಲ, ರಾಶಿನಕ್ಷತ್ರಗಳ ಶುಭಾಶುಭಗಳ ವಿವೇಚನೆ ಮಾಡಿ ತನ್ನ ಕಾವ್ಯದಲ್ಲಿ ಪಂಚಾಗೆ ಪ್ರಜ್ಞೆಯನ್ನು ಹೀಗೆ ಪ್ರದರ್ಶಿಸಿದ್ದಾನೆ.

ಸ್ತ್ರೀಯರ ವರ್ಣನೆ ಮಾಡುವಾಗ ಅನೇಕ ಕವಿಗಳು ಕಮಲ, ತುಂಬಿ, ಚಂದ್ರ, ತಳಿರು ಮೊದಲಾದವುಗಳನ್ನು ಅವರ ಅಂಗಾಂಗಗಳ ವರ್ಣನೆಗಾಗಿ ಬಳಸಿದ್ದಾರೆ. ಆದರೆ ಲಕ್ಷ್ಮೀಶನು ಇವುಗಳ ಬಳಕೆ ಮಾಡಿದ್ದರೂ ಕೆಲವು ಕಡೆಗಳಲ್ಲಿ ದ್ವಾದಶರಾಶಿಗಳ ಹೆಸರುಗಳಲ್ಲಿ ಸ್ತ್ರೀವರ್ಣನೆಯನ್ನೂ ಮಾಡಿದ್ದಾನೆ. ಉದಾಹರಣೆಗೆ ಈ ಪದ್ಯವನ್ನು ನೋಡಬಹುದು.

ಸುನಿ **ಮೇಷ ಮೀನ ಚಾಪಲ** ನೇತ್ರೆ ಚಕ್ರೋ**ನ್ಮಿಥುನ ಕುಂಭ** ಕುಚೆ **ಮಕರ**
ಕೇತುನುತ **ವರ್ತುಲಾನನೆ ಸಿಂಹ** ಮಧ್ಯೆ **ವೃಷಭಾಂಕ** ವೈರಿಯು ಪಟ್ಟದಾಸೆ **ಕನ್ಯಾ**
ಕುಲಮಣಿ ಮನಸಿಜ ಶಶಾಂಕ **ಕರ್ಕಾಟ ಚೇಳವುಂ** ತೊಡುವ
ತನಿ ಸೊಬಗುವಡೆದ ಸನ್ಮೋಹನ ಕಣಿಯೆಂ ಬಾ–
ಯೆನುತೋರ್ವ ನೀರೆ ಸಖಿಯಂ ಕರೆದಳೀ ರಾಶಿ ರಾಶಿಯಂ

ಪೆಸರಿಪವೋಲು (೬–೨೫)

ಸ್ತ್ರೀ ವರ್ಣನೆ ಮಾಡುವಾಗ ನಕ್ಷತ್ರಗಳ ಹೆಸರುಗಳನ್ನೂ ಬಳಸಿರುವುದು ಇವನ ಮತ್ತೊಂದು ವೈಶಿಷ್ಟ್ಯವಾಗಿದೆ ಇದೋ ನೋಡಿ :–

ಗುರು ಕುಚದ **ಭರಣಿ** ಸುಂದರ ಗಜಾ **ರೋಹಿಣಿ** ಮ
ಧುರ ಕಾಮಕೇಳೀ **ರಸಾರ್ದ್ರೆ** ಸನ್ಮೋಹ**ನೋ**
ತ್ತರೆ ಸುರತ ತಂತ್ರ ವಿರಚಿತ **ಹಸ್ತ ಚಿತ್ತೆ** ಹೃ**ಸ್ವಾತಿ** ವರ್ತುಳ ಸುಕಂಠೆ
ವರ ಬಾಹು **ಮೂಲೆ** ಮಣಿಭೂಷಣ **ಶ್ರವಣೆ** ವಿ-
ಸ್ತರ ಗುಣಾ **ಪೂರ್ವೆ**ಯೆನಿಸುವ ಬಾಲಕಿಯರಲ್ಲಿ
ಪರಿಶೋಭಿಸಿದರೆಸೆವ ನಕ್ಷತ್ರಗಣದಂತೆ ಮೊಗಸಸಿಯು ಸೇರುವೆಯೊಳು

(೬–೨೨)

ನವಗ್ರಹಗಳ ಹೆಸರುಗಳನ್ನು ಬಳಸಿ ಸ್ತ್ರೀ ವರ್ಣನೆ ಮಾಡಿರುವ ಮತ್ತೊಂದು ಪದ್ಯವನ್ನಿಲ್ಲಿ ನೋಡಬಹುದು.

ಕಲ **ಹಂಸ** ಗಮನೆ **ಪೂರ್ಣೇಂದ್ರ** ಮುಖಿ ಚಾರು **ಮಂ**
ಗಳ ಗಾತ್ರೆ ಘನ **ಸೌಮ್ಯ** ಸುಂದರ ವಿಳಾಸಿನಿ ವಿ-
ಮಲ **ಗುರು** ಪಯೋಧರೆ ಸರಸ **ಕವಿ** ನುತ ಪ್ರಮದೆ
ಮಲ್ಲಿಕಾ **ಮಂದ** ಸ್ಮಿತೆ
ವಿಲಸದ್ಭು**ಜಂಗ** ಸಂಗತೆ ಮದನ **ಕೇತು** ಚಂ
ಚಲನೇತ್ರೆ ಕೇಳ ನಿನ್ನದೆಸೆಗಿದೆ ನವಗ್ರಹಂ
ಗಳ ಪೆಸರ ಬಲ ಮಿನ್ನು ಸೊಲ್ವುದು ನಿನಗೆ ಜನ
ಪೆಂಪವಳೊರ್ವಳ್ ಸಖಿಯೊಳು (೬-೨೯)

ಇಲ್ಲಿ ಹಂಸ—ಸೂರ್ಯ, ಸೌಮ್ಯ—ಬುಧ, ಕವಿ—ಶುಕ್ರ, ಮಂದ—ಶನಿ, ಭುಜಂಗ—ರಾಹು, ಗ್ರಹಗಳೆಂದು ತಿಳಿಯಬೇಕು. ಉಳಿದ ಗ್ರಹಗಳ ಹೆಸರುಗಳನ್ನು ಇದ್ದ ಹಾಗೆ ಬಳಸಿದ್ದಾನೆ. ಇವು ಕೇವಲ ಸ್ತ್ರೀವರ್ಣನೆಯಲ್ಲಿ ಬಳಸಿದ ರಾಶಿ, ನಕ್ಷತ್ರ ಗ್ರಹಗಳ ಹೆಸರುಗಳಾದವು. ಅವನ ಕಾವ್ಯವನ್ನು ಒಳಹೊಕ್ಕು ನೋಡಿದಾಗ ಪಂಚಾಂಗದಲ್ಲಿ ಬರುವ ಶುಭಾಶುಭ ಫಲಗಳ ವಿವೇಚನೆಯನ್ನು ತಿಳಿಯಬಹುದಾಗಿದೆ.

ಶ್ರೀಕೃಷ್ಣನು ಧರ್ಮರಾಜನನ್ನು ಕುರಿತು "......ಚೈತ್ರಮಾಸಂ ಪೋದುದು ಈ ವೇಳೆಗಧ್ವರ ಸಮಯಮಲ್ಲುಪಕ್ರಮಿಸಲ್" ಎಂದು ಹೇಳುತ್ತಾನೆ. ಯಾವುದಾದರೂ ಶುಭಕಾರ್ಯ ಮಾಡಬೇಕಾದರೆ ಶುಭಮುಹೂರ್ತ ಬೇಕಲ್ಲವೆ ? ಈ ವಿವೇಚನೆ ಪಂಚಾಗದಲ್ಲಿ ಬರುತ್ತದೆ. ಆದುದರಿಂದಲೇ ಧರ್ಮರಾಜನು ಕೃಷ್ಣ ಹಾಗೂ ವ್ಯಾಸರ ಅನುಮತಿಯಂತೆ ೧೧ ತಿಂಗಳು ಕಳೆದ ಮೇಲೆ ಮತ್ತೆ ಚಿತ್ರ ಚಿತ್ರಾ ಪೌರ್ಣಮಾಸಿಯೊಳ್ ಬಿಟ್ಟು ಸರ್ಜಿಸಿ ಹಯಮನುತ್ಸವದೊಳು."

ರಾಮಚಂದ್ರನ ಮಡದಿ ಗರ್ಭಿಣಿ ಆದಾಗ ಕವಿ ಹೀಗೆ ಹೇಳುತ್ತಾನೆ :-

"...... ಬಳಿಕ ವರ ಪುಷ್ಯ ನಕ್ಷತ್ರ ದಂತದೋಳ್ ವೈದೇಹಿ ಗಾಯಿತ್ತು ಗರ್ಭದಾನಂ. ಅದರ ಫಲಮಂ ನೋಡಲು ಎಂತಾದೊಡಂ ತನ್ನ ಕಾಂತನಗಲ್ದು ನೀಮಂತಿನಿ ಪರಸ್ಥಳದೊಳಣುಗರಂ ಪಡೆವಳ್"(೧೮-೩೩)

ಇಲ್ಲಿ ವಿಷ್ಣು ನಕ್ಷತ್ರವೆಂದರೆ ಶ್ರವಣಾ ನಕ್ಷತ್ರ. ಈ ನಕ್ಷತ್ರದಲ್ಲಿ ಗರ್ಭಿಣಿ ಆದವಳು ಪ್ರಸವ ಕಾಲದಲ್ಲಿ ಪತಿಯನ್ನಗಲಿ ಹೋಗಿ ಪರ ಸ್ಥಳದಲ್ಲಿ ಮಕ್ಕಳನ್ನು ಪಡೆಯುವಳೆಂದು ಜ್ಯೋತಿಷ್ಯ ಶಾಸ್ತ್ರದಲ್ಲಿ ಹೇಳಿದೆ. ಅದುದರಿಂದಲೇ ಸೀತೆ ವಾಲ್ಮೀಕಿಯ ಆಶ್ರಮದಲ್ಲಿ ಪ್ರಸವಿಸುತ್ತಾಳೆ.

ಬಬ್ರುವಾಹನನು ಅರ್ಜುನನ ತಲೆ ಕಡಿದಾಗ ಕವಿ :–

"ತ್ರಿಜಗಂ ಮರಗುವಂತೆ ಕಾರ್ತೀಕೈ ಕಾದಶಿ
ಕುಜವಾರದುತ್ತರಾ ನಕ್ಷತ್ರ ದಂದು ವಾ
ರಿಜ ಮಿತ್ರನಸ್ತಮಯ ಸಮಯದೊಳ್ಪಷ್ಟೈಯಿಸುತ
ರ್ಜುನನ ತಲೆ ಬೀಳಲು" (೨೩–೪೯)

ಬಂದಿದ್ದಾನೆ. ಈ ದಿವಸ ಬ್ರಹ್ಮಣರಿಗೆ ಪರ್ವಕಾಲವಾಗಿದೆ.

ಚಂದ್ರಹಾಸನು ತಬ್ಬಲಿಯಾಗುವದಕ್ಕೆ ಅವನು ಜನಿಸಿದ ಕೆಟ್ಟ ಮುಹೂರ್ತವೇ ಕಾರಣ. ಇವನು :–

" ಎಡದಂಘ್ರಿಗರುವೆರಳಾಗಿ ದಿವ ದೊಳುತ್ಪನ್ನ ನಾದಂ
ಮೂಲ ನಕ್ಷತ್ರ ದಿಂದರಿಷ್ಟಾಂಶದೊಳ್" (೨೮–೧೪)

ಮೂಲಾ ನಕ್ಷತ್ರದ ಮೂರನೆಯ ಪಾದದ ಕೊನೆಯ ಭಾಗವೂ,ನಾಲ್ಕನೇ ಪಾದದ ಆದಿ ಭಾಗವೂ ಸೇರಿದರೆ ಅರಿಷ್ಟಾಂಶವಾಗುತ್ತದೆ. ಇಂತಹ ಕೆಟ್ಟ ಮುಹೂರ್ತದಲ್ಲಿ ಮಕ್ಕಳು ಜನಿಸಿದರೆ ತಂದೆ ತಾಯಿಗೆ ಕೇಡೆಂದು ಪಂಚಾಂಗ ಹೇಳುತ್ತದೆ. ಒಂದು ವೇಳೆ ಹುಟ್ಟಿದ್ದೇ ಆದರೆ "ಗೋಮುಖ ಪ್ರಸವ ಶಾಂತಿ" ಅಥವಾ ಮಹಾಶಾಂತಿಯನ್ನು ಮಾಡಿಸಬೇಕೆಂದೂ ಪಂಚಾಂಗ ಸಲಹೆ ನೀಡುತ್ತದೆ.

ಪಂಚಾಂಗಪ್ರಜ್ಞೆಯುಳ್ಳ ಲಕ್ಷ್ಮೀಶ, ಚಂದ್ರಹಾಸನ ರಾಜಧಾನಿಯನ್ನೂ. ಅವನ ರಾಜ್ಯಾಡಳಿತ ಕ್ರಮವನ್ನೂ ವರ್ಣಿಸುವಾಗ :–

ದಶಮಿಯ ಮಹೋತ್ಸವಂ ಪೆರ್ಚಿತೇಕಾದಶಿಯೊ
ಳಶನಮಂ ತೊರೆದವರಚ್ಯುತ ಪರಾಯಣರಾಗಿ
ನಿಶಿಯೊಳ್ ನಿರಂತರಂ ನಿದ್ರೆಯಂ ಬಿಟ್ಟರಾ ಮರುದಿನಂ ದ್ವಾದಶಿಯೊಳು
ಕುಶ ಶಯನ ಪೂಜೆಯಂ ಮಾಡಿ ಭುಂಜಿಸುವರಿಂತ
ತಿಶಯ ಮಾದುದು......" (೨೯–೧೨)

ಎಂದು ವರ್ಣಿಸುವಲ್ಲಿ ತಿಥಿಗಳ ಮಹತ್ವವನ್ನೂ ಏಕಾದಶಿಯ ಘನತೆಯನ್ನೂ ವರ್ಣಿಸಿದ್ದಾನೆ.

ದುಷ್ಟಬುದ್ಧಿಯ ಮಗನು ಸತ್ತಾಗ ಕವಿ:–

ಮಿತ್ರ ಪ್ರಿಯಂ, ರಾಜ ತೋಷಿತಂ ಮಂಗಳ ಚ–
ರಿತ್ರಂ ಬುಧಾಶ್ರಯಂ ಗುರು ಭಾವಿ ಕವಿ ನುತಂ
ಚಿತ್ರ ಮಣಿ ಮಂದರ ನಿಭಂ ಭೋಗಿ ಸಂತತಂ ಧ್ವಜ
ವಜ್ರ ಶುಭ ಚರಣನು
ಪುತ್ರ ನಿನಗಪ್ಪುದು ನವಗ್ರಹ ಸ್ಥಿತಿಗಳ್ ಪ
ರಿತ್ರಾಣಮಂ ಮಾಡಿದವರಿಲ್ಲ ನಿನಗೆ ನಾಂ
ಶತ್ರುವಾವೆಂ ಮಗನೆ ಹಾಯೆಂದು ಹಲುಬಿದಂ ಮಂತ್ರಿ ಶೋಕಾರ್ತನಾಗಿ
(೨೧–೬೧)

ಎಂದು ಹೇಳಿಸಿದ್ದಾನೆ. ಈ ಪದ್ಯಕ್ಕೆ ಎರಡು ಅರ್ಥಗಳಿದ್ದು ಒಂದು ಅರ್ಥ ನವಗ್ರಹಗಳ ಪರವಾಗಿ ನಿಲ್ಲುತ್ತದೆ.

ಕಾವ್ಯದಲ್ಲಿ ಒಂದು ಕಡೆಗೆ ಇಂದ್ರನ ಮುಖದಿಂದ :–

"ಸರ್ಪದ ನಕ್ಷತ್ರ ಸಂಯುತದ ಗುರವಾರ ಮಾ
ಗಿರ್ಪುದಿಂದೆಲೆ ಮುನೀಶ್ವರ ಮಹಿಪಾಲಂ ಸ
ಮರ್ಪಿಸು ಘನಸಾರದಾಹುತಿಯನಗ್ನಿಮುಖದಿಂದ ನೀನೆನಗಿತ್ತೊಡೆ
ದರ್ಪದಿಂ ತೃಪ್ತನಾದಪೆಂ" (೩೪–೨೧)

ಎಂದು ಹೇಳಿಸುತ್ತಾನೆ. ಇಲ್ಲಿ ಸರ್ಪ ನಕ್ಷತ್ರವೆಂದರೆ ಅಶ್ಲೇಷಾ ನಕ್ಷತ್ರವೆಂದರ್ಥ.

ಜೀವನದಲ್ಲಿ ಧರ್ಮಾಚರಣೆಯನ್ನು ಆಚರಿಸುವ ಮನುಷ್ಯನಿಗೆ ಕೆಲವು ಸಂದೇಹಗಳು ಬರುತ್ತವೆ. ಅವುಗಳ ಪರಿಹಾರಕ್ಕಾಗಿ ಪಂಚಾಂಗಕ್ಕೇ ಶರಣು ಹೋಗಬೇಕು. ಇಂತಹ ಧರ್ಮ ಸಂಕಟದ ಪ್ರಸಂಗವೊಂದನ್ನು ಜೈಮಿನಿ ಭಾರತದಲ್ಲಿ ಉಲ್ಲೇಖಿಸಲಾಗಿದೆ. ಸುಧನ್ವನು ಈ ಕೆಳಗಿನ ಧರ್ಮ ಸಂಕಟಕ್ಕೆ ಸೂಕ್ತ ಪರಿಹಾರವನ್ನು ಆಲೋಚಿಸುತ್ತಾನೆ. ಅದು ಹೀಗೆ.

"ಸತಿಗೆ ಷೋಡಶದ ಋತು ಸಮಯಮೇಕಾದಶೀ
ವ್ರತಮುಲಂಘ್ಯ ಶ್ರಾದ್ಧಮಿನಿತೊಂದು ದಿನಮೆ ಸಂ
ಗತ ಮಾನೊಡೆಂತು ಕರ್ತವ್ಯಮೆನೆ ಪೈತೃಕದ ಶೇಷಾನ್ನ ಮಾಘ್ರಾಣಿಸ
ಕೃತಭೋಜನ ಮಾದಪುದು ನಡುವಿರುಳ್ಗಳೆದಾವ
ನಿತೆಯು ನೊಡಗೂಡ ಬಹುದದರಿಂದ ಧರ್ಮಪ
ದ್ಧತಿಯನೀಕ್ಷಿಸಲಿವಳನಿಂದು ಮೀರುವದುಚಿತವಲ್ಲೆಂದುಮಂ
ತಿಳಿದನು (೧೧–೨೦)

ಹೆಂಡತಿಯು ಬಹಿಷ್ಠೆಯಾದ ೧೬ನೆಯ ದಿನವೇ ಏಕಾದಶಿ ಇದ್ದು ಅಂದೇ ಪಿತೃ ಶ್ರಾದ್ಧವೂ ಬಂದರೆ, ಒಂದನ್ನಾಚರಿಸಿದರೆ ಮತ್ತೊಂದಕ್ಕೆ ಭಂಗ ಬರುವದು. ಇಂತಹ ಪ್ರಸಂಗದಲ್ಲಿ ಸುಧನ್ವನು ಏಕಾದಶಿಯ ದಿನವೇ ಶ್ರಾದ್ಧ ಮಾಡಿ ಶೇಷಾನ್ನವನ್ನು ಮೂಸಿ ನೋಡುತ್ತಾನೆ, ಹೀಗೆ ಮಾಡುವದರಿಂದ ಶ್ರಾದ್ಧವೂ ಆಯಿತು. ಏಕಾದಶಿ ಉಪವಾಸವೂ ಆಯಿತು. ಇನ್ನು ಅಂದೇ ರಾತ್ರಿ ೧೨ ಗಂಟೆಯಾದ ಮೇಲೆ ಏಕಾದಶಿ ಹೋಗುವದರಿಂದ ಹೆಂಡತಿಯೊಡನೆ ಸಂಯೋಗ ಮಾಡಬಹುದು.

ಹೀಗೆ ಲಕ್ಷ್ಮೀಶನ ಕಾವ್ಯವನ್ನು ಒಳಹೊಕ್ಕು ನೋಡಿದಾಗ ಅವನಿಗಿರುವ ಪಂಚಾಂಗದ ಪರಿಜ್ಞಾನದ ದರ್ಶನವಾಗುತ್ತದೆ. ಈ ಪಂಚಾಂಗ ಪ್ರಜ್ಞೆಯನ್ನು ತೋರಿಸುವದೇ ಈ ಲೇಖನದ ಉದ್ದೇಶ.

★ ಬಿ. ಆರ್. ಸರ್ವೋಕದಂ

ಕವಿ ಅವರವರು ಕಂಡಂತೆ

೧

ವಿಮರ್ಶಕ ಹೇಳಿದ್ದು

ನಮ್ಮಪ್ಪನ ಮಗನೇ ಅಲ್ಲ ನಾನು
ನಿನ್ನ ಅಸಂಬದ್ಧ ಕವನಗಳ ಅಪ್ಪನಂಥ ವಿಮರ್ಶೆ
ಬರೀದಿದ್ದರೆ!
ಕಸ, ಮಣ್ಣು, ಕೊಂಕು, ಡೊಂಕು–ನಿನ್ನ
ಬರವಣಿಗೆಯ ಬಂಡವಾಳವೇ ನನ್ನದೂ,
ನನ್ನ ನೋಡಿ ನೀನು, ನಿನ್ನ ನೋಡಿ ನಾನು
ವೊವ್ ಅನ್ನುವುದು ಇನ್ನು ಸಾಕು.
ನಡಿ, ಕೂಡಿ ಜಹಾ ಕುಡಿ
ಯೋಣ.

೨

ಪ್ರೇಯಸಿ ಹೇಳಿದ್ದು:

ಈ ವಿಮರ್ಶಕರೆಲ್ಲ ಮುಠ್ಠಾಳರು
ನೀನು ಬರೆದ ಕಸರಾಮುಸರಿ ಕವನಕ್ಕೆ
ನಿನಗೂ ತಿಳಿಯದ ಅರ್ಥಕೊಟ್ಟು
ನಿನ್ನಂಥ ಕವಿ ಹಿಂದಿಲ್ಲ ಇಂದೂ
ಇಲ್ಲ, ಮುಂದೆ ಹುಟ್ಟನೆಂದು
ಘೋಷಿಸುವ ಈ ಕುರುಡರಿಗೆ
ಗೊತ್ತಿದೆಯೇ—
ಕವನ ಕಟ್ಟುವ, ಪಾಪಿ ಜನಗಳ
ಭವಿಷ್ಯ ಕಟ್ಟುವ, ಅದು ಇದು ಎಲ್ಲ
ಕಟ್ಟುವ ನೀನು
ನನ್ನ ಹೃದಯ
ಒಡೆದಿರುವಿ
ಯೆಂದು ?

೩

ಹೆಂಡತಿ ಹೇಳಿದ್ದು:

ನೀನೋ ಕೃಷ್ಣ; ನಾನು ಮಾತ್ರ ಸೀತೆಯಾಗಲಿ
ಅಂತ ನಿನ್ನ ಬಯಕೆ. ನಿನಗೆ ನಾನು ಬೇಕು
ಆಡಿ ನೀ ದಣಿದು ಬಂದಾಗ ಉಪಚರಿಸಲಿಕ್ಕೆ;
ಎಲ್ಲಾಕಡೆ ಸೂರೆ ಮಾಡಿದರೂ ಇನ್ನೂ
ಉಳಿದ ನಿನ್ನ ಎಡ್ಡನ್ನು ಪ್ರಸಾದವೆಂದು
ಹೊತ್ತು ತಿಂಗಳೊಂಬತ್ತು ಸಾಕಲಿಕ್ಕೆ;
ನೆರೆದವರೆಲ್ಲ ನಿನ್ನ ಹೊಗಳಿ ಎಲಿಯಟ್ಟನ
ಪಟ್ಟ ಕಟ್ಟಿ ಅಮರಕವಿ ಪ್ರಶಸ್ತಿ ಕೊಟ್ಟಾಗ,
ಯಾರ್‍ಯಾರಿಗೋ ಕೈಕೊಟ್ಟ ನೀ ನನ್ನ ಕೈ ಹಿಡಿದವನೆಂದು
ಹಿಗ್ಗಿ ಹೀರೇಕಾಯಾಗಲಿಕ್ಕೆ—
ಥೂ...ಥೂ...ಥೂ...

೪

ಕವಿ ಅಂದದ್ದು :

ಇಷ್ಟು ಗುದ್ದಾಡಿದರೂ ನನಗೆ ಗೊತ್ತಾಗಲೊಲ್ಲದು–
ಹೊರಟದ್ದು ಹಿಂಬರಕಿಯೋ ಮುಂಬರಕಿಯೋ
ನಿಂತ ನೀರೋ ಹರಿಯುವ ಹಳ್ಳವೋ
ಬರೆದದ್ದು ಕವನವೋ ಸುಡುಗಾಡೋ
ಗೆದ್ದೆನೋ ಸೋತೆನೋ ಸತ್ತೆನೋ—
ನಾನು ಗುದ್ದಾಡುತ್ತಿರುವುದು ಗಾಳಿಯಲ್ಲೇ ಇದ್ದೀತು.

★ ಎಸ್. ಕಲ್ಪನಾ

ಕನ್ನಡದ ಧ್ವನಿಮಾಗಳು : ಅಂದು-ಇಂದು

೧·೦ ಕೇಶಿರಾಜನು ವರ್ಣಿಸಿದ ಕನ್ನಡಕ್ಕೂ ಇಂದು[೧] ನಾವು ಬಳಸುವ ಕನ್ನಡಕ್ಕೂ ಧ್ವನಿಮಾ (Phoneme) ದೃಷ್ಟಿಯಿಂದ ಅಂತರವಿದೆಯೇ ?— ಎಂಬುದರ ವಿವೇಚನೆ ಪ್ರಸ್ತುತ ಲೇಖನದ ಗುರಿ. ಕನ್ನಡಕ್ಕೆ ಇತರ ಬೆಳೆದ ಭಾಷೆಗಳಂತೆ ರೂಪ ಎರಡು. ಒಂದು ಶ್ರಾವಣ ; ಇನ್ನೊಂದು ಚಾಕ್ಷುಷ. ಚಾಕ್ಷುಷ ರೂಪದ ಮೂಲ ಘಟಕ ಲಿಪಿ (alphabet) ಯಾದರೆ ಶ್ರವಣಕ್ಕೆ ಧ್ವನಿಮಾ ಮೂಲ ಘಟಕವಾಗಿದೆ.

೧·೧ **ಧ್ವನಿಮಾ**ಗಳೆಂದರೆ ವಿರೋಧಪ್ರಸಾರ (contrastive distribution) ದಲ್ಲಿರುವ ಧ್ವನಿ (Phone) ಗಳು. ಒಂದೇ ಪರಿಸರ (envrironment) ದಲ್ಲಿ ಅರ್ಥ ಭಿನ್ನತೆಯನ್ನುಂಟುಮಾಡುವ ಧ್ವನಿಗಳು **ವಿರೋಧ ಪ್ರಸಾರ**ದಲ್ಲಿರುತ್ತವೆ. ಉದಾ :—

ಮ್ + ಒ + ಳ್ + ಎ ——> ಮೊಳೆ

ಮ್ + ಒ + ಲ್ + ಎ ——> ಮೊಲೆ

[ಳ್] ಮತ್ತು [ಲ್] ಗಳು ಏಕಪರಿಸರದಲ್ಲಿ ಬಂದು ಅರ್ಥ ವ್ಯತ್ಯಾಸಕ್ಕೆ ಕಾರಣವಾಗುತ್ತವೆಯಾದುದರಿಂದ ಅವು ಸ್ವತಂತ್ರ ಧ್ವನಿಮಾಗಳು. ಅವು ಇಂಥಲ್ಲಿಯೇ ಬರುತ್ತವೆಂದು ನಿಯಮಬದ್ಧವಾಗಿ ಹೇಳುವುದು ಅಸಾಧ್ಯ, ಕಾರಣ ಅವು **ಅನಿಬದ್ಧ** (un-conditioned) ಧ್ವನಿಗಳು.

೧·೨ ಯಾವ ಧ್ವನಿಗಳು ವಿರೋಧ ಪ್ರಸಾರದಲ್ಲಿಲ್ಲವೋ ಅವು ಪೂರಕ ಪ್ರಸಾರ (complementary-distribution) ದಲ್ಲಿರುತ್ತವೆ. ಇವು **ನಿಬದ್ಧ** (conditioned) ಧ್ವನಿಗಳಾದುದರಿಂದ ಅವು ಒಂದು ಧ್ವನಿಮಾದ **ಉಪ-ಧ್ವನಿಮಾ** (allo-phone) ಗಳೆಂದು ಕರೆಯಲ್ಪಡುವುವು. ಒಂದು ಧ್ವನಿಯ ಪರಿಸರದಲ್ಲಿ ಇನ್ನೊಂದು ಧ್ವನಿ ಬರಲಾರದು. ಇಂತಹ ಪರಿಸರವೇ **ಪೂರಕ ಪ್ರಸಾರ.** ಉದಾಹರಣೆಗೆ [ಅ ಞ್ ಜೆ], [ಮಙ್ಗ] [ಮನ್ದಿ] ಎಂಬ ಶಬ್ದಗಳಲ್ಲಿ [ಞ್] [ಙ್] ಮತ್ತು [ನ್] ಎಂಬ ಧ್ವನಿಗಳು ಬಂದಿವೆ, ಅವು ನಿಯತವಾಗಿ ಕೆಳಗೆ ಕಾಣಿಸಿದ ಪರಿಸರಗಳಲ್ಲಿ ಬರುತ್ತವೆ :

---

೧. ಇಂದಿನ ಸುಶಿಕ್ಷಿತರಾಡುವ ಭಾಷೆಯನ್ನು ಮಾತ್ರ ಗಮನಿಸಲಾಗಿದೆ.

/ನ್ /[೨] [ಞ್ ಜ್ ನ್] |— [ತಾಲವ್ಯ ಕಂಠ್ಯ ಇತರ] ವರ್ಗ

ವಿರೋಧ ಮತ್ತು ಪೂರಕ ತತ್ತ್ವಗಳು ಧ್ವನಿಮಾ ನಿರ್ಣಯದಲ್ಲಿ ಅತಿ ಮುಖ್ಯವಾದವು.

೨.೦ ಕೇಶಿರಾಜನಿಗೆ ಧ್ವನಿಮಾ ಕಲ್ಪನೆ, ಅದಕ್ಕೂ ಪೂರ್ವಭಾವಿಯಾದ ಧ್ವನಿಮಾ ನಿರ್ಣಯ ತತ್ತ್ವಗಳ ಕಲ್ಪನೆ ಇತ್ತೇ ?

೨.೧ ಅಕ್ಕರಮುಂ ವರ್ಣಮುಮೆಂ
ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪಂ
ಬೊಕ್ಕುಚ್ಚರಿಸಲ್ಬಾರದು
ವಕ್ಕುಮಲ್ತವು ಘನಸ್ವನಾದಿ ಧ್ವನಿಗಳ್[೩]

೨.೨ ಶುದ್ಧಾಕ್ಷರಳಿಕ್ಕೆ ಅಕ್ಷರ ಎಂದೂ ವರ್ಣ ಎಂದೂ ಹೆಸರು. ಬರೆಯಲಿಕ್ಕೂ ಉಚ್ಚರಿಸಲಿಕ್ಕೂ ಬಾರದುವು ಅಕ್ಷರಗಳಲ್ಲ; ಗುಡುಗು ಮುಂತಾದ ಧ್ವನಿಗಳು ಇದಕ್ಕೆ ಉದಾಹರಣೆಗಳೆಂದು ವೃತ್ತಿಯಲ್ಲಿ ವಿವರಣೆಯಿದೆ. ಈ ವೃತ್ತಿಯನ್ನು ನೋಡಿದರೆ ಕೇಶಿರಾಜನು ಯಾವುದು ವರ್ಣವಲ್ಲ ಎಂಬುದನ್ನು ನಮಗೆ ತಿಳಿಸಿರುವನೇ ಹೊರತು ಯಾವುದು ವರ್ಣವಲ್ಲ ಎಂಬುದನ್ನು ಹೇಳಲು ಪ್ರಯತ್ನಿಸಿದಂತೆ ಕಾಣುವುದಿಲ್ಲ: ಅರ್ಥಾತ್, ನಿಷೇಧಾರ್ಥಕ ರೂಪದಲ್ಲಿ ವರ್ಣದ ವ್ಯಾಖ್ಯೆಯನ್ನು ಕೊಟ್ಟಂತಿದೆ. ಅದಕ್ಕಾಗಿ ಕೇಶಿರಾಜನದೋ ಅನ್ಯರದೋ ಎಂಬ ಸಂದೇಹದಲ್ಲಿ ನಿಂತಿರುವ* ಈ ವೃತ್ತಿಯನ್ನು ಬಿಟ್ಟು ಸೂತ್ರವನ್ನು ಗಮನಿಸಿದರೆ "ಬರೆಯಲಿಕ್ಕೆ ಬಂದು ಉಚ್ಚರಿಸಲು ಬಾರದುವು (ಬರೆಪಂಬೊಕ್ಕುಚರಿಸಲ್ಬಾರದುವಕ್ಕುಂ) ಅಕ್ಷರಗಳು." ಎಂಬ ಅರ್ಥ ಹೊರಟು ನಿಷೇಧ ರೂಪದ ವ್ಯಾಖ್ಯೆಯು ಬದಲು ನೇರವ್ಯಾಖ್ಯೆ ಹೊರಡುತ್ತದೆ. ಈ ನೇರವ್ಯಾಖ್ಯೆ ಆಧುನಿಕ ಭಾಷಾ ವಿಜ್ಞಾನಿಗಳು ಕೊಡುವ ಧ್ವನಿಮಾ ವಿವರಣೆಗೆ ಅಂಶತಃ ಹೊಂದುತ್ತದೆ.

---

೨. / / ಧ್ವನಿಮಾ ಸಂಕೇತ.
[ ] ಉಪಧ್ವನಿಮಾ, ಧ್ವನಿ ಸಂಕೇತ.
[ ] ಈ ಆವರಣದಲ್ಲಿ ಬಂದ ಸಂಕೇತಗಳು **ಕ್ರಮಬದ್ಧವಾಗಿ** ಸೂಚಿಸಿದ ಪರಿಸರಗಳಲ್ಲಿ ಬರುತ್ತವೆಂದು ಅರ್ಥ.
/— ಪರಿಸರದಲ್ಲಿ ಸ್ಥಾನ, ಉದಾ :— ತಾಲವ್ಯದ ಮುಂದೆ ಬರುವ / ನ್ /, [ಞ್] ಎಂದು ಆಗುತ್ತದೆ. ಅಂತೆಯೇ ಸಕ್ರಮವಾಗಿ ಇತರೆಡೆಗಳಲ್ಲಿ.

೩. ಡಿ. ಎಲ್. ನರಸಿಂಹಾಚಾರ್ (ಸಂ.) **ಶಬ್ದಮಣಿ ದರ್ಪಣಂ,** ಸೂತ್ರ ೧೨. ಪು ೯, (೧೯೬೪).

೪. ಎಚ್. ಎಸ್. ಬಿಳಿಗಿರಿ, **ಆಲೋಕ,** ಭಾಗ–೧' ಪು. ೨೭–೮ (೧೯೬೯).

* ವಿ. ರಾಮಶರ್ಮ, "ಶಬ್ದಮಣಿದರ್ಪಣದ ವೃತ್ತಿ ಕೇಶಿ ರಾಜನದಲ್ಲ." **ಸಾಹಿತ್ಯ ಪರಿಷತ್ ಪತ್ರಿಕೆ,** ೨೬ : ೧ (೧೯೪೧).

೨.೩ ....ಅಂಗೀ

ಕೃತಪವಲತ್ವಕ್ಕೆ ಸಮವೆ ಸಲ್ಲವ ಕುಳನುಂ[೫]

—ಎಂದು ಸೂತ್ರದಲ್ಲಿ ಹೇಳಿ ಪ್ರಯೋಗದಲ್ಲಿ ಮೊರೆ—ಮೊಱೆ[೬], ಕಡಲ್—ಕೞಲ್. ಮೊಳೆ—ಮೊೞೆ[೬] ಎಂಬೀ **ಅಲ್ಪತಮ ಯುಗ್ಮ** (minimal pairs) ಗಳನ್ನು ಗಮನಿಸಿದಾಗ ಕೇಶಿರಾಜನಿಗೆ ವಿರೋಧ ಪ್ರಸಾರ ತತ್ತ್ವದ ಕಲ್ಪನೆ ಇತ್ತೆಂಬುದನ್ನು ಹೇಳಲು ಸಾಧ್ಯವಿದೆ. ಆದರೆ ಆತನು [ಱ್], [ೞ್] ಮತ್ತು [ನ್]ಗಳನ್ನು ವರ್ಣಮಾಲೆಯಲ್ಲಿ ಸೇರಿಸಿರುವುದರಿಂದ ಪೂರಕ ಪ್ರಸಾರ ತತ್ತ್ವದ ಕಲ್ಪನೆ ಆತನಿಗೆ ಇದ್ದಿರಲಿಕ್ಕಿಲ್ಲವೆಂದು ಊಹಿಸಲು ಅವಕಾಶವಿದೆ. ಒಟ್ಟಿನಲ್ಲಿ ಕೇಶಿರಾಜನಿಗೆ ಧ್ವನಿಮಾದ ಕಲ್ಪನೆ **ಅಸ್ಪಷ್ಟವಾಗಿ** ಇತ್ತು; ಕಾರಣ ಆತನ 'ವರ್ಣ' ಇಂದಿನ 'ಧ್ವನಿಮಾ'ಕ್ಕೆ ಸಂವಾದಿಯಾಗಿ (ಅಲ್ಪಸ್ವಲ್ಪ ತಾರತಮ್ಯತೆಯನ್ನು ತಿಳಿದುಕೊಂಡು) ಇಟ್ಟುಕೊಳ್ಳಬಹುದೆಂದು ತೋರುತ್ತದೆ.

೨.೪ ಕೇಶಿರಾಜನು ಅಂದಿನ ಕನ್ನಡ ವರ್ಣಗಳ ಯಾದಿ ಮಾಡುತ್ತಿರುವ ಸನ್ನಿವೇಶದ ಆರಂಭದಲ್ಲಿ ಸಂಸ್ಕೃತದ ವರ್ಣಮಾಲೆಯನ್ನು ಕಟ್ಟಿದ್ದಾನೆ:

೨.೪೧ **ಸ್ವರಗಳು :** ಅ ಆ, ಇ ಈ, ಉ ಊ, ಋ ೠ, ಌ ೡ, ಎ ಐ, ಓ, ಔ, = ೧೪

೨.೪೨ **ವ್ಯಂಜನಗಳು :**

೨.೪೨೧ **ವರ್ಗೀಯಗಳು:** ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್ = ೨೫

೨.೪೨೨. **ಅ-ವರ್ಗೀಯಗಳು :–** ಯ್ ರ್ ಲ್ ವ್ ಶ್ ಷ್ ಸ್ ಹ್ ಳ್[೭] = ೦೯

೨.೪೩ **ಯೋಗವಾಹಗಳು :–** ೱ ೲ ಂ ಃ = ೦೪

ಒಟ್ಟು ವರ್ಣಗಳು ೨೫

---

೫. ಡಿ. ಎಲ್. ಎನ್. ಅದೇ ಸಂ. ೨೮. ಪು. ೨೨.

೬. ನೋಡಿ: ಅಡಿ ಟಿಪ್ಪಣಿ. ೪.

೭. ಕೇಶಿರಾಜನ ಪ್ರಕಾರ ಇದು ಕ್ಷಳ. ಸಂಸ್ಕೃತದಲ್ಲಿ ಕ್ಷಳದ ಸ್ಥಾನಮಾನದ ಕುರಿತು ನೋಡಿ: ಎಚ್. ಎಸ್. ಬಿಳಿಗಿರಿ. ಅದೇ ಪು. ೩೩-೩೫.

೨.೫ ಈ ೫೨ ವರ್ಣಗಳಲ್ಲದೆ ತ್ರಿವಿದೇಶೀಯಗಳಾದ ೫ ವರ್ಣಗಳನ್ನು ಸೇರಿಸಬೇಕಂತೆ. ಅವು :

ಜ಼್, ಫ಼್, ೞ್, (= ಕುೞ), ಎ, ಒ. ಹೀಗೆ ಒಟ್ಟಿನಲ್ಲಿ **ಕನ್ನಡದ ಸಾಮಾನ್ಯ ವರ್ಣಮಾಲೆ (Over all pattern)** ಯಲ್ಲಿ ೫೨ + ೫ = ೫೭ ವರ್ಣಗಳು. ಈ ವರ್ಣಮಾಲೆಯಿಂದ ಸಂಸ್ಕೃತಕ್ಕೆ ವಿಶಿಷ್ಟವಾದ ಋ ೠ, ಌ ೡ, ಶ್, ಷ್, ಃ, ×ಕ, ×ಪ, ಳ್, — ಈ ಹತ್ತು ವರ್ಣಗಳನ್ನು ಕಳೆದರೆ ೪೭ ವರ್ಣಗಳನ್ನೊಳಗೊಂಡ **ಕನ್ನಡದ ವಿಶಿಷ್ಟ ವರ್ಣಮಾಲೆ** (Comman Core) ದೊರಕುವುದು :

೨.೫೧ **ಸ್ವರಗಳು :** ಅಆ ಇಈ ಉಊ ಎಏ ಐ ಒಓ ಔ =೧೨

೨.೫೨ **ವರ್ಗೀಯಗಳು :** ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್ = ೨೫

೨.೫೩ **ಅವರ್ಗೀಯಗಳು:** ಯ್ ರ್ ಲ್ ವ್ ಸ್ ಹ್ ೞ್ ಜ಼್ ಫ಼್ =೦೯

೨.೫೪ **ಯೋಗವಾಹ :** ಅನುಸ್ವಾರ (= ೦) =೦೧

ಒಟ್ಟು ವರ್ಣಗಳು ೪೭

೩.೦ ಇಲ್ಲಿಯವರೆಗೆ ಹಿಂದಿನ ಕನ್ನಡದ ಕುರಿತು. ಇನ್ನು ಮುಂದೆ ಇಂದಿನ ಕನ್ನಡದ ಬಗ್ಗೆ. ಹೊಸ ಜನಾಂಗ, ಸಂಸ್ಕೃತಿ ಇತ್ಯಾದಿಗಳ ಪರಸ್ಪರ ವ್ಯವಹಾರ ಸಂಪರ್ಕಗಳಿಂದಾಗಿ ಭಾಷೆ ಕಾಲಕಾಲಗಳಲ್ಲಿ ಬದಲಾಗುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಇಂದಿನ ಸುಶಿಕ್ಷಿತರು ಮಾತನಾಡುವ ಕನ್ನಡ ಭಾಷೆಯನ್ನು ಗಮನಿಸಿದಾಗ ಅವರ ಹೊಸ ಧ್ವನಿಮಾವ್ಯವಸ್ಥೆಯು ನಮಗೆ ತೋರುತ್ತದೆ. ಕೆಳಗಿನ ಅಲ್ಪತಮ ಯುಗ್ಮಗಳನ್ನು ಪರಿಶೀಲಿಸಿರಿ :—

೩.೧ ಅಲ್ಪತಮ ಯುಗ್ಮಗಳು :—

ಉಚ್ಚಾರ	ಬರಹ	ಅರ್ಥ	
/ biḍu /	ಬಿಡು	' to leave '	/ i / ÷ / i: /
/ bi : ḍu /	ಬೀಡು	' dwelling '	
/ illi /	ಇಲ್ಲಿ	' here '	/ i/ ÷ / e /
/ elli /	ಎಲ್ಲಿ	' where '	

ಉಚ್ಚಾರ	ಬರಹ	ಅರ್ಥ	
/ beḷe /	ಬೆಳೆ	‘ crop ’	/ e / ÷ / e: /
/ be : ḷe /	ಬೇಳೆ	‘ dhal ’	
/ eḷe /	ಎಳೆ	‘ to pull ’	/ e / ÷ / E /[೮]
/ Eḷe /	ಎಳೆ	‘ thread ’	
/ ele /	ಎಲೆ	‘ lo ! ’	
/ elE /	ಎಲೆ	‘ leaf ’	
/ Atte /	ಅತ್ತೆ	‘ I wept ’	/ ə / ÷ / a /[೯]
/ atte /	ಅತ್ತೆ	‘ mother-in-law ’	
/ bala /	ಬಲ	‘ strength ’	
/ ba : la /	ಬಾಲ	‘ tail ’	
/ Eḷe /	ಎಳೆ	‘ thread ’	/ a / ÷ / E /
/ aḷu /	ಅಳು	‘ to cry ’	
/ nakka /	ನಕ್ಕ	‘ laughed ’	/ a / ÷ / ɔ / ÷ / o /
/ rɔkka /	ರೊಕ್ಕ	‘ money ’	
/ sokku /	ಸೊಕ್ಕು	‘ pride ’	
/ la :ṇṭanu /	ಲಾಂಟನು	‘ lantern ’	/ a :/ ÷ / ɔ : /
/ lɔ :ṭary /	ಲ್ಯಾಟರಿ	‘ lottery ’	
/ lɔ : yaru /	ಲ್ಯಾಯರು	‘ lawyer ’	/ ɔ: / ÷ / o: /
/ lo : yar /	ಲೋಯರ್	‘ lower ’	
/ ole /	ಒಲೆ	‘ oven ’	/ o / ÷ / o: /
/ o : le /	ಓಲೆ	‘ leaf, letter	
/ oppu /	ಒಪ್ಪು	‘ agree ’	/ o / ÷ / u /
/ uppu /	ಉಪ್ಪು	‘ salt ’	
/ kuḍi /	ಕುಡಿ	‘ drink ’	/ u / ÷ / u : /
/ ku : ḍi /	ಕೂಡಿ	‘ together ’	

೮. ಈ ಧ್ವನಿಮಾ ವಿರೋಧ ಪ್ರಸಾರವನ್ನು ಕಂಡು ಹಿಡಿಯಲು ಡಾ। ಕೆ. ಕುಶಾಲಪ್ಪ ಗೌಡರೊಡನೆ ನಡೆಯಿಸಿದ ಕನ್ನಡ ಧ್ವನಿಮಾ ಚರ್ಚೆಯೇ ಕಾರಣ. ಅವರ ಉಪಕಾರವನ್ನು ಇಲ್ಲಿ ಸ್ಮರಿಸುತ್ತೇನೆ.

೯. ೧೨ ನೆಯ ಶತಮಾನದ ಸಾಹಿತ್ಯದಲ್ಲಿ /ə/ ಇದರ ಸುಳಿವು ಕಂಡು ಬರುತ್ತದೆ: “ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ” ನೋಡಿ: /Kaṭṭe/ /Kəṭṭi/

ಬಸವನಾಳ ಲಿಂಗಪ್ಪ, ಬಸವಣ್ಣನವರ ವಚನಗಳು, ವಚನ ||೬ ೨೭|| (೧೯೬೨)

ಉಚ್ಚಾರ	ಬರಹ	ಅರ್ಥ	
/ hu : /	ಹೂ	‘ flower ’	/ u: / ÷ / ū : /
/ hũ : /	ಹೂಂ, ಹುಂ[೧೦]	‘ yes ’	
/ ha : /	ಹಾ	‘ lo ’	/ a : / ÷ / ã : /
/ hã : /	ಹಾಂ	‘ its' true ’	

೩.೨ ಮೇಲಣ ಉದಾಹರಣೆಗಳಲ್ಲಿ ಬಂದ ಧ್ವನಿ ಮತ್ತು ಅವುಗಳ ಪ್ರಸಾರಗಳನ್ನು ಗಮನಿಸಿ ಕೆಳಗಿನ ಧ್ವನಿಮಾ ಪಟ್ಟಿಯನ್ನು (Phonemic chart) ಮಾಡಬಹುದು :

೩.೨೧ ಸ್ವರಗಳು (Vowels)

೩.೨೧೧ ಹ್ರಸ್ವ ಸ್ವರಗಳು (Short Vowels)

	Front ಪೂರ್ವ	Central ಮಧ್ಯ	Back ಪಶ್ಚ
ಉನ್ನತ High	i		u
ಉನ್ನತ ಮಧ್ಯ Higher-mid	e		o
ನಡುಮಧ್ಯ Mean-mid		ə	
ಅವನತ ಮಧ್ಯ Lower-mid	E		ɔ
ಅವನತ Low		a	

೩.೨೧೨ ದೀರ್ಘಸ್ವರಗಳು : (Long Vowels)

	ಪೂರ್ವ	ಮಧ್ಯ	ಪಶ್ಚ
ಉನ್ನತ	i :		u :
ಉನ್ನತ ಮಧ್ಯ	e :		o :
ಅವನತ ಮಧ್ಯ			ɔ :
ಅವನತ		a :	

೧೦. /ũ :/ ‘ ಹೂಂ, ಹುಂ ’ ಧ್ವನಿಮಾವು ಸಾಹಿತ್ಯದಲ್ಲಿ ಪ್ರಥಮವಾಗಿ ೧೨ನೆಯ ಶತಮಾನದ ರುದ್ರಭಟ್ಟನ ಕಾವ್ಯದಲ್ಲಿ ಕಾಣುವುದನ್ನು ಇಲ್ಲಿ ಗಮನಿಸಬಹುದು. ಕತೆಯ ಗೇಳೆಲೆ ಕಂದ ಹುಂ, ರಘುಜನೆಂಬಂ ಹುಂ.” ರುದ್ರಭಟ್ಟ, ಜಗನ್ನಾಥ ವಿಜಯಂ, Mysore: Government Press (1923) ಪು. ೫೯ ಪದ್ಯ ೬೧ ೯ ಮತ್ತು ೧೦ ಅ. ಟಿ. ಗಳಲ್ಲಿ ಬಂದ ಸಾಹಿತ್ಯಿಕ ವಿಷಯ ಡಾ. ಎಮ್. ಎಮ್. ಕಲಬುರ್ಗಿಯವರ ಕೃಪೆಯಿಂದ.

೨.೨೧೨ ಅನುನಾಸಿಕ ಸ್ವರಗಳು : (Nosalized Vowels)

ಉನ್ನತ		ũ :
ಅವನತ	ã :	

ಒಟ್ಟಿನಲ್ಲಿ	ಹ್ರಸ್ವ	೮
	ದೀರ್ಘ	೬
	ಅನುನಾಸಿಕ	೨
		೧೬ ಸ್ವರಗಳು

೨.೨ ಇನ್ನೂ ಕೆಲವು ಅಲ್ಪತಮಯುಗ್ಮಗಳನ್ನು ಪರಿಶೀಲಿಸೋಣ :

ಉಚ್ಚಾರ	ಬರಹ	ಅರ್ಥ	
/ Pe : ṭe /	ಪೇಟೆ	'bazar'	/ P / ÷ / b /
/ be : ṭe /	ಬೇಟೆ	'hunting'	
/ kappu /	ಕಪ್ಪು	'black'	
/ kabbu /	ಕಬ್ಬು	'sugar care'	
/ ta : ṭu /	ತಾಟು	'a plate'	/ t / ÷ /d /
/ da : ṭu /	ದಾಟು	'to cross'	
/ mattu /	ಮತ್ತು	'and'	
/ maddu /	ಮದ್ದು	'medicine'	
/ ma : ṭa /	ಮಾಟ	'witch-craft'	/ ṭ / ÷ / ḍ /
/ ma : ḍu /	ಮಾಡು	'roof'	
/ da ṭṭa /	ದಟ್ಟ	'thick'	
/ da ḍḍa /	ದಡ್ಡ	'dunce'	
/ kere /	ಕೆರೆ	'tank'	/ k / ÷ / g / ÷ / h /
/ gere /	ಗೆರೆ	'line'	
/ heru /	ಹೆರು	'give birth to'	
/ akka /	ಅಕ್ಕ	'elder sister'	
/ agga /	ಅಗ್ಗ	'cheap'	
/ka : fi /	ಕಾಫಿ	'coffee'	/ f / ÷ / v / ÷ / p /
/ ka : vi /	ಕಾವಿ	'safron colour'	
/ ko : pi /	ಕೋಪಿ	'copy'	
/ fa : yde /	ಫಾಯ್ದೆ	'profit'	
/ va : yde /	ವಾಯ್ದೆ	'term'	
/ cigi /	ಚಿಗಿ	'to sprout'	/ c / ÷ / j /
/ jigi /	ಜಿಗಿ	'to jump'	
/ acci /	ಅಚ್ಚಿ	'stamp'	
/ ajji /	ಅಜ್ಜಿ	'grandmother'	

ಉಚ್ಚಾರ	ಬರಹ	ಅರ್ಥ	
/ ja : ru /	ಜಾರು	slip '	/ j / ÷ / y /
/ ya : ru /	ಯಾರು	' who '	
/ ajja /	ಅಜ್ಜ	' grand-father '	
/ ayya /	ಅಯ್ಯ	' sir '	
/ ju : su /	ಜೂಸು (= ರಸ)	' juice '	/ j / ÷ / z /
/ zu : /	ಜ಼ೂ (= ಮೃಗಾಲಯ)	' zoo '	
/ be : ja : ru /	ಬೇಜಾರು	' bore '	
/ baza : ru /	ಬಜ಼ಾರು	' market '	
/ ba : zu /	ಬಾಜ಼ು	' proximity '	
/ jipuṇa /	ಜಿಪುಣ	' miser '	
/ zippu /	ಜ಼ಿಪ್ಪು	' zip '	
/ da : sanu /	ದಾಸನು	' slave '	/ s / ÷ / z /
/ ḍazanu/	ಡಜ಼ನು	' dozen '	
/ basadi /	ಬಸದಿ	' jain temple '	
/ baza : ru /	ಬಜ಼ಾರು	' market '	
/ bassu /	ಬಸ್ಸು	' bus '	/ s / ÷ / ṣ / ÷ / ś /
/ braṣṣu /	ಬ್ರಷ್ಷು	' brush '	
/ kraśśu /	ಕ್ರಶ್ಶು	' crush '	
/ ṣarṭu /	ಷರ್ಟು	' shirt '	
/ sarti /	ಸರ್ತಿ	' time '	
/ sara /	ಸರ	' chain '	/ s / ÷ / ś / ÷ / h /
/ śara /	ಶರ	' arrow '	
/ hara /	ಹರ	' shiva '	
/ ma : ḍu /	ಮಾಡು	' roof '	/ m / ÷ / n /
/ na : ḍu /	ನಾಡು	' country '	
/ amma /	ಅಮ್ಮ	' mother '	
/ anna /	ಅನ್ನ	' rice '	
/ a : me /	ಆಮೆ	' tortoise '	/ m / ÷ / n /
/ a : ṇe /	ಆಣೆ	' pledge '	
/ amma /	ಅಮ್ಮ	' mother '	
/ aṇṇa /	ಅಣ್ಣ	' elder brother '	
/ mana /	ಮನ	' mind '	/ n / ÷ / ṇ /
/ maṇa /	ಮಣ	' mond '	
/ ha : lu /	ಹಾಲು	' milk '	/l/ ÷ /ḷ/ ÷ /r/ ÷ /n/

ಉಚ್ಚಾರ	ಬರಹ	ಅರ್ಥ	
/ ha:ru /	ಹಾರು	‘ to fly ’	
/ ha:ḷu /	ಹಾಳು	‘ bad ’	
/ na:nu /	ನಾನು	‘ I ’	
/ ka:ḷu /	ಕಾಳು	‘ grain ’	/ ḷ / ÷ / ṇ /
/ ka :ṇu /	ಕಾಣು	‘ see ’	
/ kaḷḷu /	ಕಳ್ಳು	‘ tody ’	
/ kaṇṇu /	ಕಣ್ಣು	‘ eye ’	
/ hṛdaya /	ಹೃದಯ	‘ heart ’ ೧೧	/ ṛ / ÷ / r /
/ hṛsva /	ಹೃಸ್ವ	‘ short ’	
/ kṛti /	ಕೃತಿ	‘ work ’	
/ kṛiye /	ಕ್ರಿಯೆ	‘ action ’	

೭·೪ ವ್ಯಂಜನಗಳು (Consonants)

	Labial ಓಷ್ಠ್ಯ	Labio-dental ದಂತೋಷ್ಠ್ಯ	alveolar ವರ್ತ್ಸ್ಯ	Retroflex ಪರಿವೇಷ್ಟಿತ	Palatal ತಾಲವ್ಯ	Velar ಕಂಠ್ಯ	Glottal ಗಲಕುಹರ
ಸ್ಪರ್ಶ Stops		Pb		td	ṭḍ	ej	kg
ಪ್ರಗಾಳ ಘರ್ಷ } slit fric-ativs			f				
ವಿವರ ಘರ್ಷ } groove fric-atives				SZ	ṣ	Ś	h
nasals ಅನುನಾಸಿಕ		m		n	ṇ		
Trills ಕಂಪಿತ				r			
Laterals ಪಾರ್ಶ್ವಿಕ				l			
ಅರೆವ್ಯಂಜನ Semi-consonants				v	ṛ	y	

೧೧. ṛ = ಋ ಕನ್ನಡದಲ್ಲಿ ಇಂದು ಸಂಸ್ಕೃತ ಸ್ವರದಂತೆ ಉಚ್ಚಾರವಾಗುವಂತೆ ಕಾಣುವುದಿಲ್ಲ. ಕಾರಣ Spencer ನು ಅದನ್ನು ಅರೆವ್ಯಂಜನದಲ್ಲಿ ಸೇರಿಸಿದ್ದಿರಬೇಕು. ನೋಡಿ: Harold Spencer, **A Kanarese Grammer** P. 8 (1950).

೩·೫ ಅವಿಭಾಜಕ (Suprasegmental) ಧ್ವನಿಮಾಗಳು

೩·೫೧ ಶ್ರುತಿ (Pitch)

ಉದಾತ್ತ (Rising) :	/ ↑ /	ಬಂದನು ↑	'ಬಂದನೋ?'	'function'.
ಅನುದಾತ್ತ (Falling) :	/↪/	ಬಂದನು↪	' ಬಂದನು !'	'dislike'.
ಸ್ವರಿತ (level) :	/ → /	ಬಂದನು→	'ಬಂದನು'	'fact'.

೩·೫೨ ವಿರಾಮ (Juncture)

/ + /	ಹೂಸುವಾಸನೆ	'evil smell'.
	ಹೂ + ಸುವಾಸನೆ	'fragrance of flower'.
	ಹೇಮಲತಾ	'a name'.
	ಹೇ + ಮಲ + ತಾ	'lo ! bring dirt'.

೪·೦ ಪ್ರಸ್ತುತ ಕನ್ನಡ ಧ್ವನಿಮಾಗಳ ಈ ವರೆಗಿನ ವಿವೇಚನೆಯ ಪ್ರಕಾರ ಅಲ್ಲಿಯ ಧ್ವನಿಮಾ ಸಂಖ್ಯೆ ೪೪ ಎಂದು ಹೇಳಬಹುದು.

ಸ್ವರಗಳು	೧೬
ವ್ಯಂಜನಗಳು[೧೨]	೨೬
ಶ್ರುತಿಗಳು	೦೩
ವಿರಾಮ	೦೧
	೪೬

ಗ್ರಂಥಋಣ

೧. ಕನ್ನಡ :—

ಕಲಬುರ್ಗಿ ಎಂ. ಎಂ.,

"ದರ್ಪಣಾವಲೋಕನ (ಶ್ರೀ ಡಿ. ಎಲ್. ಎನ್. ಸಂಪಾದಿತ)".

The Journal of the Karnatak University, Vol. IX, 1965.

೧೨. ಮಹಾಪ್ರಾಣ = ಅಲ್ಪಪ್ರಾಣ + ಹ್ ಎಂದು ವಿಶ್ಲೇಷಿಸಿದೆ ; ಹ್ = /h/. ವಿಸರ್ಗವು **ಕನ್ನಡದಲ್ಲಿ** ಬಿಂದುವಿನಂತೆ ಸಂಜ್ಞೆಯ ಸಂಜ್ಞೆ. ಅದು ಚಾಕ್ಷುಷ ರೂಪಕ್ಕೆ ಸಂಬಂಧ ಪಟ್ಟುದುದು. ಸ್ವರಕ್ಕೆ ಹ್ ಪರವಾಗಿ ಬಂದಾಗ ಃ ಚಿಹ್ನೆಯನ್ನು ಕೊಡುವುದು ರೂಢಿ. ಉದಾ :— ಅಂತಃಪುರ = ಅನ್ತರ್ ಪುರ. ಬಿಂದುವಿನ ಕುರಿತು ನೋಡಿ : ಜಿ. ಎಸ್. ಕುಳ್ಳಿ, " ಕನ್ನಡ ಭಾಷೆಯಲ್ಲಿ ಬಿಂದು, " **ಕರ್ನಾಟಕ ಭಾರತಿ,** ಸಂ. ೨, ಸಂ. ೧. ಪು. ೬೪-೭೦ (೧೯೬೯). ಬಿಂದು ಹಾಗೂ ವಿಸರ್ಗದ ಕುರಿತು ನೋಡಿ : ಎಚ್. ಎಸ್. ಬಿಳಿಗಿರಿ. **ಆಲೋಕ-೧. ಪು. ೫೩...**

ಕುಲಕರ್ಣಿ ಪ್ರ. ಗೋ.
ಕನ್ನಡ ಭಾಷೆಯ ಚರಿತ್ರೆ, ಪಿ. ಜಿ. ಕುಲಕರ್ಣಿ, ಹಿಂದವಾಡಿ, ಬೆಳಗಾಂವಿ, ೧೯೬೭.

ಕುಳ್ಳಿ ಜೆ. ಎಸ್.
ವರ್ಣನಾತ್ಮಕ ಭಾಷಾವಿಜ್ಞಾನ, ಸಿರಿಗನ್ನಡ ಪ್ರಕಾಶನ, ಧಾರವಾಡ, ೧೯೭೧.
"ಕನ್ನಡ ಭಾಷೆಯಲ್ಲಿ ಬಿಂದು", **ಕರ್ನಾಟಕ ಭಾರತಿ,** ಸಂ. ೨, ಸಂ. ೧, ೧೯೬೯.

ಗೌಡ ಕೆ. ಕುಶಾಲಪ್ಪ
"ದರ್ಪಣಾಲೋಕನ", **ಪ್ರಬುದ್ಧ ಕರ್ಣಾಟಕ,** ಸಂ. ೪೩. ಸಂ. ೩.

ಚಿದಾನಂದ ಮೂರ್ತಿ ಎಂ.
ಭಾಷಾವಿಜ್ಞಾನದ ಮೂಲತತ್ತ್ವಗಳು, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ ಮೈಸೂರು, ೧೯೬೫.

ಬಿಳಿಗಿರಿ ಎಚ್. ಎಸ್.
ಆಲೋಕ-೧, ಅಕ್ಷರ ಪ್ರಕಾಶನ, ಸಾಗರ, ಮೈಸೂರು, ೧೯೬೯.
ವರ್ಣನಾತ್ಮಕ ವ್ಯಾಕರಣದ ಮೂಲತತ್ತ್ವಗಳು, ಬೆಂಗಳೂರು ವಿಶ್ವವಿದ್ಯಾ-ಲಯ, ಬೆಂಗಳೂರು, ೧೯೭೦.

ನರಸಿಂಹಾಚಾರ್ ಡಿ. ಎಲ್. (ಸಂ.)
ಶಬ್ದಮಣಿದರ್ಪಣಂ, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು, ೧೯೬೪.

ಮಾಡ್ತಾ ವಿಲ್ಯಮ್
"ನಿಚ್ಚಂ ಪೊಸತು-ಭಾಷೆ", **ಉದಯವಾಣಿ,** ಮಾರ್ಚ್ ೬, ೧೯೭೧,

೨. ಇಂಗ್ಲಿಷ್ :—

Andronov M. S.
The Kannada Language, "NAUKA" Publishing House, Moscow, 1969.

Bright William
An Outline of Colloguial Kannada, Deccan College, Poona, 1958.

Gowda K. Kushalappa
"A Phanomic Outline of Gowda—Kannada", **The Karnatak University Journal**, Humanities, Vol. XII 1968.

Hiremath R. C.
The Structure of Kannada, Karnatak University, Dharwar, 1961.

Spencer Harold
A Kanarese Grammar, Wesley Press, Mysore, 1950.

★ ವಿಲ್ಯಮ್ ಮಾಡ್ತಾ

ಪೆರಿಯ ಪುರಾಣದ ಕಥೆಗಳು

೪. ಮೆಯ್‌ಪ್ಪೊರುಳ್ ನಾಯನಾರ್

(ಕಳೆದ ಸಂಚಿಕೆಯಿಂದ)

ಚೋಳ ದೇಶದಲ್ಲಿ ಮಲಯಮಾನ್ ನಾಡು ಎಂಬ ಒಂದು ನಾಡು ಇರುವುದು. ಅದನ್ನು ಸೇದಿನಾಡು ಎಂದೂ ಕರೆಯುವರು. ತಿರುಕೋವಲೂರು ಇದರ ರಾಜಧಾನಿ. ಈ ನಗರವು ತೆನ್-ಪೆಣ್ಣೆ (ದಕ್ಷಿಣ ಪಿನಾಕಿನಿ) ನದಿಯ ದಡದ ಮೇಲೆ ಶೋಭಿಸುತ್ತಿರುವುದು. ಮಲಾಡ ವಂಶದ ಒಬ್ಬ ದೊರೆ ಆ ರಾಜ್ಯವನ್ನು ಆಳುತ್ತಿದ್ದರು. ಅವರು ಶಿವಭಕ್ತ ಶಿಖಾಮಣಿಯಾಗಿದ್ದರು. ಧರ್ಮಮಾರ್ಗದಲ್ಲಿ ನಡೆಯುವವರಾಗಿದ್ದರು. ತನ್ನ ಪ್ರಜೆಗಳ ಹಿತರಕ್ಷಣೆಯೇ ತನ್ನ ಗುರಿಯೆಂದು ಬಗೆದು ರಾಜ್ಯವಾಳುತ್ತಿದ್ದರು. ಅವರು ಕಾಳಗದಲ್ಲಿ ಕಡುಗಲಿ; ಅಸಹಾಯ ಶೂರ: ಭಾಸ್ಕರ ತೇಜ. ಶಿವನಿಳಯಗಳಲ್ಲಿ ತಿರುಪಾಡು, ಅರ್ಚನೆ, ನಿತ್ಯ ನೈಮಿತ್ತಿಕ ಪೂಜೆ ಮೊದಲಾದವು ತಪ್ಪದೆ ನಡೆಯುವಂತೆ ಧನಕನಕಾದಿಗಳನ್ನು ನೀಡಿ ಸಹಾಯ ಮಾಡುತ್ತಲಿದ್ದರು. ಅವರ ಹೃದಯದಲ್ಲಿ ಶಿವಭಕ್ತರ ರೂಪು ಕಂಡರಿಸಿದ್ದಿತು: ಹರಭಕ್ತರು ಬಂದೊಡೆ ನಲಿವರು; ತಿರುತೊಂಡರನ್ನು ತನ್ನ ಅಸುವೆಂದು ಪರಿಭಾವಿಸುವರು. ಹರಭಕ್ತರು ಬೇಡಿದುದನ್ನು ಹರ್ಷದಿಂದ ಈವ ಸ್ವಭಾವ ಉಳ್ಳವರು. ಶಿವಭಕ್ತರ ರೂಪನ್ನೇ ಸತ್ಯಾರ್ಥ (ಮೆಯ್‌ಪ್ಪೊರುಳ್) ಎಂದು ತಿಳಿಯುತ್ತಿದ್ದುದರಿಂದ ಅವರಿಗೆ ಮೆಯ್‌ಪ್ಪೊರುಳ್ ನಾಯನಾರೆಂಬ ಹೆಸರಾಯಿತು. ಇಂಥ ಅರಸನಿಗೆ ಮುತ್ತನಾಥನೆಂಬ ಒಬ್ಬ ಹಗೆ ಇದ್ದನು. ಅವನಿಗೂ ನಾಯನಾರರಿಗೂ ಹಲವು ಬಾರಿ ಕದನ ನಡೆಯಿತು. ಪ್ರತಿ ಸಲವೂ ತನ್ನ ಚದುರಂಗ ಬಲವನ್ನು ಕಳೆದುಕೊಂಡು ಮುತ್ತನಾಥನು ಬೆಂಗಟ್ಟೋಡಿದನು. "ನೇರಿತಾದ ರೀತಿಯಲ್ಲಿ ಈತನನ್ನು ಗೆಲ್ಲಲು ಸಾಧ್ಯವಿಲ್ಲ; ಬೇರೆ ರೀತಿಯಲ್ಲಿ ಜಯ ಗಳಿಸಿ ಈತನನ್ನು ತವಿಸಬೇಕು" ಎಂದು ಮುತ್ತನಾಥನು ನಿಶ್ಚಯಿಸಿದನು. ಸೇದಿರಾಜನ ಸ್ವಭಾವವನ್ನೂ ಶೀಲವನ್ನೂ ಅರಿತವನಾದುದರಿಂದ ಒಂದು ಹಂಚಿಕೆಯನ್ನು ಹೂಡಿದನು. "ವಿಭೂತಿ ಪೂಸಿ ರುದ್ರಾಕ್ಷಿ ಧರಿಸಿದ ಶಿವಭಕ್ತರ ವೇಷದಲ್ಲಿ ಹೋದರೆ ನಾನು ಸೇದಿ ರಾಜನ ಆಸ್ಥಾನಕ್ಕೆ ಅಡೆತಡೆಯಿಲ್ಲದೆ ಹೋಗಬಹುದು. ಅಲ್ಲಿ ತಿರುತೊಂಡರನ್ನು ಯಾರೂ ಏನೂ ಮಾಡುವದಿಲ್ಲ. ಹೊಂಚು ಕಾಯುತ್ತಿದ್ದು ನಾಯನಾರರನ್ನು ವಂಚನೆಯಿಂದ ತವಿಸಬೇಕು" ಎಂದು ಬಗೆದನು.

ಅದರಂತೆಯೇ ಮುತ್ತನಾಥನು ತಾಪಸ ವೇಷವನ್ನು ಧರಿಸಿದನು. ಮೈಯೆಲ್ಲಾ ವಿಭೂತಿ ಪೂಸಿಕೊಂಡು, ಜಟಾವಳಿಯನ್ನು ಮುಡಿಕಟ್ಟಿ, ಸುರಗಿಯನ್ನು ಬೈತಿಟ್ಟ ಹೊತ್ತಗೆಯ ಕವಳಿಗೆಯನ್ನು ಕೈಯಲ್ಲಿ ಹಿಡಿದ, ಮಸಿ ಮುದಿದ ದೀಪದಂತೆ ಮನದೊಳು ಕಪ್ಪನ್ನಿಟ್ಟು ತಿರುಕೋವಲೂರಿಗೆ ಬಂದನು. ರಾಜಬೀದಿಯಲ್ಲಿ ನಡೆದು ಅರಮನೆಯ ಹೆಬ್ಬಾಗಿಲನ್ನು ಸೇರಿದನು. ಕಾವಲುಗಾರರು ಇವನ ತಾಪಸ ವೇಷಕ್ಕೆ ಗೌರವ

ಕೊಟ್ಟು, "ಅರಮನೆಯೊಳಗೆ ಅರಸನಿರುವೆಡೆಗೆ ದಯಮಾಡಿಸಿ" ಎಂದು ಹೇಳಿ ಒಳಗೆ ಹೋಗಲಿತ್ತರು. ಹೀಗೆ ಹಲವು ಬಾಗಿಲುಗಳನ್ನು ದಾಟಿ ಮುಂದೆ ಹೋದನು. ಅರಸನ ಖಾಸಾ ಕೋಣೆಯ ಬಾಗಿಲಲ್ಲಿ ಅಂಗರಕ್ಷಕನಾದ ತತ್ತನು ನಿಂತಿದ್ದನು. ತಿರುಕೊಂಡರ ವೇಷದಲ್ಲಿ ಅಲ್ಲಿಗೆ ಬಂದ ಮುತ್ತನಾಥನನ್ನು ತತ್ತನು ಕಂಡು ಮೈಯಿಕ್ಕಿ, "ಅರಸರು ನಿದ್ರಿಸುತ್ತಿರುವರು. ಸಮಯವರಿತು ಒಳಗೆ ಹೋಗತಕ್ಕದ್ದು" ಎಂದನು. ಇದನ್ನು ಕೇಳಿದ ಮುತ್ತನಾಥನು, "ನಾನು ಅರಸನಿಗೆ ಮೋಕ್ಷವನ್ನು ದೊರಕಿಸುವ ಜ್ಞಾನೋಪದೇಶವನ್ನು ಮಾಡಲು ಬಂದಿರುವುದರಿಂದ, ನೀನು ನನ್ನನ್ನು ತಡೆಯಬೇಡ; ಇಲ್ಲೆ ನಿಂದಿರು" ಎಂದು ಹೇಳಿ ಒಳಗೆ ಹೋದನು. ಅಲ್ಲಿ ಮೆಯ್‌ಪ್ಪೊರುಳ್ ನಾಯನಾರರು ಮಂಚದ ಮೇಲೆ ಮಲಗಿ ನಿದ್ರಿಸುತ್ತಿರುವದನ್ನೂ ಬಳಿಯಲ್ಲಿ ಅವರ ರಾಣಿಯು ಕುಳಿತಿದ್ದುದನ್ನೂ ಕಂಡೂ ಸಹ ಅವರ ಸನಿಯಕ್ಕೆ ಸಾರ್ದನು. ತಪಸ್ವಿ ಬಂದುದನ್ನು ಕಂಡು ರಾಣಿಯು ಬೇಗನೆದ್ದು ಅರಸನನ್ನು ನಿದ್ರೆಯಿಂದ ಎಬ್ಬಿಸಿದಳು. ಅರಸರು ಎಚ್ಚೆತ್ತು ಚಟ್ಟನೆ ಮಂಚದಿಂದಿಳಿದು ಬಂದು ಖಳನನ್ನು ಶಿವಭಕ್ತನೆಂದು ತಿಳಿದು ವಿಹಿತ ರೀತಿಯಲ್ಲಿ ಅವರಿಗೆರಗಿ, "ನಿಮ್ಮಡಿಗಳ ದರ್ಶನದಿಂದ ನಾನು ಧನ್ಯನಾದೆ; ನೀವು ನನ್ನನ್ನು ಕಾಣಲು ಬಂದ ಕಾರ್ಯವಾವುದೆಂದು ಕರುಣಿಸಬೇಕು" ಎಂದು ಬಿನ್ನವಿಸಿಕೊಂಡರು. ಅದಕ್ಕೆ ಮುತ್ತನಾಥನು "ನಿಮ್ಮ ದೇವರು ಮುಂಚೆ ಬರೆದ ಶೈವಾಗಮಗಳ ಪೈಕಿ ಲೋಕದಲ್ಲಿ ಎಲ್ಲೂ ಕಾಣಸಿಗದ ಒಂದು ಆಗಮವನ್ನು ನಿನಗೆ ಬೋಧಿಸಲು ತಂದಿರುವೆನು" ಎಂದನು. ಇದನ್ನು ಕೇಳಿದ ನಾಯನಾರರು ಅತ್ಯಾನಂದಗೊಂಡು, "ನನಗೆ ಇದಕ್ಕಿಂತಲೂ ಹೆಚ್ಚಿನ ಭಾಗ್ಯವುಂಟೆ ? ಪರಶಿವನು ಕರುಣಿಸಿದ ಪವಿತ್ರವಾದ ಆ ಶಿವಾಗಮವನ್ನು ಪಠಿಸಿ ನನಗೆ ಅನುಗ್ರಹಿಸಬೇಕು." ಎಂದು ಪ್ರಾರ್ಥಿಸಿದನು. ಅದಕ್ಕೆ ಆ ತಾಪಸಿಯು "ಹಾಗಾದರೆ, ನಿನ್ನ ಪಟ್ಟದರಸಿ ಇಲ್ಲದೆ ನಾನೂ ನೀನೂ ಬೇರೆ ಸ್ಥಳದಲ್ಲಿ ಏಕಾಂತದಲ್ಲಿರಬೇಕು" ಎಂದನು. ಅದರಂತೆಯೇ ಸೇದಿರಾಜನು ತನ್ನ ರಾಣಿಯನ್ನು ಅಂತಃಪುರಕ್ಕೆ ಕಳುಹಿಸಿಕೊಟ್ಟು ಕಪಟ ವೇಷದ ಮುನಿಯನ್ನು ಪೀಠದಲ್ಲಿ ಕುಳ್ಳಿರಿಸಿ, ತಾನು ನೆಲದ ಮೇಲೆ ಕುಳಿತು, ಕುಹಕ ತಪಸ್ವಿಯ ಕಾಲ್ಗೆರಗಿ, "ಈಗ ದಯೆಗೈಯಬೇಕು" ಎಂದನು.

ಇದನ್ನು ಕೇಳಿದ ಮುತ್ತನಾಥನು ತನ್ನ ಕೈಯಲ್ಲಿದ್ದ ಮೋಸದ ಕವಳಿಗೆಯನ್ನು ಮಡಿಲಲ್ಲಿಟ್ಟು, ಪೊತ್ತಿಗೆಯನ್ನು ಬಿಚ್ಚುವವನಂತೆ ಅದನ್ನು ಬಿಚ್ಚಿ, ಸೇದಿರಾಜನು ತಲೆಬಾಗಿ ಎರಗುತ್ತಿದ್ದಾಗ ಬೈತಿಟ್ಟ ಸುರಗಿಯನ್ನು ತೆಗೆದು ತಾನು ಸಂಕಲ್ಪಿಸಿದಂತೆಯೇ ಅರಸರನ್ನು ಇರಿದನು. "ತಪಸ್ವಿಯ ರೂಪವೇ ಸತ್ಯಾರ್ಥ"ವೆಂದು ಹೇಳಿ ಮೆಯ್‌ಪ್ಪೊರುಳ್ ನಾಯನಾರರು ಮುತ್ತನಾಥನನ್ನು ಮತ್ತೆ ನಮಸ್ಕರಿಸಿ ಗೆದ್ದರು. ಕುಟಿಲ ತಪಸ್ವಿ ಒಳಗೆ ಹೋದಾಗಲೆ ಶಂಕಿಸಿ ಮರೆಯಲ್ಲಿ ನಿಂತು ಅವನ ವರ್ತನೆಯನ್ನು ಗಮನಿಸುತ್ತಿದ್ದ ತತ್ತನು ಒಂದು ಕ್ಷಣದಲ್ಲಿ ಒಳಗೆ ಹಾಯ್ದು, ಆ ಪಾತಕನನ್ನು ತನ್ನ ಕರವಾಳದಿಂದ ಕೊಲ್ಲಲುದ್ಯುಕ್ತನಾದನು. ಇಷ್ಟರಲ್ಲಿ ರಕ್ತ ಸುರಿಸುತ್ತ ನೆಲದ ಮೇಲೆ

ಬೀಳುತ್ತಲಿದ್ದ ಮೆಯಪ್ಪೊರುಳ್ ನಾಯನಾರರು ತನ್ನ ಕೈಯನ್ನು ಚಾಚಿ ತತ್ತನನ್ನು ತಡೆಯುತ್ತ " ತತ್ತನೇ, ಇವರು ನಮ್ಮವರು " ಎಂದು ಹೇಳಿ ನೆಲದ ಮೇಲೆ ಬಿದ್ದರು. ಕಾರುಣ್ಯಪೂರ್ಣವಾದ ಈ ನುಡಿಯನ್ನು ಕೇಳಿದ ತತ್ತನು ನಾಯನಾರರನ್ನು ನಮಸ್ಕರಿಸಿ, " ನಾನು ಮಾಡತಕ್ಕ ಸೇವೆ ಯಾವುದು "? ಎಂದು ಬೆಸಗೊಂಡನು. ಅದಕ್ಕೆ ನಾಯನಾರರು, " ತತ್ತನೇ, ನಮ್ಮ ಪರಶಿವನ ಭಕ್ತರಾದ ಇವರನ್ನು ದಾರಿಯಲ್ಲಿ ಯಾರೂ ತಡೆಯದಂತೆ ನೀನು ಬೆಂಗಾವಲಾಗಿ ಜತೆಯಲ್ಲೇ ಹೋಗಿ ಬಿಟ್ಟು ಬಾ " ಎಂದರು. ಅರಸನ ಅಪ್ಪಣೆಯನ್ನು ಶಿರಸಾವಹಿಸಿ ತತ್ತನು ಮುತ್ತನಾಥನನ್ನು ಹೊರಗಡೆ ಕರೆದುಕೊಂಡು ಹೋಗುತ್ತಿದ್ದಾಗ ಈ ದುರ್ಘಟವನ್ನು ಕೇಳಿದವರೆಲ್ಲರೂ ಕಪಟ ವೇಷದ ಪಾತಕನನ್ನು ಕೊಲ್ಲದೇ ಬಿಡುವುದಿಲ್ಲವೆಂದು ಹೇಳಿ ಅವನನ್ನು ಮುತ್ತಿ ಕೊಂಡರು. ಸೇದಿರಾಜನು ಇತ್ತ ಆಣತಿಯನ್ನು ತತ್ತನು ಅವರೆಲ್ಲರಿಗೂ ತಿಳಿಸಿ, ಅವರನ್ನು ಸಮಾಧಾನಪಡಿಸಿ, ಕೈಯಲ್ಲಿ ಕರವಾಳವನ್ನು ಹಿಡಿದು ಬೆಂಗಾವಲಾಗಿ ಮುತ್ತನಾಥನ ಜೊತೆ ಹೋಗಿ ಅವನನ್ನು ನಗರದಿಂದಾಚೆಯ ಕಾನನದಲ್ಲಿ ಬಿಟ್ಟು ಅರ ಮನೆಗೆ ಹಿಂತಿರುಗಿ ಬಂದನು. ಅಲ್ಲಿಯವರೆಗೆ ಜೀವ ಸಹಿತ ಬದುಕಿದ್ದ ಮೆಯ್ ಪ್ಪೊರುಳ್ ನಾಯನಾರರು ತತ್ತನ ಸ್ವಾಮಿ ನಿಷ್ಠೆಯನ್ನೂ ಧರ್ಮಬುದ್ಧಿಯನ್ನೂ ಹೊಗ ಳಿದರು. ಮುಂದೆ ರಾಜ್ಯವಾಳತಕ್ಕ ತನ್ನ ಮಕ್ಕಳನ್ನೂ ಇತರ ಪರಿಜನರನ್ನೂ ಕರೆಯಿಸಿ "ಶೈವಾಗಮ ವಿಧಿಯ ಪ್ರಕಾರ ವಿಭೂತಿಯ ಮೇಲಿರತಕ್ಕ ಭಕ್ತಿ ಗೌರವಗಳನ್ನು ಪಾಲಿಸುತ್ತ ಬರಬೇಕು" ಎಂದು ಆದೇಶವಿತ್ತು ಶಿವನ ಅಡಿದಾವರೆಗಳನ್ನು ಮನದಲ್ಲಿ ಧ್ಯಾನಿಸಿದರು. ಆಗ ಪರಶಿವನು ಅವರ ಮುಂದೆ ಪ್ರತ್ಯಕ್ಷನಾಗಿ ಮೆಯಪ್ಪೊರುಳ್ ನಾಯನಾರರ ನಿಷ್ಕಲ ಭಕ್ತಿಗೆ ಮೆಚ್ಚಿ ಅವರಿಗೆ ಗಣಪದವನ್ನು ಕೊಟ್ಟು ಕರುಣಿಸಿದನು.

" ಕುಹಕ ತಾಪಸ ವೇಷದಿ ಹಗೆ ಬಂದಿರಿಯೆ ಕಾವಲಂ ಕೊಟ್ಟು ಕಳುಹಿ ಮೆರೆದಿಹ ಮೆಯ್‌ಪ್ಪೊರುಳ್ ನಾಯನಾರರ ಚರಣಾಂಬುಜಕ್ಕೆ ಶರಣು."

(ಮುಂದುವರಿಯುವುದು)

★ ಎಂ. ವ್ವಿ. ಜಂಬುನಾಥನ್

ಸಾಹಿತ್ಯ-ಸಂಸ್ಕೃತಿಯ ಸಂವರ್ಧಕ- ಕೆ. ಎಸ್. ಧರಣೇಂದ್ರಯ್ಯ

ನಾನು ಕಾಲೇಜ ಕಟ್ಟೆ ಹತ್ತಿದ ಸಮಯದಲ್ಲಿ ಒಂದು ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಬೇಕಾಯಿತು. ಆ ಪೂರ್ವದಲ್ಲಿಯೇ ಕನ್ನಡಿಗರ ಮನೆಮಾತಾಗಿದ್ದ ಕೆ. ಎಸ್. ಧರಣೇಂದ್ರಯ್ಯನವರ ಹೆಸರನ್ನು ಕೇಳಿದ್ದೆ, ಕಂಡಿರಲಿಲ್ಲ. ಕಾಣಬೇಕೆಂದು ನನ್ನೊಬ್ಬ ಗೆಳೆಯನೊಂದಿಗೆ ಗವಿಪುರಂ ವಿಸ್ತರಣೆಯಲ್ಲಿಯ "ಕುಂದ ಕುಂದ ಮಂದಿರ"ಕ್ಕೆ ಹೋದೆ. ಅಂಜುತ್ತಂಜುತ್ತಲೇ ಕರೆಗಂಟೆ ಒತ್ತಿದೆವು. ಶ್ರೀ ಧರಣೇಂದ್ರಯ್ಯನವರೇ ಬಂದು ಬಾಗಿಲು ತೆರೆದು, ನಮ್ಮನ್ನು ಸ್ವಾಗತಿಸಿ ತಮ್ಮ ಮನೆಯ ಒಳಕೋಣೆಯಲ್ಲಿ ಕುಳ್ಳಿರಿಸಿದರು. ನನ್ನ ಹೆಸರು, ಊರು, ಕೆಲಸಗಳನ್ನು ಅತಿ ಆತ್ಮೀಯತೆಯಿಂದ ವಿಚಾರಿಸಿದರು. ಇಷ್ಟೆಲ್ಲ ಆಗುವಾಗ ನನ್ನಲ್ಲಿಯ ಭಯ, ಸಂಕೋಚ ಮಾಯವಾಗಿ, ಚಿರ-ಪರಿಚಿತರ ಜೊತೆಗೆ ಮಾತಾಡುವಂತಾಯಿತು. ದೇವರ ಮನೆಗೆ ಒಯ್ದು ಜಿನದರ್ಶನ ಮಾಡಿಸಿದರು. ಅಪರಿಚಿತನಾದ ನನ್ನನ್ನು ಬಾಗಿಲಲ್ಲಿಯೇ ಮಾತನಾಡಿಸಿ ಹೊರದಬ್ಬಬಹುದೆಂದು ಹೋದ ನನಗೆ ಇದೆಲ್ಲವನ್ನು ಕಂಡು ಆಶ್ಚರ್ಯವಾಯಿತು. 'ಉಳಿದವರಂತಲ್ಲ ಇವರು' ಎಂಬ ಭಾವ ಮನದಾಳದಲ್ಲಿ ಮೂಡಿತು. ನನ್ನ ಕೆಲಸವನ್ನು ವಿಚಾರಿಸಿ ಸಹಾಯ ಮಾಡುವುದಾಗಿ ಹೇಳಿದರು. ಅಷ್ಟೇ ಅಲ್ಲ ಇದೇ ವಿಷಯಕ್ಕೆ ನಾನು ಕಾಣಬೇಕಿದ್ದ ಇನ್ನೊಬ್ಬ ಮಹನೀಯರ ಮನೆಗೆ ನನ್ನೊಂದಿಗೆ ಕಾಲ್ನಡಿಗೆಯಿಂದಲೇ ಬಂದು ನನ್ನ ಕೆಲಸದ ಬಗೆಗೆ ಹೇಳಿದರು. ಅವರನ್ನು ನಡೆಯಿಸಿಕೊಂಡು ಹೋಗಲು ನನಗೆ ಎಲ್ಲಿಲ್ಲದ ಸಂಕೋಚ. ಆದರೆ ಅವರು ಹಿಂದು ಮುಂದೆ ನೋಡದೆ ಮುಂದೆ ಬಂದರು ಸಹಾಯ ಯಾಚಿಸಿ ಬರುವ ಅನನುಭವಿ, ಅಪರಿಚಿತ ತರುಣರಿಗೆ ತಮ್ಮ ಕೈಲಾದ ಸಹಾಯಮಾಡಿ ಅವರಲ್ಲಿ ಒಂದು ಭರವಸೆಯನ್ನು ಮೂಡಿಸುವುದು ಅವರ ವೈಶಿಷ್ಟ್ಯವಾಗಿತ್ತು. ಅದೇ ಸಂದರ್ಭ ನಾನು ತಿರುಗಿ ಊರಿಗೆ ಬರುವ ಮುಂಚೆ ಅವರನ್ನು ಇನ್ನೊಮ್ಮೆ ಕಾಣಲೆಂದು "ವಿಧಾನ ಸೌಧ"ದ ಅವರ ಆಫೀಸಿಗೆ ಹೋದೆ. ಮನೆಯಲ್ಲಿ ಸೌಜನ್ಯ ತೋರಿದವರು, ತಮ್ಮ ಕಚೇರಿಯಲ್ಲಿಯೂ ಅದೇ ರೀತಿ ನಡೆದುಕೊಂಡುದುದು ಆಶ್ಚರ್ಯಕರ ಸಂಗತಿ. ನನ್ನನ್ನು ಕಳುಹಿಸಲು ಬಾಗಿಲವರೆಗೂ ಬಂದು "ದೇವರು ಒಳ್ಳೆಯದನ್ನು ಮಾಡಲಿ" ಎಂದು ಹಾರೈಸಿ ಮರಳಿದರು. ಅಧಿಕಾರದಲ್ಲಿದ್ದ ವ್ಯಕ್ತಿ ಸಾಮಾನ್ಯನಾದ ಒಬ್ಬ ಅಪರಿಚಿತನನ್ನು ಕಾಣಬಹುದಾದ ರೀತಿಯಲ್ಲಿ ಅವರು ನನ್ನನ್ನು ಕಾಣದಿರುವುದು ನನಗೆ ಅವರ ಬಗೆಗೆ ಪೂಜ್ಯ ಭಾವನೆಯುಂಟಾಗಲು ಪ್ರೇರಕವಾಯಿತು.

ಅವರನ್ನು ಎರಡನೆಯ ಬಾರಿ ನಾನು ಕಂಡದ್ದು ೧೯೬೩ರ ಫೆಬ್ರುವರಿ ತಿಂಗಳಲ್ಲಿ. ಮಹಾರಾಷ್ಟ್ರದ ಕೊಲ್ಹಾಪೂರ ಜಿಲ್ಲೆಯ ಬಾಹುಬಲಿಯಲ್ಲಿ ವಿಶ್ವಶಾಂತಿ ಯಜ್ಞ,

ಶ್ರೀ. ಬಾಹುಬಲಿ ಮೂರ್ತಿ ಪ್ರತಿಷ್ಠಾಪನೆ ಹಾಗೂ ಪಂಚ ಕಲ್ಯಾಣ ಪೂಜೆಯು ಆಚಾರ್ಯ ಶ್ರೀ.ಸಮಂತಭದ್ರ ಸ್ವಾಮಿಜಿಯವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರತಿ ದಿನದ ಪೂಜಾವಿಧಾನ ಹಾಗೂ ಧರ್ಮ ಸಭೆಗೆ ೨೦-೩೦ ಸಾವಿರ ಜನ ನೆರೆಯುತ್ತಿತ್ತು. ಇಂಥ ಒಂದು ಸಂದರ್ಭದಲ್ಲಿ ಮೈಸೂರು ಪೇಟ ಸುತ್ತಿದ ವ್ಯಕ್ತಿಯೊಬ್ಬರು ತಮ್ಮ ಸುಶ್ರಾವ್ಯ ಕಂಠದಿಂದ ಭರತೇಶ ವೈಭವ, ಯಶೋಧರ ಚರಿತೆಯಲ್ಲಿಯ ಭಾಗಗಳನ್ನು ಹೇಳುತ್ತ ೨೦-೩೦ ಸಾವಿರ ಜನರನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದರು. ಒಂದು ಕಾಲಕ್ಕೆ ಕನ್ನಡ ಪ್ರದೇಶವಾಗಿದ್ದ ಈ ಭಾಗ ಇತ್ತೀಚೆ ಮರಾಠಿ ಪ್ರಾಬಲ್ಯದಿಂದ ಸಾಕಷ್ಟು ಪರಿವರ್ತನೆ ಹೊಂದಿದೆ. ಇಂಥ ಮುರುಕು ಕನ್ನಡವನ್ನು ಮಾತನಾಡುತ್ತಿರುವ ಜನರೂ, ಕನ್ನಡವನ್ನೂ ಅರಿಯದ ಉತ್ತರ ಭಾರತದ ಜನರೂ ಸೇರಿ, ಭಾಷಣವನ್ನು ಕೇಳುವುದರಲ್ಲಿ ತನ್ಮಯರಾದುದು ಒಂದು ಅದ್ಭುತ ದೃಶ್ಯ. ಕೇವಲ ಸಾವಿರಾರು ಜನ ಸೇರಿದರೆ ಶಾಂತಿಯನ್ನು ಕಾಪಾಡುವುದು ಕಷ್ಟಸಾಧ್ಯವಾಗಿರುವಾಗ ೨೦-೩೦ ಸಾವಿರ ಜನ ಮೈಮರೆತು ಕೇಳುವಂತೆ ಕಾವ್ಯ, ಧರ್ಮಗಳ ಬಗೆಗೆ ಮಾತನಾಡುತ್ತಿದ್ದ ಆ ವ್ಯಕ್ತಿ ಬೇರಿನ್ನಾರೂ ಆಗಿರದೇ ಕೆ. ಎಸ್. ಧರಣೇಂದ್ರಯ್ಯನವರೇ ಆಗಿದ್ದರು. ಜನರಲ್ಲಿಯ ನಾಡು, ನುಡಿ, ಮತಗಳ ಮತ್ಸರ, ಮೋಹಗಳನ್ನು ಅಳಿಸಿ, ಅವರ ಮನಸ್ಸನ್ನು ಧರ್ಮ ಹಾಗೂ ಕಾವ್ಯ ಧರ್ಮಗಳ ಶ್ರವಣ ಸುಖದಲ್ಲಿ ತದಾತ್ಮ್ಯಗೊಳಿಸಿದ ಅವರ ಮಾತಿನ ಮಾಂತ್ರಿಕತೆ, ಧ್ವನಿಯ ಗಟ್ಟಿತನ. ಇಂಪಾದ ಹಾಡುಗಾರಿಕೆ, ಘನವಾದ ವಿದ್ವತ್ತು, ಮೇಲಾಗಿ ಕೇಳುಗರನ್ನು ಸೆರೆ ಹಿಡಿಯುವ ಶಕ್ತಿ ನನ್ನ ಮೇಲೆ ಪ್ರಗಾಢ ಪರಿಣಾಮವನ್ನು ಬೀರಿದವು.

ಇದರಂತೆ ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಧರ್ಮ ಇತ್ಯಾದಿ ಕ್ಷೇತ್ರಗಳಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಧರಣೇಂದ್ರಯ್ಯನವರು ಜನಿಸಿದ್ದು ತುಮಕೂರು ಜಿಲ್ಲೆಯ ಕಾಳೇನಹಳ್ಳಿಯಲ್ಲಿ ೩೧-೧೨-೧೯೦೩ ರಂದು. ಮನೆತನದ ಪರಿಸ್ಥಿತಿ ಸಾಮಾನ್ಯವಾದರೂ. ಅದು ಸಂಸ್ಕೃತಿ, ಸಾಹಿತ್ಯ ಹಾಗೂ ಧಾರ್ಮಿಕ ಸಂಸ್ಕಾರಕ್ಕೆ ಹೆಸರಾದುದು. ಬಾಲ್ಯದಲ್ಲಿಯೇ ಶ್ರೀ. ಧರಣೇಂದ್ರಯ್ಯನವರ ಮೇಲೆ ಇವುಗಳ ಪ್ರಭಾವವಾದುದು ಸ್ವಾಭಾವಿಕ. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹಳ್ಳಿಯಲ್ಲಿ ಪಡೆದು, ಮುಂದಿನ ಉಚ್ಚ ಶಿಕ್ಷಣವನ್ನು ಮೈಸೂರಿನಲ್ಲಿ ಮುಂದುವರಿಸಿದರು. ಮೈಸೂರಿನ ಧರ್ಮಾತ್ಮ ಎಂ. ಎಲ್. ವರ್ಧಮಾನಯ್ಯನವರ ಪ್ರೋತ್ಸಾಹ, ನೆರವುಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಎಂ. ಎ.. ಬಿ. ಟಿ., ಪದವಿಗಳನ್ನು ಪಡೆದರು. ಕನ್ನಡ ಎಂ. ಎ. ಪದವಿ ಪಡೆದ ಆಗಿನ ಕೆಲವೇ ಮಹನೀಯರಲ್ಲಿ ಅವರೊಬ್ಬರಾದರು.

ಶಿಕ್ಷಣ ಹಾಗೂ ಸಾಹಿತ್ಯ ಅವರ ಪ್ರೀತಿಯ ಕಾರ್ಯ ಕ್ಷೇತ್ರಗಳು. ಹೀಗಾಗಿ ವಿದ್ಯಾ ಇಲಾಖೆಯಲ್ಲಿ ಅಧಿಕಾರಿಯಾಗಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ದಕ್ಷತೆ. ಕಾರ್ಯಕ್ಷಮತೆಗಳು ಅವರಿಗೆ ಗೌರವವನ್ನು ತಂದುಕೊಟ್ಟುವಲ್ಲದೆ ಹಲವಾರು

ಕ್ಷೇತ್ರಗಳಲ್ಲಿ ಹೊಸದಾಗಿ ಪ್ರಾರಂಭವಾಗುವ ಯೋಜನೆಗಳಿಗೆ ಮೂರ್ತಸ್ವರೂಪ ಕೊಡುವ ವಿಷಯದಲ್ಲಿ ಶ್ರೀ ಧರಣೇಂದ್ರಯ್ಯನವರ ಸೇವೆ ಸರಕಾರಕ್ಕೆ ಅವಶ್ಯ ವೆನಿಸಿತು. ಹೀಗಾಗಿ ಕೇವಲ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡದೆ, ಬೇರೆ ಬೇರೆ ಕ್ಷೇತ್ರಗಳಲ್ಲಿ ಅವರಿಂದ ಉಪಯುಕ್ತ ಸೇವೆಯನ್ನು ಪಡೆಯಲು ಯೋಜಿಸಿತು. ಬೆಂಗಳೂರಿನ ಔದ್ಯೋಗಿಕ ಹಿರಿಮೆಯ ಪ್ರತೀಕವಾದ ಹಿಂದುಸ್ತಾನ ಏರಕ್ರಾಫ್ಟ ಕಾರಖಾನೆಯ (ವಿಮಾನಪುರ) ಪ್ರಾರಂಭದ ಅವಸ್ಥೆಯಲ್ಲಿಯೇ ಶ್ರೀ ಶಹಾ ಅವರಿಗೆ ಆಪ್ತ ಕಾರ್ಯ ದರ್ಶಿಗಳಾಗಿ ಶ್ರೀ ಧರಣೇಂದ್ರಯ್ಯನವರನ್ನು ಆರಿಸಿದ್ದು ಅವರ ಕಾರ್ಯ ತತ್ಪರತೆ, ದಕ್ಷತೆಗೆ ಒಂದು ಉದಾಹರಣೆ.

ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ ರನ್ನಾಗಿ ಅವರನ್ನು ನಿಯಮಿಸಿದುದು ಅವರ ಪಾಂಡಿತ್ಯ ಪ್ರತಿಭೆಗೊಂದು ನಿದರ್ಶನ. ೧೯೪೩ ರಿಂದ ೧೯೫೧ ರವರೆಗೆ ಇದಕ್ಕೆ ಅವರು ಸಲ್ಲಿಸಿದ ಸೇವೆ ಅಪೂರ್ವವಾಗಿದೆ. ಸಿದ್ಧಾಂತ, ವೇದಾಂತ, ಉಪನಿಷತ್ತುಗಳ ವಿಶೇಷ ಅಧ್ಯಯನಕ್ಕೆ ಹೊಸ ಚೇತನವನ್ನಿ ತ್ತರು. ಇದೇ ಕಾಲಕ್ಕೆ ಅವರ ಪಾಂಡಿತ್ಯ, ಅನುಭವ, ದಕ್ಷತೆಗಳಿಗೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು. ಅಂದರೆ ಮೈಸೂರು ಸರಕಾರದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಮಂಡಳಿಗೆ ಅವರನ್ನು ಆಮಂತ್ರಿಸಿತು. ಅಲ್ಲಿ ಅವರು ಕೈಕೊಂಡ ಕಾರ್ಯ ಕನ್ನಡ ನಾಡು-ನುಡಿಗಳು ಇರುವವರೆಗೂ ಅವರನ್ನು ಮರೆಯದಂತೆ ಮಾಡಿತು. "ಕನ್ನಡ ವಿಶ್ವಕೋಶ"ದ ಯೋಜನೆಯ ರೂಪರೇಷೆಯನ್ನು ಸಿದ್ಧಪಡಿಸುವುದರಲ್ಲಿ ಶ್ರೀ ಧರಣೇಂದ್ರಯ್ಯನವರು ತಮ್ಮ ದೂರದರ್ಶಿತ್ವವನ್ನು ಪ್ರಕಟಿಸಿದರು. ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿ ವಿವಿಧ ಬಗೆಯ ಉಪಯುಕ್ತ ಕಾರ್ಯಗಳನ್ನು ಕೈಕೊಂಡರು. ಹಲವಾರು ಸಭೆ, ಸಮ್ಮೇಲನಗಳನ್ನು ಏರ್ಪಡಿ ಸುವುದು, ನಾನಾ ಕಡೆಗೆ ಪ್ರವಾಸ ಮಾಡುವುದು ಅವರ ಕೆಲಸವಾಗಿತ್ತು. ವಿಶ್ವಕವಿ ರವೀಂದ್ರನಾಥ ಟಾಗೋರ ಅವರ ಶತಮಾನೋತ್ಸವವನ್ನು ಮೈಸೂರು ಸರಕಾರ ವಿಜೃಂಭಣೆಯಿಂದ ಆಚರಿಸಬೇಕೆಂದು ಹಮ್ಮಿಕೊಂಡಾಗ, ರವೀಂದ್ರ ಶತಮಾನೋತ್ಸವ ಸಮಿತಿಯ ಗೌರವ ಕಾರ್ಯದರ್ಶಿಯ ಕೆಲಸವನ್ನು ಶ್ರೀ ಧರಣೇಂದ್ರಯ್ಯನವರಿಗೇ ಸರಕಾರ ಒಪ್ಪಿಸಿತು. ಶತಮಾನೋತ್ಸವದ ನಿಮಿತ್ತ ಹಣ ಸಂಗ್ರಹಕ್ಕಾಗಿ ಅವರು ಕನ್ನಡದ ಮೂಲೆ ಮೂಲೆಯನ್ನು ಮುಟ್ಟಿ ಹಣ ಸಂಗ್ರಹ ಮಾಡಿದರು. ಕಾಲದುದ್ದಕ್ಕೆ ರವೀಂದ್ರರ ಹೆಸರು ಕನ್ನಡಿಗರ ನಿತ್ಯ ಸ್ಮರಣೆಯಲ್ಲಿ ಉಳಿಯುವಂತೆ, "ರವೀಂದ್ರ ಕಲಾ ಕ್ಷೇತ್ರ"ದ ಯೋಜನೆ ಹಾಕಿಕೊಂಡು, ಯಶಸ್ವಿಗೊಳಿಸಿದರು. ಇದು ಧರಣೇಂದ್ರಯ್ಯನವರ ಕರ್ತೃತ್ವಶಕ್ತಿಯ ಸ್ಮಾರಕ. ಅದರಂತೆ ಮಹಾತ್ಮಾ ಬಸವೇಶ್ವರರ ಎಂಟನೂರನೆಯ ಶತಮಾನೋತ್ಸವದ ಕಾಲಕ್ಕೂ ಅವರು "ಬಸವ ಸಮಿತಿ"ಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದನ್ನೂ, ಪುರಂದರದಾಸರ ಹಾಗೂ ಕನಕದಾಸರ ನಾಲ್ಕುನೂರನೆಯ ಶತ

ಮಾನೋತ್ಸವಗಳಲ್ಲಿಯೂ ಸಾಕಷ್ಟು ಪರಿಶ್ರಮವಹಿಸಿ ಕಾರ್ಯಮಾಡಿದ್ದನ್ನೂ ಇಲ್ಲಿ ನೆನೆಯಬಹುದು.

ಸರಕಾರದ ಅಧಿಕಾರದಿಂದ ನಿವೃತ್ತರಾದರೂ ಇಂಥ ಹಲವಾರು ಕಾರ್ಯ, ಚಟುವಟಿಕೆಗಳ ಕೇಂದ್ರವಾಗಿದ್ದರು ಅವರು. ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ಕವಿ ರನ್ನನ ಜನ್ಮಸ್ಥಳವಾದ ಮುಧೋಳದಲ್ಲಿ ಕವಿಯ ಯೋಗ್ಯತೆಗೆ ತಕ್ಕ ಒಂದು ಸ್ಮಾರಕವನ್ನು ನಿರ್ಮಿಸುವ ಕೆಲಸದಲ್ಲಿ ಅವರು ತೊಡಗಿದ್ದರು. ಕವಿ ರನ್ನನ ಹೆಸರಿನ ಒಂದು ಮಹಾವಿದ್ಯಾಲಯವನ್ನು ಪ್ರಾರಂಭಿಸಬೇಕೆಂದು ಯೋಚಿಸಿ, ಹಣ ಸಂಗ್ರಹಕ್ಕಾಗಿ ಕನ್ನಡ ನಾಡಿನ ಉದ್ದ-ಅಗಲಕ್ಕೂ ಪ್ರವಾಸ ಕೈಕೊಂಡಿದ್ದರು.

ಕನ್ನಡ ಸಾಹಿತ್ಯಕ್ಕೆ ತುಮಕೂರು ಜಿಲ್ಲೆಯ ಕಾಣಿಕೆ ವಿಶೇಷವಾದುದು. ಶ್ರೀ. ತೀ.ನಂ.ಶ್ರೀ, ಶ್ರೀ ಡಿ.ಎಲ್.ಎನ್. ಹಾಗೂ ಶ್ರೀ ಕ. ವೆಂ. ರಾಘವಾಚಾರ್ಯ ಅವರೂ ತುಮಕೂರಿನವರೇ. ಇಂತಹ ಮಹನೀಯರ ಮಾರ್ಗದಲ್ಲಿಯೇ ಶ್ರೀ ಧರಣೇಂದ್ರಯ್ಯ ಅವರೂ ಕನ್ನಡ ಸಾಹಿತ್ಯಕ್ಕೆ ವೈವಿಧ್ಯ ಪೂರ್ಣ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ, ನಿಘಂಟು ಸಮಿತಿಯ ಸದಸ್ಯರಾಗಿ ಕನ್ನಡ ನುಡಿ ಹಾಗೂ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ಸದಸ್ಯರಾಗಿ ರಚನಾತ್ಮಕ ಮಾರ್ಗದರ್ಶನವನ್ನಿತ್ತಿದ್ದಾರೆ. ಪರಿಷತ್ತಿಗಾಗಿ ಪ್ರವಾಸ ಕೈಕೊಂಡು ಪ್ರಚಾರಮಾಡಿ, ದತ್ತಿಗಳನ್ನು ದೊರಕಿಸಿಕೊಟ್ಟು ಪರಿಷತ್ತಿನ ಏಳ್ಗೆಗಾಗಿ ಶ್ರಮಿಸಿದ್ದಾರೆ.

ಆಡಳಿತ ಹಾಗೂ ವಿವಿಧ ಕಾರ್ಯಕಲಾಪಗಳು ಶ್ರೀ ಧರಣೇಂದ್ರಯ್ಯ ಅವರ ಸಾಹಿತ್ಯ ನಿರ್ಮಿತಿಗೆ ತಡೆಯೊಡ್ಡಿದಂತೆ ತೋರುತ್ತದೆ. ಆದರೂ ತಮ್ಮ ಯೌವನದಲ್ಲಿಯೇ "ವನಮಾಲೆ" ಎಂಬ ಸುಂದರವಾದ ಧಾರ್ಮಿಕ ನೀಳ್ಗತೆಯನ್ನು ರಚಿಸಿದರು. "ಭಕ್ತಿಕುಸುಮಾಂಜಲಿ" ಅವರ ಭಕ್ತಿಗೀತಗಳ ಸಂಗ್ರಹ. ಭಕ್ತನ ಆರ್ತ ಧ್ವನಿ, ವಿನಯ, ಜೈನತತ್ವಗಳ ನಿರೂಪಣೆ ಇದರಲ್ಲಿ ಆಕರ್ಷಕವಾಗಿ ಬಂದಿದೆ. "ಈ ಕುಸುಮಗಳಲ್ಲಿ ಸೌಂದರ್ಯವೂ ಸೌರಭ್ಯವೂ ಇವೆಯೆಂದು ನಾನು ಹೇಳಲಾರೆ. ಏನಿಲ್ಲದಿದ್ದರೂ ಭಕ್ತಿ ಇದೆ"ಎಂಬ ಅವರ ಮಾತಿನಲ್ಲಿ ವಿನಮ್ರತೆ ತುಂಬಿದೆ. ಸಾಂಗತ್ಯ. ಷಟ್ಪದಿ, ಕಂದ, ವೃತ್ತ. ಛಂದಗಳಲ್ಲಿ ರಚಿತವಾದ ಈ ಕವನಗಳು ಅವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. "ವರ್ಧಿಕೆ ಯಾದವ ವಂಶಂ। ವರ್ಧಿಕೆ ಶ್ರೀ ಕೃಷ್ಣರಾಜ ನರಪತಿ ತಿಲಕಂ ॥ ವರ್ಧಿಕೆ ಜೈನ ಜನಾಂಗಂ। ವರ್ಧಿಸಲೀ ಜಗದ ಶಾಂತಿ ದೇವರ ದಯೆಯಿಂ ॥" ಎಂದು ಮುಕ್ತಾಯವಾಗುವ ಅವರ ಈ ಭಕ್ತಿಗೀತಗಳು, ಮೈಸೂರಿನ ಒಡೆಯರ ಬಗೆಗಿನ ಅವರ ನಿಷ್ಠೆಯನ್ನು ಸ್ಪಷ್ಟಪಡಿಸುತ್ತವೆ. ರಾಜನಿಷ್ಠ ಸೇವಕರವರು. ಅವರ ಸೇವೆಯನ್ನು ಮೆಚ್ಚಿ ಮೈಸೂರಿನ ಮಹಾರಾಜರು ಅವರಿಗೆ ಬಂಗಾರದ ಪದಕವನ್ನಿತ್ತು ಸನ್ಮಾನಿಸಿದ್ದುಂಟು. ಅದರಂತೆ ಮೈಸೂರಿನ ಸಮಸ್ತ ಪ್ರಗತಿಗೆ ಪ್ರೇರಕರಾದ ದಿವಾನ ಶ್ರೀ. ಮಿರ್ಜಾ ಇಸ್ಮಾಯಿಲ ಅವರ ವಿಶ್ವಾಸದ ವ್ಯಕ್ತಿಗಳಾಗಿ ಶ್ರೀ. ಧರಣೇಂದ್ರಯ್ಯನವರು

ಅನೇಕ ಮಹತ್ಕಾರ್ಯಗಳನ್ನು ಕೈಕೊಂಡು ಯಶಸ್ವಿಯಾದರು. ಮಹಾರಾಜರ ಹಾಗೂ ದಿವಾನರ ಅನುಗ್ರಹವನ್ನು ತಮ್ಮ ಸ್ವಾರ್ಥಕ್ಕಾಗಿ ಅವರು ಎಂದೂ ಬಳಸಲಿಲ್ಲ. ಶ್ರವಣ ಬೆಳಗೊಳ ಕ್ಷೇತ್ರದ ದೀಪೋತ್ಸವ, ಬೆಟ್ಟ ಹತ್ತುವ ಯಾತ್ರಿಕರಿಗೆ ಅನುಕೂಲವಾಗಲೆಂದು ಪಾವಟಿಗೆಗಳ ರಚನೆ ಮುಂತಾದ ಯೋಜನೆಗಳನ್ನು ಮಾಡಿಸಿದುದು ಇವರ ಪ್ರಯೋಜ-ನಾತ್ಮಕ ಯೋಜನೆಗಳಿಗೆ ಸಾಕ್ಷಿಯಾಗಿವೆ.

"ಜೈನಧರ್ಮವು ವಿಶ್ವಕ್ಕೆ ನೀಡಿರುವ ಮಾರ್ಗದರ್ಶನ" ಚಿಕ್ಕ ಪುಸ್ತಿಕೆಯಾದರೂ ಜೈನಧರ್ಮದಲ್ಲಿ ನಿರೂಪಿತವಾದ ವಿಶ್ವಧರ್ಮದ ಕೆಲವು ತತ್ವಗಳನ್ನೂ ಇದರಲ್ಲಿ ವಿವರಿಸಿದ್ದಾರೆ. ಅನೇಕ ಸ್ಮಾರಕ ಗ್ರಂಥಗಳಿಗೆ, ಪತ್ರಿಕೆಗಳಿಗೆ ಪ್ರಬುದ್ಧ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ವೈಯಕ್ತಿಕ ಪ್ರಸಿದ್ಧಿಗಿಂತ ಹಲವುಜನ ವಿದ್ವಾಂಸರಿಗೆ ಸನ್ಮಾನ ಸಲ್ಲಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅನೇಕ ಜಿನ್ನವತ್ತಳೆಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯುವ ಯೋಜನೆಯಲ್ಲಿ ಅವರು ಇದೀಗ ತೊಡಗಿದ್ದರು.

ಧರ್ಮಸ್ಥಳದಲ್ಲಿ ಅನೇಕ ವರ್ಷಗಳಿಂದ ಜರಗುತ್ತ ಬಂದಿರುವ ಸಾಹಿತ್ಯ ಸಮ್ಮೇಲನ ಹಾಗು ಸರ್ವಧರ್ಮ ಸಮ್ಮೇಲನದ ಯೋಜಕರಾಗಿ ಶ್ರೀ ಧರಣೇಂದ್ರಯ್ಯನವರು ಕನ್ನಡ ನಾಡಿನ ಸಾಹಿತ್ಯ-ಧರ್ಮಗಳಿಗೆ ಸಲ್ಲಿಸಿದ ಸೇವೆ ಅಪೂರ್ವ ಕಾಣಿಕೆಯಾಗಿದೆ. ನಾಡಿನ ವಿವಿಧ ಭಾಗದ ವಿದ್ವಾಂಸರನ್ನು, ಕಲಾವಿದರನ್ನು ಆಮಂತ್ರಿಸಿ ಒಂದೆಡೆ ಸೇರಿಸಲು ಹಾಗೂ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲು ಹಗಲಿರುಳು ಪರಿಶ್ರಮ ಪಡು ತ್ತಿದ್ದರು. ಹೊಂಬುಜದಲ್ಲಿ ಜರಗುವ ಸಾಹಿತ್ಯ ಹಾಗೂ ಸರ್ವಧರ್ಮಸಮ್ಮೇಲನ ಗಳಿಗೂ ಅವರೇ ಮಾರ್ಗದರ್ಶಕರಾಗಿದ್ದರು. ವಿಶ್ವಹಿಂದೂ ಪರಿಷತ್ತಿನ ಕರ್ನಾಟಕ ಪ್ರಾಂತೀಯ ಸಮಿತಿಯ ಅಧ್ಯಕ್ಷರಾಗಿಯೂ, ರಾಜ್ಯ ಸಂಗೀತ ಲಲಿತಕಲಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸುತಲಿದ್ದರು. ಗೌರವ ಸನ್ಮಾನಗಳಿಗಾಗಿ ಅವರು ಎಂದೂ ಹಾತೊರೆದವರಲ್ಲ. ಶ್ರವಣ ಬೆಳ್ಗೊಳದಲ್ಲಿ ನಡೆದ ೪೩ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅವರ ಹೆಸರು ಸೂಚಿಸಲ್ಪಟ್ಟಿತ್ತು. ಆದರೆ ತಾವೇ ಮುಂದಾಗಿ ಘನ ವಿದ್ವಾಂಸರಾದ ಡಾ. ಎ. ಎನ್. ಉಪಾಧ್ಯೇ ಅವರ ಹೆಸರನ್ನು ಸೂಚಿಸಿದುದು ಧರಣೇಂ-ದ್ರಯ್ಯನವರ ವಿಶಾಲ ಮನೋಭಾವನೆಯ ಕುರುಹು.

ಸರಕಾರಿ ಅಧಿಕಾರಿಯಾಗಿ ಅನೇಕ ಉನ್ನತಸ್ಥಾನಗಳಲ್ಲಿದ್ದ ಶ್ರೀ ಧರಣೇಂದ್ರಯ್ಯ ನವರ ಸ್ಮರಣೆ ಇಂದು ಕನ್ನಡಿಗರಲ್ಲಿ ಇರುವುದು ಅವರು ಅಲಂಕರಿಸಿದ ಸ್ಥಾನಬಲದ ಮೂಲಕವಲ್ಲ. ಜನಸಾಮಾನ್ಯರ ಕೂಡ ಬಿಚ್ಚುಮನಸ್ಸಿನಿಂದ, ಔದಾರ್ಯದಿಂದ ನಡೆದು ಕೊಂಡಿರುವ ಅವರ ಸೌಜನ್ಯದ ಮೂಲಕ. ಯಾವುದೇ ಸ್ವಭಾವದ ಜನರೊಂದಿಗೂ ಹೊಂದಿಕೊಂಡು ಹೋಗುವ ಸ್ವಭಾವ ಅವರದಾಗಿತ್ತು. ಎಂಥ ಕಠಿಣ ಪ್ರಸಂಗ

ದಲ್ಲಿಯೂ ವಿರಸ, ವಿಕೋಪಕ್ಕೆ ಎಡೆಯಾಗದಂತೆ ತಮ್ಮ ವಿಶಿಷ್ಟರೀತಿಯಿಂದ ಭಾವ ಸಾಮರಸ್ಯವನ್ನು ರೂಪಿಸುವುದು, ಅವರ ವೈಶಿಷ್ಟ್ಯವಾಗಿತ್ತು. ಹೀಗೆ ಅಜಾತಶತ್ರು-ವೆನಿಸಿ ಬಾಳಿದ ಅವರು ತಮ್ಮ ವಯಸ್ಸಿನ ೭೭ನೆಯ ವರ್ಷದಲ್ಲಿ. ಬೆಂಗಳೂರಿನಲ್ಲಿ ದಿ. ೧೩-೮-೧೯೭೧ರಂದು ನಿಧನರಾದರು. ಆದರೆ ಅವರ ನೆನಪು ನಂದಾದೀಪ ಈ ನಾಡಿನಲ್ಲಿ ನಿರಂತರ ಬೆಳಗುತ್ತದೆ.

★ ಎಸ್. ಪಿ. ಪಾಟೀಲ

ಬನವಾಸಿ ಕದಂಬರ ಕಾಲದ (?) ಕೆಲವು ಶಿಲಾಮೂರ್ತಿಗಳು

ಮಾರ್ಚ ೧೮ ರಿಂದ ೨೨ ರ ವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತದ ಇತಿಹಾಸ, ಮತ್ತು ಸಂಸ್ಕೃತಿ ವಿಭಾಗದ ಡಾ. ಬ. ರಾ. ಗೋಪಾಲರವರು ಮತ್ತು ನಾನು ಬನವಾಸಿ ಮತ್ತು ಅದರ ಸುತ್ತುಮುತ್ತಲಿನ ಕೆಲವು ಪ್ರದೇಶದಲ್ಲಿ ಪ್ರಾಚ್ಯವಸ್ತು ಸಂಶೋಧನೆ ನಡೆಸಿದೆವು. ಬನವಾಸಿಯ ವಾಯುವ್ಯದಿಕ್ಕಿಗೆ ಸುಮಾರು ೫ ಕಿ. ಮಿ. ದೂರದಲ್ಲಿರುವ ಬನವಾಸಿ–ಸಿರ್ಸಿ ಮಾರ್ಗದಲ್ಲಿನ ಗುಡ್ಣಾಪುರದಲ್ಲಿ ಕದಂಬ ರವಿವರ್ಮ (ಕ್ರಿ. ಶ. ೪೮೫–೫೧೯) ನ ಒಂದು ಮಹತ್ವದ ಸ್ತಂಭ ಲಿಪಿ ಶೋಧ ವಾದುದು ಆಗಲೆ. ಶಾಸನದಿಂದ ತಿಳಿದು ಬಂದ ಕೆಲವು ಮಹತ್ವದ ಸಂಗತಿಗಳನ್ನು[1] ಬ. ರಾ. ಗೋಪಾಲರವರು ಈಗಾಗಲೇ ಸಂಕ್ಷಿಪ್ತವಾಗಿ ಪ್ರಕಟಿಸಿದ್ದಾರೆ.

ಈ ಶಿಲಾಶಾಸನವನ್ನು ಪರೀಕ್ಷಿಸುತ್ತಿರುವಾಗ, ಅದರ ಸಮೀಪದಲ್ಲಿಯೆ ಇದ್ದ ಒಂದು ವೀರಭದ್ರದೇವರ ಗುಡಿಯ (ಸುಮಾರು ೧೨–೧೧ ನೆಯ ಶತಮಾನ) ಗರ್ಭಗುಡಿಯಲ್ಲಿ ಒಂದು ರತಿ–ಮನ್ಮಥ(ಚಿತ್ರ ೪)ರ ವಿಗ್ರಹವನ್ನು ನೋಡಿದೆವು.

ಗುಡ್ಣಾಪುರ ಗ್ರಾಮದ ಕೆರೆಯ ಹತ್ತಿರ ಕೆಸರಿನಲ್ಲಿ ಸ್ವಲ್ಪ ಹುಗಿದ ಭಗ್ನವಾದ ಎರಡು ಶಿಲಾಮೂರ್ತಿಗಳಿವೆ. ಒಂದು ಶಿರ, ಬಾಹುಗಳು ಒಡೆದು ಹೋದ ಯೋಗಾಸನದಲ್ಲಿರುವ ಜಿನಮೂರ್ತಿ. ಮತ್ತೊಂದು ಅಲಂಕೃತ ಸುಂದರವಾದ ಪುರುಷ ವಿಗ್ರಹ (ಚಿತ್ರ ೨). ಊರೊಳಗೆ ಒಂದು ಕಡೆ ಗೊಚ್ಚಿ ಕಲ್ಲು(laterite ರಾಶಿಯಲ್ಲಿ ಅರೆ ಮುಚ್ಚಿದ ಮತ್ತೊಂದು ಮನೋಹರವಾದ ಸ್ತ್ರೀ ವಿಗ್ರಹ(ಚಿತ್ರ ೨) ಇದೆ. ಇದರ ಸಮೀಪದಲ್ಲಿಯೆ ಕುಬ್ಜ ಮನುಷ್ಯ(ಚಿತ್ರ ೩)ನ ಮೂರ್ತಿಯಿದೆ.

ಶಿಲಾಶಾಸನದಲ್ಲಿ ಉಲ್ಲೇಖವಾದ ಕದಂಬ ರಾಜರ ರಾಜಗೃಹ ನಿವಾಸ, ಅಂತಃಪುರ ಮತ್ತು ದೇವಗೃಹಗಳ ಮತ್ತು ರತಿ ಮನ್ಮಥರ ವೇಶಗಳ[2] ಅವಶೇಷಗಳು ಆ ಸ್ಥಳ ದಲ್ಲಿ ಉತ್ಖನನ ಮಾಡಿದಲ್ಲಿ ಸಿಗಬಹುದೆ ಎಂದು ಪರೀಕ್ಷಿಸಲು ಎಪ್ರಿಲ್ ಮೂರನೆಯ ವಾರದಲ್ಲಿ ನಾನು ಮತ್ತೆ ಗುಡ್ಣಾಪುರಕ್ಕೆ ಹೋದೆನು. ಆ ಸಮಯದಲ್ಲಿ ಕೆರೆಯಲ್ಲಿ ಹುಗಿದ ಮತ್ತು ಕಲ್ಲು ರಾಶಿಯಲ್ಲಿ ಮುಚ್ಚಿದ ಮೂರ್ತಿಗಳನ್ನು ಅಗೆಸಿ, ಪೂರ್ತಿಯಾಗಿ ಕಾಣುವ ಹಾಗೆ ಮಾಡಿದೆ. ಜಿನ ಮೂರ್ತಿಯೊಂದನ್ನು ಬಿಟ್ಟು ಉಳಿದ ಮೂರು ಅಪೂರ್ವ ಪ್ರತಿಮೆಗಳೆಂದು ತೋರಿತು. ಆದುದರಿಂದ ಅವುಗಳ ವರ್ಣನೆ ಮತ್ತು ಮಹತ್ವವನ್ನು ಇಲ್ಲಿ ವಿವೇಚಿಸಲಾಗಿದೆ.

---

೧. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿನಾಂಕ ಪುಟ ೪.

೨. ಅದೇ ಕಡೆ



ಚಿತ್ರ ೧
ಗುಡ್ನಾಪುರ : ಕುಬ್ಜಯಕ್ಷ; ಮುಂಭಾಗ



ಚಿತ್ರ ೧ಅ
ಗುಡ್ನಾಪುರ : ಕುಬ್ಜಯಕ್ಷ; ಹಿಂಭಾಗ



ಚಿತ್ರ ೨
ಗುಡ್ನಾಪುರ : ಸ್ತ್ರೀ (ರತಿ?) ವಿಗ್ರಹ;
ಮುಂಭಾಗ



ಚಿತ್ರ ೨ಅ
ಗುಡ್ನಾಪುರ : ಪುರುಷ (ಮನ್ಮಥ?) ವಿಗ್ರಹ;
ಮೇಲ್ಭಾಗ









೧. ಕುಬ್ಜ ವಿಗ್ರಹ (ಚಿತ್ರ ೧. ೧ ಅ) :—

ಇದು ಕುಬ್ಜಾಕೃತಿಯು. ಸ್ಥೂಲ ದುಂಡು ಪುರುಷ ವಿಗ್ರಹ. ಸುಮಾರು ೬೮ ಸೆ. ಮೀ. ಎತ್ತರದ ಮತ್ತು ೪೦ ಸೆ. ಮೀ. ಅಗಲ. ಸ್ವಲ್ಪ ತ್ರಿಭಂಗಿಯಲ್ಲಿದೆ. ಶರೀರ ಸ್ವಲ್ಪ ಬಲಕ್ಕೆ ಬಾಗಿದೆ. ಕುಳ್ಳು ಮತ್ತು ಸ್ಥೂಲತೆಯಿಂದ ಅವರ ಭಂಗಿ ಎದ್ದು ಕಾಣುವುದಿಲ್ಲ. ತಲೆ ದೇಹದಲ್ಲಿ ಹೂತುಹೋದ ಹಾಗಿದೆ. ಬಲಗೈ ಮುರಿದು ಹೋಗಿದೆ. ಏನೋ ಹಿಡಿದುಕೊಂಡ ಹಾಗಿದೆ. ಎಡಗೈ ಸೊಂಟದ ಮೇಲಿಟ್ಟಿದೆ. ಗುಡಾಣದಂತಹ ಹೊಟ್ಟೆ, ಕೆಳಗೆ ಮೊಣಕಾಲಿನವರೆಗೂ ಇಳಿಬಿದ್ದ ಹಾಗಿದೆ. ತೊಡೆ, ಕಾಲುಗಳು ಬೇರೆ ಬೇರೆಯಾಗಿ ಸ್ಪಷ್ಟವಾಗಿಲ್ಲ. ಎಲ್ಲ ಏಕವಾಗಿದ್ದು, ಕೆಳಮುಖವಾಗಿ ಸಣ್ಣದಾಗುತ್ತ ಹೋಗಿದೆ. ತಲೆಯ ಕೂದಲು ಗುಂಗುರು ಗುಂಗುರಾಗಿದ್ದು ಒಪ್ಪು ಮಾಡಿ ಮೇಲೆ ಗಂಟು ಬರುವ ಹಾಗೆ ಮಾಡಿದೆ. ಕರಂಡ ಮುಕುಟದಲ್ಲಿದೆ. ಮೂಗು, ಕಣ್ಣು, ಬಾಯಿ ಎಲ್ಲ ಸವೆದುಹೋಗಿದೆ. ಮುಖವು ಸ್ವಲ್ಪ ಎಡಕ್ಕೆ ತಿರುಗಿದೆ. ಆದುದರಿಂದ ಬಂಡಿಯ ಗಾಲಿಯಂಥಹ ಕಿವಿಯೋಲೆಗಳಲ್ಲಿ ಒಂದು ಬಲ ಭುಜದಿಂದ ಸ್ವಲ್ಪ ಮುಂದಕ್ಕೆ ನೇತಾಡುತ್ತಿದೆ. ಮತ್ತೊಂದು ಎಡಭುಜದ ಅಡ್ಡಲಾಗಿ ಬಿದ್ದಿದೆ. ಹಲವು ಎಳೆಗಳುಳ್ಳ ಒಂದು ಹಾರವಿದೆ. ಮೊಣಕಾಲಿನ ಮೇಲೆ ಧೋತರವನ್ನು ಕಚ್ಚೆ ಹಾಕಿ ಉಟ್ಟಹಾಗಿದೆ. ಮುಂಭಾಗದಲ್ಲಿಯ ಅವನ ದೊಡ್ಡ ಹೊಟ್ಟೆ ಧೋತರದ ಕಟ್ಟಿನಿಂದ ಕೆಳಗೆ ಇಳಿಬಿದ್ದು ಧೋತರ ಕಾಣಿಸುವುದೇ ಇಲ್ಲ. ಈ ರೀತಿಯಲ್ಲಿ ತುಂಬ ಸ್ವೈಜವಾಗಿ ಈ ದಪ್ಪನೆಯ ಕುಳ್ಳನನ್ನು ಚಿತ್ರಿಸಿದೆ. ಇದು ಶಿಲ್ಪಿಯ ವಿವಿಧ ಭಂಗಿಯಲ್ಲಿನ ವಿವಿಧ ವ್ಯಕ್ತಿಗಳ ಸೂಕ್ಷ್ಮಾವಲೋಕನ ಮತ್ತು ನಿರೂಪಣೆಯ ಜಾಣ್ಮೆಯನ್ನು ತೋರಿಸುವುದು. ಈ ಕುಬ್ಜನ ಆಕೃತಿಯು ನಿಂತಿರುವ ಭಂಗಿ, ಮೈಕಟ್ಟಿನ ಶಿಲ್ಪ ಮತ್ತು ಧೋತರ ಉಟ್ಟಿರುವ ರೀತಿಗಳೆಲ್ಲವು ತಕ್ಕಮಟ್ಟಿಗೆ ಸನ್ನತಿಯಲ್ಲಿ ದೊರೆತ ಕ್ರಿ. ಶ, ೨–೩ ನೆಯ ಶತಮಾನದ ಮೇಲ್ಭಾಗ ಮುರಿದುಹೋದ ಯಕ್ಷನನ್ನು[೩] ಹೋಲುವುದು. ಅಲ್ಲದೆ. ಬಾದಾಮಿಯಲ್ಲಿರುವ ಗುಡ್ಡಗಳಲ್ಲಿ ಕೊರೆದ ಗುಹೆಗಳ ಮುಂಭಾಗದ ಪಟ್ಟಿಕೆಯಲ್ಲಿರುವ ಕೆಲವು ಕುಬ್ಜ ಗಣಗಳ ಶಿಲ್ಪ ಲಕ್ಷಣಕ್ಕೆ ಸಮೀಪವಾಗಿವೆ. ಆದುದರಿಂದ ಇದು ಪ್ರಾಯಶಃ ೩–೫ ನೆಯ ಶತಮಾನದೊಳಗಿನದೆಂದು ಕಾಣುವುದು. ಬನವಾಸಿಯ ಪ್ರದೇಶದಲ್ಲಿ ಅಶೋಕ ಮೌರ್ಯನ ಕಾಲದಿಂದ ಬೌದ್ಧಮತ ಪ್ರಚಾರದಲ್ಲಿತ್ತು. ಕ್ರಿ. ಶ. ೧–೪ನೆಯ ಶತಮಾನದ ಬೌದ್ಧ ಸ್ತೂಪಗಳಿವೆ. ಗುಡ್ನಾಪುರದಲ್ಲಿಯೂ ಬೌದ್ಧ ಸ್ತೂಪಗಳ ಅವಶೇಷಗಳಿವೆ. ಆದುದರಿಂದ ಇದು ಬೌದ್ಧ ಯಕ್ಷನಿರಬಹುದೆ ?

---

೩. ದೇಸಾಯಿ ಪಾಂ. ಭೀ. ೧೯೬೮, "A New Buddhist Centre" ಕರ್ನಾಟಕ ಯುನಿವರ್ಸಿಟಿ ಜರ್ನಲ್, ಪಾ IV, ಪುಟ ೧೫೮-೧೬೩, ಚಿತ್ರ ೫.

೨ ಪುರುಷ ಮತ್ತು ಸ್ತ್ರೀ ವಿಗ್ರಹಗಳು (ಚಿತ್ರಗಳು ೨ ಮತ್ತು ೩) :—

ಈ ಎರಡು ಮನೋಹರವಾದ ದುಂಡು ವಿಗ್ರಹಗಳು ಈಗ ಮೇಲೆ ಹೇಳಿದ ಹಾಗೆ ಆ ಗ್ರಾಮದಲ್ಲಿಯೇ ಬೇರೆ ಬೇರೆ ಸ್ಥಳಗಳಲ್ಲಿವೆ. ಆಕಾರ, ಎತ್ತರದಲ್ಲಿ, ಕುಳಿತಿರುವ ಭಂಗಿಯಲ್ಲಿ ಮತ್ತು ಆಭರಣಗಳ ಪದ್ಧತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿದೆ. ಎರಡೂ ಪದ್ಮಪೀಠದ ಮೇಲೆ ಭೋಗಾಸನದ ಭಂಗಿಯಲ್ಲಿ ಕುಳಿತಿವೆ. ಮೂರ್ತಿಗಳ (ಪೀಠ ಬಿಟ್ಟು) ಎತ್ತರ ಸುಮಾರು ೯೫ ಸೆಂ. ಮೀ.; ಅಗಲ, ಸುಮಾರು ೫೦ ಸೆಂ. ಮೀ. ಅವರವರಿಗೆ ಸರಿಯಾದ, ಪ್ರಮಾಣಬದ್ಧವಾದ, ಆಕರ್ಷಕವಾದ, ಮೈಕಟ್ಟು. ಪುರುಷನದು ವಿಶಾಲ ಎದೆ, ಸ್ವಲ್ಪ ಉಬ್ಬಿದ ಹೊಟ್ಟೆ. ಸ್ತ್ರೀಯ ಒಳ ಬಾಗಿದ ನಡುವು ಪುರುಷನದಕ್ಕಿಂತ ಸಹಜವಾಗಿ ಸಣ್ಣದಾಗಿದೆ. ಕುಚದ್ವಯಗಳು ದುಂಡಾಗಿ ಎದ್ದು ಕಾಣುತ್ತವೆ. ಒಬ್ಬೊಬ್ಬರಿಗೂ ಎರಡು ಕೈಗಳು ಮಾತ್ರ. ಸೂಕ್ಷ್ಮವಾಗಿ ಕೊರೆದ ಅಂದವಾದ ಕಿರೀಟ ಮುಕುಟ, ಚಕ್ರಾಕಾರದ ಕಿವಿಯೋಲೆಗಳು. ವಿವಿಧ ಹಾರಗಳು ಮುಂತಾದ ಆಭರಣಗಳಿಂದ ಅಲಂಕರಿಸಲ್ಪಟ್ಟಿವೆ. ಪುರುಷ ವಿಗ್ರಹದ ತಲೆಯ ಕೂದಲನ್ನು ಕ್ರಮವಾಗಿ ಕತ್ತರಿಸಿ ಒಪ್ಪ ಮಾಡಿರುವ ಎಳೆಗಳನ್ನು ಬಹಳ ಸೂಕ್ಷ್ಮವಾಗಿ ತೋರಿಸಿದೆ (ಚಿತ್ರ ೨ ಅ.) ಕಿರೀಟ ಮುಕುಟ ವರ್ತುಳಾಕಾರದ್ದಾಗಿದ್ದು, ದೊಡ್ಡದಾಗಿದ್ದು, ಹೆಚ್ಚು ವೈವಿಧ್ಯವಾಗಿದೆ. ಭುಜದ ಮೇಲೆಯೂ ಮಣಿಯ ಸರಗಳಿವೆ. ಉದರ ಬಂಧವಿದೆ. ಮತ್ತು ತಲೆಯ (ಚಿತ್ರ ೨ ಕ). ಹಿಂಬದಿಯಲ್ಲಿ ದುಂಡಾದ, ಚೌಕಾಕಾರದ ಕಮಲದ ಹೂವಿನ ಸಾಲಿನಿಂದ ಅಲಂಕರಿಸಲ್ಪಟ್ಟ ವೃತ್ತಾಕಾರದ ಪ್ರಭಾಮಂಡಲವಿದೆ. ಈ ಪ್ರಭಾಮಂಡಲದ ಹಿಂಬದಿಯಲ್ಲಿ ಏನೂ ಚಿತ್ರವಿಲ್ಲ (ಚಿತ್ರ ೨ಬ). ಸ್ತ್ರೀಯ ಕಿರೀಟ ಮುಕುಟ ತಳಭಾಗದಲ್ಲಿ ಸ್ವಲ್ಪ ಚೌಕೋನವಾಗಿದೆ. ಎರಡು ಕಂಠಾಭರಣಗಳು, ನಾಲ್ಕು ಹಾರಗಳು ಇವೆ. ದೊಡ್ಡ ಹಾರದ ಪದಕ ಕುಚದ್ವಯಗಳ ಮಧ್ಯದಲ್ಲಿ ಇಳಿಬಿದ್ದಿದೆ (ಚಿತ್ರ ೩). ತಲೆಯ ಹಿಂದೆ ಪ್ರಭಾ ಮಂಡಲವಿದ್ದು. ಹಿಂಬದಿಯಲ್ಲಿ ಸಿಂಹಮುಖದ ಉಬ್ಬು ಚಿತ್ರವಿದ್ದು ಅದರ ಬಾಯಿಂದ ಐದು ಎಳೆಯ ಮಣಿ ಸರವು ಇಳಿ ಬಿದ್ದಿದೆ. ಇದು ಸ್ತ್ರೀಯ ಕೇಶಾಲಂಕಾರ ಪ್ರಿಯತೆಗೆ ಸಹಜವಾಗಿದೆ ಈ ರೀತಿ ಪ್ರಭಾ ಮಂಡಲದ ಹಿಂಬದಿಯ ಅಲಂಕಾರ ತುಂಬ ಅಪರೂಪ. ಪುರುಷ ವಿಗ್ರಹದ ಭುಜದ ತನಕ ಎರಡು ಕೈಗಳು. ತೊಡೆ ಕಾಲುಗಳು. ಸ್ತ್ರೀಯ (ಚಿತ್ರ ೩ಕ.) ಭುಜ. ಕೈಗಳು, ಬಲ ಮೊಳಕಾಲಿನ ಭಾಗ. ದುರದೃಷ್ಟದಿಂದ. ಒಡೆದುಹೋಗಿವೆ.

ಒಟ್ಟಿನಲ್ಲಿ ಮೂರ್ತಿಗಳ ಭವ್ಯ ಆಕಾರ. ಮನೋಹರವಾದ ಅಂಗ ಸೌಷ್ಟವತೆ. ಶ್ರೀಮಂತಿಕೆಯ ಅಲಂಕಾರ ಮತ್ತು ಆಕರ್ಷಕವಾಗಿ ಕುಳಿತಿರುವ ಶೈಲಿ ನಿಜವಾಗಿಯೂ ಒಬ್ಬ ಶ್ರೇಷ್ಠ ಶಿಲ್ಪಿಯ ಕಲಾಪ್ರೌಢಿಮೆಯ ಹಿರಿಮೆಗೆ ಸಾಕ್ಷಿಯಾಗಿದೆ.

ಈ ಮೂರ್ತಿಗಳು ಯಾವ ದೇವರುಗಳು ? ಯಾವ ಕಾಲದವು ? ಇವಕ್ಕೆ ಉತ್ತರಗಳು ಪ್ರಾಯಶಃ ಈ ಗ್ರಾಮದ ಕದಂಬರ ಶಿಲಾಶಾಸನದಲ್ಲಿ ಇರುವ ಹಾಗೆ



ಚಿತ್ರ ೨ಬ
ಗುಡ್ನಾಪುರ : ಪುರುಷ (ಮನ್ಮಥ?)
ವಿಗ್ರಹ; ಹಿಂಭಾಗ



ಚಿತ್ರ ೨ಕ
ಗುಡ್ನಾಪುರ : ಪುರುಷ (ಮನ್ಮಥ?)
ವಿಗ್ರಹ; ಮುಂಭಾಗ



ಚಿತ್ರ ೩ಕ
ಗುಡ್ನಾಪುರ : ಸ್ತ್ರೀ (ರತಿ?)
ವಿಗ್ರಹ; ಮುಂಭಾಗ



ಚಿತ್ರ ೪
ಗುಡ್ನಾಪುರ : ರತಿ–ಮನ್ಮಥ
ವಿಗ್ರಹ









ಕಾಣುವುದು. ಇವರಲ್ಲಿನ ಸಂಗತಿಗಳಲ್ಲಿ ಸಮಯೋಚಿತವಾದ ಒಂದೆರಡನ್ನು ಇಲ್ಲಿ ಸೂಚಿಸಬಹುದು. ಕದಂಬ ರವಿವರ್ಮ (ಕ್ರಿ. ಶ. ೪೮೫–೫೧೯) ಕ್ಷಿತೀಂದ್ರನು ಕಾಮದೇವನ ಆಲಯವನ್ನು ಕಟ್ಟಿಸಿ ರತಿ ಮತ್ತು ಮನ್ಮಥರ ವಿಗ್ರಹಗಳನ್ನು ಮಾಡಿಸಿ ಸ್ಥಾಪಿಸಿದನೆಂದು ಶಿಲಾಶಾಸನದಲ್ಲಿ ಉಲ್ಲೇಖವಾಗಿದೆ. ಈ ಮನೋಹರವಾದ, ಭವ್ಯವಾದ. ಕಲಾಪೂರ್ಣವಾದ, ಎರಡೆರಡೇ ಕೈಗಳುಳ್ಳ. ಆಕಾರದಲ್ಲಿ ಪ್ರಮಾಣದಲ್ಲಿ ಸಮಾನತೆಯಿರುವ, ಪ್ರತ್ಯೇಕವಾದ ಸ್ತ್ರೀ, ಪುರುಷ ವಿಗ್ರಹಗಳು ಶಿಲಾಲೇಖದಲ್ಲಿ ಉಲ್ಲೇಖವಾದ ರತಿ–ಮನ್ಮಥರೆಂದು ತೋರುವುದು.

ಈ ವಿಗ್ರಹಗಳ ಆಭರಣಗಳ ಕೆತ್ತನೆ ಶೈಲಿ, ರಾಷ್ಟ್ರಕೂಟರ, ಕಲ್ಯಾಣ ಚಾಳುಕ್ಯರ, ಹೊಯ್ಸಳರ ಕಾಲದವುಗಳಿಗಿಂತ ಭಿನ್ನವಾಗಿದ್ದು ಬಾದಾಮಿ ಚಾಳುಕ್ಯರ ಪ್ರತಿಮಾ ಲಕ್ಷಣಗಳಿಗೆ ಸಮೀಪವಾಗಿದೆ. ಗುಡ್ನಾಪುರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರಯೋಗ ಚಕ್ರ ಧರಿಸಿರುವ ಮಹಿಷಾಸುರ ಮರ್ಧಿನೀ, ನಾಲ್ಕು ಆನೆಗಳಿಂದ ಕೂಡಿದ ಗಜಲಕ್ಷ್ಮೀ, ಬಾಣಾಕಾರದ ಬ್ರಹ್ಮಸೂತ್ರವುಳ್ಳ ಶಿವಲಿಂಗ ಇವೇ ಮೊದಲಾದವುಗಳನ್ನು ನೋಡಿದ್ದೇನೆ. ಈ ಲಕ್ಷಣಗಳೆಲ್ಲ ಬಾದಾಮಿ ಚಾಳುಕ್ಯರ ಪ್ರತಿಮಾ ಶಿಲ್ಪದಲ್ಲಿವೆ.[೪]

ಗುಡ್ನಾಪುರದಲ್ಲಿ ಶಾಸನ ಸಿಕ್ಕಿದ ದಿಣ್ಣೆಯಲ್ಲಿ ಕ್ರಿ. ಶ. ೧–೪ ನೇ ಶತಮಾನದ ಸುಟ್ಟ ಇಟ್ಟಿಗೆ ಅವಶೇಷಗಳಿವೆ. ಈ ಅವಶೇಷಗಳು ಆ ಕಾಲದ ಕಟ್ಟಡದ ಭಾಗಗಳಾಗಿರಬಹುದೇ ಮತ್ತು ಮುಂದೆ ಉತ್ಖನನ ಮಾಡಿದಲ್ಲಿ ಆ ಕಾಲದ ಮತ್ತು ಕದಂಬರ ಕಾಲದ ಕಟ್ಟಡ ಸಿಗಬಹುದೇ ಎಂದು ತಿಳಿಯಲು ಎರಡು ಪರೀಕ್ಷಕ ಗುಂಡಿಗಳನ್ನು (Trial pits) ತೋಡಿದೆ. ಒಂದರಲ್ಲಿ ಸುಮಾರು ೪ ಮೀ. ಉದ್ದ. ೧ ಮೀ. ಅಗಲ ಮತ್ತು ೯೦ ಸೆ. ಮಿ ಎತ್ತರದ ಇಟ್ಟಿಗೆ ಗೋಡೆಯು, ಮತ್ತೊಂದರಲ್ಲಿ ಇಟ್ಟಿಗೆಯ ಒಂದು ಸಾಲು, ಸುಮಾರು, ೧, ೧೩ ಮಿ. ನಷ್ಟು ಕೆಳಗಡೆ ಇದ್ದುದು ಕಂಡುಬಂತು. ಇಟ್ಟಿಗೆಯ ಅಳತೆ, ಆಕಾರಗಳಿಂದ ಅವು ಸುಮಾರು ೧–೪ ನೇ ಶತಮಾನದವು ಅಥವಾ ಸ್ವಲ್ಪ ನಂತರದ್ದು ಆಗಬಹುದು. ಈ ಕಟ್ಟಡಗಳ ಅವಶೇಷಗಳಿಂದ ಮತ್ತು ರವಿವರ್ಮನ ಶಾಸನದಿಂದ ೧–೨ ಶತಮಾನದಿಂದ ೬ ನೇ ಶತಮಾನದವರೆಗೂ ಅಲ್ಲಿ ದೇವಾಲಯ ಮತ್ತು ಪ್ರತಿಮಾ ನಿರ್ಮಾಣದ ಚಟುವಟಿಕೆಯಿತ್ತು ಎಂಬುದು ಸ್ಪಷ್ಟವಾಗುವುದು. ಶಿಲಾಪ್ರತಿಮೆಗಳನ್ನು ಇಟ್ಟಿಗೆ ಗುಡಿಗಳಲ್ಲಿ ಇಡುವ ಪದ್ಧತಿಯಿದ್ದು ಕಾಲಾನುಕ್ರಮದಲ್ಲಿ ಗುಡಿಗಳು ಹಾಳಾಗಿ, ಮೂರ್ತಿಗಳು ಅಲ್ಲಲ್ಲಿ ಹರಡಿ ಹೋದ ಹಾಗಿದೆ. ೬ ನೇ ಶತಮಾನದಂತ್ಯದಲ್ಲಾಗಲೇ ಬಾದಾಮಿ ಚಾಳುಕ್ಯರು ಪ್ರಬಲರಾಗಿ, ಬನವಾಸಿ ಕದಂಬರು ಇವರ ಮಾಂಡಲೀಕರಾದರು. ಗುಡ್ನಾಪುರ ಮತ್ತು ಸುತ್ತ–ಮುತ್ತಲಿನ ಮೂರ್ತಿಗಳ ಕೆಲವು ಲಕ್ಷಣಗಳು ಚಾಳುಕ್ಯ ಪ್ರತಿಮೆಗಳಲ್ಲಿರುವುದನ್ನು ಮೇಲೆ ಹೇಳಿದೆ. ಅದರೆ ಈ ಸ್ಥಳಗಳಲ್ಲಿ ಚಾಳುಕ್ಯರ ದೇವಾಲಯಗಳಿಲ್ಲ.

೪. ಬ್ಯಾನರ್ಜಿ, ಆರ್.ಡಿ. Bas-relifs of Badami, of Memoirs of the Archaeological Survey of India, No. 25.

ಈ ಎಲ್ಲ ಕಾರಣಗಳಿಂದ ಮೇಲೆ ವರ್ಣಿಸಿದ ಸ್ತ್ರೀ ಪುರುಷರ ವಿಗ್ರಹಗಳು ರವಿವರ್ಮನ ಶಾಸನದಲ್ಲಿ ಉಲ್ಲೇಖವಾದ ಮನ್ಮಥ. ರತಿಯರೆಂದು ತೋರುವುವು. ಈ ರೀತಿ ಗುರುತು ಮಾಡಿರುವುದು ಸರಿಯಾಗಿದ್ದಲ್ಲಿ ನಮಗೆ ಆ ಶಿಲಾಶಾಸನದಲ್ಲಿ ಉಲ್ಲೇಖಿಸಿದ ರತಿ–ಮನ್ಮಥರ ವಿಗ್ರಹಗಳು ಸಿಕ್ಕಂತಾಯಿತು.

ಈಗಾಗಲೇ ವೀರಭದ್ರ ದೇವರ ಗುಡಿಯಲ್ಲಿ ರತಿ ಮನ್ಮಥ ವಿಗ್ರಹವಿರುವುದನ್ನು ಮೇಲೆ ಹೇಳಿದೆ. ಇದು ಒಂದೇ ಕಲ್ಲಿನಲ್ಲಿ ಮಾಡಿದ ಸಣ್ಣ ಜೋಡು ವಿಗ್ರಹ(ಚಿತ್ರ ೪) ಮನ್ಮಥನ ಬಲಗೈಯಲ್ಲಿ ಉದ್ದವಾದ ಕಬ್ಬಿನ ಕೋಲು ಇದೆ. ಎಡಗೈಯಲ್ಲಿರುವುದು ಒಡೆದು ಹೋಗಿದೆ. ರತಿಯ ಎಡಗೈಯಲ್ಲಿ ಕಮಲದ ಹೂವಿನ ದಂಟು ಇದೆ. ಬಲಗೈಯಲ್ಲಿ ಫಲವಿರುವ ಹಾಗೆ ಇದೆ. ಈ ಜೋಡಿ ವಿಗ್ರಹದ ಸಣ್ಣ ಆಕಾರ ಆಭರಣಗಳ ಸರಳತೆ, ಇವೆಲ್ಲ ಸಾಮಾನ್ಯವಾಗಿವೆ. ಇಂಥಹ ಸಾಮಾನ್ಯವಾದ ಸಣ್ಣ ಮೂರ್ತಿ ಒಬ್ಬ ಚಕ್ರವರ್ತಿಯಿಂದ ಮೂಡಿಸಲ್ಪಡುವುದೇ ? ಇದು ಒಂದು ದೇವಾಲಯದ ಸಭಾಮಂಟಪದ ದೇವಕೋಷ್ಠದಲ್ಲಿಡಲು ಯೋಗ್ಯ. ಪ್ರತ್ಯೇಕವಾದ ಗುಡಿಯನ್ನು ಕಟ್ಟಿ ಅದರಲ್ಲಿ ಇಡುವುದೇನಲ್ಲ. ಶಾಸನದಲ್ಲಿ ರತಿ ಮನ್ಮಥ ವಿಗ್ರಹಗಳು ಪ್ರತ್ಯೇಕ ಪ್ರತ್ಯೇಕವಾಗಿ ಉಲ್ಲೇಖವಾಗಿದೆ. ಅಂದರೆ ಒಂದೇ ಕಲ್ಲಿನಲ್ಲಿ ಕಡೆದ ಜೋಡು ಮೂರ್ತಿಯಲ್ಲ. ಆದುದರಿಂದ ಈ ರತಿ ಮನ್ಮಥ ವಿಗ್ರಹ ಶಾಸನದಲ್ಲಿ ಹೇಳಿದುದು ಅಲ್ಲ.

ನಮ್ಮಲ್ಲಿ ಬಹಳ ಪ್ರಾಚೀನ ಪ್ರತಿಮೆಯೆಂದರೆ ಬನವಾಸಿಯಲ್ಲಿರುವ ಕ್ರಿ.ಶ. ೩ ನೇ ಶತಮಾನದ ಚುಟು ವಂಶದವರು ಮಾಡಿಸಿದ[೫] ನಾಗಪ್ರತಿಮೆ ಮತ್ತು ಸನ್ನತಿಯ ೧-೩ ನೆಯ ಶತಮಾನದ ಬೌದ್ಧ. ಯಕ್ಷ. ಉಬ್ಬು ಚಿತ್ರಗಳು ಮೊದಲಾದವು.[೬] ಇವುಗಳ ಮುಂದಿನ ಕಾಲದವುಗಳೆಂದರೆ. ಬಾದಾಮಿ ಚಾಲುಕ್ಯರಿಂದ ಆರಂಭವಾದ ದೇವಾಲಯಗಳು ಮತ್ತು ವಿಗ್ರಹಗಳು. ಅಂದರೆ ೬–೭ ನೆಯ ಶತಮಾನದಿಂದ ಮುಂದಿನವು ನಮಗೆ ಇದುವರೆಗೆ ದೊರೆತಿರುವುವು.

ಬನವಾಸಿಯ ಮಧುಕೇಶ್ವರ ದೇವಾಲಯವು. ಮೊದಲಿನ ಕದಂಬರ ಕಾಲದ್ದು ಎಂದು ಪ್ರತೀತಿಯಿದೆ. ಆದರೆ ಇದು ಪೂರ್ವದಲ್ಲಿ ವಿಷ್ಣು ದೇವಾಲಯವಾಗಿದ್ದು ಬಾದಾಮಿಯ ಚಾಲುಕ್ಯರು ಕದಂಬರನ್ನು ಗೆದ್ದಮೇಲೆ ಕಟ್ಟಿಸಿದ ದೇವಾಲಯ ಎನಿಸುವುದು. ಗರ್ಭಗುಡಿಯ ಮತ್ತು ಅದರ ಮುಂದಿನ ಸಭಾಂಗಣದ ತಳ–ವಿನ್ಯಾಸ, ಗರ್ಭಗುಡಿಯ ಅಧಿಷ್ಠಾನ. ಗೋಡೆಯ ಮಾದರಿ ಮತ್ತು ಹೊರಬದಿ

---

೫. ದೇಸಾಯಿ ಪಾಂ. ಭೀ. ೧೯೭೦, A Histsory of Karnataka, ಪುಟ ೫೪–೫೫; ಪ್ಲೇಟ್ ೧: ನಾಗ ಪ್ರತಿಮೆ.

೬. ದೇಸಾಯಿ, ಪಾಂ. ಭೀ., ೧೯೬೮, ಅದೇ ಕಡೆ.

ಯಲ್ಲಿರುವ ದೇವಕೋಷ್ಠಗಳು, ಮೇಲಿನ ಛತ್ತು ಮತ್ತು ಸಭಾಂಗಣದಲ್ಲಿರುವ ದೊಡ್ಡ ದೊಡ್ಡ ಚೌಕೋನಾಕಾರದ ಸ್ತಂಭಗಳು. ಅವುಗಳ ಮೇಲಿನ ಅಲಂಕಾರದ ಚಿತ್ರಗಳು ಮತ್ತು ಜೋದುಗೆಗಳು ಬಾದಾಮಿಯ ಚಾಳುಕ್ಯರ ವಾಸ್ತು ಶಿಲ್ಪದ ಮಾದರಿಯಲ್ಲಿವೆ. ಹಾಗೆಯೆ ಸಭಾಂಗಣದ ಈಶಾನ್ಯ ಮೂಲೆಯ ಗೂಡಿನಲ್ಲಿರುವ ಈಗ ಮಾಧವನೆಂದು ಕರೆಸಿಕೊಳ್ಳುತ್ತಿರಲ್ಪಡುವ ಭವ್ಯವಾದ ಮಹಾವಿಷ್ಣುವಿನ ಉಬ್ಬು ಮೂರ್ತಿ ಚಾಳುಕ್ಯ ಪ್ರತಿಮಾ ಶಿಲ್ಪದ ಶೈಲಿಯಲ್ಲಿದೆ. ಚಾಳುಕ್ಯರ ಅವನತಿಯ ನಂತರ ಪ್ರಾಯಶಃ ಹಾನಗಲ್ಲು ಕದಂಬರ ಕಾಲದಲ್ಲಿ ಈ ದೇವಾಲಯವನ್ನು ವಿಸ್ತರಿಸಿ, ಮಧುಕೇಶ್ವರನ ಸ್ಥಾಪನೆಯಾಗಿ ಶಿವದೇವಾಲಯವಾಗಿರುವ ಹಾಗೆ ಕಾಣುವುದು. ಬನವಾಸಿಯ ಕದಂಬರ ಇದುವರೆಗೆ ದೊರೆತ ಯಾವ ಶಿಲಾಲೇಖಗಳಲ್ಲಿಯೂ ತಾಮ್ರಪಟಗಳಲ್ಲಿಯೂ ಈ ಮಧುಕೇಶ್ವರನ ಉಲ್ಲೇಖವಿಲ್ಲ; ಹಾನಗಲ್ಲು ಕದಂಬರ ಶಿಲಾಲೇಖಗಳಲ್ಲಿ ಮಾತ್ರ ಈ ಮಧುಕೇಶ್ವರನ ಉಲ್ಲೇಖವಿದೆ.[೭] ಇದು ಮೇಲಿನ ಅಭಿಪ್ರಾಯಕ್ಕೆ ಪೋಷಕವಾಗಿದ್ದು ಗಮನಾರ್ಹವಾಗಿದೆ. ಈ ಅಭಿಪ್ರಾಯವು ನಿಜವಾಗಿದ್ದಲ್ಲಿ ಬನವಾಸಿಯ ಕದಂಬರ ದೇವಾಲಯಗಳಾಗಲಿ, ಕಲ್ಲಿನ ಪ್ರತಿಮೆಗಳಾಗಲಿ ಇನ್ನೂ ದೊರೆತಿಲ್ಲ. ಆದುದರಿಂದ ಮೇಲಿನ ವಿಗ್ರಹಗಳ ಗುರುತಿಸುವಿಕೆ ಮತ್ತು ಸೂಚಿಸಿದ ಕಾಲಮಾನ ಸರಿಯಾಗಿದ್ದಲ್ಲಿ ನಮಗೆ ಕದಂಬರ ಕಾಲದ ಪ್ರತಿಮೆಗಳು ಪ್ರಥಮವಾಗಿ ದೊರೆತಿವೆಯೆಂದು ಹೇಳಬಹುದು. ಇವು ಬಹಳ ಮಹತ್ವದ್ದಾಗಿವೆ.

★ ಅ. ಸುಂದರ

---

೭. ವಿಷಯ ತಿಳಿದದ್ದು ಡಾ. ಬ. ರಾ. ಗೋಪಾಲರವರಿಂದ, ಅವರಿಗೆ ಕೃತಜ್ಞತೆಗಳು.

ನಿರಕ್ಷರತಾ ನಿವಾರಣೆ ಮತ್ತು ಪ್ರಚೋದನೆಗಳು

"ಒಂದು ಹೊತ್ತಿನ ಕೂಳಿಗೆ ದಿನವೆಲ್ಲಾ ದುಡಿಮೆ ಮಾಡುವುದು ಅನಿವಾರ್ಯ. ಈ ರೀತಿ ದುಡಿಮೆ ಮಾಡುವ ಬಡವರಾದ ವಯಸ್ಕರಿಗೆ ಓದು ಬರಹ ಕಲಿಯಲು ಇಷ್ಟವಿಲ್ಲ." ಈ ಅಂಶವನ್ನು ವಿಯೆಟ್ನಾಂ ವರದಿಮಾಡಿದೆ. ವಯಸ್ಕರು ಹಗಲೆಲ್ಲಾ ಹೊಲ ಗದ್ದೆಗಳಲ್ಲಿ ದುಡಿಮೆ ಮಾಡಿ ಮನೆಗೆ ರಾತ್ರಿ ಹೊತ್ತಾಗಿ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಶಾಲೆಗೆ ಬರುವ ವಯಸ್ಕರರಿಗೆ ಓದು ಬರಹ ಕಲಿಯುವುದರ ಲಾಭ ಕಾಣಬೇಕು. ಶಾಲೆಗೆ ಬಂದಿದ್ದಕ್ಕೆ ಒಂದು ಪದ ಇಲ್ಲವೆ ಕಡೆಗೆ ಒಂದು ಅಕ್ಷರ ಕಲಿತಿದ್ದೇವೆ ಎಂಬ ಆಸೆ ಅಂಕುರಿಸಬೇಕು ಎಂಬುದು ಇಟಲಿ ವಯಸ್ಕ ರೈತರ ಅಭಿಪ್ರಾಯ.

ವಯಸ್ಕರು ರಾತ್ರಿ ಶಾಲೆಗೆ ಬಾರದಿರಲು ಕಾರಣ.

ವಯಸ್ಕರು ರಾತ್ರಿ ಶಾಲೆಗೆ ಬಾರದಿರಲು ಹಲವಾರು ಕಾರಣಗಳಿವೆ. ಇವುಗಳನ್ನು ತಿಳಿಯಲು ೧೯೬೨ ರಲ್ಲಿ ರೋಂ ನಗರದಲ್ಲಿ "ಸಾಕ್ಷರತೆ ಮತ್ತು ಸಮಾಜ" ಎಂಬ ವಿಷಯದ ಬಗ್ಗೆ ವಿಶ್ವಸಮ್ಮೇಳನ ನಡೆಯಿತು. ವಯಸ್ಕರು ತರಗತಿಗಳಿಗೆ ಬಾರದಿರುವ ಬಗ್ಗೆ ಸಮ್ಮೇಳನವು ಕೂಲಂಕಷವಾಗಿ ವಿಚಾರ ಮಾಡಿ, ಕೆಳಗೆ ಕಂಡಂತೆ ತನ್ನ ಅಭಿಪ್ರಾಯಗಳನ್ನು ಸೂಚಿಸಿದೆ.

೧) ಜೀವನ ಮಟ್ಟವನ್ನು ಉತ್ತಮ ಪಡಿಸಲು ನಿರಕ್ಷರತೆ ಅಡ್ಡಿಯಾಗಿದೆ ಎಂಬ ಅರಿವು ಉಂಟಾಗದೆ ಇರುವುದು.

೨) ಜೀವನ ನಿರ್ವಹಣೆಗಾಗಿ ಹೆಚ್ಚಿನ ದುಡಿಮೆ ಅಗತ್ಯ. ಈ ಸನ್ನಿವೇಶದಲ್ಲಿ ವಯಸ್ಕರಿಗೆ ಸಾಕಷ್ಟು ವೇಳೆ ಸಿಗದು. ಮೇಲಾಗಿ ಉತ್ಸಾಹವೂ ಇರದು.

೩) ಓದು ಬರಹ ಕಲಿಯುವ ವಯಸ್ಸು ಮೀರಿದೆ ಎಂಬ ಕಲ್ಪನೆ.

೪) ತರಗತಿಗೆ ಬರುವ ವಯಸ್ಕರ ಸಂಖ್ಯೆ ಕಡಿಮೆ. ಆದಕಾರಣ ತಾವು ತರಗತಿಗೆ ಹೋದಲ್ಲಿ ಇತರರಿಂದ ಗೇಲಿಮಾಡಲ್ಪಡಬಹುದು ಎಂಬ ಶಂಕೆಯನ್ನು ಅವರು ಹೊಂದಿರುವುದು.

೫) ತರಗತಿಗಳಿಗೆ ಕ್ರಮವಾಗಿ ಹಾಜರಾಗದಿರಲು ಸಾಮಾಜಿಕ ಸಂಪ್ರದಾಯ ಮತ್ತು ಕಟ್ಟಳೆಗಳು ಅಡ್ಡಿಯಾಗಿರುವುದು.

ಒಟ್ಟಿನಲ್ಲಿ ವಯಸ್ಕರು ಓದುಬರಹ ಕಲಿಯಲು ಪ್ರಾಮುಖ್ಯವಾಗಿ ಎರಡು ಕಾರಣಗಳು ಅಡ್ಡಿಯಾಗಿರುವುದಾಗಿ ಕಂಡುಬಂದಿದೆ.

೧) ವೈವಿಧ್ಯದಿಂದ ಕೂಡಿದ ಜೀವನದಲ್ಲಿ ಸಾಕ್ಷರತೆಗೆ ಸ್ಥಾನವಿಲ್ಲದಿರುವುದು.

೨) ಅವರು ನಡೆಸುತ್ತಿರುವ ಜೀವನ ಕ್ರಮದ ವಾತಾವರಣದಲ್ಲಿ ಜ್ಞಾನಾರ್ಜನೆ ಮಾಡಲು ಸ್ವಾಭಾವಿಕವಾಗಿ ಕಾಣಬರುವ ಜಡಮನೋಭಾವ.

ವಯಸ್ಕರು ರಾತ್ರಿ ತರಗತಿಗಳಿಗೆ ಬಾರದಿರಲು ಮೇಲ್ಕಂಡ ಕಾರಣಗಳನ್ನು ರೋಂನಗರದಲ್ಲಿ ನಡೆದ ವಿಶ್ವಸಮ್ಮೇಳನ ಗೊತ್ತುಮಾಡಿದೆ. ಹಾಗಾದರೆ ರಾತ್ರಿ ತರಗತಿಗಳಿಗೆ ವಯಸ್ಕರು ಏತಕ್ಕಾಗಿ ಸೇರುತ್ತಾರೆ. ಅವರು ತರಗತಿಗಳಿಗೆ ಸೇರಲು ಪ್ರಧಾನವಾದ ಪ್ರಚೋದನೆಗಳು ಯಾವುವು. ಇವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವವೆ? ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಆಗುವುವೆ? ಹೌದು. ಇವು ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಉದಾಹರಣೆಗಳನ್ನು ಕಾಣಬಹುದು.

ಆಫ್ರಿಕಾದಲ್ಲಿ ಒಂದು ಕಡೆ ಪ್ರಾಥಮಿಕ ಪಾಠಶಾಲೆಗೆ ಹೋಗುವ ಮಕ್ಕಳ ಅಭಿವೃದ್ಧಿಯನ್ನು ಪರಿಶೀಲಿಸುವ ದೃಷ್ಟಿಯಿಂದ ಪೋಷಕರು ಓದುಬರಹ ಕಲಿಯಲು ಇಷ್ಟಪಟ್ಟರು. "ನಮ್ಮ ಬಗ್ಗೆ ನಿಮಗೆ ಚಿಂತೆ ಬೇಡ. ನಮ್ಮ ಮಕ್ಕಳ ಬಗ್ಗೆ ಆಸ್ಥೆ ವಹಿಸಿ" ಈ ಅಭಿಪ್ರಾಯವನ್ನು ಕೋರಿಯಾದ ಒಂದು ಹಳ್ಳಿಯಲ್ಲಿ ಅಲ್ಲಿನ ವಯಸ್ಕರು ತಿಳಿಸಿದ್ದಾರೆ. ನೈಜೀರಿಯಾದಲ್ಲಿ ಸೈನಿಕರು ತಮ್ಮ ನೆಂಟರಿಷ್ಟರಿಗೆ ಕಾಗದ ಬರೆಯುವ ಕಾರಣದಿಂದ ರಾತ್ರಿ ಶಾಲೆಗಳಿಗೆ ಸೇರಿ ಓದುಬರಹ ಕಲಿತರು. ಪಶ್ಚಿಮ ಆಫ್ರಿಕಾ ದೇಶದಲ್ಲಿ ಗಣಿಯ ಕಾರ್ಮಿಕರು ತಮ್ಮ ಉದ್ಯೋಗದಲ್ಲಿ ಬಡ್ತಿ ಪಡೆಯುವ ಆಶೆಯಿಂದ ಓದುಬರಹ ಕಲಿತರು. ಫ್ರೆಂಚ್ ಭಾಷೆ ಮಾತನಾಡುವ ಆಫ್ರಿಕಾ ದೇಶದಲ್ಲಿ ಅಲ್ಲಿನ ನಿವಾಸಿಗಳು ಕೆಲವು ವ್ಯವಹಾರಿಕ ಉದ್ದೇಶಗಳಿಗಾಗಿ ಓದು ಬರಹ ಕಲಿತರು. ಅವು ಯಾವವು? ತನಗೆ ಬರುವ ಕಾಗದಪತ್ರಗಳನ್ನು ತಾನೇ ಓದುವುದು ಮತ್ತು ಅವುಗಳಿಗೆ ಉತ್ತರ ಬರೆಯುವುದು, ಪೋಸ್ಟಲ್ ಆರ್ಡರಿನಲ್ಲಿ ಬರೆದಿರುವುದನ್ನು ತಿಳಿಯುವುದು, ಮತದ ಚೀಟಿಯನ್ನು ಓದಿ ಚುನಾವಣೆಗೆ ನಿಂತಿರುವ ಸ್ಪರ್ಧೆಯ ಬಗ್ಗೆ ತಿಳಿಯುವುದು.

ಓದು ಬರಹ ಕಲಿಯಲು ವೈಯಕ್ತಿಕ ಪ್ರತಿಷ್ಠೆಯೂ ಸಹ ಕಾರಣ. ನೈಜೀರಿಯಾದಲ್ಲಿ ಒಬ್ಬನು ಸಾರ್ವಜನಿಕ ಸ್ಥಳದಲ್ಲಿ ವೃತ್ತಪತ್ರಿಕೆಯನ್ನು ತೆರೆದು ಓದುವವನಂತೆ ಕೂಗುತ್ತಿದ್ದನು. ಇದು ಅವನ ನಿತ್ಯದ ಪದ್ಧತಿಯಾಗಿತ್ತು. ಅವನ ಗ್ರಹಚಾರಕ್ಕೆ ಸರಿಯಾಗಿ ಒಂದು ದಿನ ಅವನು ಪತ್ರಿಕೆಯನ್ನು ತಲೆಕೆಳಗಾಗಿ ಹಿಡಿದುಕೊಂಡು ನೋಡುತ್ತಿದ್ದುದು ಕಂಡು ಬಂತು. ಆಗ ಅವನಿಗೆ ನಾಚಿಕೆಯಾಯಿತು. ಈ ಕಾರಣ ರಾತ್ರಿ ಶಾಲೆಗೆ ಓದು ಬರಹ ಕಲಿಯಲು ಸೇರಿದನು. ನಿರಕ್ಷರತೆ ತಾಂಡವವಾಡುತ್ತಿರುವ ದೇಶ ಒಂದರಿಂದ. ಬಾಲ್ ಪಾಯಿಂಟ್ ಪೆನ್ನುಗಳ ಮುಚ್ಚಳಗಳಿಗೆ ಮಾತ್ರ ಬೇಡಿಕೆ ಬಂದಿತು. ಕಾರ್ಖಾನೆಯ ಮಾಲಕರಿಗೆ ಈ ಬೇಡಿಕೆಯಿಂದ ಅನುಮಾನ ಉಂಟಾಯಿತು. ಮತ್ತು ಆಶ್ಚರ್ಯವೂ ಆಯಿತು. ಆದ್ದರಿಂದ ಬೇಡಿಕೆಯ ಬಗ್ಗೆ ಪುನಃ ವಿಚಾರ ಮಾಡಿತು. ಪೆನ್ನುಗಳ ಮುಚ್ಚಳಗಳನ್ನು ಎಲ್ಲರಿಗೂ ಕಾಣುವಂತೆ

ಕೋಟಿನ ಜೇಬಿನಲ್ಲಿ ಸಿಕ್ಕಿಸಿಕೊಳ್ಳುವ ವ್ಯಾಮೋಹ ಮತ್ತು ದೊಡ್ಡಸ್ತಿಕೆಯ ಕಾರಣ ದಿಂದ ನಿರಕ್ಷರ ಕುಕ್ಷಿಗಳಾದರೂ ಅಪೇಕ್ಷಿಸುತ್ತಾರೆ ಎಂಬುದಾಗಿ ವ್ಯಕ್ತವಾಯಿತು.

ನೈಜೀರಿಯಾದಲ್ಲಿ ಎಗ್ಗಾನ್ ಎಂಬ ಹಳ್ಳಿ ಇದೆ. ಅಲ್ಲಿ ಈ ಪ್ರಸಂಗ ೧೯೬೩ ರಲ್ಲಿ ನಡೆಯಿತು. ಒಂದು ದಿನ ರಾತ್ರಿ ವಯಸ್ಕರ ಶಿಕ್ಷಣ ತರಗತಿಯಲ್ಲಿ ಅಕ್ಷರ ಪ್ರಚಾರದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅಲ್ಲಿ ಕೆಲವರು ಓದುಬರಹ ಬಾರದವರು ಕತ್ತೆಗೆ ಸಮಾನ ಎಂಬುದಾಗಿ ಛೀಮಾರಿ ಹಾಕಿದರು. ಈ ಮಾತು ಅವರಿಗೆ ಚೂರಿಯಂತೆ ತೀಕ್ಷ್ಣವಾಗಿತ್ತು. ಆದ ಅವಮಾನ ಅವರಿಗೆ ಸಹಿಸಲಿಲ್ಲ. ಅಂದಿನಿಂದ ವಿದ್ಯಾರ್ಥಿಗಳೆ–ಲ್ಲರೂ ತರಗತಿಗಳಿಗೆ ತಪ್ಪದೆ ಬರಲು ಪ್ರಾರಂಭಿಸಿದರು. ಆಫ್ರಿಕದ ಒಂದು ಕಥೆ ಶ್ರೀ ರಿಕೆಟ್ಸ್ ಎಂಬ ಪಾದ್ರಿ ಸೈಕಲ್ಲಿನ ಮೇಲೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುತ್ತಿದ್ದನು. ಒಬ್ಬ ಯುವಕ. ಆತನಿಗೆ ಆಗತಾನೆ ಮದುವೆಯಾಗಿತ್ತು. ಆತ ಪಾದ್ರಿ ಯನ್ನು ನಿಲ್ಲಿಸಿ ಅವರ ಕೈಗೆ ತನ್ನ ಕೈಯಲ್ಲಿದ್ದ ಕಾಗದವನ್ನು ಕೊಟ್ಟನು. ಅದರಲ್ಲಿ ಬರೆ ದಿರುವುದನ್ನು ಆತನು ಓದಿ ಹೇಳಿದನು. ಇದು ನ್ಯಾಯಾಲಯದಿಂದ ಬಂದಿರುವ ಸಮನ್ಸ್. ನಿನ್ನ ಹೆಂಡತಿ ನಿನ್ನನ್ನು ಬಿಟ್ಟಿದ್ದಾಳೆ' ನಿನ್ನ ಮೇಲೆ ದಾವ ಹಾಕಿದ್ದಾಳೆ. ಎಂಬುದಾಗಿ ಆತ ತಿಳಿಸಿದ. ಎಂತಹ ಶೋಚನೀಯ ಪರಿಸ್ಥಿತಿ ಇದು. "ನಿರಕ್ಷರ ಕುಕ್ಷಿಗೆ ನಿತ್ಯವೂ ನೂರಾರು ಶತ್ರುಗಳು, ಹಸಿವು. ರೋಗರುಜಿನಗಳು, ಅವ್ಯವಸ್ಥೆ ತೇಜೋವಧೆ ಯಾಗುವುದು."

ಫ್ರಾನ್ಸಿನಲ್ಲಿ ನಡೆದ ಒಂದು ಪ್ರಸಂಗ ಸ್ವಾರಸ್ಯವಾಗಿದೆ. ಒಬ್ಬನು ಒಂದು ಬಾರಿ ಸುರಂಗ ಮಾರ್ಗದಲ್ಲಿ ಹೋಗುತ್ತಿದ್ದನು, ಹೋಗುತ್ತಿರುವಾಗ ದಾರಿಯಲ್ಲಿದ್ದ ಬೋರ್ಡುಗಳನ್ನು ಓದಲಾಗದೆ ತಪ್ಪಾಗಿ ಬೇರೆ ಜಾಗಕ್ಕೆ ಹೋದನು. ಪೋಲೀಸರು ಆತ ನನ್ನು ಬಂಧಿಸಿ ನ್ಯಾಯಾಲಯಕ್ಕೆ ಒಯ್ದರು. ನ್ಯಾಯಾಧೀಶರು ಅವನಿಗೆ ಜೈಲಿನವಾಸ ವಿಧಿಸಿದರು. ನಂತರ ಕಾರಣ ತಿಳಿಯಿತು–ಆತನಿಗೆ ಓದು ಬರಹ ಬಾರದೆಂದು. ನ್ಯಾಯಾ ಧೀಶರೇ ಆತನಿಗೆ ಓದು ಬರಹ ಕಲಿಯಲು ವಯಸ್ಕರ ತರಗತಿಯ ವಿಳಾಸವನ್ನು ಕೊಟ್ಟು ಕಳುಹಿಸಿದರು.

ಗಂಡಸರಂತೆ ಹೆಂಗಸರಲ್ಲೂ ಸಹ ಓದು ಬರಹ ಕಲಿಯಲು ಪ್ರಚೋದನೆಗಳು ವೈಯಕ್ತಿಕವಾಗಿರಬಹುದು. ಒಬ್ಬರಿಂದ ಒಬ್ಬರಿಗೆ ಈ ಪ್ರಚೋದನೆಗಳು ವ್ಯತ್ಯಾಸ ಹೊಂದಬಹುದು. ಹಾಗೂ ಸ್ಥಳದಿಂದ ಸ್ಥಳಕ್ಕೂ ಸಹ ಬದಲಾಗಬಹುದು. ಈ ಅಂಶ ಗಳನ್ನು ಕೆಲವು ನಿದರ್ಶನಗಳಿಂದ ಸ್ವೀಕರಿಸಬಹುದು. ಜಮೈಕಾದಲ್ಲಿ ಒಬ್ಬ ಮುದುಕಿ ಒಂದು ಸಣ್ಣ ಅಂಗಡಿ ಇಟ್ಟುಕೊಂಡಿದ್ದಳು. ಜನರು ಆಕೆಗೆ ವ್ಯಾಪಾರದಲ್ಲಿ ಮೋಸ ಮಾಡುತ್ತಿದ್ದರು. ಇದನ್ನು ತಪ್ಪಿಸಿಕೊಳ್ಳಲು ಆಕೆ ವಯಸ್ಕರ ಅಕ್ಷರ ಪ್ರಚಾರ ತರಗತಿಯ ಮೊರೆ ಹೊಕ್ಕಳು. ಉತ್ತರ ಆಫ್ರಿಕಾದಲ್ಲಿ ಒಂದು ಪಟ್ಟಣ. ಅಲ್ಲಿ ಒಬ್ಬ ಉಪಾ ಧ್ಯಾಯರು ಒಬ್ಬನನ್ನು ಕುರಿತು "ನಿನ್ನ ಹೆಂಡತಿ ಶಾಲೆಗೆ ಬಂದರೆ ಕಾಗದ ಬರೆಯಲು ಕಲಿಯುವಳು. ಆದ್ದರಿಂದ ಅವಳನ್ನು ಶಾಲೆಗೆ ಕಳುಹಿಸು" ಎಂದು ಕೇಳಿಕೊಂಡರು.

"ಕಾಗದ ಯಾರಿಗೆ" ? ಎಂದು ಬಿಗ್ಗುತ್ತಾ ಗಂಡ ಕೇಳಿದನು. ಯಾವ ಗಂಡ ತಾನೆ ತನ್ನ ಹೆಂಡತಿಯ ಪ್ರೇಮಪತ್ರಕ್ಕೆ ಆಶಿಸುವುದಿಲ್ಲ. ? ತ್ಯಾಂಗನಿಕಾದಲ್ಲಿ ತರಗತಿಗಳಿಗೆ ಹೆಣ್ಣು ಮಕ್ಕಳು ಹೆಚ್ಚಾಗಿ ಸೇರುತ್ತಿದ್ದರು. ಕಾರಣ ಅವರು ಒಳ್ಳೆಯ ವಿದ್ಯಾವಂತ ಗಂಡಂದಿರನ್ನು ಪಡೆಯುವ ಆಶೆಯಿಂದ. ನೈಜೀರಿಯಾದಲ್ಲಿ ಕಸೂತಿ ಕಲಿಯಲು ಹೆಂಗಸರು ವಯಸ್ಕರ ಶಾಲೆಗಳಿಗೆ ಸೇರಿದರು. ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳಲ್ಲಿ ಧರ್ಮ ಗ್ರಂಥಗಳನ್ನು ಓದಲೇಬೇಕೆಂಬ ಆಸೆಯಿಂದ ವಯಸ್ಕರನ್ನು ರಾತ್ರಿ ಶಾಲೆಗಳಿಗೆ ಸೇರುವಂತೆ ಮಾಡಿದೆ. ಅಲ್ಲದೆ ಅನೇಕರಿಗೆ ಪುರಾಣ ಗ್ರಂಥಗಳನ್ನು ಮತ್ತು ತಮ್ಮ ಪೂರ್ವಿಕರ ಇತಿಹಾಸವನ್ನು ಓದಬೇಕೆಂಬ ಆಶೆ. ರಾತ್ರಿ ಶಾಲೆಗಳಲ್ಲಿ ಓದುಬರಹ ಕಲಿಯಲು ಪ್ರೇರೇಪಿಸಿದೆ.

ಸಾಕ್ಷರತೆಯ ಪರಿಣಾಮ ತಿಳಿಯಲು ನಡೆದಿರುವ ಪ್ರಯೋಗಗಳು

ವಯಸ್ಕರು ರಾತ್ರಿ ತರಗತಿಗಳಿಗೆ ಸೇರಲು ಕಾರಣಗಳು ಯಾವುವು ಎಂಬುದನ್ನು ತಿಳಿಯಲು ಇರಾನಿನಲ್ಲಿ ಒಂದು ಸಮೀಕ್ಷೆ ನಡೆದಿದೆ. ಅದರ ವಿವರಗಳನ್ನು ಕೆಳಗೆ ಕೊಟ್ಟಿದೆ.

ಸಾಕ್ಷರತೆಯ ಅಗತ್ಯತೆಯ ಬಗ್ಗೆ ಪ್ರತಿ ಸಂಸಾರದ ಯಜಮಾನರು ನೀಡಿರುವ ಕಾರಣಗಳ ಪಟ್ಟಿ

ಅಭಿಪ್ರಾಯಗಳು	ಕುಟುಂಬಗಳ ಸಂಖ್ಯೆ	ಶೇಕಡಾ ಪ್ರಮಾಣ
೧. ಉತ್ತಮ ಜೀವನ ನಡೆಸಲು	೫೬	೩೯.೦೫
೨. ಅನಕ್ಷರಸ್ಥರು ಕಣ್ಣಿದ್ದೂ ಕುರುಡರು	೨೦	೧೪.೧೮
೩. ಓದುಬರಹ ಕಲಿಯುವುದು ಒಳಿತು	೧೯	೧೨.೪೭
೪. ಹೆಚ್ಚು ಸಂಪಾದನೆ ಮಾಡಲು	೬	೪.೨೫
೫. ಉತ್ತಮ ಉದ್ಯೋಗ ಪಡೆಯಲು	೬	೪.೨೫
೬. ಹೆಚ್ಚಿನ ಗೌರವದಿಂದ ಬಾಳಲು	೪	೨.೬೫
೭. ಇತರೇ ಕಾರಣಗಳು	೩೦	೨೧.೨೭

ಶೇಕಡಾ ೨೧.೨೭ ಭಾಗ ಇತರೇ ಕಾರಣಗಳು ಎಂಬುದಾಗಿ ತಿಳಿಸಿದೆ. ಪ್ರಾರ್ಥನೆ ಕಲಿಯುವುದು. ಮೋಸಹೋಗದಿರಲು, ಕೆಲಸ ಸಂಪಾದಿಸಲು, ಸರಕಾರಿ ಆಜ್ಞೆಯಾದ ಕಾರಣ ಓದು ಬರಹ ಕಲಿಯುವುದು ಹಾಗೂ ಉಪಾಧ್ಯಾಯರಿಗೋಸ್ಕರ ಎಂಬ ಕಾರಣಗಳನ್ನು ನೀಡಿದ್ದಾರೆ. ನಮಗೆ ಬಿಡುವಿಲ್ಲ, ಸಾಕ್ಷರತೆ ಅವಶ್ಯಕತೆ ಇಲ್ಲ ಎಂಬುದಾಗಿ ೨೧.೨೭ ರಲ್ಲಿ ಶೇಕಡಾ ೫ ಭಾಗ ಉತ್ತರ ನೀಡಿದ್ದಾರೆ.

·೧ Litaracy and Development, Hill. Phillips, UNESCO, Table, 1, Page 12

ಓದು ಬರಹ ಕಲಿಯದೇ ಇರುವುದರಿಂದ ಅನಾನುಕೂಲತೆಗಳು ಏನು ಎಂಬ ಬಗ್ಗೆ ಬೊಂಬಾಯಿ ಕಾರ್ಖಾನೆಯಲ್ಲಿ ಒಂದು ಸಮೀಕ್ಷೆ ನಡೆದಿದೆ. ಈ ಸಮೀಕ್ಷೆ ನಡೆಸಿದವರು ಬೊಂಬಾಯಿ ವಿಶ್ವವಿದ್ಯಾನಿಲಯದವರು೨.

ಓದುಬರಹ ಕಲಿಯದೇ ಇರುವುದರಿಂದ ಸಂಸಾರದ ಮೇಲೆ ಆಗುವ ಪರಿಣಾಮ ತಿಳಿಸುವ ಪಟ್ಟಿ

ಅನಾನುಕೂಲತೆಗಳು	ಶೇಕಡಾ ಪ್ರಮಾಣ
೧. ಇನ್ನೊಬ್ಬರ ಮೇಲೆ ಅವಲಂಬನೆ	೮೯.೨೬
೨. ಹಣಕಾಸಿನ ವ್ಯವಹಾರಗಳು ಅರ್ಥವಾಗದಿರುವುದು	೯.೫೯
೩. ಮಕ್ಕಳಿಗೆ ಬೋಧಿಸಲು ಅವಕಾಶ ಇಲ್ಲದಿರುವುದು	೪.೭೦
೪. ವ್ಯಕ್ತಿತ್ವ ಕಡಿಮೆಯಾದಂತೆ ಭಾಸವಾಗುವುದು	೩.೫೫
೫. ಕೆಲಸ ಕಾರ್ಯಗಳನ್ನು ಮಾಡಲು ನಿಧಾನ ಹಾಗೂ ತೊಂದರೆಗಳು	೧.೬೭

೨೦೨ ಮಂದಿಯನ್ನು ಭೇಟಿಮಾಡಿ ಅಭಿಪ್ರಾಯ ಸಂಗ್ರಹಿಸಲಾಯಿತು. ಅವರ ಪೈಕಿ ನಿರಕ್ಷರತೆಯಿಂದ ಯಾವ ತೊಂದರೆಯೂ ಇಲ್ಲ ಎಂಬುದಾಗಿ ೨೮ ಮಂದಿ ತಿಳಿಸಿದ್ದಾರೆ. ಇನ್ನು ಉಳಿದ ೨೫ ಮಂದಿ ಉತ್ತರಗಳನ್ನೇ ನೀಡಿರುವುದಿಲ್ಲ. ವಯಸ್ಕರು ತರಗತಿಗಳಿಗೆ ಸೇರಲು ಹಲವಾರು ಕಾರಣಗಳು ಇವೆ. ಈ ಬಗ್ಗೆ ಯೂನೆಸ್ಕೊ ಹಲವಾರು ದೇಶಗಳ ವರದಿಗಳನ್ನು ತರಿಸಿಕೊಂಡಿದೆ. ಆ ವರದಿಗಳ ಪ್ರಕಾರ ವಯಸ್ಕರು ರಾತ್ರಿ ತರಗತಿಗಳಿಗೆ ಸೇರಲು ಪ್ರಚೋದನೆಗಳು ಯಾವುವು ಎಂಬುದನ್ನು ಕ್ರೋಢೀಕರಿಸಲಾಗಿದೆ.

೧) ಸ್ಥಾನಮಾನ (status) ಧಾರ್ಮಿಕ ಪ್ರಜ್ಞೆ, ಪ್ರಜಾಧರ್ಮದ ಬಗ್ಗೆ ಅರಿವು. ಸ್ಥಳೀಯ ಸಂಸ್ಥೆಗಳ ವ್ಯವಹಾರಗಳಲ್ಲಿ ಭಾಗವಹಿಸುವ ಮತ್ತು ಸ್ಥಳೀಯ ಮುಖಂಡರೊಡನೆ ಸಹಕರಿಸುವ ಅವಕಾಶ.

೨) ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿರುವ ಕಾರಣ ವಯಸ್ಕರಲ್ಲೂ ಓದು ಬರಹ ಕಲಿಯಬೇಕೆಂಬ ಆಸಕ್ತಿ ಮೂಡುವುದು.

೩) ಹಳ್ಳಿಗಳನ್ನು ಅಭಿವೃದ್ಧಿಪಡಿಸಲು ಅವರಲ್ಲಿ ಕಂಡುಬರುವ ಸ್ಪರ್ಧಾ ಮನೋಭಾವವನ್ನು ಉಂಟುಮಾಡುವುದು.

೪) ಪಾರಿತೋಷಕ, ಬ್ಯಾಡ್ಜು ಮತ್ತು ಯೋಗ್ಯತಾ ಪತ್ರಗಳನ್ನು ಪಡೆಯುವುದು.

---

೨. Litarary and Development, Hill Phillips, UNESCO, Table, 4 Page 20

೫) ಉಚಿತವಾಗಿ ಪಾಠ ಹೇಳುವುದು, ಕಡಿಮೆ ಬೆಲೆಗೆ ಅಥವಾ ಪುಕ್ಕಟೆಯಾಗಿ ವ್ಯವಸಾಯದ ಉಪಕರಣ, ಬೀಜ ಮುಂತಾದವುಗಳನ್ನು ದೊರಕಿಸುವುದು.

೬) ತರಗತಿಗಳಲ್ಲಿ ಯಶಸ್ವಿಯಾಗಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಪ್ರಚಾರದ ಮೂಲಕ ಬೆಳಕಿಗೆ ತರುವುದು.

೭) ಉತ್ತಮ ಉದ್ಯೋಗ ಪಡೆಯುವ ಆಶೆ, ಉದ್ಯೋಗದಲ್ಲಿ ಹೆಚ್ಚಿನ ಕೂಲಿ ಹಾಗೂ ಬಡ್ತಿ ಪಡೆಯುವ ಇಚ್ಛೆ.

೮) ದೂರದ ನೆಂಟರಿಷ್ಟರಿಗೆ ಕಾಗದ ಬರೆಯುವ ಆಶೆ.

೯) ಸಾಧ್ಯವಾದ ಕಡೆ ಅನಕ್ಷರಸ್ಥರಿಗೆ ಬಹಿಷ್ಕಾರ ಹಾಕುವುದು. ತರಗತಿಗಳಿಗೆ ನಿತ್ಯವೂ ಬಾರದೆ ಇರುವ ವಿದ್ಯಾರ್ಥಿಗಳ ಮೇಲೆ ಕಾನೂನಿನ ಮೂಲಕ ಅಥವಾ ಸಮಾಜದ ಕಟ್ಟುಪಾಡನ್ನು ಅನುಸರಿಸಿ ಶಿಕ್ಷೆ ವಿಧಿಸುವುದು.

೧೦) ಓದು ಬರಹ ಕಲಿಯಲೇಬೇಕೆಂಬ ನಿಜವಾದ ಆಸೆ ಇರುವುದು.

ಅಕ್ಷರ ಪ್ರಚಾರ ತರಗತಿಗಳು ಯಶಸ್ವಿಯಾಗಿ ನಡೆಯಲು ವಯಸ್ಕರು ಓದು ಬರಹ ಕಲಿಯಲೇಬೇಕೆಂಬ ಉತ್ಕಟಾಕಾಂಕ್ಷೆಯೇ ಕಾರಣ. ಈ ರೀತಿಯಾದ ಉತ್ಕಟಾ-ಕಾಂಕ್ಷೆ ಉಂಟಾಗಲು ಅವರು ಅಭಿವೃದ್ಧಿ ಹೊಂದಬೇಕೆಂಬ ವೈಯಕ್ತಿಕವಾದ ಆಶೆ ಮುಖ್ಯ. ವಯಸ್ಕರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಲ್ಲಿ ಸಾಮಾಜಿಕ ಪ್ರಗತಿ ತಾನಾಗಿಯೇ ಆಗುವುದು. ತನ್ಮೂಲಕ ದೇಶದ ಪ್ರಗತಿಯನ್ನೂ ಸಾಧಿಸಿದಂತೆ ಆಗುವುದು. ೧೯೬೫ ನೇ ಸೆಪ್ಟೆಂಬರಿನಲ್ಲಿ ಇರಾನಿನಲ್ಲಿ ನಿರಕ್ಷರತಾ ಸಮಸ್ಯೆಯ ನಿವಾರಣೆ ಬಗ್ಗೆ ವಿಶ್ವ ಸಮ್ಮೇಳನ ನಡೆಯಿತು. ವಿಶ್ವಸಂಸ್ಥೆಯ ೮೮ ಸದಸ್ಯ ರಾಷ್ಟ್ರಗಳ ವಿದ್ಯಾ ಮಂತ್ರಿಗಳು ಭಾಗವಹಿಸಿದ್ದರು. ಸಮ್ಮೇಳನ ಅಕ್ಷರಪ್ರಚಾರದ ಬಗ್ಗೆ ಹೊಸಕಲ್ಪನೆ ತಾಳಿತು. ಅಕ್ಷರಪ್ರಚಾರಕ್ಕೂ ಮತ್ತು ಸಾಮಾಜಿಕ ಆರ್ಥಿಕಾಭಿವೃದ್ಧಿಗೂ ಸಹ ಹೊಂದಾಣಿಕೆ ಇರಬೇಕು.ವಯಸ್ಕನ ಆರ್ಥಿಕ ಉನ್ನತಿಗೆ ನೆರವಾಗಬೇಕು. ಹಾಗು ತನ್ಮೂಲಕ ದೇಶದ ಅಕ್ಷರ ಪ್ರಚಾರ ಸಹಕಾರಿ ಆಗಬೇಕು. ರೈತ ಮತ್ತು ಕಾರ್ಮಿಕ ವರ್ಗ ದೇಶದ ಆರ್ಥಿಕಾಭಿವೃದ್ಧಿಗೆ ಕಾರಣರು. ಆದ್ದರಿಂದ ಈ ಕ್ಷೇತ್ರಗಳಲ್ಲಿ ಸಾಕ್ಷರತೆ ಕ್ರಿಯಾತ್ಮಕವಾಗಿ ಪರಿಣಾಮ ಬೀರಬೇಕು. ತತ್ಪರಿಣಾಮವಾಗಿ ವಯಸ್ಕನ ಆರ್ಥಿಕಾಭಿವೃದ್ಧಿ ಹಾಗೂ ದೇಶದ ಆರ್ಥಿಕ ಪ್ರಗತಿ ಸಾಧನೆ ಆಗುವುದು. ಈ ಹೊಸ ಕಲ್ಪನೆ ಅಕ್ಷರಪ್ರಚಾರ ಕ್ಷೇತ್ರದಲ್ಲಿ ಒಂದು ಹೊಸ ಮುಖ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಈ ರೀತಿಯಾದ ಕ್ರಾಂತಿಕಾರಕ ಕಲ್ಪನೆ ಬಹಳ ಮಟ್ಟಿಗೆ ಸಹಾಯಕ.

ಅಕ್ಷರ ಪ್ರಚಾರ ತರಗತಿಗಳನ್ನು ನಡೆಸುವ ಮುನ್ನ ತರಗತಿಗೆ ಬರುವ ವಯಸ್ಕರು ಯಾವ ಕಾರಣಕ್ಕಾಗಿ ತರಗತಿಗೆ ಸೇರುವರು ಎಂಬುದನ್ನು ತಿಳಿಯುವದು ಒಳ್ಳೆಯದು.

ಅಲ್ಲದೆ ಅವರು ತರಗತಿಗೆ ಕ್ರಮವಾಗಿ ಬರಲು ಅನುಕೂಲವಾದ ಕಾಲವನ್ನು ನಿಗದಿ ಮಾಡುವುದು ಅತ್ಯಗತ್ಯ. ತರಗತಿಗಳಿಗೆ ಕಾಲಕ್ಕೆ ಸರಿಯಾಗಿ ಬರುವ ರೂಢಿ ವಯಸ್ಕರಲ್ಲಿ ಇಲ್ಲ. ಮಲಯಾದಲ್ಲಿ ಪ್ರತಿನಿತ್ಯ ಸಂಜೆ ೯–೧೦ ಘಂಟೆಗೆ ಸರಿಯಾಗಿ ರೇಡಿಯೋ ಮೂಲಕ ಅಕ್ಷರ ಪ್ರಚಾರ ತರಗತಿಗಳನ್ನು ನಡೆಸುತ್ತಿದ್ದರು. ಆದರೆ ಆ ಕಾಲಕ್ಕೆ ಸರಿಯಾಗಿ ಅನೇಕ ಮಹಿಳೆಯರು ಹಾಜರಾಗುತ್ತಿರಲಿಲ್ಲ. ವೈಯಕ್ತಿಕ ಕಾರಣಗಳಿಗಾಗಿ ಅಂದರೆ ಮದುವೆ, ಹಬ್ಬಹರಿದಿನಗಳು, ಜಾತ್ರೆ, ಸಾವುನೋವು ಮುಂತಾದ ಕಾರಣಗಳಿಂದ ತರಗತಿಗಳಿಗೆ ವಯಸ್ಕರು ಆಗಾಗ್ಗೆ ಗೈರುಹಾಜರು ಆಗುವ ಸಂಭವವುಂಟು.

ರಾತ್ರಿ ಶಾಲೆಗಳು ವಯಸ್ಕರಿಗೆ ಹೊಸತು. ಸ್ವಾಭಾವಿಕವಾಗಿ ಅವರು ತರಗತಿಗಳಿಗೆ ಪ್ರಾರಂಭದಲ್ಲಿ ಕುತೂಹಲ ಕೆರಳಿ ಬರುವುದು ಸಹಜ. ಆಫ್ರಿಕಾ ದೇಶದ ಸೆನಿಗಾಲ್ ಪ್ರಾಂತದಲ್ಲಿ ಇದೇ ರೀತಿ ನಡೆಯಿತು. ಪ್ರಾರಂಭದಲ್ಲಿ ಕೆಲವರು ತರಗತಿಗಳಿಗೆ ಸೇರಿದರು. ನಂತರ ಶಾಲೆಗಳನ್ನು ಬಿಟ್ಟರು. ಬಿಟ್ಟವರ ಜಾಗದಲ್ಲಿ ಹೊಸಬರು ಸೇರಿದರು. ಬ್ರಿಟಿಷ್ ಕ್ಯಾಮರೂನಿನಲ್ಲಿ ವಿದ್ಯಾರ್ಥಿಗಳು ತರಗತಿಯಲ್ಲಿ ಕೆಲವು ಸುಲಭವಾದ ಪದ-ಗಳನ್ನು ಕಲಿತರು. ತತ್‌ಕ್ಷಣ ಇಡೀ ಪುಸ್ತಕವನ್ನು ತಾವು ಓದಬಲ್ಲೆವೆಂಬ ಭಾವನೆಯಿಂದ ತರಗತಿಯನ್ನು ಬಿಡುತ್ತಿದ್ದರು.

ಅಕ್ಷರ ಪ್ರಚಾರದ ಯಶಸ್ಸು, ದಕ್ಷರಾದ ಉಪಾಧ್ಯಾಯರನ್ನು ಅವಲಂಬಿಸಿದೆ. ಯಶಸ್ವಿಯಾಗಿ ನಡೆಯದ ತರಗತಿ ಅಕ್ಷರ ಪ್ರಚಾರ ಕಾರ್ಯಕ್ರಮದ ಮೇಲೆ ಪರಿಣಾಮವನ್ನುಂಟು ಮಾಡಬಹುದು. ಅಸಮರ್ಥರಾದ ಉಪಾಧ್ಯಾಯರು, ಕಲಿಸಿದ್ದನ್ನು ವಿದ್ಯಾರ್ಥಿಗಳು ಕಲಿಯಲು ಆಗದಿರುವುದು, ಕಲಿಯುವುದರಲ್ಲಿ ವಿದ್ಯಾರ್ಥಿಗಳಿಗೆ ವಿಶ್ವಾಸ ಮೂಡದೆ ಇರುವುದು ವಯಸ್ಕರು ತರಗತಿಗಳನ್ನು ಮಧ್ಯಕಾಲದಲ್ಲಿ ಬಿಡಲು ಕಾರಣಗಳು. ತರಗತಿಗಳನ್ನು ವ್ಯವಸ್ಥೆ ಮಾಡುವಾಗ ಈ ಅಂಶಗಳನ್ನು ಗಮನದಲ್ಲಿ ಇಡುವುದು ಅಗತ್ಯ. ವಯಸ್ಕರ ರಾತ್ರಿ ತರಗತಿಯ ವಿದ್ಯಾರ್ಥಿಗಳು ಮಧ್ಯಾವಧಿಯಲ್ಲೇ ಯಾವ ಕಾರಣಕ್ಕಾಗಿ ಬಿಡುತ್ತಾರೆ ಎಂಬ ಅಂಶವನ್ನು ಪ್ರಯೋಗಗಳಿಂದ ಗೊತ್ತು ಮಾಡಲಾಗಿದೆ. ವಿಶ್ವ-ಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ಉತ್ತರ ಪ್ರದೇಶದಲ್ಲಿ ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆ ನಡೆಯುತ್ತಿದೆ. ವಿದ್ಯಾರ್ಥಿಗಳು ಯಾವ ಕಾರಣಕ್ಕಾಗಿ ತರಗತಿಗಳನ್ನು ಬಿಡುತ್ತಾರೆ ಎಂಬುದನ್ನು ಕಂಡು ಹಿಡಿದಿದ್ದಾರೆ[೩]. ೨೪೦ ವಿದ್ಯಾರ್ಥಿಗಳನ್ನು ಭೇಟಿಮಾಡಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಅವರ ಪೈಕಿ ೪೨ ವಿದ್ಯಾರ್ಥಿಗಳು ತರಗತಿಗಳಿಗೆ ಪೂರ್ಣಾವಧಿ ಹಾಜರಾಗದಿದ್ದವರು. ಶೇಕಡಾ ಪ್ರಮಾಣ ೧೬.೫. ಕೆಳಗೆ ಅವರು ನೀಡಿರುವ ಕಾರಣಗಳನ್ನು ಪಟ್ಟಿಯಲ್ಲಿ ಕೊಡಲಾಗಿದೆ.

---

೩. Pilot Evaluation study of Functional Litarary project in Lucknow District (Non-techinical report) April 1971, page 28, Table 11.

ವಯಸ್ಕ ವಿದ್ಯಾರ್ಥಿಗಳು ತರಗತಿಗಳನ್ನು ಮಧ್ಯಕಾಲದಲ್ಲೇ ಬಿಡಲು ನೀಡಿರುವ ಕಾರಣಗಳು

ಕಾರಣಗಳು	ಮಂದಿ	ಶೇಕಡ
೧. ತರಗತಿ ದೂರ ...	೪	೯.೫
೨. ಪಾಠಗಳು ಕಷ್ಟ ಇಲ್ಲವೇ ವಿಷಯಗಳು ಅಪ್ರಕೃತ ...	೫	೧೧.೯
೩. ಸಾಂಸಾರಿಕ ತೊಂದರೆಗಳು ...	೩೩	೭೮.೬
೪. ಓದು ಬರಹ ಕಲಿಯಲು ಆಸಕ್ತಿಯಿಲ್ಲ	೭	೧೬.೭
೫. ವಿಪರೀತವಾದ ಆಯಾಸ ...	೨೦	೪೭.೬
೬. ಬಿಡುವಿಲ್ಲ	೧೦	೨೩.೮
೭ ತರಗತಿಗಳು ಕ್ರಮವರಿತು ನಡೆಯದಿರುವುದು ...	೩	೭.೧
೮. ಖಾಯಿಲೆ ...	೫	೧೧.೯೦

ಇವರ ಪೈಕಿ ೪೨ ಮಂದಿ ಒಂದಕ್ಕಿಂತ ಹೆಚ್ಚು ಕಾರಣಗಳನ್ನು ನೀಡಿದ್ದಾರೆ.

ಲಕ್ನೊ ಸಾಕ್ಷರತಾ ನಿಕೇತನದ ನೆರವಿನಿಂದ ಕನ್ನಡದಲ್ಲಿ ರಚಿಸಿದ ನಯಾಸವೇರ ವಯಸ್ಕರ ಪಠ್ಯ ಪುಸ್ತಕದ ಮೌಲ್ಯಮಾಪನೆ ನಡೆದಿದೆ. ಮೌಲ್ಯಮಾಪನೆ ಮಾಡಲು ೧೧ ಗಂಡಸರ ತರಗತಿಗಳು ೭ ಹೆಂಗಸರ ತರಗತಿಗಳು ನಡೆಸಲ್ಪಟ್ಟವು. ಈ ತರಗತಿಗಳಿಗೆ ಸೇರಿ ಮಧ್ಯದಲ್ಲೇ ಬಿಟ್ಟ ಗಂಡಸರು ಮತ್ತು ಹೆಂಗಸರನ್ನು ಭೇಟಿಮಾಡಿ ಅವರ ಅಭಿಪ್ರಾಯ ಸಂಗ್ರಹಿಸಲಾಯಿತು.[೪]

(ಅ) ವಿದ್ಯಾರ್ಥಿಗಳ ಒಪ್ಪಿಗೆ ಪಡೆಯದೆ ಶಾಲೆಗಳಿಗೆ ದಾಖಲೆ ಮಾಡಿಕೊಳ್ಳುವುದು.

(ಬ) ಸಾಮಾಜಿಕ ಕಟ್ಟುಪಾಡುಗಳಿಂದಾಗಿ ತರಗತಿಗಳಿಗೆ ಗೈರುಹಾಜರಿ– ಮನೆಯ ಯಜಮಾನರು ತಮ್ಮ ಕೆಲಸಗಾರರನ್ನು ಶಾಲೆಗೆ ಕಳುಹಿಸಲು ಒಪ್ಪದಿರುವುದು. ತಂದೆ ತಾಯಿಗಳು ತಮ್ಮ ಅವಿವಾಹಿತರಾದ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಲು ಒಪ್ಪದಿರುವುದು. ವಿವಾಹಿತ ಹೆಂಗಸರನ್ನು ಅವರ ಗಂಡಂದಿರು ಶಾಲೆಗೆ ಕಳುಹಿಸದೆ ಇರುವುದು.

(ಕ) ಮನೆಯಲ್ಲಿ ಕೆಲಸ ಕಾರ್ಯಗಳ ಕಾರಣ ಬಿಡುವು ದೊರೆಯದಿರುವುದು.

೪. Adult Education Bulletin, July 1971, Mysore State Adult Educational, Council page 12, 13.

1. Manuals on Adult and youth Education, 4, in NESCO.
2. a b c of Litarary in UNESCO, Mary Burnet.

(ಡ) ವ್ಯವಸಾಯದ ಕಾಲವಾದ್ದರಿಂದ ತರಗತಿಗೆ ಗೈರುಹಾಜರಿ.

(ಇ) ಉಪಾಧ್ಯಾಯರ ಕ್ರಮ ತಪ್ಪಿದ ಹಾಜರಿ.

(ಈ) ತರಗತಿಗೆ ಇತರೇ ವಿದ್ಯಾರ್ಥಿಗಳು ಸರಿಯಾಗಿ ಹಾಜರಾಗದಿರುವುದು.

ವಯಸ್ಕರಿಗೆ ಓದು ಬರಹ ಕಲಿಸುವುದು ಬಹು ಕಷ್ಟಸಾಧ್ಯವಾದ ಕೆಲಸ. ತರಗತಿಗೆ ಸೇರುವ ವಯಸ್ಕ ವಿದ್ಯಾರ್ಥಿಗಳ ಆಸಕ್ತಿ ಮತ್ತು ಉತ್ಸಾಹ ತರಗತಿಯ ಯಶಸ್ಸಿಗೆ ಕಾರಣ. ಇವು ವ್ಯಕ್ತಿಗತವಾದವು ಮತ್ತು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುವವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸಾಕ್ಷರತೆ ಕ್ರಿಯಾತ್ಮಕವಾಗಿರಬೇಕು. ವ್ಯಕ್ತಿಯ ಕಸಬಿನ ಅಭಿವೃದ್ಧಿಗೆ ನೆರವಾಗಿರಬೇಕು. ಉದ್ಯೋಗದಿಂದ ಹೆಚ್ಚು ಸಂಪಾದನೆಗೆ ಸಹಾಯಕ ಆಗಬೇಕು. ಹೀಗಾದರೆ ಮಾತ್ರ ವ್ಯಕ್ತಿಯ ಆರ್ಥಿಕ ಅಭಿವೃದ್ಧಿ ಹಾಗೂ ದೇಶದ ಸಂಪನ್ಮೂಲದ ಬಳಕೆ ಸಾಧ್ಯ ಆಗುವುದು. ಆದ್ದರಿಂದ ಈ ಬಗ್ಗೆ ಚೆನ್ನಾಗಿ ಅವಲೋಕಿಸಬೇಕು. ಇತರೇ ದೇಶಗಳಲ್ಲಿ ಅಕ್ಷರಪ್ರಚಾರಯೋಜನೆಯ ಅನುಷ್ಠಾನದಲ್ಲಿ ಕಂಡುಕೊಂಡ ನ್ಯೂನತೆಗಳನ್ನು ಕೂಡ ಗಮನಕ್ಕೆ ತಂದುಕೊಳ್ಳಬೇಕು. ಅದೇ ತೆರನಾದ ಮಾನ್ಯತೆಗಳು ಇಲ್ಲಿಯೂ ತೋರದಂತೆ ಎಚ್ಚರಿಕೆ ವಹಿಸುವುದು ಸಾಧು. ತೀವ್ರ ಆಲೋಚಿಸದೆ ಮತ್ತು ಸಮರ್ಪಕವಾದ ವ್ಯವಸ್ಥೆ ಮಾಡದೆ ನಿರಕ್ಷರತಾ ನಿರ್ಮೂಲನ ಯೋಜನೆಯನ್ನು ಜಾರಿಗೆ ತರಲು ಪ್ರಯತ್ನಿಸುವುದು ಸಾಧುವಲ್ಲ.

★ **ಟಿ. ಆರ್. ನಾಗಪ್ಪ**

ಡಾಕ್ಟರ ಡಿ. ಎಲ್. ಎನ್.

ಬಾಹ್ಯಚಕ್ಷುವಿಗೆ ಅಗೋಚರವಾದ ಆತ್ಮಸ್ವರೂಪವನ್ನು ಕವಿ ರತ್ನಾಕರನು ಅನೇಕ ದೃಷ್ಟಾಂತಗಳಿಂದ ತಿಳಿಸಲು ಪ್ರಯತ್ನಿಸಿದ್ದಾನೆ. ಅಂತಹ ಹಲವು ಪದ್ಯಗಳಲ್ಲಿ ಇದು ಒಂದು.

ಛಾಯಾ ಪ್ರತಿಮೆಯು ಛಾಯಾ ಪುರುಷನ | ಛಾಯೆಗೆ ಸುಜ್ಞಾನವಿಲ್ಲ ||
ಆಯೆರಡಕೆ ತಿಳಿವೊಡಗೂಡಲದು ತಾನೆ | ಕಾಯದೊಳಿದ್ದಾತ್ಮರೂಪ ||
(ಭ. ವೈ. ಸಂಧಿ : ೧, ಪ, ೧೧೨)

ಇದೇ ರೀತಿ ಪಾಂಡಿತ್ಯದ ಸ್ವರೂಪವನ್ನು ಪ್ರಶ್ನಿಸಿದವರಿಗೆ, ಪಾಂಡಿತ್ಯದ ಮೂರ್ತ ಸ್ವರೂಪರಾಗಿದ್ದ ದಿವಂಗತ ಡಾ. ಡಿ. ಎಲ್. ನರಸಿಂಹಾಚಾರ್ಯರನ್ನು ತೋರಿಸಬಹು-ದಿತ್ತು. ಇಂತಹ ಘನವಿದ್ವಾಂಸರಾಗಿದ್ದರು––ಪ್ರೊ. ದೊಡ್ಡಬೆಲೆ ಲಕ್ಷ್ಮೀನರಸಿಂಹಾ ಚಾರ್ಯರು. ಅವರ ವ್ಯಕ್ತಿತ್ವಕ್ಕೆ 'ದೊಡ್ಡಬೆಲೆ' ಎಂಬ ಮನೆತನದ ಹೆಸರು ಅರ್ಥ ಪೂರ್ಣವಾಗಿ ಶೋಭಿಸುತ್ತಿತ್ತು. ಪಾಂಡಿತ್ಯದೊಂದಿಗೆ, ತೀಕ್ಷ್ಣಮತಿಯನ್ನು, ಅನ್ಯಾ-ದೃಶ ಸ್ಮರಣ ಶಕ್ತಿಯನ್ನು ಹೊಂದಿದ ನರಸಿಂಹಚಾರ್ಯರು ಆದರ್ಶ ಪ್ರಾಧ್ಯಾಪಕ-ರೆಂದರೆ ಹೇಗಿರಬೇಕೆಂಬುದನ್ನು ತೋರಿಸಿಕೊಟ್ಟು ಹೋದ ಮಹಾನುಭಾವರು. ಸುಮಾರು ಮೂವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಪ್ರಾಧ್ಯಾಪಕರೆಂದು ಕೆಲಸಮಾಡಿದ ಇವರಿಗೆ, ಕನ್ನಡ ನಾಡಿನ ತುಂಬೆಲ್ಲ ಶಿಷ್ಯವೃಂದ. ಇವರನ್ನು ಡಿ. ಎಲ್. ಎನ್. ಎಂದೇ ಕರೆಯುವಲ್ಲಿ ಇವರ ಮಿತ್ರರಿಗೂ, ಶಿಷ್ಯರಿಗೂ ಅಪಾರ ಆನಂದ.

ಪಂಡಿತ ಮಂಡಲಿಗೆ ಪರಿಚಿತರಾದ ಪ್ರೊ. ಡಿ. ಎಲ್. ಎನ್. ಅವರು ತುಮಕೂರ ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ೨೭–೧೦–೧೯೦೬ರಲ್ಲಿ ಜನಿಸಿದರು. ಅದೇ ಜಿಲ್ಲೆಯ ತಾಲೂಕು ಸ್ಥಳಗಳಲ್ಲಿ ಆರಂಭದ ಶಿಕ್ಷಣ ಪಡೆದು ಅವರು, ತುಮಕೂರು ಹಾಯಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾಗಿ, ಬೆಂಗಳೂರ ಸೆಂಟ್ರಲ್ ಕಾಲೇಜಿನಿಂದ ೧೯೨೭ರಲ್ಲಿ ಬಿ. ಎ. ಪರೀಕ್ಷೆಯನ್ನು ಪಾಸು ಮಾಡಿದರು. ಕನ್ನಡ ವಿಷಯದಲ್ಲಿ ಮೊದಲನೆಯ ನಂಬರನ್ನು ಪಡೆದು ಸುವರ್ಣಪದಕವನ್ನು ಪಡೆದರು. ಮುಂದೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ ೧೯೨೯ ರಲ್ಲಿ ಎಂ. ಎ. ಪರೀಕ್ಷೆಯನ್ನು, ಪ್ರಥಮ ತರಗತಿಯಲ್ಲಿ ಪ್ರಥಮರಾಗಿ ಪಾಸು ಮಾಡಿ, ಉಪಕುಲಪತಿಗಳ ಸುವರ್ಣ ಪದಕವನ್ನು ಗಳಿಸಿದರು. (ಬಿ. ಎ. ಪರೀಕ್ಷೆಯಲ್ಲಿ ಭೌತ ಹಾಗೂ ರಸಾಯನ ಶಾಸ್ತ್ರ-ಗಳು ಇವರ ಐಚ್ಛಿಕ ವಿಷಯಗಳಾಗಿದ್ದವು). ಹೀಗೆ ಪ್ರತಿಭಾವಂತ ವಿದ್ಯಾರ್ಥಿಯಾದ ಇವರಿಗೆ ಮೈಸೂರಿನ ವಿಶ್ವವಿದ್ಯಾಲಯವು ೧೯೨೯ ರಲ್ಲಿ ಸಂಶೋಧನಾ ವೇತನವನ್ನು ನೀಡಿತು. ಹನ್ನೆರಡು ತಿಂಗಳಲ್ಲಿ ಮಾಡಿ ಮುಗಿಸಬೇಕಾದ ಸಂಶೋಧನೆಯನ್ನು

ಡಿ. ಎಲ್. ಎನ್. ಅವರು ಕೇವಲ ಎಂಟು ತಿಂಗಳಲ್ಲಿ ಮಾಡಿ ಮುಗಿಸಿದರು. ಆಮೇಲೆ ೧೯೩೦ರಲ್ಲಿ ಮೈಸೂರಿನ ಓರಿಯಂಟಲ್ ರಿಸರ್ಚ ಇನ್‌ಸ್ಟಿಟ್ಯೂಟದಲ್ಲಿ ಕನ್ನಡ ಪಂಡಿತರಾಗಿ ಕೆಲಸಕ್ಕೆ ಸೇರಿದರು. ಇಲ್ಲಿ ಕೆಲಸ ಮಾಡುತ್ತಿದ್ದಾಗಲೇ ಡಿ. ಎಲ್. ಎನ್. ಅವರು ಈ ಸಂಸ್ಥೆಯಲ್ಲಿಯ ಕೈಬರಹದ ಹಳೆಯ ಪ್ರತಿಯೊಂದು ಗ್ರಂಥವನ್ನೂ ಓದಿದರು. ಕನ್ನಡದ ಶಾಸನಗಳನ್ನು ಅಭ್ಯಸಿಸಿದರು. ಇದರ ಫಲವಾಗಿ ಹಳಗನ್ನಡ ಕಾವ್ಯಗಳಲ್ಲಿ ನಿಸ್ಸೀಮ ಪಂಡಿತರಾದರು. ಅಸಾಧಾರಣವಾದ ಸ್ಮರಣಶಕ್ತಿಯ ಬಲದಿಂದ ಯಾವ ಗ್ರಂಥದ ಮೂಲೆಯಲ್ಲಿ ಏನು ಇದೆ, ಅದಕ್ಕೆ ಎಷ್ಟು ಪಾಠಾಂತರಗಳಿವೆ, ಯಾವುದು ಸಾಧು ಇತ್ಯಾದಿ ಸಮಸ್ತವನ್ನು ತಿಳಿದುಕೊಂಡರು. ಈ ರೀತಿ ಕೆಲಸ ಮಾಡಿದುದರ ಸಾರ್ಥಕತೆಯೆಂದರೆ– ಅವರು ಕನ್ನಡ ಜನತೆಗಿತ್ತ "ಗ್ರಂಥ ಸಂಪಾದನೆ." ಗ್ರಂಥ ಹಾಗೂ ಷಟ್ಪದಿ ಕಾವ್ಯವೆಂದು ತಲೆಬರಹ ಪಡೆದು, ಸರಿಯಾಗಿ ನೋಡಿ ಗುರುತಿಸುವವರು ಗತಿಯಿಲ್ಲದೆ ಬಿದ್ದಿದ್ದ "ವಡ್ಡಾರಾಧನೆ". ಗ್ರಂಥ ಸುಮಾರು ನಾಲ್ವತ್ತು ವರುಷಗಳ ಕಾಲ, ಸತತವಾಗಿ ಅಭ್ಯಾಸ ನಡೆಯಿಸಿ, "ವಡ್ಡಾರಾಧನೆ" ಯಂತಹ ಗ್ರಂಥವನ್ನು, ಸಾಧ್ಯವಿದ್ದಷ್ಟು ಪರಮಾವಧಿ ಪ್ರಮಾಣದಲ್ಲಿ ಪರಿಷ್ಕರಿಸಿ ಹೊರತಂದ ಡಿ. ಎಲ್. ಎನ್ ಆ ಗ್ರಂಥ ರೂಪದಲ್ಲಿ ಅಮರರಾಗಿದ್ದಾರೆಂದೇ ಹೇಳಬಹುದು. ಗ್ರಂಥ ಸಂಪಾದನೆಯನ್ನು ಕುರಿತು ಪುಸ್ತಕಗಳೇ ಕನ್ನಡದಲ್ಲಿ ಇಲ್ಲದಾಗ ತಮ್ಮ ಓದಿನ, ವಿದ್ವತ್ತೆಯ ಉಪಯೋಗ ಮಾಡಿಕೊಂಡು, ಈ ದಿಸೆಯಲ್ಲಿ ಅವರು ಬರೆದ "ಗ್ರಂಥ ಸಂಪಾದನೆ" ಕೃತಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವಿದೆ,

ಕನ್ನಡದಂತೆ ಸಂಸ್ಕೃತ, ಪ್ರಾಕೃತ, ತೆಲಗು, ತಮಿಳು ಮೊದಲಾದ ಭಾಷೆಗಳಲ್ಲಿಯೂ ಡಿ. ಎಲ್. ಎನ್. ಅವರದು ಪರಿಣತಿ. ಇದರಿಂದಾಗಿ ಅನೇಕ ಶಬ್ದಗಳನ್ನು, ಸರಿಯಾದ ರೀತಿಯಲ್ಲಿ ಅರ್ಥೈಸುತ್ತ "ಶಬ್ದವಿಹಾರ"ದಲ್ಲಿ ಓಲೈಸಲು ಸಾಧ್ಯವಾಯಿತು. "ವಡ್ಡಾರಾಧನೆ"ಯಂತೆ, "ಸಿದ್ಧರಾಮ ಚರಿತ್ರ ಸಂಗ್ರಹ," "ಪಂಪ ರಾಮಾಯಣ ಸಂಗ್ರಹ" "ಶಬ್ದಮಣಿದರ್ಪಣ", "ಸುಕುಮಾರ ಚರಿತೆ", ಮೊದಲಾದ ಹಳಗನ್ನಡ ಕಾವ್ಯಗಳನ್ನು ಪಾಂಡಿತ್ಯಪೂರ್ಣವಾದ ಪೀಠಿಕೆಗಳೊಂದಿಗೆ ಪ್ರಕಟಿಸಿದ ಡಿ. ಎಲ್. ಎನ್. ಅವರು ಅನೇಕ ಸಂಶೋಧನಾತ್ಮಕ ಲೇಖನಗಳನ್ನೂ ಬರೆದಿದ್ದಾರೆ.

ಡಿ. ಎಲ್. ಎನ್. ಅವರನ್ನು ದೈಹಿಕವಾಗಿ ನೋಡಿದವರಿಗೆ ಅವರೊಬ್ಬ ಪ್ರಕಾಂತ ಪಂಡಿತರೆಂದು ಅನ್ನಿಸುವುದು ದುಸ್ತರವಾಗುತ್ತಿತ್ತು. ಮಿತಭಾಷಿ. ವಿನಯಶೀಲರಾಗಿದ್ದ ಅವರು ಸತ್ಯಾನ್ವೇಷಣೆಯ ಪ್ರಶ್ನೆ ಬಂದಾಗ, ಯಾರನ್ನೂ ಲೆಕ್ಕಿಸದೆ, ತಮಗೆ ನಿಜ ಅನಿಸಿದ್ದನ್ನು ಖಚಿತವಾಗಿ ಹೇಳುವಷ್ಟು ನಿಷ್ಠುರರೂ ಆಗಿದ್ದರು.

ಅಗಾಧ ಪಂಡಿತರಾಗಿದ್ದರೂ ಅನ್ಯರು ಹೇಳುವುದೂ ಸರಿ ಎಂದು ತಮಗೆ ಖಚಿತವಾದಾಗ, ಅವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪುವ: ವಯಸ್ಸಿನಲ್ಲಿ ಸಣ್ಣವರಾದವರೂ. ತಮ್ಮ ಗ್ರಂಥಗಳ ಬಗೆಗೆ ಸೂಚಿಸಿದ ಅಭಿಪ್ರಾಯಗಳನ್ನು ಗಮನಕ್ಕೆ ತಂದುಕೊಂಡು. ಸರಿ ಕಂಡವುಗಳನ್ನೂ ಅಳವಡಿಸಿಕೊಳ್ಳುವ ಹಿರಿಯತನವೂ ಅವರಲ್ಲಿತ್ತು.

ಅವರು ಸಂಪಾದಿಸಿದ ಶಬ್ದಮಣಿದರ್ಪಣದ ಬಗೆಗೆ, ವಿಮರ್ಶೆ ಮಾಡಿ ಬರೆದ ತರುಣ ಪ್ರಾಧ್ಯಾಪಕರ ಮಾತುಗಳನ್ನು ಆ ಗ್ರಂಥದ ಮುಂದಿನ ಆವೃತ್ತಿಯಲ್ಲಿ ಉಲ್ಲೇಖಿಸಿ ಸರಿ, ಇದ್ದವುಗಳನ್ನು ಸ್ವೀಕರಿಸಿದ್ದನ್ನು 'ಶಬ್ದಮಣಿ ದರ್ಪಣ'ದ ಆವೃತ್ತಿಗಳಲ್ಲಿ ಕಾಣಬಹುದು.

ಸ್ಥೂಲ ಶರೀರದ, ಗಡಸು ಮುಖದ, ತೀಕ್ಷ್ಣನೋಟದ ಅವರನ್ನು ನೋಡಿದಾಗ ಸ್ವಲ್ಪ ಭಯ ಬರುವಂತಾಗುತ್ತಿತ್ತು. ಆದರೆ ಅವರ ಪರಿಚಯವಾದ ಮೇಲೆ, ಕೋಮಲ ಯುತವಾದ ಹಾಗೂ ಕ್ರಿಯಾಶೀಲರಾಗಲು ಉತ್ತೇಜನ ಕೊಡುವ ಅವರ ಸ್ವಭಾವದ ಪರಿಚಯವಾಗುತ್ತಿತ್ತು. ಇದಕ್ಕೆ ಸ್ವಂತ ಅನುಭವವೊಂದನ್ನು ಇಲ್ಲಿ ಕೊಡಬಹುದಾಗಿದೆ.

ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ' ರೀಡರ್ ' ಎಂದು ಕೆಲಸಕ್ಕೆ ಸೇರಿದ ನಾನು, ಮೈಸೂರಿಗೆ ಹೋಗಿದ್ದೆನು. ಅಲ್ಲಿಯ ಓರಿಯಂಟಲ್ ರಿಸರ್ಚ ಇನ್ಸ್ಟಿಟ್ಯೂಟ ಇತ್ಯಾದಿಗಳನ್ನು ನೋಡಿಕೊಂಡು ಮಹಾರಾಜ ಕಾಲೇಜದಲ್ಲಿ ಕನ್ನಡ ಪ್ರಾಧ್ಯಾಪಕರೆಂದು ಕೆಲಸ ಮಾಡುತ್ತಿದ್ದ ಪ್ರೊ. ಡಿ. ಎಲ್. ಎನ್. ಅವರನ್ನು ಹೋಗಿ ಕಂಡೆನು. ಆಗ ನಾನು "ಹುಡುಗ" ಅನ್ನಿಸಿಕೊಳ್ಳುವ ಸ್ಥಿತಿಯಲ್ಲಿದ್ದೆನು. ಡಿ. ಎಲ್. ಎನ್. ಅವರನ್ನು ಕಂಡು ನನ್ನ ಪರಿಚಯ ಹೇಳಿಕೊಂಡೆನು. ಆರಂಭದಲ್ಲಿ ಗಂಭೀರವಾಗಿ ಕಾಣಿಸಿಕೊಂಡ ಅವರು ನಂತರ ಸಲಿಗೆಯಿಂದ ನನ್ನನ್ನು ಕಂಡರಲ್ಲದೆ, ಕ್ಯಾಂಟೀನಕ್ಕೆ ಕರೆದೊಯ್ದು "ಮೈಸೂರ ದೋಸೆ ಕಾಫಿ" ಕೊಟ್ಟರು. ನಾನು ಕೈಕೊಂಡ ಕೆಲಸದ ಬಗ್ಗೆ ವಿಚಾರಿಸಿದಾಗ, ಬ್ರಹ್ಮಶಿವ ಕವಿಯ "ಸಮಯ ಪರೀಕ್ಷೆ" ಯನ್ನು ಸಂಪಾದಿಸಲು ತಕ್ಕೊಂಡಿದ್ದೇನೆಂದು ಹೇಳಿದ ಕೂಡಲೇ ಅವರು "ಇನ್ನೂವರೆಗೆ ಅದನ್ನು ಯಾರೂ ಸಂಪಾದಿಸುವ ಧೈರ್ಯ ಮಾಡಿಲ್ಲ, ನೀವು ಆ ಕಾರ್ಯ ಕೈಕೊಂಡು ಒಳ್ಳೇದು ಮಾಡಿದ್ದೀರಿ. ಅದು ಹೊರಗೆ ಬಂದರೆ ನಿಮ್ಮಿಂದ ಒಂದು ಒಳ್ಳೇ ಕೆಲಸ ಆಗುತ್ತದೆ" ಎಂದು ಹೇಳಿದರು. ಆ ಗ್ರಂಥ ಹೊರಬಂದ ಮೇಲೆ, ಅದನ್ನು ಅವರಿಗೆ ನಾನು ಕಳುಹಿಸಿದೆನು. ನನ್ನ ಮೊದಲ ಪ್ರಯತ್ನದ ಫಲವಾಗಿ ಹೊರಬಂದ ಆ ಗ್ರಂಥವನ್ನು ಕುರಿತು, ಅವರು ನನಗೊಂದು ಪತ್ರ ಬರೆದರು. ಅದರಲ್ಲಿ ಉತ್ತೇಜನ ಕೊಡುವದರ ಜೊತೆಗೆ, ಆ ದಿಸೆಯಲ್ಲಿ ಮುಂದೆ ನಡೆಯಬೇಕಾದ ನನಗೆ ಮಾರ್ಗದರ್ಶನವನ್ನೂ ಮಾಡಿದ್ದರು. ಆ ಪತ್ರ ನನ್ನ ಅಮೂಲ್ಯ ವಸ್ತುಗಳಲ್ಲಿ ಒಂದಾಗಿದೆ.

ಅದರಂತೆ ನನ್ನ ಪರೋಕ್ಷದಲ್ಲಿ, ನನ್ನ "ಕನ್ನಡ ಜೈನ ಭಾರತಗಳು" ಎಂಬ ಲೇಖನವನ್ನು ಕುರಿತು, ಒಳ್ಳೇ ಮಾತನಾಡಿದ ಸಹೃದಯರೂ ಅವರಾಗಿದ್ದರೆಂಬ ಮಾತು, ನನಗೆ ಎಷ್ಟೋ ದಿವಸಗಳ ತರುವಾಯ ತಿಳಿಯಿತು. ಪರಿಚಯವಿಲ್ಲವೆಂದೇ ಹೇಳಬಹುದಾದಷ್ಟು ಅಲ್ಪ ಪರಿಚಯದ, ಒಬ್ಬ ವ್ಯಕ್ತಿಯ ಸಾಮಾನ್ಯ ಲೇಖನವೂ ಒಳ್ಳೆಯದೆಂದು ಕಂಡು ಅದರ ಬಗೆಗೆ ಒಂದು ಒಳ್ಳೇ ಮಾತನ್ನು ಆಡಿದವರು ಗುಣಗ್ರಾಹಿಗಳಲ್ಲದೆ ಮತ್ತಾರು ?

ಪ್ರೊ. ಡಿ. ಎಲ್. ಎನ್. ಮಾಡಿದ ಮತ್ತೊಂದು ಮಹತ್ಕಾರ್ಯವೆಂದರೆ— ಕನ್ನಡ–ಕನ್ನಡ ನಿಘಂಟು. ಕನ್ನಡಕ್ಕೊಂದು ಇಂತಹ ನಿಘಂಟು ಬೇಕೆಂದು ಕನಸು ಕಟ್ಟಿದ

ಈ ಮಹಾತ್ಮರು ಅದು ನನಸಾಗುವಂತೆ ಮಾಡಿ, ಅವರ ಕಾರ್ಯದಲ್ಲಿಯೇ ತಮ್ಮನ್ನು ತಾವು ಅರ್ಪಿಸಿಕೊಂಡರು.

ಸಾವಿರ ವರುಷದ ಹಿಂದೆ ಬದುಕಿದ ಕನ್ನಡದ ಆದಿಕವಿ ಪಂಪನನ್ನು ಇಂದು ಅರ್ಥ ಮಾಡಿಕೊಳ್ಳುವುದು ಕಠಿಣವಾಗುತ್ತಿದೆ. ಇಂತಹ ಕವಿಯನ್ನು ಶಕ್ಯವಿದ್ದಷ್ಟು ಸರಿಯಾಗಿ ಅರ್ಥ ಮಾಡಲು ಯೋಗ್ಯತೆ ಪಡೆದವರಾಗಿದ್ದ ಡಿ. ಎಲ್. ಎನ್. ಅವರು ಈ ಕವಿಯ "ಭಾರತ"ದ ಪ್ರತಿ ಪದ್ಯಕ್ಕೂ ಅರ್ಥಕೊಟ್ಟು ವಿವರಿಸಿದ ಗ್ರಂಥವೊಂದು ಪ್ರಕಟವಾಗುತ್ತಿದೆಯಂತೆ! ಆ ಗ್ರಂಥವೂ ಕೂಡ ಕನ್ನಡಕ್ಕೆ ಡಿ. ಎಲ್ ಎನ್. ಅವರ ವಿಶಿಷ್ಟ ಕಾಣಿಕೆಯಾಗುವುದರಲ್ಲಿ ಸಂಶಯವೇ ಇಲ್ಲ.

ಕನ್ನಡಕ್ಕೆ ಸರಿಯಾದ ಮನ್ನಣೆ ಇಲ್ಲದ ಕಾಲದಲ್ಲಿ, ವಿಜ್ಞಾನವನ್ನು ಓದಿದ್ದರೆ ಒಳ್ಳೇ ಸ್ಥಾನಮಾನ ದೊರೆಯುತ್ತಿದ್ದ ಸಮಯದಲ್ಲಿ, ವಿಜ್ಞಾನದ ವಿದ್ಯಾರ್ಥಿಯಾಗಿಯೂ ಅದನ್ನು ಬಿಟ್ಟು, ದಿವಂಗತ ಬಿ. ಎಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ, ಎಂ. ಆರ್. ಶ್ರೀ, ಮೊದಲಾದ ಮೇಧಾವಿಗಳ ಮಾರ್ಗದರ್ಶನದಲ್ಲಿ ಕನ್ನಡವನ್ನು ಓದಿ, ಆಗಲೇ ಹೇಳಿದಂತೆ ತಮ್ಮ ಪಾಂಡಿತ್ಯ, ತೀಕ್ಷ್ಣಮತಿ, ಅಗಾಧವಾದ ಸ್ಮರಣಶಕ್ತಿ ಹಾಗೂ ಪ್ರಾಮಾಣಿಕ ವಿಚಾರಶೀಲತೆಗಳಿಂದ ಕನ್ನಡ ಸಾಹಿತ್ಯ, ಭಾಷೆ, ಸಂಸ್ಕೃತಿಗಳ ಪರಿಚಯವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟು ದಿನಾಂಕ ೭–೫–೧೯೭೧ ರಂದು ಡಾ. ಡಿ. ಎಲ್. ಎನ್. ಅಮರರಾದರು. ತಮ್ಮ ಚಿರಸ್ಮರಣೆಯ ಕಾರ್ಯದಿಂದ ನಾಡಿನ ಸೇವೆಮಾಡಿ, ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ನೀಡಿ ಕೃತಾರ್ಥರಾದ ಡಿ. ಎಲ್. ಎನ್. ಅವರ ಆದರ್ಶದಲ್ಲಿ ಅಡಿಯಿಡುವುದೇ ಹೊಸ ಜನಾಂಗ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ.

★ ಬಿ. ಎಸ್. ಕುಲಕರ್ಣಿ

ಶಾಸನ ಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೧೦, ಭಾಗ ೧)

(ಕಳೆದ ಸಂಚಿಕೆಯಿಂದ)

ಶ

★ ಎಸ್. ರಾಜಶೇಖರ

ಗ್ರಂಥಾವಲೋಕನ

ಗ್ರಂಥಸ್ಥ ಗಾದೆಗಳು : ಸಂಪಾದಕರು ಮತ್ತು ಪ್ರಕಾಶಕರು : ಶ್ರೀ ಎಚ್. ಎಸ್. ಅಚ್ಚಪ್ಪ ೩೨೩, ೫ನೆಯ ಮುಖ್ಯ ಬೀದಿ, ಜಯನಗರ, ಮೈಸೂರು ೪. (೧೯೬೯)–ಪುಟಗಳು : Lxviii + ೬೪೮. ಬೆಲೆ : ರೂ ೫೦.

" ಗ್ರಂಥಸ್ಥ ಗಾದೆಗಳು " ಶ್ರೀ ಎಚ್. ಎಸ್. ಅಚ್ಚಪ್ಪ ಅವರು ಹೊರತಂದಿರುವ ದೊಡ್ಡ ಗಾತ್ರದ ಗ್ರಂಥ. ಶ್ರೀಯುತರು " ಕನ್ನಡ ಗಾದೆಗಳು " ಸಂಗ್ರಹದ ಮೂಲಕ ಕನ್ನಡ ಜನಪದ ಸಾಹಿತ್ಯ ಪ್ರೇಮಿಗಳಿಗೆ ಪರಿಚಿತರು. ಅವರಿಂದ ಮೆಚ್ಚುಗೆ ಪಡೆದವರು. ಇಂಥವರ ಪ್ರಸ್ತುತ ಸಂಗ್ರಹ ಸ್ವಾಭಾವಿಕವಾಗಿಯೇ ಜನಪದ ಸಾಹಿತ್ಯ ಪ್ರೇಮಿಗಳ ಕುತೂಹಲ ಕೆರಳಿಸುವುದು. " ಗ್ರಂಥಸ್ಥ ಗಾದೆಗಳು " ಎಂಬ ಆಕರ್ಷಕ ಹಣೆಬರೆಹ ಬೇರೆ. ಪಾಂಡಿತ್ಯ ಮತ್ತು ಪರಿಶ್ರಮಗಳ ಜೋಡಿಯಿಂದ ಕೃತಿಯಿದಾಗಿರಬಹುದೆಂಬ ಭಾವನೆಯಾಗುವುದು ಸಹಜ.

ಗ್ರಂಥ ಕೈಗೆತ್ತಿಕೊಂಡು ಪುಟ ತಿರುವಿದರೆ ಮೊದಲಿಗೆ ಕಾಣುವುದು ಕನ್ನಡ ನಾಡಿನ ಅಗ್ರ ಪಂಕ್ತಿಯ ವಿದ್ವಾಂಸರು ಮೆಚ್ಚುಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು. ಅನಂತರ ತಾವೇ ಪ್ರಕಾಶಕರೂ ಆಗಿರುವ ಶ್ರೀ ಅಚ್ಚಪ್ಪನವರು "ಪ್ರಕಾಶಕರ ನುಡಿ"ಯಲ್ಲಿ "ಇದೊಂದು ಮೇರುಕೃತಿ" ಎಂಬುದಾಗಿ ಹೇಳಿಕೊಂಡ ಮಾತು ಕಣ್ಣಿಗೆ ಬೀಳುವುದು. ಈಗ ಕೃತಿಯ ಬಗ್ಗೆ ಆದರ ಹೆಚ್ಚಿ, ಅದರ ಅಭ್ಯಾಸಕ್ಕೆ ಮನ ಹಾತೊರೆಯುವುದು. ಪ್ರಾಚೀನ ಕವಿಗಳ ಕಾವ್ಯಗಳಲ್ಲಿಯ ಗಾದೆಗಳ ಅಭ್ಯಾಸ ಮಾಡಬೇಕೆನ್ನುವ ಜಿಜ್ಞಾಸುಗಳಿಗೆ ಇದೊಂದು ಆಧಾರ ಗ್ರಂಥವಾಗಬಲ್ಲುದೆಂದು ಆದರ ಭಾವ ಇನ್ನೂ ಹೆಚ್ಚುವುದು. ಆದರೆ ಪುಟಗಳನ್ನು ತಿರುವುತ್ತ ಅಭ್ಯಾಸಕ್ಕೆ ಮೊದಲಿಟ್ಟರೆ ಆದರ ಭಾವ ಕಡಿಮೆಯಾಗಲಾರಂಭಿಸುವುದೆಂದು ವಿಷಾದದಿಂದ ಬರೆಯಬೇಕಾಗಿದೆ.

೯ನೆಯ ಶತಮಾನದ ನೃಪತುಂಗನಿಂದ ಮೊದಲು ಮಾಡಿ ೨೦ನೆಯ ಶತಮಾನದ ಮುದ್ದಣನ ವರೆಗಿನ ಸುಮಾರು ೧೩೦ ಪ್ರಮುಖ ಕವಿಗಳ ಸುಮಾರು ೧೬೫ ಶ್ರೇಷ್ಠ ಕೃತಿಗಳನ್ನು ಅಭ್ಯಸಿಸಿ, ಅವುಗಳಿಂದ ಸುಮಾರು ೧೦,೦೦೦ ಗಾದೆ (?) ಗಳನ್ನು ಆರಿಸಿ ತೆಗೆದು " ಗ್ರಂಥಸ್ಥ ಗಾದೆಗಳು " ಎಂಬ ಹೆಸರಿನಿಂದ ಕನ್ನಡ ವಾಚಕರ ಮುಂದೆ ಇಟ್ಟಿದ್ದಾರೆ. ಪ್ರತಿಯೊಬ್ಬ ಕವಿ ಅವನ ಕಾಲ ಮತ್ತು ಕೃತಿಯ ಹೆಸರಿನ ಅಡಿಯಲ್ಲಿ ಆ ಕೃತಿಯಲ್ಲಿ ದೊರೆಯುವ ಗಾದೆ, " ಎಲ್ಲಾ ಬಗೆಯ ಸೂಕ್ತಿ ", ಸಂಸ್ಕೃತ ಸುಭಾಷಿತ, ಶ್ಲೋಕ, ನ್ಯಾಯಗಳನ್ನು ಅಕಾರಾದಿಯಾಗಿ ಕೊಟ್ಟಿದ್ದಾರೆ. ಪ್ರತಿಯೊಂದರ ಮುಂದೆ ಕಂಸಿನಲ್ಲಿ ಆಶ್ವಾಸ, ಸಂಧಿ, ಪುಟ ಸೂಚಿಸಿ ಕವಿಕೃತಿಯಲ್ಲಿ ಅವುಗಳ ಸ್ಥಾನ ನಿರ್ದೇಶಿಸಿದ್ದಾರೆ. ಇದರಿಂದ ಮೂಲ ಕೃತಿಯನ್ನು ನೋಡಿ ಹೆಚ್ಚು ಅಭ್ಯಾಸ ಮಾಡಬೇಕೆನ್ನುವ ಜಿಜ್ಞಾಸುಗಳಿಗೆ ಸಹಾಯವಾಗುವುದು. ಕೊನೆಯಲ್ಲಿ ಮೂರು ಪರಿಶಿಷ್ಟ, ಆಧಾರ

ಗ್ರಂಥ ಮತ್ತು ಇತರ ಸಹಾಯಕ ಗ್ರಂಥಗಳ ವಿವರ ಕೊಟ್ಟಿದ್ದಾರೆ. ಪರಿಶಿಷ್ಟ ೧ರಲ್ಲಿ ಶ್ರೀ ಬಿ. ಕೃಷ್ಣಪ್ಪನವರು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ "ರಾಯಮ್ಹೂರು ವಿಜಯ" ಎಂಬ ಕಾದಂಬರಿಯಲ್ಲಿಯ ಗಾದೆ, ಸೂಕ್ತಿ. ಶ್ಲೋಕ ಇತ್ಯಾದಿಗಳನ್ನು ಮೊದಲಿನ ಹಾಗೆ ಸಂಗ್ರಹಿಸಿದ್ದಾರೆ. ಪರಿಶಿಷ್ಟ ೨ ರಲ್ಲಿ ಬಂಧುವರ್ಮ ಕವಿಯ "ಜೀವ ಸಂಬೋಧನಂ" ಕಾವ್ಯದಲ್ಲಿ ಬರುವ "ಜೋಕುವರ ಬಾಜಿಕ್ಕೆ" ಎಂಬುದಕ್ಕೆ ವಿವರಣೆ ಕೊಟ್ಟಿದ್ದಾರೆ. ಪರಿಶಿಷ್ಟ ೩ ರಲ್ಲಿ "ಗ್ರಂಥಸ್ಥ ಗಾದೆಗಳು" ಪುಟ ೧೬೨ ಮತ್ತು ೨೫೯ ರಲ್ಲಿ ಬಂದಿರುವ ಸಂಸ್ಕೃತ ಶ್ಲೋಕವೊಂದರ ಗದ್ಯಾನುವಾದವನ್ನು "ಕನ್ನಡ ಗದ್ಯ ಸಂಗ್ರಹ" ಗ್ರಂಥದಿಂದ ಎತ್ತಿಕೊಟ್ಟಿದ್ದಾರೆ. ಆಮೇಲೆ ಮೂರು ಅನುಬಂಧಗಳಲ್ಲಿ ಸಂಸ್ಕೃತ ನ್ಯಾಯಗಳ, ಕವಿಗಳ ಮತ್ತು ಕೃತಿಗಳ ಅಕಾರಾದಿ ಒದಗಿಸಿದ್ದಾರೆ. ಅನಂತರ ಸುಮಾರು ೫೦ ಪುಟಗಳ ಶಬ್ದಕೋಶ ಕೊಟ್ಟಿದ್ದಾರೆ.

ಶ್ರೀಯುತರು ಮಾಡಿರುವ ಈ ಕಾರ್ಯ ಸಣ್ಣದೇನಲ್ಲ. ಇಲ್ಲಿ ಅವರ ಸತತಾಭ್ಯಾಸ, ಸಹನಶೀಲತೆ ಮತ್ತು ಪರಿಶ್ರಮ ಎದ್ದು ಕಾಣುತ್ತವೆ. ಏಕಾಂಗಿಯಾಗಿ ಮಾಡಿದ ಈ ಸಾಹಸ ಪ್ರಶಂಸಾರ್ಹವಾಗಿದೆ. ಹಳಗನ್ನಡ ಗ್ರಂಥಗಳಲ್ಲಿ ಎಂಥೆಂಥ ಆಣಿಮುತ್ತುಗಳು ಹುದುಗಿವೆಯೆಂಬುದನ್ನು ಪ್ರಸ್ತುತ ಗ್ರಂಥದ ಸಹಾಯದಿಂದ ಅರಿಯಬಹುದಾಗಿದೆ. ಅದಕ್ಕಾಗಿ ಶ್ರೀಯುತರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಆದರೆ, ಶ್ರೀ ಅಜ್ಜಪ್ಪನವರ ಈ ಗ್ರಂಥವಲ್ಲಿ ಅಚ್ಚುಕಟ್ಟಿಲ್ಲ, ಒಂದು ಕ್ರಮವಿಲ್ಲ, ಸುವ್ಯವಸ್ಥೆಯಿಲ್ಲ ಎಂಬ ಅಂಶಗಳು ಗ್ರಂಥದ ಉದ್ದಕ್ಕೂ ವ್ಯಕ್ತವಾಗುತ್ತವೆ. ಅದರಿಂದ ಅವರ ಪರಿಶ್ರಮ ಫಲಪ್ರದವಾಗದೆ ಹೋಗಿದೆ; ಕೃತಿಯ ಮೌಲ್ಯ ಕಡಿಮೆಯಾಗಿದೆ.

ಕೃತಿಯ ಹೆಸರು "ಗ್ರಂಥಸ್ಥ ಗಾದೆಗಳು." ಆದುದರಿಂದ ಹಳಗನ್ನಡ ಗ್ರಂಥಗಳಲ್ಲಿ ಹುದುಗಿರುವ ಗಾದೆಗಳನ್ನು ಹೆಕ್ಕಿ ಒಂದು ಕ್ರಮದಲ್ಲಿ ಸಂಗ್ರಹಿಸಿ, ಸಂಯೋಜಿಸಿ ಇಲ್ಲಿ ಕೊಟ್ಟಿರಬೇಕೆಂದು ಓದುಗರು ಭಾವಿಸುವುದು ಸ್ವಾಭಾವಿಕ. ಆದರೆ ಇಲ್ಲಿ ಗಾದೆಗಳಿಗಿಂತ ಕವಿಸೂಕ್ತಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹಗೊಂಡಿವೆ. ಹೀಗಿದ್ದು ತಲೆಬರೆಹ ಏಕೆ ಹೀಗೆ? ಇದೊಂದು ಒಡೆಯಲಾರದ ಒಗಟು.

ಗಾದೆ, ಕವಿಸೂಕ್ತಿ ಇತ್ಯಾದಿಗಳ ಅಂತರ ಸಂಪಾದಕರಿಗಿಲ್ಲ. ಅದ್ದರಿಂದ ಹೀಗೆ ಮಾಡಿದ್ದಾರೆ—ಎನ್ನುವಂತಿಲ್ಲ. "ಗಾದೆಗಳೆಲ್ಲಾ ಅನುಭವಿಗಳ ಹಾಗೂ ಅನುಭಾವಿಗಳ ನುಡಿಗಳು. ಬಹುಜನರ ಪ್ರತ್ಯಕ್ಷ ಪ್ರಮಾಣಕ್ಕೆ ಬಂದಿರುವ. ಇವುಗಳಲ್ಲಿ ಹುದುಗಿರುವ ನಿತ್ಯ ಸತ್ಯ, ಇವಕ್ಕೆ ವೇದಗಳಿಗೆ ಇರುವಷ್ಟೇ ಪ್ರಾಶಸ್ತ್ಯವನ್ನು ದೊರಕಿಸಿಕೊಟ್ಟಿದೆ. "ಗಾದೆ ಮಾತು ವೇದಕ್ಕೆ ಸಮಾನ" ಎಂಬ ಗಾದೆಯೂ ಇದೇ ಅರ್ಥವನ್ನು ಸೂಚಿಸುತ್ತದೆ. ಪುಟ (Lxiii)ಎಂಬುದಾಗಿ ಗಾದೆ ಬಗ್ಗೆ ಅವರೇ ವಿವರಿಸಿದ್ದಾರೆ. ಅದ್ದರಿಂದ ಗಾದೆ ಬೇರೆ, ಕವಿ ಸೂಕ್ತಿ ಬೇರೆ. ಶ್ಲೋಕ ಬೇರೆ. ನ್ಯಾಯ ಬೇರೆ ಎಂಬುದು ಅವರಿಗೆ ಗೊತ್ತಿದೆಯೆಂದು ನಮಗನ್ನಿಸುತ್ತದೆ. ಆದರೆ "ಇಂದು ಬಳಕೆಯಲ್ಲಿರುವ ಗಾದೆಗಳಲ್ಲಿ

ಬಹುಭಾಗ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕವಿಗಳ ಉಕ್ತಿಗಳೇ ಆಗಿವೆ." (ಪುಟ Lix) ಎಂದು ಬರೆಯುತ್ತಾರೆ. ಶ್ರೀಯುತರ ಅಭಿಪ್ರಾಯದಲ್ಲಿ ಅಭಿಜಾತ ಕವಿಗಳ ಉಕ್ತಿಗಳೇ ಗಾದೆಗಳಾಗಿವೆ. ಇದಕ್ಕೆ ಮೇಲಿನ ಅಭಿಪ್ರಾಯ ಮಂಡಿಸುವ ಪೂರ್ವದ ವಿವರಣೆ ಸಾಕ್ಷಿ ನುಡಿಯುತ್ತದೆ. ಸಂಪಾದಕರ ಈ ಅಭಿಪ್ರಾಯ ಒಪ್ಪಲು ಸಾಧ್ಯವಿಲ್ಲ. ಗಾದೆ ಜನಪದ ಸಾಹಿತ್ಯದ ಒಂದು ಪ್ರಮುಖ ಪ್ರಕಾರ. ಪರಂಪರೆಯಿಂದ ಜನಪದವು ಪೋಷಿಸಿಕೊಂಡು ಬಂದಿರುವ ಆಸ್ತಿ. ಬಹಳೆಂದರೆ ಗಾದೆಗಳಲ್ಲಿ ಜನಪದ ಕವಿಗಳ ಉಕ್ತಿಗಳು ಸೇರಿವೆಯೆನ್ನಬಹುದು. ಶ್ರೀ ಅಜ್ಜಪ್ಪನವರು ಗಾದೆಯ ಬಗೆಗೆ ಅರಿತುಕೊಳ್ಳಲು, ಅರಿತುದನ್ನು ವಿವರಿಸಲು ಪೀಠಿಕೆಯಲ್ಲಿ ಪ್ರಯತ್ನಿಸಿದ್ದಾರೆ. ಆದರೂ ಅವರ ಕೆಲವು ಮಾತುಗಳು ಸಂದಿಗ್ಧವಾಗಿವೆಯೆಂದು ಹೇಳಲೇಬೇಕಾಗುತ್ತದೆ.

ಪೀಠಿಕೆಯ ಪ್ರಾರಂಭದಲ್ಲಿ "ಪ್ರಾಚೀನ ಕವಿಗಳಾದ ನೃಪತುಂಗ, ಪಂಪ....... ಮುದ್ದಣ—ಇವರುಗಳು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ಎಷ್ಟೋ ಗಾದೆಗಳನ್ನೂ, ತಮಗೆ ಹಿಂದೆ ಇದ್ದ ಕವಿಗಳ ಸೂಕ್ತಿಗಳನ್ನೂ ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಅಂತೆಯೇ ಅವರಲ್ಲಿ ಹಲವರು ಸಂಸ್ಕೃತ ಭಾಷೆಯನ್ನು ಬಲ್ಲವರು ಸಂಸ್ಕೃತದ ಶ್ಲೋಕಗಳನ್ನೂ, ನ್ಯಾಯಗಳನ್ನೂ, ಶ್ಲೋಕಗಳ ಪಾದಗಳನ್ನೂ ತಮ್ಮ ಕಾವ್ಯಗಳಲ್ಲಿ ಯಥೋಚಿತವಾಗಿ ಅಳವಡಿಸಿದ್ದಾರೆ. ಬಹು ಹಿಂದಿನ ಕಾಲದ ಗಾದೆಗಳು ಪ್ರಾಚೀನ ಗ್ರಂಥಗಳಲ್ಲಿ ಬೇಕಾದಷ್ಟಿವೆ..........ಗ್ರಂಥಗಳಲ್ಲಿ ಹುದುಗಿರುವ ಇಂಥಾ ಮಾತುಗಳನ್ನೆಲ್ಲಾ ಇಲ್ಲಿ "ಗ್ರಂಥಸ್ಥ ಗಾದೆಗಳು" ಎಂದು ಹೆಸರಿಸಲಾಗಿದೆ." ಎಂದು ಹೇಳಿದ್ದಾರೆಯೇ ಹೊರತು ಸಂಸ್ಕೃತ ಶ್ಲೋಕ, ನ್ಯಾಯ, ಮತ್ತು ಕವಿಸೂಕ್ತಿ ಇವೆಲ್ಲ ಗಾದೆಗಳಲ್ಲಿ ಹೇಗೆ ಅಳವಡುತ್ತವೆಂಬುದನ್ನು ವಿವರಿಸಿಲ್ಲ. ಜನಪದ ಮೂಲದ ಗಾದೆಗಳ ಜೊತೆಗೆ ಇವುಗಳನ್ನೆಲ್ಲ ಕೂಡಿಸಿರುವುದರ ಔಚಿತ್ಯವಾದರೂ ಏನು ? ಹೀಗೆ ಮಾಡಿರುವುದರಿಂದ ಅನವಶ್ಯಕ ಗೊಂದಲವಾಗಿದೆಯೇ ಹೊರತು ಪ್ರಯೋಜನವೇನೂ ಇಲ್ಲ. ಗ್ರಂಥದ ಹೆಸರಿಗೆ ತಕ್ಕಂತೆ ಹಳಗನ್ನಡ ಕೃತಿಗಳಲ್ಲಿಯ ಗಾದೆಗಳನ್ನಷ್ಟೇ ಆಯ್ದು, ವ್ಯವಸ್ಥಿತವಾಗಿ ಸಂಯೋಜಿಸಿ ಕೊಟ್ಟಿದ್ದರೆ ಕೃತಿಯ ಬೆಲೆ ಹೆಚ್ಚುತ್ತಿತ್ತು.

ಶ್ರೀ ಅಜ್ಜಪ್ಪನವರು ಪೀಠಿಕೆಯಲ್ಲಿ (ಪುಟ Liv ಮತ್ತು Lv) ಹೇಳಿರುವಂತೆ ಗ್ರಂಥಗಳಲ್ಲಿ ಹುದುಗಿದ ಗಾದೆಗಳನ್ನು ಆರಿಸಿ ತೆಗೆಯುವುದು ಸುಲಭ ಕಾರ್ಯವೇನಲ್ಲ. ಆದರೆ ಕೆಲಸಕ್ಕೆ ಕೈಹಾಕಿದ ಮೇಲೆ ಶಕ್ತಿಮೀರಿ ಪ್ರಯತ್ನಿಸಲೇ ಬೇಕು. ವಿವಿಧ ಉಪಾಯಗಳಿಂದ ಗ್ರಂಥಗಳಲ್ಲಿಯ ಗಾದೆಗಳನ್ನು ಗುರುತಿಸಿ ಹೊರದೆಗೆಯಬೇಕು. ತಾವು ಬಳಸಿರುವ ಗಾದೆಗಳ ಬಗೆಗೆ ಸ್ವತಃ ಕವಿಗಳೇ ಇದು ಗಾದೆ ಎಂಬ ಸೂಚನೆ ಕೊಟ್ಟಿದ್ದಾರೆ. ಇಂಥವುಗಳ ಸಂಗ್ರಹ ಸುಲಭ. ಒಬ್ಬ ಕವಿ ಹೇಳಿರದಿದ್ದರೂ ಇನ್ನೊಬ್ಬ ಕವಿ ಅದನ್ನು ಬಳಸಿ ಗಾದೆಯೆಂದು ಹೇಳಿದ್ದರೆ, ಈ ಪರೋಕ್ಷ ಆಧಾರದಿಂದಲೂ ಸಂಗ್ರಹಿಸಬಹುದು. ಕೆಲವು ಗಾದೆಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗದಿದ್ದರೂ ಈಗಿನ ಗಾದೆಗಳನ್ನು ಹೋಲುತ್ತಿದ್ದರೆ, ಅವು ಇಂದಿನ ಗಾದೆಗಳ ಹಿಂದಿನ ರೂಪ

ಗಳಾಗಿರಬಹುದು. ಇಲ್ಲವೆ ಕವಿಯು ಛಂದಸ್ಸಿನ ಕಟ್ಟುಸಿಟ್ಟುಗಳಿಗೆ ಅಳವಡಿಸಿ ಬಳಸಲು ಮಾಡಿಕೊಂಡ ಮಾರ್ಪಾಡುಗಳಾಗಿರಬಹುದು. ಇವಲ್ಲದೆ ಬೇರೆ ಆಧಾರ (ಉಪಾಯ) ಗಳಿಂದ ಗುರುತಿಸಲು ಸಾಧ್ಯವಾಗುವ ಗಾದೆಗಳು, ಹೀಗೆ ಕೆಲವು ಹಂತಗಳಲ್ಲಿ ಗ್ರಂಥಗಳಲ್ಲಿಯ ಗಾದೆಗಳನ್ನು ಆರಿಸಿ ತೆಗೆದು, ವಿವರಣೆಯೊಂದಿಗೆ ಸಂಗ್ರಹಿಸಿ ಕೊಡುವುದು ಸಾಧ್ಯವಿದೆ. ಶ್ರೀಯುತರು ಹೀಗೆ ಯಾವುದಾದರೊಂದು ಕ್ರಮವಿಟ್ಟು ಕೊಂಡು ಈ ಕಾರ್ಯ ಮಾಡಿದ್ದರೆ ಅವರ ಅಭ್ಯಾಸದ ಸರಿಯಾದ ಫಲ ವಾಚಕರಿಗೆ ದೊರೆಯುತ್ತಿತ್ತು.

ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಯೋಗಿಸಿರುವ ಸಂಸ್ಕೃತ ಸುಭಾಷಿತ. ಶ್ಲೋಕ, ಶ್ಲೋಕಪಾದ, ನ್ಯಾಯ ಇವುಗಳನ್ನೂ ಗಾದೆಗಳೊಂದಿಗೆ ಕೂಡಿಸದೆ ಇವುಗಳದೇ ಪ್ರತ್ಯೇಕ ಸಂಗ್ರಹ ನೀಡಿದ್ದರೆ ಅಭ್ಯಾಸಿಗಳಿಗೆ ಅನುಕೂಲವಾಗುತ್ತಿತ್ತು. ಕನ್ನಡ ಕವಿ ಕೃತಿಗಳಲ್ಲಿ ಪ್ರಾಕೃತ ಗಾದೆಗಳು ಕಡಿಮೆ ಸಂಖ್ಯೆಯಲ್ಲಾದರೂ ದೊರೆಯು ತ್ತವೆ. ಅವುಗಳನ್ನು ಆರಿಸಿ ಈ ಸಂಗ್ರಹದಲ್ಲಿ ಏಕೆ ಕೂಡಿಸಿಲ್ಲವೋ ತಿಳಿಯದು.

"......ಇಲ್ಲಿ ಗಾದೆಗಳ ಜೊತೆಯಲ್ಲಿಯೇ ಎಲ್ಲಾ ಬಗೆಯ ಸೂಕ್ತಿಗಳೂ ಸೇರಿವೆ" (ಪುಟ Liii) "......ಯಾವ ಕಾವ್ಯವನ್ನು ನೋಡಿದರೂ ಗ್ರಂಥಸ್ಥವಾಗಿರುವ ಗಾದೆಗಳಿಗೆ ಕೊರತೆಯಿಲ್ಲ. ಗಾದೆಗಳಂತಹ, ಗಾದೆಗಳಾಗಬಹುದಾದ ಯೋಗ್ಯತೆ ಇರುವ ಉಕ್ತಿಗಳಿಗೂ ಅಭಾವವಿಲ್ಲ" (ಪುಟ Liv) ಎಂದು ಹೇಳಿರುವ ಸಂಪಾದಕರು ಇಲ್ಲಿ ಮಾಡಿರುವ ಮುಖ್ಯ ಕೆಲಸವೆಂದರೆ ಕವಿ ಸೂಕ್ತಿ ಸಂಗ್ರಹ. ಈ ಸಂಗ್ರಹದಲ್ಲಿ ೨೦% ರಷ್ಟು ಶುದ್ಧ ಗಾದೆಗಳು ಸಿಗುವುದೂ ದುರ್ಲಭ. ಈ ಸಂಗ್ರಹಕ್ಕೆ "ಹಳಗನ್ನಡ ಕವಿ ಸೂಕ್ತಿಗಳು" ಎಂದು ಹೆಸರಿಟ್ಟಿದ್ದರೆ ಸಂಪಾದಕರ ಔಚಿತ್ಯ ಪ್ರಜ್ಞೆ ವ್ಯಕ್ತವಾಗುತ್ತಿತ್ತು.

ಕವಿ ಸೂಕ್ತಿ ಸಂಗ್ರಹದಲ್ಲಿಯೂ ಸಂಪಾದಕರಿಗೆ ಸಂಪೂರ್ಣ ಯಶ ಸಿಕ್ಕಿಲ್ಲ. ಇಲ್ಲಿ ಸಂಗ್ರಹಿಸಿ ಕೊಟ್ಟವುಗಳಲಿ ಕೆಲವಂತೂ ಯಾವ ದೃಷ್ಟಿಯಿಂದಲೂ ಸೂಕ್ತಿಗಳೆನ್ನಿಸಿ ಕೊಳ್ಳಲಾರವು :

೧) ಎನ್ನ ಭಾಗ್ಯದ ಬೆಳೆ ತುಳಿರ್ತುದು. ಎನ್ನ ಪುಣ್ಯಲತೆ ಪೂತುದೆನ್ನ ಕುಲ ಕಲ್ಪವೃಕ್ಷಂ ಫಲಿತಮಾದುದು (ಪುಟ ೧೬೯).

೨) ಕೌರವಾರಿ ಗದೆಗೊಳೆ ಪ್ರೊಣರ್ಕೆಗಾವಂ ನಿಲ್ವಂ (ಪುಟ ೨೧೨).

೩) ಪೋದ ಬಾಣವ ಮರಳಿ ತೊಡದಿರು (ಪುಟ ೨೬೯)

ಇವುಗಳಲ್ಲಿ ಕವಿಪ್ರತಿಭೆ ಎದ್ದು ಕಾಣಬಹುದಾದರೂ ಕವಿ ಸೂಕ್ತಿಗಳೆನ್ನಿಸಿ ಕೊಳ್ಳುವ ಸತ್ವ ಇಲ್ಲ, ಹೀಗೆ ಕವಿಸೂಕ್ತಿಗಳು ಅನ್ನಿಸಿಕೊಳ್ಳಲೂ ಅನರ್ಹವಾದ ಆಯ್ಕೆಗೆ ಇಲ್ಲಿ ಕೊರತೆಯಿಲ್ಲ.

ಇನ್ನು. ಹಳಗನ್ನಡ ಕಾವ್ಯಗಳಲ್ಲಿಯ ಹಲವು ಪರಿಣಾಮಕಾರಿ ಕವಿಸೂಕ್ತಿಗಳಿಗೆ ಪ್ರಸ್ತುತ ಸಂಗ್ರಹದಲ್ಲಿ ಸ್ಥಾನ ಸಿಕ್ಕಿಲ್ಲ :

(೧) ಶ್ರೀಗುರು ವಚನುಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ (ನಿಜಗುಣ ಶಿವಯೋಗಿ).

(೨) ಮನವರಿಯುವ ಕಳ್ಳತನವಿಲ್ಲವಲ್ಲ (ಪುರಂದರದಾಸ),

(೩) ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು (ಕನಕದಾಸ)

(೪) ಕಾಯಕವೇ ಕೈಲಾಸ (ಬಸವಣ್ಣ).

(೫) ಅನುಭಾವವೆಂಬುದು ಆತ್ಮವಿದ್ಯೆ (ಬಸವಣ್ಣ)

(೬) ಮನದ ಮುಂದಣ ಆಸೆಯೇ ಮಾಯೆ.

(೭) ವಿಸಸನದ ಕಟ್ಟಾಳು ಮಂತ್ರವನೆಸಗಲಾಗದು (ಕುಮಾರವ್ಯಾಸ)

ಇಂಥ ಸತ್ವಪೂರ್ಣ ಕವಿಸೂಕ್ತಿಗಳು ಸಂಪಾದಕರ ಗಮನಕ್ಕೆ ಹೇಗೆ ಬಂದಿಲ್ಲವೊ ಗೊತ್ತಾಗದು.

ಯಾವೊಂದು ಕೃತಿಯಲ್ಲಿ ಇವಿಷ್ಟೇ ಸೂಕ್ತಿಗಳೆಂದು ಕಟ್ಟು ಹಾಕುವುದೂ ಕಠಿಣ. ವಚನ ಸಾಹಿತ್ಯ, ದಾಸ ಸಾಹಿತ್ಯ, ಶತಕ ಸಾಹಿತ್ಯ ಮುಂತಾದ ಅನುಭಾವ ಸಾಹಿತ್ಯದ ಬಹುಪಾಲು ಸೂಕ್ತಿ ಸಮುದಾಯವಾಗಿದೆ. ಕೇವಲ ಇವುಗಳಿಂದ ಆಯ್ದು ಸೂಕ್ತಿಗಳಿಂದಲೇ ಇಂಥ ಒಂದು ಬೃಹತ್ ಸಂಗ್ರಹ ಹೊರತರಬಹುದು. ಆದುದರಿಂದ ಪ್ರಸ್ತುತ ಗ್ರಂಥದಲ್ಲಿಯ ಸೂಕ್ತಿಗಳ ಸಂಗ್ರಹ ಕಾರ್ಯ ಸಂಪೂರ್ಣವೂ ಆಗಿಲ್ಲ. ಸಮರ್ಪಕವೂ ಆಗಿಲ್ಲವೆಂದು ಹೇಳಲೇಬೇಕು.

ಇಂಥ ಈ ಕೃತಿಯ ಹಿರಿಮೆಯನ್ನು ಹೊಗಳಿ ಹನ್ನೆರಡು ಜನ ಹಿರಿಯ ವಿದ್ವಾಂಸರು ಅಭಿಪ್ರಾಯ ಬರೆದಿದ್ದಾರೆ. ಅವರಲ್ಲಿ ಕೆ. ನರಸಿಂಹಮೂರ್ತಿ I. A. S. ಅವರೊಬ್ಬರನ್ನು ಬಿಟ್ಟು ಉಳಿದ ಯಾರೂ ಬಳಸಿದ ವಿಷಯ ಮತ್ತು ತಲೆಬರಹಗಳಲ್ಲಿ ಹೊಂದಿಕೆಯಿಲ್ಲ ಎಂಬುದರ ಬಗ್ಗೆ ಗಮನಿಸದಿದ್ದುದು ಮರ್ಮವದ ಸಂಗತಿ. ಸಾಮಾನ್ಯವಾಗಿ ಇಲ್ಲಿಯ ಎಲ್ಲ ಅಭಿಪ್ರಾಯಗಳು ಆರ್ಥಿಕ ಸಹಾಯಕ್ಕಾಗಿ ಬರೆದುಕೊಟ್ಟ ಶಿಫಾರಸು ಪತ್ರಗಳಾಗಿವೆಯೇ ಹೊರತು ಕೃತಿಯ ಮೌಲ್ಯದ ಬಗೆಗೆ ಬರೆದ ಅಭಿಪ್ರಾಯಗಳಾಗಿಲ್ಲ.

ಈ ಕೃತಿಯ ಪ್ರಕಟನೆಗೆ ಭಾರತ ಸರಕಾರ, ಮೈಸೂರು ಸರಕಾರ, ಮೈಸೂರು ಮಹಾರಾಜರು, ಸಂಘ ಸಂಸ್ಥೆಗಳು ದ್ರವ್ಯ ಸಹಾಯ ಮಾಡಿವೆ. ಆ ಮೂಲಕ ಸಂಪಾದಕರ ಕಾರ್ಯಕ್ಕೆ ಪ್ರೋತ್ಸಾಹ ಸಿಕ್ಕಿದೆ; ಅವರ ಆರ್ಥಿಕ ಹೊರೆ ಕಡಿಮೆಯಾಗಿದೆ. ಹೀಗಿದ್ದೂ ಈ ಗ್ರಂಥದ ಬೆಲೆ ೫೦ ರೂಪಾಯಿ ಇಟ್ಟಿದ್ದು ಸ್ವಲ್ಪ ಹೆಚ್ಚೆಂದು ಅನಿಸುತ್ತದೆ.

ಒಟ್ಟಿನಲ್ಲಿ, ಶ್ರೀಯುತ ಅಜ್ಜಪ್ಪನವರ ನಿಷ್ಠಾಪೂರ್ಣ ಪರಿಶ್ರಮದ ಫಲವಾಗಿ ಈ ಕೃತಿ ಕನ್ನಡಿಗರ ಕೈಯಲ್ಲಿ ಬಂದಿದ್ದರೂ ಪಾಂಡಿತ್ಯಪೂರ್ಣ ಸಂಪಾದನೆ ಮತ್ತು ಸಂಯೋಜನೆಗಳ ಅಭಾವದಿಂದ ಬಡವಾಗಿದೆಯೆಂದು ಹೇಳಬೇಕಾಗುತ್ತದೆ. "ಇದೊಂದು ಮೇರು ಕೃತಿ" ಎಂಬುದಾಗಿ ಹೇಳಿಕೊಂಡ ಶ್ರೀಯುತರ ಆತ್ಮ ವಿಶ್ವಾಸವನ್ನು ಮೆಚ್ಚಬೇಕು. ಆದರೆ ಅದು ವಸ್ತುಸ್ಥಿತಿಯಲ್ಲ ಎಂಬುದನ್ನು ಅವರು ಅರಿತುಕೊಂಡರೆ ಒಳಿತು.

ಆದರೂ "ಗ್ರಂಥಸ್ಥ ಗಾದೆಗಳು" ಸಮರ್ಪಣ ಭಾವದ ಅಭ್ಯಾಸದ ಫಲ. ಕನ್ನಡ ಭಾಷೆ ಹಂತ ಹಂತವಾಗಿ ಬೆಳೆದು ಬಂದ ಬಗೆ, ಒಬ್ಬ ಕವಿಯ ಮೇಲೆ ಇನ್ನೊಬ್ಬ ಕವಿಯ ಪ್ರಭಾವ, ಅವರ ಉಕ್ತಿಗಳಲ್ಲಿಯ ಸಾಮ್ಯ-ವೈಷಮ್ಯ ಮುಂತಾದ ಅನೇಕ ಅಂಶಗಳ ಅಭ್ಯಾಸಕ್ಕೆ ಈ ಗ್ರಂಥ ಮಾರ್ಗದರ್ಶಕವಾಗಿದೆ. ಈ ದಿಸೆಯಲ್ಲಿ ಕನ್ನಡ ವಿದ್ವಾಂಸರು ಮಾಡಬೇಕಾಗಿರುವ ಕೆಲಸ ಬೆಟ್ಟದಷ್ಟಿದೆಯೆಂಬುದನ್ನೂ ಕೈಮಾಡಿ ತೋರಿಸುತ್ತದೆ. ಅದಕ್ಕಾಗಿಯಾದರೂ ಶ್ರೀ ಅಜ್ಜಪ್ಪನವರಿಗೆ ಕನ್ನಡಿಗರು ಋಣಿ ಯಾಗಿರಬೇಕು.

★ **ಜ್ಯೋತಿ ಹೊಸೂರ**

ಜಗಲಿ ಹತ್ತಿ ಇಳಿದು : ಕವಿ- ಶ್ರೀ ದೊಡ್ಡರಂಗೇಗೌಡ, ಪ್ರಕೃತಿ ಪ್ರಕಾಶನ, ಮೈಸೂರು-೫ (೧೯೬೯); ಪುಟ-೪೦; ಬೆಲೆ-೨ ರೂಪಾಯಿ.

ಇಪ್ಪತ್ತೊಂದರ ಹರೆಯದ ಕವಿ ಶ್ರೀ ದೊಡ್ಡರಂಗೇಗೌಡರ ಮೊತ್ತ ಮೊದಲ ಕೃತಿ "ಜಗಲಿ ಹತ್ತಿ ಇಳಿದು" ಹದಿನೇಳು ಕವನಗಳ ಒಂದು ಸೊಗಸಾದ ಸಂಕಲನ. ಇಲ್ಲಿ ಕಂಡುಂಡುದನ್ನೆ ಕಂಡರಿಸುವ ಕವಿಹಂಬಲ ಯುವಮನದ ಕನ-ವರಿಕೆ-ಕಾವ್ಯಗಳನ್ನು, ತುಡಿತ-ಮಿಡಿತಗಳನ್ನು ಎರಕಹೊಯ್ಯುತ್ತ ಕೃತಾರ್ಥತೆಯ ದಾರಿಯಲ್ಲಿ ಹೆಜ್ಜೆ ಹಾಕಿದೆ. "ಎಚ್ಚರದ ಬಿಚ್ಚು ನುಡಿ"ಯನ್ನಾಡಿವೆ :

“ನನಗೆ ತೋಚಿದ್ದೆಲ್ಲ
ನಾನು ಗೀಚಿದ್ದೆಲ್ಲ—
ನಾನು ಮತ್ತು ಜಗತ್ತು
ಜೊತೆಗೆ ಸಮಾಜದ ನೂರು ಸುತ್ತು
ಮತ್ತು
ಹೆಣ್ಣು, ಮಣ್ಣು
ಬೇರೆಯವರ ಕಿವಿ, ಕಣ್ಣು
ಎಂಬಂಥ ವೃತ್ತಗಳಿಗೆ
ಟ್ಯಾಂಜಟ್ ಎಳೆವ ಪ್ರಯತ್ನ—
ನನ್ನದು, ಅಪ್ಪಟ ಅದು ನನ್ನದು.”

× × ×

“ ಈ ಮಧ್ಯ ನೋಟಕ್ಕೆ
ನೀನು ಬೆಂಕಿ ;—
ನಾನು ಕರಗಿ
ಕು
ಗ್ಗಿ
ಬೆವರಿ
ಬೆದರಿ
ಸಿಂಬೆ ಸುತ್ತಿ ಮಲಗಿದ ಒನಕೆ ಬಂಡೆ ಹುಳ.”

ಅನುಭವದ ಅಭಿವ್ಯಕ್ತಿಗಾಗಿ ಹೊಸರೂಪಕಗಳನ್ನು ಅಳವಡಿಸಿಕೊಳ್ಳುವ, ಬಳಕೆ ಮಾತುಗಳನ್ನು ದುಡಿಸಿಕೊಳ್ಳುವ, ಹೊಸ ನುಡಿಗಟ್ಟುಗಳನ್ನು ರೂಪಿಸಿಕೊಳ್ಳುವ ಕವಿಪ್ರಯತ್ನ ಮೆಚ್ಚುವಂಥದಾಗಿದೆ ; ಕವಿಯ ಬೆಳವಣಿಗೆಯ ಬಗ್ಗೆ ಒಳ್ಳೆಯ ಭರವಸೆಯನ್ನು ಹುಟ್ಟಿಸುವಂಥದಾಗಿದೆ :

“ನೆನಪ ರುಬ್ಬುಗುಂಡು
ಕನಸಿನೊರಳಲಿ ಉರುಳಿ
ಚಪ್ಪೆ ತೆಳ್ಳಗಾಗಿ
ಆಲಿಸಿಕೆ ಅಂಬಲಿಯಲಿ
ಅಂತಃಕರಣ ಕಣ ಕಣ್ಣೆ ಕಾಣುತಿದೆ.”

× × ×

"ಆಸೆ ಹಸಿರು ಗರಕೆ ಚಿಗುರೆಲ್ಲ ಒಣಗಿ
ನಿಂತಾಗ, ಸೀನೆಸೆದ ಕೆಂಡ ಹತ್ತಿ ಬೆಂಕಿಯಾಗಿ
ಉರಿದು ಬೂದಿ ಸಮಾಧಿಯಾಗಲಿಕೆ
ನಿನ್ನ ನಗೆ ಬಾಣ ಕಾರಣ ಅಲ್ಲವೇನು ?"

× × ×

"ಮ್ಹೆ ಮಾತಾಡಿಸಿ ಖುಷಿ ಪಟ್ಟು."

ಹೊಸ ಕಾವ್ಯದಲ್ಲಿ ಎದ್ದು ಕಾಣುವ ವಿಡಂಬನೆಯ ಬಣ್ಣವೂ ಇಲ್ಲಿ ಇಲ್ಲದಿಲ್ಲ. "ಗೋಸುಂಬೆ" "ಸ್ನೇಚ್ಚೆ, ಕೊಚ್ಚೆ, ಇಚ್ಚೆ"ಗಳಲ್ಲಿಯ ವಿಡಂಬನೆ ಹರಿತವಾಗಿದ್ದರೂ ಹದಗೊಂಡು ಪಾಕವಾಗಿಲ್ಲವೇನೊ ಅನಿಸುತ್ತದೆ.

ಒಟ್ಟಿನಲ್ಲಿ ಬೆಳೆದು ಬೆಳಗಬಲ್ಲ ಸತ್ವ-ಸ್ವತ್ವಗಳನ್ನೊಳಗೊಂಡ ಕವಿ ಶ್ರೀ ದೊಡ್ಡ ರಂಗೇಗೌಡರು. ಅವರ "ಅನುಭವ ಲಂಗರು ಹಾಕಿ ಬರಹವನು ನಿಲಿಸುವಾಸೆ" ಫಲಿಸಲಿ, ಕನ್ನಡದ ಕಾವ್ಯಸಂಪತ್ತು ಹೆಚ್ಚುವಂತಾಗಲಿ ಎಂದು ಹಾರೈಸುವೆ.

★ **ಎಂ. ಅಕಬರ ಅಲಿ**

ಸಮಾಗಮ : ಲೇಖಕರು : ಪ್ರೊ. ಸಂಗಮನಾಥ ಹಂಡಿ, ಶೈಲಜಾ ಪ್ರಕಾಶನ, ವಿಜಾಪೂರ-೧೯೭೦ ಪುಟಗಳು ix + ೧೬೦; ಬೆಲೆ ೫-೦೦

ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ತಮ್ಮ ಲೇಖನಗಳನ್ನು ಒಂದೆಡೆ ಸಂಗಮ ಗೊಳಿಸಿ ಒಟ್ಟಿಗೆ ನೀಡುವ ಸಂಪ್ರದಾಯ ಇತ್ತೀಚೆಗೆ ಬಹುವಾಗಿ ಬೆಳೆದು ಬರುತ್ತಿದೆ. 'ಸಹೃದಯ ಸ್ಫುರಣ' ಲೇಖನ ಸಂಕಲನವನ್ನಿತ್ತ ಪ್ರೊ. ಸಂಗಮನಾಥ ಹಂಡಿಯವರು 'ಸಮಾಗಮ'ದಲ್ಲಿ ಹತ್ತು ವಿಮರ್ಶಾತ್ಮಕ ಪ್ರಬಂಧಗಳ ಗುಚ್ಛವನ್ನು ನೀಡಿ ಆ ಮಾಲಿಕೆಗೆ ಮತ್ತೊಂದು ಸೇರಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬರುವ ಸಾವಿರಾರು ಕವಿಗಳ ಕೃತಿಗಳ ಮೌಲಿಕ ವಿಮರ್ಶೆ ಹಾಗೂ ನವೀನ ದೃಷ್ಟಿಕೋನದಿಂದೊಡಗೂಡಿದ ಸಂಶೋಧನೆಯ ಆಸಕ್ತಿ ಯನ್ನು ಕೆರಳಿಸುವ ವಿಚಾರಗಳಿಂದ ತುಂಬಿ ವಿವೇಚಿಸಲ್ಪಟ್ಟ ಲೇಖನಗಳು ಎಷ್ಟು ಪ್ರಕ ಟವಾದರೂ ಕಡಿಮೆಯೆ. ಸಮಾಗಮದಲ್ಲಿ. ತಮ್ಮ ವ್ಯಾಸಂಗದ ಕೆಲವು ಹೊಸ ವಿಚಾರ ಗಳನ್ನು ವಿಸ್ತರಿಸಿ ಬರೆದ ಲೇಖನಗಳೆಂಬಂತೆ ತೋರುವ ಈ ಪ್ರಬಂಧಗಳಲ್ಲಿ ಕೆಲವು ನಿಜ ವಾಗಿ 'ವಿಚಾರ ಪರಿಪ್ಲುತ'ವಾಗಿವೆ.

'ಮಾನಿಸಗಳ್ಳಿ' ಶಬ್ದದ ವಿವೇಚನೆಯನ್ನು ಮೊದಲ ಲೇಖನದಲ್ಲಿ ಮಾಡುತ್ತ ಬಸವಣ್ಣನವರ ಭಾವಾರ್ಥಕ್ಕೆ ಈ ವರೆಗೆ ಕೆಲ ಪಂಡಿತರು ನೀಡುವ ಅರ್ಥ ಸಾರ್ಥಕ ವಾಗಲಾರದೆಂದು ಹೇಳಿ ಕೊನೆಗೆ ಹಾದರದ ಹೆಣ್ಣು ಎಂಬುದಕ್ಕೇ ಬಂದು ನಿಲ್ಲುತ್ತಾರೆ. ಸತಿ ಭಾವವನ್ನು ಹೊತ್ತ ಭಕ್ತ ಅನ್ಯದೈವಂಗಳನ್ನು ನಂಬಿದರೆ ನಟ್ಟಿದರೆ ಮಾನಿಸಗಳ್ಳಿ ಯಂತೆ ಅನಾಚಾರಿ. ವ್ಯಭಿಚಾರಿಯಾಗುತ್ತಾನೆ. ದೇವನೊಬ್ಬ ನಾಮ ಹಲವು ಎಂಬ ತತ್ವದ ಸೂತ್ರವನ್ನು ಪ್ರತಿಪಾದಿಸುವಲ್ಲಿ ಬಸವಣ್ಣ ಬರೆದ ವಚನಗಳ ವಿವರಣೆ ಹಿತ–ಮಿತವಾಗಿದೆ. (ಇನ್ನೂ ಬೇಕು ಎನ್ನಿಸುತ್ತದೆ.)

ಕಾಯಕ ಕುರಿತು ಬಸವಣ್ಣನವರ ಹಾಗೂ ಸಮಕಾಲೀನ ಶರಣರ ವಿಚಾರಗಳನ್ನು ಕ್ರೋಢೀಕರಿಸಿ ಕಾಯಕವನ್ನೇ ಅವರು ಕೈಲಾಸವಾಗಿರಿಸಿಕೊಂಡ ವಿವರಣೆ ಪ್ರಾರಂಭ ದಲ್ಲಿ ಸಮರ್ಪಕವಾಗಿ ಕಂಡರೂ, ಆ ನಂತರ ಬಂದ ವಿವರಣೆಯಲ್ಲಿ ವಿವಿಧ ಶರಣರ ವಚನಗಳ ಉದ್ಧರಣೆ ಸಂಕ್ಷೇಪಗೊಂಡು ಶರಣರು "ಕಾಯಕ" ದಲ್ಲಿ ಕಂಡ ವಿಶೇಷ ಗುಣವನ್ನು ಹೆಚ್ಚು ಪ್ರತಿಪಾದಿಸಿದ್ದರೆ ಇನ್ನೂ ಮೆರಗು ಪಡೆಯುತ್ತಿತ್ತು. "ಹಿಡಿದುದ ಕಡೆಗಾಣಿಸಿದರೆ ಬೇಡಿದುದ ಪಡೆವ ಕೆಚ್ಚು ಶರಣರ ವಿಚಾರದಲ್ಲಿ ಅರಳಿ ಕಾಯಕದಲ್ಲಿ ಕಾಯಾಗಿದೆ" ಇಂತಹ ವಾಕ್ಯಗಳು ಓದುಗರ ತಲೆ ತಿನ್ನುತ್ತವೆ.

" ಅಹಿಂಸೆ ಹಾಗೂ ಶರಣರು " ಲೇಖನದಲ್ಲಿ, ಅಹಿಂಸೆ ಹಾಗೂ ದಯೆ (ಇವು ಒಂದಕ್ಕೊಂದು ಪೂರಕವೆನಿಸಿದರೂ) ಇವುಗಳ ಬಗೆಗೆ, ವಚನ ಭಾಂಡಾರದಲ್ಲಿ ವಿಪುಲವಾಗಿ ದೊರೆಯುವ ವಚನಗಳನ್ನಾಯ್ದು, ಬೇರೆ ಬೇರೆಯಾಗಿ ವಿವೇಚಿಸಲು ಯತ್ನಿಸಿದ್ದರೆ ಇನ್ನೂ ಸ್ಪಷ್ಟವಾಗುತ್ತಿತ್ತೇನೋ ಎನ್ನಿಸುತ್ತದೆ.

ವರ್ಧಮಾನ ಚರಿತ್ರೆ ಇರುವ ಚಾವುಂಡರಾಯ, ಕವಿಪದ್ಮ ಆಚಣ್ಣ ಈ ಕವಿಗಳ ಕಾವ್ಯಗಳಲ್ಲಿ ವ್ಯತ್ಯಾಸ ಅಲ್ಪವಾಗಿರುವದರಿಂದ, ಆಚಣ್ಣನದೇ ವರ್ಧಮಾನ ಪುರಾಣ ವನ್ನು ಆಧರಿಸಿ ವರ್ಧಮಾನನ ಚಿತ್ರ ನೀಡಿರುವ ಪ್ರಬಂಧದಲ್ಲಿ. ಉದ್ದಕ್ಕೂ ವರ್ಧಮಾನ ಕಥೆಯ ಪರಿಚಯ ಮಾಡಿಕೊಟ್ಟು "ಜೀವದಯೆ ಜೈನಧರ್ಮಂ" ಎಂಬ ಸೂತ್ರಕ್ಕೆ ವರ್ಧ ಮಾನನ ಪಾತ್ರವನ್ನು ತಂದಿರುವುದು ಸಮಾಧಾನಕರ.

ಇನ್ನೊಂದು ಪ್ರಬಂಧದಲ್ಲಿ ಜನ್ನನ ಅನಂತನಾಥ ಪುರಾಣದಲ್ಲಿ ಸುನಂದಚಂಡ–ಶಾಸನರ ಪ್ರಣಯ ಪ್ರಸಂಗವು ಪುರಾಣದ ಬೆಲೆ ಹೆಚ್ಚಿಸಿದೆ ಎಂಬುದನ್ನು ಸ್ಪಷ್ಟ ಪಡಿ–ಸಲು ಯತ್ನಿಸುತ್ತ ಈ ಪ್ರಣಯ ಪ್ರಸಂಗ ವಾಸ್ತವಿಕವೆಂದು ಸಮರ್ಥಿಸಿ ಯಶೋ–ಧರ ಚರಿತೆಯಲ್ಲಿ ಬರುವ ಯಶೋಧರ, ಅಮೃತಮತಿ ಇವರನ್ನು ವೈಯಕ್ತಿಕವಾಗಿ ವಸುಷೇಣ ಚಂಡಶಾಸನರಿಗೆ ಹೋಲಿಸಬಹುದಾದರೆ ಅಷ್ಟವಕ್ರನನ್ನು ಸುನಂದೆಗೆ ಹೋಲಿಸುವದು ಸರಿಯಲ್ಲ ಎಂಬ ತುಲನಾತ್ಮಕ ಹೇಳಿಕೆಯಿಂದ ಸುನಂದೆಯ ದುರಂತ ಪಾತ್ರದ ವೈಶಿಷ್ಟ್ಯವನ್ನು ಎತ್ತಿ ತೋರಲಾಗಿದೆ. ದುರಂತ ನಾಯಕಿಯ "ಪಟ್ಟ" ಇವಳ ಲ್ಲಿಯ "ಎಲ್ಲಾ" ಸದ್ಗುಣಗಳಿಂದ ಇವಳಿಗೆ ದೊರೆತಿಲ್ಲವಾದರೂ, ದೈವ, ರೂಪ ಇವ

ಳನ್ನು ಆದರೆಡೆಗೆ ಕೊಂಡೊಯ್ದಿವೆ ಎಂಬ ಅಭಿಪ್ರಾಯ ಸಮಂಜಸ. ಸುನಂದೆಯೊಡನೆ ಅಸು ನೀಗಿ, ದೇಹ ಹೊಂದಿಸಿ ಚಿತೆಯೇರಿದ ಚಂಡಶಾಸನನ್ನು ಸುನಂದೆಯು ಪತಿವ್ರತಾ ಧರ್ಮದ ದೃಷ್ಟಿಯಲ್ಲಿ ಇದೊಂದು ಕಲಂಕವೆಂದಿದ್ದಾರೆ—ಲೇಖಕರು. ಆದರೆ ಚಂಡ–ಶಾಸನನ ಉತ್ಕಟ ಪ್ರೇಮದ ದೃಷ್ಟಿಯಲ್ಲಿ ಅವನಿಗೆ ಅದೇ ಔಚಿತ್ಯಪೂರ್ಣವಾದ ಮೋಕ್ಷ. ಸುನಂದೆಯ ಪಾತ್ರದ ಬಗೆಗೆ ಇದ್ದ ಗೌರವ ಭಾವನೆ ಚಂಡಶಾಸನನಿಗೂ ಇದೆ ಎಂದು ಭಾಸವಾಗುತ್ತದೆ. ಉದ್ದೇಶಪೂರ್ವಕವಾಗಿಯೇ ಅವಾಸ್ತವತೆಯನ್ನು ಎತ್ತಿ ತೋರಿದಂತೆ ಕಂಡರೂ ಚಂಡಶಾಸನನ ಅನನ್ಯ ಪ್ರಣಯ, ಗಂಡನೆಂಬ ಏಕಮಾತ್ರ ಅಭಿಮಾನದಿಂದ ಪ್ರೀತಿಸುವ ವಸುಷೇಣನ ಪ್ರಣಯಕ್ಕಿಂತ ಮಿಗಿಲೆಂಬುದನ್ನು ಅಂತ್ಯದಲ್ಲಿ ಸೂಚಿಸುವದೇ ಕವಿಯ ಉದ್ದೇಶವಾಗಿದೆ. ಈ ದೃಷ್ಟಿಯಲ್ಲಿ ಯೋಚಿಸಿದಾಗ ಜನ್ನನ ತೂಕಡಿಕೆ ಇದಲ್ಲವೆನಿಸಬಹುದಲ್ಲವೆ ?

ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಮಾಯೆಯ ಪಾತ್ರಗಳಲ್ಲಿ ಚಾಮರಸನ ಮಾಯೆ ಮಾತ್ರ ಜೀವಂತ ಕಳೆಯಿಂದ ತುಂಬಿರುವಳೆಂಬುದನ್ನು "ಚಾಮರಸನ ಮಾಯೆ" ಯಲ್ಲಿ ವಿಶದೀಕರಿಸುತ್ತ ಮಾಯೆಯಂತಹ ಕೀಳು ಆಶೆಯನ್ನಿಟ್ಟುಕೊಂಡ, ಹೀನಮನದ ಪಾತ್ರ ಚಿತ್ರವನ್ನು ಚಾಮರಸ ಮನಂಬುಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾ–ನೆಂದು ಹೇಳಿದ್ದಾರೆ. ಪ್ರಭುವಿನಂತಹ ವ್ಯಕ್ತಿಯನ್ನು ತನ್ನ ನಲ್ಲನನ್ನಾಗಿ ಪಡೆಯ ಬೇಕೆಂಬುದು ಯೌವನವತಿ ರೂಪವತಿಯಾದ ರಾಜಕುವರಿಯ ಸಹಜ ಆಕಾಂಕ್ಷೆಯನ್ನು "ಕೀಳು ಆಶೆ" ಎನ್ನಬಹುದೆ ? ಮಾಯೆ ಹೀನಮನದ "ಪಾತ್ರ" ವಾಗಬಹುದೆ ? ಎಂಬ ಶಂಕೆಗೆ ಇಲ್ಲಿ ಆಸ್ಪದವಿದೆ. ಇಲ್ಲಿ ಮಾಯೆ, ಪ್ರಭುವಿನ ಮುಂದಿನ ಮಾರ್ಗದ "ಒರೆಗಲ್ಲು" ಎಂಬ ಸಾಂಕೇತಿಕ ಅರ್ಥವನ್ನು ಗ್ರಹಿಸಿದರೆ ನೆಟ್ಟಗೆ. ಮಾಯೆಯ ಆಸೆ ಪೂರೈಸುವೆನೆಂದು ಪ್ರಭು ತನ್ನ ವಚನ ಪಾಲಿಸಿಲ್ಲ ಅವಳ ಆಶೆ ಪೂರೈಸಿಲ್ಲ ಎಂದು— "ಅರ್ಥಹೀನ ಘೋಷಣೆ" ಅವನದು ಎಂದಿದ್ದಾರೆ. ಆದರೆ ನಿರ್ಮಾಯನಾದ ವ್ಯಕ್ತಿ ಭಾಷೆ ಕೊಡುವದೆಲ್ಲಿ ಬಂತು ? ಆಶೆ ಪೂರೈಸುವುದೆಲ್ಲಿ ಬಂತು ? ಪರಿಸ್ಥಿತಿಯ ಒತ್ತಡದಲ್ಲಿ ಲೀಲಾಜಾಲವಾಗಿ ಮಾಯೆಯನ್ನು ಆಟವಾಡಿಸಿದ ಪ್ರಭುವಿಗೆ ಘೋಷಣೆಯ ಬಂಧನ ವೆಲ್ಲಿಂದ ಬಂತು ? ಹಾಗೆಯೆ ಇನಿಯನನ್ನು ಬಯಸಿ ಮಧುಕನಾಥನನ್ನು ಪೂಜಿಸಿದ ಮಾಯೆಯ ಪಾತ್ರದಲ್ಲಿ ಅವಾಸ್ತವಿಕತೆಗೆ ಎಡೆಯಿರದು.

ಮುಂದಿನ ಪ್ರಬಂಧದಲ್ಲಿ "ಮಾಯೆಯ ಕಣ್ಣಿಗೆ **ಕಾಮುಕ**ನಂತೆ ಕಂಡ ಅಲ್ಲಮ ತನ್ನ ನಿಷ್ಕಾಮ ವ್ಯಕ್ತಿತ್ವವನ್ನು ಪ್ರಕಟಿಸಿದ್ದಾನೆ" ಎಂದು ಹೇಳುವಲ್ಲಿ ಕಾಮಿನಿಯ ಕಣ್ಣುಗಳಲ್ಲಿ ಕಾಮವಿತ್ತೇ ವಿನಃ ಅಲ್ಲಮನಲ್ಲಿ ಅಲ್ಲವೆಂಬುದನ್ನು ಮರೆಯದಿರಬೇಕು. ಅಲ್ಲಮನ ಭವ್ಯವ್ಯಕ್ತಿತ್ವಕ್ಕೆ ಈ ಮಾಯಾ ಕೋಲಾಹಲ ಸಂದರ್ಭ ಪ್ರಾಣವೆಂಬುದು ನಿಜ.

"ಕನ್ನಡ ಕಾವ್ಯಗಳಲ್ಲಿ ಕಣ್ಣಪ್ಪನ ಕಥೆ"ಯ ತುಲನಾತ್ಮಕ ವಿಮರ್ಶಾ ಪ್ರಬಂಧ ದಲ್ಲಿ ಹರಿಹರ, ಸುರಂಗ. ಭೀಮಕವಿ, ಷಡಕ್ಷರಿ. ಚನ್ನಪ್ಪ ಇವರು ರಚಿಸಿದ ಕಾವ್ಯ–ಗಳಲ್ಲಿ ಲಿಂಗದರ್ಶನ, ಬ್ರಾಹ್ಮಣ ಪೂಜಾರಿಯ ಪ್ರಸಂಗ. ಪಾರ್ವತಿ ಪರಮೇಶ್ವರ

ಪ್ರಸಂಗ ಮುಂತಾದ ಸಂದರ್ಭಗಳಲ್ಲಿಯ ಪ್ರತ್ಯಾಸಗಳನ್ನು ಎತ್ತಿ ತೋರಿಸಿದ್ದಾರೆ. ಈ ಎಲ್ಲ ಕವಿಗಳು ಚಿತ್ರಿಸಿದ ರೀತಿಯನ್ನು ಸಮನ್ವಯಗೊಳಿಸಿ ಕಣ್ಣಪ್ಪನ ಪಾತ್ರ ಚಿತ್ರಣದ ಮೂರ್ತಿಯನ್ನು ಕಟೆದು ನಿಲ್ಲಿಸಿದುದು ಸಮರ್ಪಕವಾಗಿದೆ. ಷಡಕ್ಷರ ದೇವನ ರಾಜಶೇಖರ ವಿಳಾಸದಲ್ಲಿ ಪ್ರಕೃತಿ ವರ್ಣನೆಯ ಸತಿಪತಿ ಭಾವ, ಲೌಕಿಕ ಗಂಡು-ಹೆಣ್ಣುಗಳ ದಾಂಪತ್ಯವೆಂಬಂತೆ ಚಿತ್ರಿಸಲ್ಪಟ್ಟಿರುವುದನ್ನು ಸಮರ್ಥಿಸಿ ಕವಿಯ ಶೃಂಗಾರ ರಸ ಪ್ರಿಯತೆಯನ್ನು ಹೊಗಳಿದುದು ಸಮಂಜಸವಾಗಿದೆ. ಬಿಟ್ಟೆನೆಂದರೂ ಬಿಡದೆ ಸುತ್ತಿದ ಸತಿಪತಿಯೆಂಬ ಬಂಧನದ ಸಂಸಾರ ಸಮಸ್ಯೆಗಳನ್ನು ಪ್ರಕೃತಿಯ ಮುಖಾಂತರ ಚಿತ್ರಿಸಿದ ಸೂತ್ರವೊಂದನ್ನು ಇಲ್ಲಿ ಪೋಣಿಸಲಾಗಿದೆಯೆಂಬ ಮಾತು ಸಮರ್ಥನೀಯವಾಗಿದೆ.

ಕೊನೆಯ ಪ್ರಬಂಧ- "ಕನ್ನಡ ಚಂಪು ಚರಿತ್ರೆ". ಚಂಪುವಿನ ಹುಟ್ಟು ದಕ್ಷಿಣದಲ್ಲಿ ಆಗಿರಬೇಕು ಎಂಬುದನ್ನು ದಂಡಿಯ ಮಾತಿನಿಂದ ಸಮರ್ಥಿಸಿ ಸಂಸ್ಕೃತಕ್ಕೆ ಕನ್ನಡದ ಕಾಣಿಕೆ ಎಂಬ ಅಭಿಪ್ರಾಯವನ್ನು ಬಲಪಡಿಸಿ, ಒಂದು ವೇಳೆ ಚಂಪು ಮೂಲ ಸಂಸ್ಕೃತದ್ದೆಂದು ಸಾಧಿಸಿದರೂ ಆ ಸಂಸ್ಕೃತ ಚಂಪು ಕಾವ್ಯ ರಚಿಸುವವರು ಕನ್ನಡಿಗರೇ ಎಂದು ಹೇಳಿದ್ದಾರೆ. ಕನ್ನಡಿಗರಾದರೇನು ? ಸಂಸ್ಕೃತದಲ್ಲಿದ್ದುದು ಸಂಸ್ಕೃತಕ್ಕೇ ಸಲ್ಲುವುದಲ್ಲವೆ? ಕನ್ನಡಿಗರು ರಚಿಸಿದ ಆ ಸಂಸ್ಕೃತ ಚಂಪು ಗ್ರಂಥಗಳನ್ನು ಮಾದರಿಯನ್ನಾಗಿಟ್ಟುಕೊಂಡು ಚಂಪು ರೂಪವನ್ನು ಕನ್ನಡದಲ್ಲಿ ಅನಂತರ ಬಂದ ಕವಿಗಳು ತಂದಿರಬಾರದೇಕೆ ? ಎಂದೆನಿಸುತ್ತದೆ. ಸಂಸ್ಕೃತದಲ್ಲಿ ಚಂಪೂ ರೂಪವಿತ್ತೆಂಬುದಕ್ಕೆ ಲೇಖಕರು ಉದ್ಧರಿಸಿದ ಲಾಕ್ಷಣಿಕರ ವ್ಯಾಖ್ಯೆಗಳು ಸಮರ್ಥನೆಯನ್ನು ನೀಡಲಾರವೆ ? ಕನ್ನಡ ಚಂಪು ವೈಭವವನ್ನು ಒಪ್ಪಿಕೊಳ್ಳಲೇಬೇಕು. ಆದರೆ ಹರಿಹರನ ದೀರ್ಘರಗಳೆ ಕಾವ್ಯಗಳನ್ನೂ ಚಂಪು ಪರಂಪರೆಯಲ್ಲಿ ಸೇರಿಸಿರುವುದು ಚಂಪು ಎಂದರೆ "ಗದ್ಯಪದ್ಯ ಮಿಶ್ರಣ" ವೆಂಬ ಕಾರಣಕ್ಕಾಗಿ ಎನ್ನುವುದು ಸಮಂಜಸವೆ ? ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರ ಸಿಗದೇ ಹೋಗುತ್ತದೆ.

ಒಟ್ಟಿನಲ್ಲಿ ಈ ಬಿಡಿ ಲೇಖನಗಳಲ್ಲಿ ವಿಷಯ ಸಂಗ್ರಾಹಕ ದೃಷ್ಟಿ, ವಿವರಣೆಯ ವಿಶಿಷ್ಟಶೈಲಿ ಗಮನಾರ್ಹ. ಸಂಶೋಧನಾತ್ಮಕ, ಹೊಸ ವಿಮರ್ಶನ ದೃಷ್ಟಿಯ ಹೊಳಹು ಇಲ್ಲಿದೆ. ಕೆಲವು ಅಶುದ್ಧವೆನಿಸಬಹುದಾದ ಶಬ್ದ ಪ್ರಯೋಗಗಳು ಹಾಗೂ ಅಸಂಬದ್ಧವೆನಿಸಬಹುದಾದ ಒಂದೆರಡು ವಾಕ್ಯಗಳನ್ನು ಬಿಟ್ಟರೆ ಕನ್ನಡದ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಉಪಯುಕ್ತ ಲೇಖನಗಳೆಂದು ಇವಕ್ಕೆ ಗೌರವ ದೊರೆಯುವುದರಲ್ಲಿ ಸಂದೇಹವಿಲ್ಲ.

ಬಿಡಿ ಲೇಖನಗಳ ಸಂಗ್ರಹ ಕಾರ್ಯಕ್ಕಿಂತ, ಒಂದೊಂದು ಸಮಸ್ಯೆ, ಅಥವಾ ವಿಷಯದ ಮೇಲಿನ ಸಂಶೋಧನಾತ್ಮಕ, ನವೀನ ವಿಮರ್ಶೆಯಿಂದೊಡಗೂಡಿದ ಗ್ರಂಥಗಳನ್ನು ರಚಿಸುವುದು ಈಗ ಕನ್ನಡಕ್ಕೆ ಬೇಕಾಗಿದೆ. ಆ ಕಾರ್ಯವನ್ನು ಪ್ರೊ. ಹಂದಿಯವರು ನೆರವೇರಿಸಬಹುದೆಂದು ಆಶಿಸಬಹುದು.

★ **ಪ್ರೊ. ಎಸ್. ಡಿ. ಸವದತ್ತಿಮಠ**

ಸಾದರ ಸ್ವೀಕಾರ

೧. **ಪಂಪಾ ತುಂತುರ : ಪ್ರಾತಿನಿಧಿಕ (ಕಥಾ ಸಂಕಲನ);**

ಸಂಪಾದಕರು: ಜಯತೀರ್ಥ ರಾಜಪುರೋಹಿತ, ಕೆ. ವಿರೂಪಾಕ್ಷಗೌಡ, ಜಿ. ವಿ. ಪೆಂಡಕೂರು. ಎನ್. ಹನುಮಂತಶೆಟ್ಟಿ. ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ. ಪುಟ ೧೦೮+III. ಬೆಲೆ ೨-೦೦. ೧೯೬೧.

೨. **ಪಂಪಾಸಂಪದ (ಬಳ್ಳಾರಿ ಜಿಲ್ಲೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂಪುಟ):**

ಸಂಪಾದಕರು: ಜಯತೀರ್ಥ ರಾಜಪುರೋಹಿತ, ಕೆ. ವಿರೂಪಾಕ್ಷಗೌಡ. ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ, ಪುಟ: ೬೨+೩. ಬೆಲೆ: ೧-೨೫. ೧೯೬೦.

೩. **೫೨ನೆಯ ವರ್ಷದ ವರದಿ (ಶ್ರೀ ಬಸವರಾಜ ವಾಚನಾಲಯ, ಶಹಪೂರ ಪೇಟೆ, ಗದಗ):**

ಪುಟ: ೪೦ ೧೯೬೧.

೪. **ವಿದ್ಯಾ (ಸಾಂಸ್ಕೃತಿಕ ಮಾಸಪತ್ರಿಕೆ):**

ಸಂಪಾದಕ: ಕೆ. ನಾಗೇಶ ಹತ್ವಾರ್. ಪ್ರಕಾಶಕರು: ಕೆ. ನಾಗೇಶ ಹತ್ವಾರ್, ಭಾರತೀಯ ಸಾಂಸ್ಕೃತಿ ವಿದ್ಯಾಪೀಠ, ಬೆಂಗಳೂರು; ಪುಟ: ೩೨+೪; ಬೆಲೆ: ೦-೨೫ (ಬಿಡಿ ಪ್ರತಿ). ೧೫-೧೦-೬೧.

೫. **ಜೀವನ ವಿಕಾಸ (ಶೈಕ್ಷಣಿಕ ಮಾಸಪತ್ರಿಕೆ):**

ಪ್ರಧಾನ ಸಂಪಾದಕರು: ಶ್ರೀಮತಿ ಎಸ್. ವ್ಹಿ. ಪಾಟೀಲ, ಪ್ರಕಾಶಕರು: ಶ್ರೀ ಎಂ.ಎಚ್. ನಾಯಿಕ, ಶಿಕ್ಷಣ ಇಲಾಖೆಯ ಜಾಯಿಂಟ್‌ಡೈರೆಕ್ಟರ್, ಕಲಬುರ್ಗಿ. ಪುಟ: ೬೪+೪; ಅಕ್ಟೋಬರ್ ೧೯೬೧.

ಸಂಪಾದಕೀಯ

ಇದು ನಾಲ್ಕನೆಯ ವರ್ಷದ ಎರಡನೆಯ ಸಂಚಿಕೆ. ಕರ್ನಾಟಕದ ಒಳ ಹೊರಗಿನ ವಿದ್ವಾಂಸ ಲೇಖಕರ ಬೆಂಬಲದಿಂದ ಭದ್ರಗೊಳ್ಳುತ್ತ ನಡೆದ "ಭಾರತಿ" ಸಂಶೋಧನೆ, ಸಂಪಾದನೆ, ವಿಮರ್ಶೆ, ವಿಚಾರ–ಇತ್ಯಾದಿಗಳ ಎತ್ತರಕ್ಕೆ ಸಾಕ್ಷಿಯಾಗಿ ಹೊರಬರುತ್ತಲಿದೆ, ಎಂದು ತಿಳಿಸಲು ಸಂತೋಷವೆನಿಸುತ್ತದೆ. ಅಲ್ಪಾವಧಿಯಲ್ಲಿಯೆ ಈ ಕಾಲದ ಇಂಥ ಪತ್ರಿಕೆಗಳ ಸಾಲಿನಲ್ಲಿ ಇದು ಅಗ್ರಪೀಠ ಸಾಧಿಸಿದುದಕ್ಕೆ ಲೇಖಕರ ಬಲ, ವಾಚಕರ ಬೆಂಬಲಗಳು ಕಾರಣವೆಂದು ಕೃತಜ್ಞತೆಯಿಂದ ಹೇಳುತ್ತೇವೆ. ಇಂಥ ಉದಾರ ನೆರವನ್ನು "ಭಾರತಿ" ಇವರಿಂದ ಮುಂದೆಯೂ ಬಯಸುತ್ತದೆ.

ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶ್ರೀರಂಗ

"ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ," ಎಂಬ ವಚನೋಕ್ತಿಗೆ ಉದಾಹರಣೆಯಾಗಿ ಬದುಕಿದ ಶ್ರೀರಂಗರು ಆಧುನಿಕ ಕನ್ನಡ ಸಾಹಿತ್ಯದ ಅತಿರಥ ಮಹಾರಥರಲ್ಲಿ ಒಬ್ಬರು. ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರತಿಭಾವಂತ ನಾಟಕಕಾರರಾಗಿ, ಕುಶಲ ನಟರಾಗಿ, ಸಾಹಿತ್ಯ ಸಂಸ್ಥೆಗಳ ಜನಕ ಪೋಷಕರಾಗಿ ಅವರು ಸಲ್ಲಿಸಿದ ಸೇವೆ ಅಮೋಘ. ಈ ಕಾಲದ ನಾಟಕ ಕ್ಷೇತ್ರದಲ್ಲಿ ಅವರದೇ ಒಂದು ಮನ್ವಂತರ, ಅವರೇ ಅದರ ಚಕ್ರವರ್ತಿಗಳು. ಇಂಥ ಸಮರ್ಥರನ್ನು ರಾಜ್ಯ ಸಾಹಿತ್ಯ ಅಕಾಡೆಮಿಯು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ಸ್ವತಂತ್ರವಿಚಾರಶೀಲರಾದ ಶ್ರೀರಂಗರು ಈ ಅಕಾಡೆಮಿಗೆ ಹೊಸ ರಕ್ತವನ್ನು ತುಂಬಿ ಅದು ನೂರಕ್ಕೆ ನೂರು "ಸಾಹಿತ್ಯ ಅಕಾಡೆಮಿ" ಯಾಗುವಂತೆ ಮಾಡುವದರಲ್ಲಿ ಸಂದೇಹವಿಲ್ಲ. ಅ. ನ. ಕೃ. ಅವರ ಉತ್ತರಾಧಿಕಾರತ್ವದಲ್ಲಿ ನಿಂತ ಅವರು ಸಾಹಿತ್ಯ ಅಕಾಡೆಮಿಯನ್ನು ಉತ್ತರೋತ್ತರಗೊಳಿಸುವರೆಂಬ ಭರವಸೆ ತಾಳಿದ "ಭಾರತಿ", ಅವರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಕಿಟೆಲ್ ಕೋಶದ ಬಿಡುಗಡೆ

ಕ್ರಿಸ್ತವಾಸಿ ಕಿಟೆಲ್ ಅವರ ಕನ್ನಡ-ಇಂಗ್ಲಿಷ್ ನಿಘಂಟು ಭಾರತೀಯ ಸಾಹಿತ್ಯದ ಹಲವು ಮಹಾಸಾಧನೆಗಳಲ್ಲಿ ಎದ್ದು ಕಾಣುವಂತಹುದು. ಕ್ರಿ.ಶ. ೧೮೯೪ ರಲ್ಲಿ ಪ್ರಕಟವಾದ ಈ ಮೇರುಕೃತಿಯನ್ನು ಮದರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಚಾರ್ಯರಾದ ಪ್ರೊ. ಎಮ್. ಮರಿಯಪ್ಪ

ಭಟ್ಟ ಅವರು ನಾಲ್ಕು ಸಂಪುಟಗಳಲ್ಲಿ ಪರಿಷ್ಕರಿಸಿದರು. ಸುಮಾರು ೭೮೦೦ ಅಂಶಗಳನ್ನು ಹೊಸದಾಗಿ ಸೇರಿಸಿ ಅದರ ಗಾತ್ರ, ಸತ್ವಗಳನ್ನು ಸಂವರ್ಧಿಸಿದ್ದಾರೆ. ಕಿಟೆಲ್‌ರ ಕಾರ್ಯಕ್ಷೇತ್ರವಾದ ಧಾರವಾಡದಲ್ಲಿ ಅದೂ ಅವರ ಪುಣ್ಯನಾಮವನ್ನು ಹೊತ್ತು ನಿಂತ ಮಹಾ ವಿದ್ಯಾಲಯದ ಆಶ್ರಯದಲ್ಲಿ ಈ ಸಮಾರಂಭ ನಡೆದುದು ಒಂದು ಪುಣ್ಯವಿಶೇಷ. ಈ ವೈಭವಪೂರ್ಣ ಸಮಾರಂಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ. ಎಸ್. ಅಡಕೆ, ಮದ್ರಾಸ್ ವಿಶ್ವವಿದ್ಯಾಲಯದ ಕುಲಪತಿ ಪದ್ಮಶ್ರಿ ಎನ್. ಡಿ. ಸುಂದರವಡಿವೇಲು, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಶ್ರೀ ಟಿ. ಕೆ. ತುಕೋಳ್ ಇತ್ಯಾದಿ ಪ್ರಮುಖರು ಭಾಗವಹಿಸಿ, ಕಿಟೆಲ್‌ರ ಕೃತಿಗಳ ಘನತೆಯನ್ನು ನೆನಪಿಸಿ ಕೊಟ್ಟರು. ಈ ಸಂದರ್ಭದಲ್ಲಿ ಡಾ. ಆರ್. ಸಿ. ಹಿರೇಮಠರವರ ಸಂಪಾದಕತ್ವ ದಲ್ಲಿ "ಕನ್ನಡಕ್ಕೆ ಕಿಟೆಲ್‌ರ ಕಾಣಿಕೆ" ಎಂಬ ಅಚ್ಚುಕಟ್ಟಾದ, ಬೆಲೆಯುಳ್ಳ ಅಭಿ ವಂದನ ಗ್ರಂಥ ಪ್ರಕಟವಾದುದು ಹೆಮ್ಮೆಯ ಸಂಗತಿ. ಕಿಟೆಲ್ಲರ ಬದುಕು, ಬರಹಗಳನ್ನು ಸಮಗ್ರವಾಗಿ ಮತ್ತು ಸಮರ್ಥವಾಗಿ ತಿಳಿಸಿಕೊಡುವ ಇದು ಅವರನ್ನು ಕುರಿತು ಬರೆದ ಒಂದು ಪ್ರಥಮ ಪ್ರಯತ್ನ. ಈ ಸಮಾರಂಭವನ್ನು ನೆರವೇರಿಸಿದ ಎಲ್ಲ ಮಹನೀಯರಿಗೂ, ಕಿಟೆಲ್ ಕಾಲೇಜದ ಅಧ್ಯಾಪಕ ವರ್ಗ ಮತ್ತು ಆಡಳಿತ ವರ್ಗಕ್ಕೂ "ಭಾರತಿ" ವಂದನೆಗಳನ್ನು ಸಲ್ಲಿಸುತ್ತದೆ.

ಸಾಹಿತಿಗಳಿಗೆ ಕಲಾವಿದರಿಗೆ ಸನ್ಮಾನ

೧೯೭೧ ನವಂಬರ್ ೧, ಕನ್ನಡ ರಾಜ್ಯೋದಯದ ಪುಣ್ಯದಿನ. ಈ ನಾಡಿನ ಸಾಹಿತ್ಯ ಮತ್ತು ಕಲಾ ಕ್ಷೇತ್ರಗಳಲ್ಲಿ ತ್ರಿಕರಣಪೂರ್ವಕ ದುಡಿದ ಮತ್ತು ದುಡಿಯುತ್ತಿರುವ ದಿಗ್ಗಜಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ರಾಜ್ಯ ಮಟ್ಟದ ವೇದಿಕೆಯ ಮೇಲೆ, ರಾಜ್ಯಪಾಲರ ಸಮ್ಮುಖದಲ್ಲಿ ಸನ್ಮಾನಿಸಿತು. ಸನ್ಮಾನಿತರಾದ ಸರ್ವಶ್ರೀ ಸಿ. ಕೆ ವೆಂಕಟರಾಮಯ್ಯ, ಆರ್ ಸಿ ಹಿರೇಮಠ, ಬೆಟಗೇರಿ ಕೃಷ್ಣಶರ್ಮ, ಎಸ್. ವಿ. ರಂಗಣ್ಣ, ಪರಮೇಶ್ವರ ಭಟ್ಟ. ಎಚ್. ಎಮ್. ರಾಮಾರಾಧ್ಯ, ಎಸ್. ಆರ್. ಅಯ್ಯಂಗಾರ್, ಎಮ್. ಜಿ ಶುದ್ಧೋಧನ, ಕೆ. ಎ. ಚೆಟ್ಟಿ, ಏಣಗಿ ಬಾಳಪ್ಪ, ಬಿ. ಪುಟ್ಟಸ್ವಾಮಿ, ಬಸವರಾಜ ರಾಜಗುರು. ದೊರೆಸ್ವಾಮಿ ಅಯ್ಯಂಗಾರ್, ಎಚ್ ಪುಟ್ಟಾಚಾರ್, ವಿಠಲರಾವ್ ಕೋರ ಗಾಂವಕರ, ಎ. ಎನ್. ಶೇಷಾಚಾರ್. ಎಮ್. ಬಸವರಾಜಪ್ಪ, ಶ್ರೀನಿವಾಸ ಕುಲಕರ್ಣಿ, ಮೋಹನಶಂಕರ ಕಲ್ಯಾಣಪುರಕರ, ಬಿ. ವೀರಭದ್ರ ನಾಯಕ, ಅಪ್ಪಾಲಾಲ ಜಮಖಂಡಿ. ಕೆ ಮರಿಪ್ಪ ಜಿ ವಿ. ನರಸಿಂಹಯ್ಯ ಮತ್ತು ಬಿ. ವ್ಹಿ. ಸ್ವರ್ಣಮ್ಮ ಇವರಿಗೆ "ಭಾರತಿ" ಅಭಿವಂದನೆಗಳನ್ನು ಸಲ್ಲಿಸುತ್ತದೆ.

ರಾಜ್ಯ ಪ್ರಶಸ್ತಿ ವಿಜೇತರಿಗೆ ಸನ್ಮಾನ

ರಾಜ್ಯದ ಅಭಿವೃದ್ಧಿ ಕಾರ್ಯದಲ್ಲಿ ವಿಶೇಷ ಸೇವೆ ಸಲ್ಲಿಸಿದ ಹದಿನೈದು ಜನ ಪ್ರಮುಖ ವ್ಯಕ್ತಿಗಳಿಗೆ, ಹನ್ನೊಂದು ಜನ ಶಿಕ್ಷಕರಿಗೆ ರಾಜ್ಯ ಸರಕಾರ ಗೌರವಿಸುವದು ಅಭಿಮಾನದ ಸಂಗತಿ. ದಾನ, ಶಿಕ್ಷಣ, ಸೇವೆ, ಕ್ರೀಡೆ, ಸಂಗೀತ, ಇಂಜನಿಯರಿಂಗ್, ವೈದ್ಯ, ಹರಿಜನಸೇವೆ, ತೋಟಗಾರಿಕೆ, ಚಿತ್ರಕಲೆ ಮೊದಲಾದ ಕ್ಷೇತ್ರಗಳಲ್ಲಿ ದುಡಿದುದಕ್ಕಾಗಿ ಡಾ. ಜೀರಗೆ, ಎ. ಸಿ. ದೇವೇಗೌಡ, ಗಿರೀಶ ಕಾರ್ನಾಡ, ಎಸ್. ಬಿ. ಪಾಟೀಲ ಮೊದಲಾದವರಿಗೆ ಸಂದ ಈ ಗೌರವವನ್ನು ನೆನೆದು "ಭಾರತಿ" ಇವರೆಲ್ಲರಿಗೆ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಲೇಖಕರ ಪರಿಚಯ

೧. **ಶ್ರೀ ಕೆ. ಎಸ್. ಮಧುಸೂದನ ಅಯ್ಯರ್, ಬಿ. ಎ., (ಆನರ್ಸ್)**

ಕೋಟಿ, ಗುಮ್ಮಳಾಪುರಂ, ಥಳಿ (ರಸ್ತೆ), ಡೆಂಕಣೀಕೋಟೆ ತಾಲ್ಲೂಕ್, ಧರ್ಮಪುರಿ ಜಿಲ್ಲೆ, ತಮಿಳುನಾಡು.

೨. **ಶ್ರೀ 'ಮಗು' ಬಿರಾದಾರ :**

ಕನ್ನಡ ಅಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೩. **ಶ್ರೀ ಕೆ. ಜಿ. ವಸಂತ ಮಾಧವ** ಎಂ. ಎ.,

ಅಧ್ಯಾಪಕರು; ವಿಜಯ ಕಾಲೇಜ್, ಮೂಲ್ಕಿ (ದ. ಕ.)

೪. **ಡಾ. ಎಂ. ಬಿ. ಕೊಟ್ರಶೆಟ್ಟಿ :**

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. **ಶ್ರೀ ಎಲ್. ಆರ್. ಹೆಗಡೆ :**

ಅಧ್ಯಾಪಕರು, ಡಾ. ಎ. ವ್ಹಿ. ಬಾಳಿಗಾ ಕಾಲೇಜ್, ಕುಮಟಾ.

೬. **ಶ್ರೀ ಶ್ಯಾಮಸುಂದರ ಬಿದರಕುಂದಿ :**

ಅಧ್ಯಾಪಕರು, ನೆಹರೂ ಆರ್ಟ್ಸ್ ಕಾಲೇಜ್, ಹುಬ್ಬಳ್ಳಿ.

೭. **ಶ್ರೀ ಎಸ್. ಬಿ. ಯಾದವಾಡ :**

ಸಹಾಯಕ ಸಂಶೋಧಕರು, ಸಮಾಜಶಾಸ್ತ್ರ ವಿಭಾಗ, ಕ. ವಿ. ವಿ., ಧಾರವಾಡ.

೮. **ಎಸ್. ಎಲ್. ಶಾಂತಕುಮಾರಿ :**

ಸಹಾಯಕ ಸಂಶೋಧಕರು, ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ., ಧಾರವಾಡ.

೯. **ಶ್ರೀ ಬಿ. ಆರ್. ಸರ್ಪೊಕದಂ, ಎಂ. ಎ.,**

ಕನ್ನಡ ವಿಭಾಗ, ಡಾ. ಎ. ವ್ಹಿ. ಬಾಳಿಗಾ ಕಾಲೇಜ, ಕುಮಟಾ (ಉ. ಕ.).

೧೦. **ಶ್ರೀಮತಿ ಎಸ್. ಕಲ್ಪನಾ :**

ಬಿ. ಎಸ್. ಸಿ. ಪದವೀಧರರು, ಬೆಳಗಾಂವಿಯವರು. ಇವರ ಕವನಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

೧೧. ಶ್ರೀ ವಿಲಿಯಂ ಮಾಡ್ರಾ :

ಸಹಾಯಕ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಪ್ರೊ. ಎಂ. ವಿ. ಜಂಬುನಾಥನ್ :

ಸರಸ್ವತೀಪುರಂ, ಮೈಸೂರು-೯.

೧೩. ಶ್ರೀ ಎಸ್. ಪಿ. ಪಾಟೀಲ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಡಾ. ಸುಂದರ, ಅ.

ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ. ಧಾರವಾಡ.

೧೫. ಶ್ರೀ ನಾಗಪ್ಪ ಟಿ. ಆರ್. :

೨೯೦೪, ಚಾಮುಂಡಿಪುರಂ, ಮೈಸೂರು-೪.

೧೬. ಡಾ. ಬಿ. ಎಸ್. ಕುಲಕರ್ಣಿ :

ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೭. ಶ್ರೀ ರಾಜಶೇಖರ ಎಸ್. :

ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ಕಾಲೇಜ್, ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	संस्कृत सौदामिनी	2·00
4	ಕಾವ್ಯಮಂಜರಿ: ಭಾಗ ೧, ಸಂಪುಟ ೧	1·00
5	ಕಾವ್ಯಮಂಜರಿ: ಭಾಗ ೧, ಸಂಪುಟ ೨	1·00
6	ಕಾವ್ಯಮಂಜರಿ: ಭಾಗ ೨, ಸಂಪುಟ ೧	1.00
7	ಕಾವ್ಯಮಂಜರಿ: ಭಾಗ ೨, ಸಂಪುಟ ೨	1·00
8	ಕಾವ್ಯಮಂಜರಿ: ಭಾಗ ೧, ಸಂಪುಟ ೩	2·00
9	ಕಾವ್ಯವಿಲಾಸ	1·50
10	ಕಾವ್ಯಕುಂಜ	1·50
11	ಗದ್ಯವಿಲಾಸ	2·50
12	ಗದ್ಯಮಂಜರಿ	2·00

II. Research Publications Series (ಸಂಶೋಧನ ಗ್ರಂಥಮಾಲೆ)

1 Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona) —*R. V. Joshi* 15·00

2 The Karnatak Theatre —*H. K. Ranganath*
Ord. binding 3·00
Half calico 5·00

3 Some Problems in Jaina Psychology —*T. G. Kalghatgi*
Full cal. 7·00
Half calico 6·00

4 The Concept of Comedy —*G. S. Amur* 7·00
$ 2 or Sh. 13

5 Local Self-Government in Mediaeval Karnatak —*G. S. Dikshit* 7·00
$ 2 or Sh. 13

6 Basic Syllabus in Practice —*N. R. Hiremath* 10·00
$ 3 or £. 1

7 The Later Phase in the Development of W. B. Yeats —*S. R. Mokashi* 10·00
$ 3 or £. 1

8 Some Studies in Boolean Algebra —*E. Sampathkumarachar* 7·00
$ 2 or Sh. 14

9 A History of South Kanara —*K. V. Ramesh* 30.00

10 A Critical Study of the Hindu Astronomy in the Light and Language of the Modern 12.00
—*D. A. Somayaji* $ 4 or Sh. 25

11 The Havyaka Dialect of North Kanara 12.00
—*K. G. Shastri* $ 4 or Sh. 25

12 Keladi Polity —*K. N. Chitnis* (In Press)

13 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

14 ಕನ್ನಡ ಜಾನಪದ ಗೀತಗಳು —ಬಿ. ಎಸ್. ಗದ್ದಗಿಮಠ 10·00

15 ಕನ್ನಡ ಸಾಹಿತ್ಯದಲ್ಲಿ ಹಾಸ್ಯ —ಎಂ. ಎಸ್. ಸುಂಕಾಪುರ 8·00

III. Extension Lectures Publications Series
(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.50
—*R. D. Ranade* Cents 50 or Sh.4

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa (2nd Edn.) —*R. D. Karmarkar* (In Press)

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 Śaṅkara's Advaita —*R. D. Karmarkar* 3·00

10 ಮಹಾಕವಿ ಷಡಕ್ಷರದೇವ —ಜಿ. ಶಿವಮೂರ್ತಿಶಾಸ್ತ್ರೀ } 3.00 / 4·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ
— ವಿ. ಸೀತಾರಾಮಯ್ಯ 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರ ಸಾಹಿತ್ಯ ನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ
—ಆದ್ಯ ರಂಗಾಚಾರ್ಯ 2·50

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·00 $ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the Under-developed Region in Italy —*T. K. Meti* 10·00 $ 5 or Sh. 30

10 Rural Industrialisation: An Integrated Approach —*V. S. Vyas* 3·00 $ 1 or Sh. 7

11 Economic Development and Social Change in Mysore State —*Ed. T. K. Meti* 15·00

12 Resale Price Maintenance in a Developing Economy —*D. M. Nanjundappa* Cal 5·00 $ 3·50 or Sh. 10
Ord. 3·50 $ 1 or Sh. 7

V. ಕನ್ನಡ ಕಾವ್ಯಮಾಲೆ (Kannada Classical Series)

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥ ಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12.00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20.00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ 8.00

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3.50
ಸಂ. : ಆರ್. ಸಿ. ಹಿರೇಮಠ

9 ನೇಮಿನಾಥ ಪುರಾಣಂ ಸಂ. : ಬಿ. ಎಸ್. ಕುಲಕರ್ಣಿ 6.00

10 ಅಕ್ರೂರಚರಿತ್ರೆ ಸಂ. : ಚೆಟಗೇರಿ ಕೃಷ್ಣಶರ್ಮಾ (ಕೆಲಿಕೋ) 6·00
(ಸಾದಾ) 4.00

11 ಜೀವಂಧರಚರಿತೆ ಸಂ. : ಬಿ. ಎಸ್. ಕುಲಕರ್ಣಿ 7·00

12 ಮಹಾಭಾರತ : ಪೌಲೋಮ-ಆಸ್ತೀಕ ಪರ್ವಗಳು 8.00
—ಕೆ. ಜಿ. ಶಾಸ್ತ್ರಿ

13 ಹರಿಹರದೇವಕೃತ ಪುರಾತನರ ರಗಳೆಗಳು (ಅಚ್ಚಿನಲ್ಲಿ)
ಸಂ : ಆರ್. ಸಿ. ಹಿರೇಮಠ

14 ಮೋಹನ ತರಂಗಿಣಿ ಸಂ : ಆರ್. ಸಿ. ಹಿರೇಮಠ ,,

15 ಮಲ್ಲಿನಾಥ ಪುರಾಣ ಸಂ : ಬಿ. ಎಸ್. ಕುಲಕರ್ಣಿ ,,

16 ಲೋಭದತ್ತ ಚರಿತೆ ಸಂ : ಬಿ. ಎಸ್. ಕುಲಕರ್ಣಿ ,,

17 ಐರಾವತ ನೋಂಪಿ ಸಂ : ಕೆ. ಜಿ. ಶಾಸ್ತ್ರಿ ,,

VI. ಉಪನ್ಯಾಸ ಗ್ರಂಥಮಾಲೆ
(Kannada Extension Lectures Booklets Series)

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂ.ವಾ. ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ

14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎಸ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಅಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ

46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು—ಬಿ.ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ — ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು — ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ

76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ — ಎಂ. ಎಸ್. ಎಸ್. ರಾವ್
103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ

104. ಪೇಟೆ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ
106. ಮೈಲಾರದೇವರು — ಶ್ರೀನಿವಾಸ ರಿತ್ತಿ
107. ಭಗವದ್ಗೀತೆ — ಎಲ್. ಸಿ. ಪಾಟೀಲ
108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ
109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಮುಲ್ಲಾಪುರ
110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ
111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ
112. ತಮಿಳು ಶಿವಭಕ್ತೆ ಕಾರಿಕಾಲಮ್ಮೆ — ಎಂ. ಎಸ್. ಲಠ್ಠೆ
113. ಜಾನಪದ ವೀರಗೀತೆಗಳು — ಬಿ. ಬಿ. ಮಹೀಶವಾಡಿ
114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ
115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ
116. ಭಾರತದ ಪ್ರಾಚೀನ ನಾಣ್ಯಗಳು — ಎ. ಎಂ. ಅಣ್ಣಿಗೇರಿ
117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ
118. ಯೋಜನೆಗಳು ಹಾಗೂ ಗ್ರಾಮೋದ್ಯೋಗಗಳು — ವ್ಹಿ.ಬಿ.ಅಂಗಡಿ
119. ಮಾನವವಿಜ್ಞಾನ ಹಾಗು ಆಧುನಿಕ ಭಾರತ — ಎಲ್. ಏಸ್. ಜನಾಪುರ
120. ಹಳ್ಳಿಗರೇಳ್ಗೆ ಸಾಧಿಸುವ ಬಗೆ — ಬಿ. ಆರ್. ಪಾಟೀಲ
121. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ
122. ಸಾಮಾಜಿಕ ಸಮಸ್ಯೆಗಳು—ಕೆ. ಜಿ. ಜೋಶಿ
123. ಕರ್ನಾಟಕದಲ್ಲಿ ನವಶಿಲಾಯುಗ—ಬಾ. ರಾ. ಗೋಪಾಲ್
124. ಜೀವಾವಶೇಷಗಳು—ಎಂ. ಎಸ್. ಮುನ್ನಿಕೇರಿ
125. ವಿಜಯನಗರ ಕಾಲದ ಧಾರ್ಮಿಕ ಜೀವನ—ಶ್ರೀ ಸದ್ಯೋಜಾತ ಸ್ವಾಮೀಜಿ
126. ಡಾ. ಖೊರಾನಾ ಅವರ ಸಂಶೋಧನೆಗಳು—ಎಚ್. ಕೆ. ಮಲ್ಲಿಕಾರ್ಜುನಪ್ಪ
127. ಸಂಸ್ಕೃತಸಾಹಿತ್ಯದಲ್ಲಿ ಹಾಸ್ಯ—ಎಲ್. ಜಿ. ಜೋಶಿ
128. ಕಾರ್ಮಿಕ ಮತ್ತು ಯೋಜನೆ—ಟಿ. ಕೆ. ಮೇಟಿ
129. ಭಾರತೀಯ ಹಬ್ಬಗಳು—ಸಿ. ವಿ. ಕೆರಿಮನಿ
130. ಕುಷ್ಠರೋಗ ನಿವಾರಣೆ—ಎಸ್. ಜೆ. ನಾಗಲೋಟಿಮಠ
131. ಶ್ರವಣಾತೀತ ಧ್ವನಿ—ಡಿ. ಆರ್. ಬಳೂರಗಿ
132. ಸಿಮೆಂಟ್ ಕಾಂಕ್ರೀಟ್—ಬಸವರಾಜ ಪುರಾಣಿಕ
133. ಜನಪದಕಾವ್ಯ—ಗಿರಡ್ಡಿ ಗೋವಿಂದರಾಜ
134. ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'—ಪ್ರಲ್ಹಾದ ನರೇಗಲ್

VII ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2·50
9	ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು	2·50

VIII. ಜನಪದ ಸಾಹಿತ್ಯ ಮಾಲೆ

1 ಜೀವನ ಜೋಕಾಲಿ : ಚೌಪದನಗಳು — 4·00

ಸಂ : ಎಂ. ಎಸ್. ಸುಂಕಾಪುರ

2 ಜೀವನ ಜೋಕಾಲಿ : ಸರಸ-ವಿರಸ — 4·00

ಸಂ : ಎಂ. ಎಸ್. ಸುಂಕಾಪುರ

3 ಪರಮೇಶ್ವರಿಯ ಪದಗಳು — (ಅಚ್ಚಿನಲ್ಲಿ)

ಸಂ : ಎಲ್. ಆರ್. ಹೆಗಡೆ

IX. Publications in Anthropology

1 Contributions to the Understanding of Indian Civilization — 3·00

—*Baidyanath Saraswati* — $ 1 or Sh. 8

X. Other Publications (ಇತರ ಪ್ರಕಟನೆಗಳು)

1 Hubli City—A Study in Urban Economic Life — 10·00

—*B. R. Dhekney* — $ 3 or £ 1

2 Private International Law — 10·00

— *N. K. Dixit & Negalur Ranganath*

3 The Structure of Kannada — *R. C. Hiremath* 5·00

4 Studies in State Administration 15·00
—Ed. *G. S. Halappa*

5 Yashodhara Charita 5·00
Ed. *K. Krishnamoorthy* $ 1·50 or Sh. 10

6 Essays in Sanskrit Criticism 5·00
—*K. Krishnamoorthy*

7 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

8 Sunyasampadane—Vol. I (*English version of a Kannada work with Commentary & Notes*) 12·00 $ 4 or Sh· 20
—Ed. *S. C. Nandimath, Menezes and R. C. Hiremath*

9 Sunyasampadane—Vol. II 20·00
—Ed. *S. S. Bhoosanurmath & Armando Menezes* $ 5 or Sh· 30

10 Sunyasampadane – Vol. III 20·00
—Ed. S. S. Bhoosnurmath & Armando Menezes $ 5 or Sh. 30

11 Sunyasampadane – Vol. IV. 20.00
-Ed. S.S. Bhoosnurmath & Armando Menezes $ 5 or Sh. 30

12 Kavi Kaumudi —Ed. *K. Krishnamoorthy* 1·50

13 Critical Essays on Indian Writing in English 20·00
—Ed. *M. K. Naik, S. K. Desai and G. S. Amur* $ 4 or Sh. 30

14 Sāyaṇa's Subhāṣita-Sudhānidhi 10·00
—Ed. *K. Krishnamoorthy*

15 Urban Studies : An Aid to Research 30·00
—B. N. Sinha & T. N. Achut Rao $ 10

16 Old People of Makunti 10·00
—H. M. Marulasiddaiah

○○

17 Sirsi: An Urban Study in Application of Reseach Models —*Dr. B. N. Sinha* 20·00 $ 7

18 Konkani, a Language —*Jose Pereira* 10.00 $ 3 or Sh. 20

19 Analytical Survey of Iśāvāsyopanisad —*V. V. Mudholkar* 7·00 $ 2 or Sh. 14

*20 The Image of India in the Western Creative Writing 30·00
(Joint Publication with Macmillan & Co. India)
—*Ed. M. K. Naik, S. K. Desai & S. T. Kallapur*

21 Essays in Criminal Law —*V. R. Bhat* 12·00

22 Songs from the Saranas and other poems - *Armando Menezes* 3·00 $ 1 or Sh. 7

23 Śūnyasampādane Vol. V (In Press)

24 Dāya Vibhāga —*I. S. Pawate* ,,

25 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2·50

26 ಚನ್ನಬಸವಣ್ಣನವರ ವಚನಗಳು (ದ್ವಿ.ಮು.) —ಸಂ. ಆರ್. ಸಿ. ಹಿರೇಮಠ 20·00

27 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1·50

28 ರಸಾಯನಶಾಸ್ತ್ರ — ಆರ್. ಎಸ್. ಹನುಸಾಗರ 4·00

29 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3·00

30 विवेकचिंतामणि 6·75
(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

---

* (Sole Distributors : M/s Macmillan & Co. Madras)

31 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ 5.00
—(ಅನು. : ಎಂ. ಎಸ್. ದೇಶಪಾಂಡೆ)

32 ಷಟ್‌ಸ್ಥಲಪ್ರಭೆ (ದ್ವಿ.ಮು.) —ಆರ್. ಸಿ. ಹಿರೇಮಠ (ಅಚ್ಚಿನಲ್ಲಿ)

33 ಶ್ರೀ ಸಿದ್ಧರಾಮೇಶ್ವರ ವಚನಗಳು — ಸಂ. ಆರ್. ಸಿ. ಹಿರೇಮಠ 20·00

34 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20·00
—ಸಂ. ಆರ್. ಸಿ. ಹಿರೇಮಠ

35 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

36 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7.00

37 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

38 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

39 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

40 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ.ಎಂ. ಕಲಬುರ್ಗಿ

41 ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ 6.00

42 ಶೂನ್ಯ ಸಂಪಾದನೆ (ಶಿವಗಣ ಪ್ರಸಾದಿ ಮಹಾದೇವಯ್ಯ ವಿರಚಿತ) 12.00
—ಸಂ : ಆರ್. ಸಿ. ಹಿರೇಮಠ

43 ವೀರಶೈವ ಚಿಂತಾಮಣಿ —ಸಂ : ಆರ್. ಸಿ. ಹಿರೇಮಠ 7.00

44 ಶಿಕ್ಷಣ : ಆಧಾರಗಳು ಮತ್ತು ಪ್ರಥಮ ತತ್ತ್ವಗಳು
—ಅನು : ವ್ಹಿ. ಕೆ. ಜವಳಿ 10·00

45 ಬೃಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ (ಅಚ್ಚಿನಲ್ಲಿ)
— ಸಂ : ಆರ್. ಸಿ. ಹಿರೇಮಠ

46 ಲಿಂಗಚಿದಮೃತ ಬೋಧೆ —ಸಂ : ಆರ್. ಸಿ. ಹಿರೇಮಠ ,,

47 ಸಕಲಪುರಾತನರ ವಚನಗಳು ಭಾಗ ೧—ಸಂ: ಆರ್.ಸಿ. ಹಿರೇಮಠ ,,

48 ವಿಶೇಷಾನುಭವ ಷಟ್ಸ್ಥಲ —ಸಂ : ಆರ್. ಸಿ. ಹಿರೇಮಠ ,,

49 ಚಾಲಸಂಗಯ್ಯನ ವಚನಗಳು —ಸಂ : ಆರ್. ಸಿ. ಹಿರೇಮಠ ,,

Available for sale :

1	Studies in Education and Culture	(Ord.)	15·00
	—Ed. G. S. Halappa	(Calico)	25·00
2	Pathway to god in Kannada Literature		6·00
	— R. D. Ranade	Sh.	10·6
		$	2·75
3	The Grammatical Structure of Dravidian Languages *—Jules Block*		6.00

XI. UNIVERSITY JOURNALS

Annuals :

1 JOURNAL OF THE KARNATAK UNIVERSITY — Science
2 JOURNAL OF THE KARNATAK UNIVERSITY — Humanities
3 THE JOURNAL OF KARNATAK UNIVERITY—Social Sciences

Rate of Annual Subscription for Each Journal :

Rs. 5-00 (In India)

2 Dollars
14 Shillings } (Foreign)

Quarterly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/– (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Biannual ;

ವಿಜ್ಞಾನ ಭಾರತಿ

ವಾರ್ಷಿಕ ಚಂದಾ : ರೂ. 4/– (ಅಂಚೆವೆಚ್ಚ ಸಹಿತ)
ಬಿಡಿ ಪತ್ರಿಕೆಯ ಬೆಲೆ : ರೂ. 2·50 (,, ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Annual : Rs. 6/-
Monthly : 50 paise

XII. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ.			ರೂ. ಪೈಸೆ
1	ರಾಜ್ಯಶಾಸ್ತ್ರ		3-00
2	ಸಂಸ್ಕೃತ ಗದ್ಯಪದ್ಯ (ತೃತೀಯ ಮುದ್ರಣ)		3-50
3	ಉದ್ಯಾನಶಾಸ್ತ್ರ ಪರಿಚಯ		3-75
4	ಅರ್ಥಶಾಸ್ತ್ರ ಪರಿಚಯ		4-00
5	ವಾಣಿಜ್ಯಶಾಸ್ತ್ರ ಪರಿಚಯ		5-00
6	ತರ್ಕಶಾಸ್ತ್ರ ಪರಿಚಯ		3-00
7	ಜಗತ್ತಿನ ಇತಿಹಾಸ		4-50
8	ಬೀಜಗಣಿತ-ಕಲನಶಾಸ್ತ್ರ ಪರಿಚಯ		4-50
9	ಸಮಾಜಶಾಸ್ತ್ರ ಪರಿಚಯ		3-00
10	ಮಾನವಶಾಸ್ತ್ರ ಪರಿಚಯ		3-00
11	ಸಸ್ಯಶಾಸ್ತ್ರ ಪರಿಚಯ		5-50
12	ಪ್ರಾಯೋಗಿಕ ರಸಾಯನಶಾಸ್ತ್ರ		3-50
13	ಗಣನಶಾಸ್ತ್ರ ಪರಿಚಯ		5-00
14	ಭೂಮಂಡಲ ಪರಿಚಯ		8-50
15	ರಸಾಯನಶಾಸ್ತ್ರ		8-50
16	ಸಂಗೀತಶಾಸ್ತ್ರ ಪರಿಚಯ		4-50
17	ಪ್ರಾಣಿಶಾಸ್ತ್ರ ಪರಿಚಯ		7-00
18	ಪ್ರಾಯೋಗಿಕ ಭೌತಶಾಸ್ತ್ರ		6-50
19	ಭೂಮಿತಿ ಹಾಗೂ ತ್ರಿಕೋನಮಿತಿ		7-00
20	ಭೌತಶಾಸ್ತ್ರ	(ಸಾದಾ)	10-50
		(ಕೆಲಿಕೋ)	12-50
21	ಸಂಖ್ಯಾಶಾಸ್ತ್ರ		6·50

ಬಿ.ಎ., ಬಿ.ಎಸ್‌ಸಿ., ಬಿ.ಕಾಂ. — ಭಾಗ ೧

22	ಸಂಸ್ಕೃತ ಗದ್ಯಪದ್ಯ (ದ್ವಿತೀಯ ಮುದ್ರಣ)	3-00
23	ರಾಜ್ಯಶಾಸ್ತ್ರ	4-00
24	ಮಾರಾಟ ಹಾಗೂ ವಿಕ್ರಯಶಾಸ್ತ್ರ	4-50

25	ಕಾರ್ಯನಿರ್ವಹಣ ಶಾಸ್ತ್ರ	6-50
26	ತರ್ಕಶಾಸ್ತ್ರ (ನಿಗಮನ)	4-50
27	ಸಮಾಜಶಾಸ್ತ್ರ	3-00
28	ಅರ್ಥಶಾಸ್ತ್ರದ ಮೂಲತತ್ವಗಳು (ವಾಣಿಜ್ಯ) (ಸಾದಾ)	10-50
	(ಕೆಲಿಕೋ)	12-50
29	ಸಂಸ್ಕೃತ ಸುಭಾಷಿತ ಸಂಗ್ರಹ	4-00
30	ಅರ್ಥಶಾಸ್ತ್ರ : ತತ್ವನಿರೂಪಣೆ	8·00
31	ಭೌತಿಕ ಭೂಗೋಲ ಶಾಸ್ತ್ರ	8·50
32	ಸಂಖ್ಯಾಶಾಸ್ತ್ರ	6·50
33	ಗಣನಶಾಸ್ತ್ರ	(ಅಚ್ಚಿನಲ್ಲಿ)
34	ಬೀಜಗಣಿತ	,,
35	ಪ್ರಾಚೀನ ಭಾರತ ಚರಿತ್ರೆ	,,

ಪೂರಕ ಗ್ರಂಥಮಾಲೆ

36	ಆಯುರ್ವೇದ ವಿಜ್ಞಾನ	7-00
37	ರಾಗದರ್ಶನ	4-50
38	ಭಾರತ ಸಂವಿಧಾನದ ಇತಿಹಾಸ	3-00
39	ಹೃದಯ ರೋಗಗಳು	4-00
40	ಫ್ರಾನ್ಸ್ ದೇಶದ ಮಹಾಕ್ರಾಂತಿ	(ಅಚ್ಚಿನಲ್ಲಿ)

★